ಭಾನುವಾರ, ಸೆಪ್ಟೆಂಬರ್ 12, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪೂಜೆ
ಗಣೇಶೋತ್ಸವದ ಅಂಗವಾಗಿ ಕೋಲ್ಕತ್ತದಲ್ಲಿ ಭಕ್ತರು ಶನಿವಾರ ವಿಸರ್ಜನೆಗೂ ಮುನ್ನ ಗಣಪತಿ ಮೂರ್ತಿಗೆ ಪೂಜೆ ಸಲ್ಲಿಸಿದರು

bigbasket
1 ಕೋಟಿಗೂ ಹೆಚ್ಚು ಆನ್‌ಲೈನ್ ಗ್ರಾಹಕರ ವಿಶ್ವಾಸ ಗಳಿಸಿದೆ

TATA
70 ಕೋಟಿಗೂ ಹೆಚ್ಚು ಭಾರತೀಯರ ವಿಶ್ವಾಸ ಗಳಿಸಿದೆ ಅದುವು ತಲೆಮಾರಿನಿಂದ ತಲೆಮಾರಿನವರೆಗೆ

ಬಿಗ್‌ಬಾಸ್ಕೆಟ್ ಈಗ ಟಾಟಾ ಗ್ರೂಪಿನ ಒಂದು ಭಾಗ

ವಿಶ್ವಾಸದ ಪರಂಪರೆ

P 8231

bigbasket
A TATA Enterprise

ಭಾನುವಾರ, ಸೆಪ್ಟೆಂಬರ್ 12, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 254 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಏಳು ವರ್ಷಗಳಿಗೊಮ್ಮೆ ಹೂ ಅರಳಿಸಿ ಬೆಟ್ಟಗಳಲ್ಲಿ ಬಣ್ಣದೋಕುಳಿ ಸೃಷ್ಟಿಸುವ ಕುರಿಂಜಿಗಳ ಈ ವೈಚಿತ್ರ್ಯವನ್ನು ನೋಡಲು ಈಗ ಕೊಡಗಿನಲ್ಲಿ ಜನಜಾತ್ರೆ

‘ಪಠ್ಯ ಪೂರ್ಣಕ್ಕೆ ಶಿಕ್ಷಕರ ರಜೆ ಕಡಿತ’ 4
ಬಿಪಿಎಲ್ ಕುಟುಂಬದ ಸದಸ್ಯರಿಗೆ ತಲುಪದ ಸರ್ಕಾರದ ನೆರವು
ಬಿಜೆಪಿಯವರು ಹಣದ ಆಫರ್ ಕೊಟ್ಟಿದ್ದರು: ಶ್ರೀಮಂತ ಪಾಟೀಲ 4
ಕೋವಿಡ್: 2 ತಿಂಗಳಾದರೂ ಸಿಕ್ಕಿಲ್ಲ ₹ 1 ಲಕ್ಷ ಪರಿಹಾರ 8

ಕೈಗಾರಿಕಾ ಉತ್ಪಾದನೆ ಶೇ 11.5ರಷ್ಟು ಬೆಳವಣಿಗೆ 8
ಖಾದ್ಯ ತೈಲ ಆಮದು ಸುಂಕ ಇಳಿಕೆ 8

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕಣ್ಣಿಗೆ ಕಾಣದ ‘ಕಲ್ಯಾಣ’

ಒಳನೋಟ

ಶುರುವಾಗದ ಅಭಿವೃದ್ಧಿ ಪರ್ವ

ಪ್ರತಿಕ್ರಿಯಿಸಿ: 9606038256
feedback@prajavani.co.in

• ಗಣೇಶ ಚಂದನಶಿವ



(ಆಧಾರ: ಕೆಕೆಆರ್‌ಡಿಬಿ)
ಪ್ರಜಾವಾಣಿ ಗ್ರಾಫಿಕ್ಸ್

ಕಲಬುರ್ಗಿ: ಹೈದರಾಬಾದ್ ಕರ್ನಾಟಕ ಎಂಬುದು ದಾಸ್ಯದ ಸಂಕೇತ ಎಂಬ ಕಾರಣಕ್ಕೆ ‘ಕಲ್ಯಾಣ ಕರ್ನಾಟಕ’ ಎಂದು ಮರುನಾಮಕರಣ ಮಾಡಿ ಸೆ. 17ಕ್ಕೆ ಎರಡು ವರ್ಷ ತುಂಬುತ್ತಿದೆ. ‘ಅಭಿವೃದ್ಧಿ ಪರ್ವ ಆರಂಭಿಸುತ್ತೇವೆ’ ಎಂದು ಹೇಳಿದ್ದ ರಾಜ್ಯ ಸರ್ಕಾರ, 371 (ಜೆ) ಕೋಶವನ್ನು ಬೆಂಗಳೂರಿನಿಂದ ಕಲಬುರ್ಗಿಗೆ ಸ್ಥಳಾಂತರಿಸುವಂತಹ ಸಣ್ಣ ಕೆಲಸವನ್ನೂ ಇದುವರೆಗೆ ಮಾಡಿಲ್ಲ!

ಸಂವಿಧಾನದ 371 (ಜೆ) ಕಲಂಗೆ ತಿದ್ದುಪಡಿ ತಂದು ಮಹಾರಾಷ್ಟ್ರದ ವಿದರ್ಭ ಮಾದರಿಯಲ್ಲಿ ಈ ಭಾಗಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿ ಎಂಟು ವರ್ಷಗಳಾಗುತ್ತಿವೆ. ಆದರೆ ಕೇಂದ್ರ ಸರ್ಕಾರ ಈವರೆಗೂ ವಿಶೇಷ ಅನುದಾನ ಕೊಟ್ಟಿಲ್ಲ.

ಇನ್ನು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಗೆ ಘೋಷಿಸಿದಷ್ಟು ಅನುದಾನ ಕೊಡುವುದು ಹೋಗಲಿ, ಎರಡು ವರ್ಷದಿಂದ ಜನಪ್ರತಿನಿಧಿಗಳು–ಪರಿಣತರನ್ನೊಳಗೊಂಡ ಆಡಳಿತ ಮಂಡಳಿಯನ್ನೇ ರಚಿಸಿಲ್ಲ. ಕಲಬುರ್ಗಿ ದಕ್ಷಿಣ ಕ್ಷೇತ್ರದ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ಮಂಡಳಿಯ ಅಧ್ಯಕ್ಷರಾಗಿದ್ದಾರೆ.

ಇಲ್ಲಿಗಳ ಸರಮಾಲೆ ಒಂದೆಡೆಯಾದರೆ, ಕೆಕೆಆರ್‌ಡಿಬಿಗೆ ರಾಜ್ಯ ಸರ್ಕಾರ 2013–14ರಿಂದ ಈ ವರೆಗೆ ₹ 8,878.33 ಕೋಟಿ ವಿಶೇಷ ಅನುದಾನ ಘೋಷಿಸಿದೆ. ಆ ಪೈಕಿ ₹ 6,209.07 ಕೋಟಿ ಬಿಡುಗಡೆಯಾಗಿದ್ದು, ₹ 5,965.97 ಕೋಟಿ (ಕಳೆದ ಆಗಸ್ಟ್ 31ರವರೆಗೆ) ವೆಚ್ಚವಾಗಿದೆ. ನಂಜುಂಡಪ್ಪ ವರದಿ ಅನ್ವಯ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ರಾಜ್ಯ ಸರ್ಕಾರ ಈ ವರೆಗೆ ರಾಜ್ಯದ ಹಿಂದುಳಿದ ತಾಲ್ಲೂಕುಗಳಿಗೆ ₹ 22 ಸಾವಿರ ಕೋಟಿಗೂ ಹೆಚ್ಚು ಹಣ ವೆಚ್ಚ ಮಾಡಿದ್ದು, ಆ ಪೈಕಿ ₹ 4 ಸಾವಿರ ಕೋಟಿಗೂ ಹೆಚ್ಚು ಈ ಭಾಗಕ್ಕೇ ವೆಚ್ಚವಾಗಿದೆ. ಆದರೂ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಈ ಭಾಗದ ಜಿಲ್ಲೆಗಳು ಇನ್ನೂ ಕೆಳಮಟ್ಟದಲ್ಲಿಯೇ ಇವೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ನಂಜುಂಡಪ್ಪ ವರದಿಯ ಮಾನದಂಡದಂತೆ ಅನುದಾನ ವೆಚ್ಚಮಾಡುತ್ತಿದ್ದೇವೆ. ಕಳಪೆ ಕಾಮಗಾರಿಗೆ ಅವಕಾಶ ನೀಡಿಲ್ಲ. ಕಳೆದ ವರ್ಷ ಕೋವಿಡ್ ಸಂಕಷ್ಟದ ಮಧ್ಯೆಯೂ ಮಂಡಳಿಯ ಇತಿಹಾಸದಲ್ಲೇ ಅತೀ ಹೆಚ್ಚು ಕೆಲಸ ಮಾಡಿದ್ದೇವೆ
ದತ್ತಾತ್ರೇಯ ಪಾಟೀಲ ರೇವೂರ
ಕೆಕೆಆರ್‌ಡಿಬಿ ಅಧ್ಯಕ್ಷ

ಆಡಳಿತಾತ್ಮಕ ಕಾರಣಗಳಿಗಾಗಿ ಜಿಲ್ಲಾ ಉಸ್ತುವಾರಿ ಸಚಿವರೇ ಕೆಕೆಆರ್‌ಡಿಬಿ ಅಧ್ಯಕ್ಷರಾಗಬೇಕು ಎಂಬ ನಿಯಮವನ್ನು ಕಾಂಗ್ರೆಸ್ ಸರ್ಕಾರ ರೂಪಿಸಿತ್ತು. ಶಾಸಕರಿಗೆ ಅಧ್ಯಕ್ಷ ಸ್ಥಾನ ನೀಡುವ ತಿದ್ದುಪಡಿ ತಂದು ಬಿಜೆಪಿ ಸರ್ಕಾರ ಮಂಡಳಿಯನ್ನು ಅಧೋಗತಿಗೆ ಇಳಿಸಿದೆ
ಶರಣಪ್ರಕಾಶ ಪಾಟೀಲ
ಮಾಜಿ ಅಧ್ಯಕ್ಷ, ಕೆಕೆಆರ್‌ಡಿಬಿ

ಮುಂಬೈ: ಅತ್ಯಾಚಾರ ಸಂತ್ರಸ್ತೆ ಸಾವು

ಪ್ರಜಾವಾಣಿ ವಾರ್ತೆ

ಮುಂಬೈ: ದೇಶವನ್ನು ಬೆಚ್ಚಿಬೀಳಿಸಿದ್ದ ದೆಹಲಿಯ ‘ನಿರ್ಭಯಾ’ ಪ್ರಕರಣವನ್ನು ಹೋಲುವ ಮತ್ತೊಂದು ಹೇಯಕೃತ್ಯ ವಾಣಿಜ್ಯ ರಾಜಧಾನಿ ಮುಂಬೈನಲ್ಲಿ ಶುಕ್ರವಾರ ಬೆಳಗಿನ ಜಾವ ನಡೆದಿದೆ. ತೀವ್ರ ರಕ್ತಸ್ರಾವದಿಂದ ಬಳಲಿದ್ದ 34 ವರ್ಷದ ಸಂತ್ರಸ್ತೆಯು, ಚಿಕಿತ್ಸೆ ಫಲಿಸದೇ ಶನಿವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಮುಂಬೈನ ಸಾಕಿನಾಕಾ ಪ್ರದೇಶದಲ್ಲಿ ನಿಂತಿದ್ದ ಟೆಂಪೊವೊಂದರಲ್ಲಿ, ನಸುಕಿನ ಮೂರು ಗಂಟೆ ಹೊತ್ತಿಗೆ ಮಹಿಳೆಯ ಮೇಲೆ ಪೈಶಾಚಿಕ ಕೃತ್ಯ ನಡೆದಿತ್ತು. ಮಹಿಳೆಯ ಗುಪ್ತಾಂಗಕ್ಕೆ ಕಬ್ಬಿಣದ ಸರಳನ್ನು ತೂರಿಸಿ, ಚಾಕುವಿನಿಂದ ಹಲ್ಲೆ ಮಾಡಲಾಗಿತ್ತು. ಖೈರನಿ ರಸ್ತೆಯಲ್ಲಿ, ಮಹಿಳೆಯ ಮೇಲೆ ಹಲ್ಲೆ ನಡೆಯುತ್ತಿರುವುದಾಗಿ ವಾಚ್‌ಮನ್ ಒಬ್ಬರು ಪೊಲೀಸ್ ಕಂಟ್ರೋಲ್ ರೂಂಗೆ ಕರೆ ಮಾಡಿ ಮಾಹಿತಿ ನೀಡಿದ್ದರು. ಪೊಲೀಸರು ಧಾವಿಸುವ ಹೊತ್ತಿಗೆ ಸಂತ್ರಸ್ತೆಯು ರಕ್ತದ ಮಡುವಿನಲ್ಲಿ ಬಿದ್ದಿದ್ದರು.

7ನೇ ಪುಟ ನೋಡಿ

ಗುಜರಾತ್ ಸಿ.ಎಂ ರೂಪಾಣಿ ರಾಜೀನಾಮೆ

ಅಹಮದಾಬಾದ್: ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾಣಿ ಶನಿವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಈ ಮೂಲಕ ನಾಯಕತ್ವ ಬದಲಾವಣೆ ಬಗೆಗಿನ ಊಹಾ ಪೋಹಗಳಿಗೆ ತೆರೆ ಎಳೆದಿದ್ದಾರೆ.



7



ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ

ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560034
Ph : 080-25526266 / 25526288, E-mail : csbankblr@gmail.com

ಪ್ರಕಟಣೆ

ಬ್ಯಾಂಕಿನ 21 ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ಕೋವಿಡ್ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಆದೇಶದಂತೆ Video Conference / Virtual Meeting ಮೂಲಕ ದಿನಾಂಕ 17-09-2021ರ ಶುಕ್ರವಾರ ಬೆಳಿಗ್ಗೆ 11.00 ಗಂಟೆಗೆ ನಡೆಸಲು ನಿರ್ಣಯಿಸಲಾಗಿದೆ.

ಸೂಚನಾ ಪ್ರಕಟಣೆಯನ್ನು ಅಂಚೆಯ ಮೂಲಕ ಸದಸ್ಯರೆಲ್ಲರಿಗೂ ಈಗಾಗಲೇ ಕಳುಹಿಸಲಾಗಿದೆ. ಮಾನ್ಯ ಸದಸ್ಯರು ತಮ್ಮ ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿ ಮೀಟಿಂಗ್ ಲಿಂಕ್ :
www.dreamswebinar.com/charteredsahakaribank ಮೂಲಕ Video Conference / Virtual Meeting ನಲ್ಲಿ ಭಾಗವಹಿಸಲು ಕೋರುತ್ತೇವೆ.

ದಿನಾಂಕ : 09-09-2021
ಸ್ಥಳ : ಬೆಂಗಳೂರು

ಸಹಿ/-
ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಜವಾಹರ್ ನವೋದಯ ವಿದ್ಯಾಲಯ

ಬಾಗಲೂರು–562149 (ಯಲಹಂಕ ಹತ್ತಿರ),
ಬೆಂಗಳೂರು ನಗರ ಜಿಲ್ಲೆ, ಕರ್ನಾಟಕ, ಫೋ: 080–29900456,
ಶಿಕ್ಷಣ ಸಚಿವಾಲಯ (ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ವಿಭಾಗ, ಭಾರತ ಸರ್ಕಾರ)

ಟೆಂಡರು ಪ್ರಕಟಣೆ

ನಮ್ಮ ವಿದ್ಯಾಲಯಕ್ಕೆ 2021–22 ನೇ ಸಾಲಿಗಾಗಿ ಈ ಕೆಳಕಂಡ ವಸ್ತುಗಳ ಸರಬರಾಜು ಹಾಗೂ ಕೆಲಸಕ್ಕಾಗಿ ಟೆಂಡರುಗಳನ್ನು ಆಹ್ವಾನಿಸಲಾಗಿದೆ. 1. ಕಿರಾಣಿ ಸಾಮಾನುಗಳು ಮತ್ತು ನೈರ್ಮಲ್ಯ ವಸ್ತುಗಳು 2. ಬೇಕರಿ ಪದಾರ್ಥಗಳು, 3. ಬಟ್ಟೆ ಒಗೆಯುವುದು ಮತ್ತು ಇಸ್ತ್ರಿ ಮಾಡುವುದು. ಈ ಮೇಲಿನ ವಿಷಯಕ್ಕೆ ಸಂಬಂಧಿಸಿದ ಟೆಂಡರು ಫಾರಂಗಳನ್ನು ದಿನಾಂಕ **13.09.2021** ರಿಂದ **25.09.2021** ರವರೆಗೆ ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು, ಕಛೇರಿಯ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ **9.00** ಘಂಟೆಯಿಂದ ಸಾಯಂಕಾಲ **4.00** ಗಂಟೆಯವರೆಗೆ ವಿತರಿಸಲಾಗುವುದು ಅಥವಾ ವಿದ್ಯಾಲಯದ ವೆಬ್ ಸೈಟ್ https://www.navodaya.gov.in/nvs/nvs-school/BANGALOREURBAN/en/home/ ಅಥವಾ ಸಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಫಾರಂಗಳನ್ನು ತೆಗೆದುಕೊಳ್ಳಬಹುದು. ಸದರಿ ಫಾರಂಗಳ ಬೆಲೆ ರೂಪಾಯಿ 200/– ರೂ ಆಗಿದ್ದು ಇದನ್ನು ವಿದ್ಯಾಲಯಕ್ಕೆ ಪಾವತಿಸುವುದರ ಮೂಲಕ ಅರ್ಜಿಗಳನ್ನು ಪಡೆಯಬಹುದು. ಈ ಹಣವನ್ನು ವಿದ್ಯಾಲಯವು ಮರುಪಾವತಿಸುವುದಿಲ್ಲ. ಭರ್ತಿ ಮಾಡಿದ ಟೆಂಡರ್ ಲಕೋಟೆಗಳನ್ನು ದಿನಾಂಕ **25.09.2021** ರ ಸಾಯಂಕಾಲ **4.00** ಘಂಟೆಯವರೆಗೆ ಸ್ವೀಕರಿಸಲಾಗುವುದು. ಸೀಲು ಮಾಡಿದ ಲಕೋಟೆಗಳನ್ನು, ನಿಗದಿ ಪಡಿಸಿದ ದಿನಾಂಕದೊಳಗಾಗಿ ಖುದ್ದಾಗಿ ಅಥವಾ ಅಂಚೆ ಮೂಲಕ (ತ್ವರಿತ ಅಂಚೆ ಅಥವಾ ರಿಜಿಸ್ಟರ್ ಪೋಸ್ಟ್) ವಿದ್ಯಾಲಯಕ್ಕೆ ತಲುಪಿಸಬೇಕು. ಸೀಲು ಮಾಡಿದ ಲಕೋಟೆಗಳನ್ನು ಪ್ರಾಂಶುಪಾಲರ ಕೊಠಡಿ, ಜವಾಹರ್ ನವೋದಯ ವಿದ್ಯಾಲಯ, ಬಾಗಲೂರು – 562 149, ಬೆಂಗಳೂರು ನಗರ ಜಿಲ್ಲೆಯಲ್ಲಿ, ದಿನಾಂಕ **27.09.2021** ರಂದು ಬೆಳಿಗ್ಗೆ **11.00** ಘಂಟೆಗೆ, ಟೆಂಡರ್ ಮಾಡಿದವರ ಸಮುಖದಲ್ಲಿ ತೆರೆಯಲಾಗುವುದು.

ಪ್ರಾಂಶುಪಾಲರು

ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಡಯಾಲಿಸಿಸ್ ಆಸ್ಪತ್ರೆ, ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಪುತ್ಥಳಿ ಅನಾವರಣ ಉದ್ಯಾನವನ ಹಾಗೂ ಸ್ಕೇಟಿಂಗ್ ಟ್ರ್ಯಾಕ್



ಉದ್ಘಾಟನಾ ಕಾರ್ಯಕ್ರಮ

–:: ದಿವ್ಯಸಾನಿಧ್ಯ ::–

ಶ್ರೀ ನಿರಂಜನಾನಂದಪುರಿ ಸ್ವಾಮಿಗಳು
ಶ್ರೀ ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ

ಶ್ರೀ ಈಶ್ವರಾನಂದಪುರಿ ಸ್ವಾಮಿಗಳು
ಹೊಸದುರ್ಗ ಶಾಖಾ ಮಠ, ಕನಕಗುರುಪೀಠ

ಸ್ಥಳ : ಸಂಗೊಳ್ಳಿರಾಯಣ್ಣ ಕ್ರೀಡಾಂಗಣ, ಜಿ.ಕೆ.ಡಬ್ಲ್ಯೂ. ಲೇಔಟ್, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ
ದಿನಾಂಕ : 12–09–2021ನೇ ಭಾನುವಾರ ಬೆಳಿಗ್ಗೆ 11.00 ಘಂಟೆಗೆ

ಉದ್ಘಾಟನೆ : ಶ್ರೀ ಬಸವರಾಜ ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು

ಅಧ್ಯಕ್ಷತೆ : ಶ್ರೀ ವಿ. ಸೋಮಣ್ಣ
ಮಾನ್ಯ ವಸತಿ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರು

~:: ಘನ ಉಪಸ್ಥಿತಿ ::~

ಶ್ರೀ ಆರ್. ಅಶೋಕ, ಮಾನ್ಯ ಕಂದಾಯ ಸಚಿವರು
ಶ್ರೀ ಬಿ.ಎ. ಬಸವರಾಜ, ಮಾನ್ಯ ನಗರಾಭಿವೃದ್ಧಿ ಸಚಿವರು
ಡಾ|| ಕೆ. ಸುಧಾಕರ್, ಮಾನ್ಯ ಆರೋಗ್ಯ ಮತ್ತು ಕು.ಕಲ್ಯಾಣ ಸಚಿವರು
ಶ್ರೀ ಮುನಿರತ್ನ, ಮಾನ್ಯ ತೋಟಗಾರಿಕೆ, ಯೋಜನೆ, ಸಚಿವರು
ಶ್ರೀ ಗೋಪಾಲಯ್ಯ, ಮಾನ್ಯ ಅಬಕಾರಿ ಸಚಿವರು
ಶ್ರೀ ತೇಜಸ್ವಿಸೂರ್ಯ, ಮಾನ್ಯ ಸಂಸದರು
ಶ್ರೀ ಎಸ್.ಆರ್. ವಿಶ್ವನಾಥ್, ಮಾನ್ಯ ಅಧ್ಯಕ್ಷರು ಬಿ.ಡಿ.ಎ.
ಶ್ರೀ ಅ. ದೇವೇಗೌಡ, ಮಾನ್ಯ ವಿಧಾನಪರಿಷತ್ ಸದಸ್ಯರು
ಶ್ರೀಮತಿ ಶಾಂತಕುಮಾರಿ, ಮಾನ್ಯ ಮಾಜಿ ಮಹಾಪೌರರು

ಶ್ರೀ ಬಳಗಾವಿ ಟಿ.ಬಿ.
ನಿರ್ದೇಶಕರು,
ಕರ್ನಾಟಕ ಪ್ರದೇಶ ಕುರುಬರ ಸಂಘ

ಶ್ರೀ ಗೌರವ್ ಗುಪ್ತ ಭಾ.ಆ.ಸೇ.
ಆಯುಕ್ತರು, ಬಿ.ಬಿ.ಎಂ.ಪಿ.

ಸರ್ವರಿಗೂ ಸುಸ್ವಾಗತ

ಶ್ರೀ ರಾಕೇಶ್ ಸಿಂಗ್ ಭಾ.ಆ.ಸೇ.
ಆಡಳಿತಗಾರರು, ಬಿ.ಬಿ.ಎಂ.ಪಿ.

SHREE HALASIDHANATH SAHAKARI SAKHAR KARKHANA LTD.,

Shankaranandnagar, Nipani-591237 Tal. Chikodi Dist. Belgaum
Phones : (08338) : 220355,9535370190,6362916378 e-mail : hssksales@gmail.com

TENDER NOTICE FOR EXPORT OF RAW SUGAR

Sealed tenders are invited from recognized exporters, brokers for sale of raw sugar under OGL (Open General License) for the season 2021-22.

Sugar Specifications as below

Production year	:	2021-22
Quantity	:	2000 to 2500 MT
Packing	:	50 Kg. P.P. Bags.
Icumsa	:	As per Requirement
Rate	:	To be Quoted Ex-Factory (excluding taxes)
Payment	:	100% Payment before delivery
E.M.D	:	Rs.5000/- Per M.T.
Inspection	:	On the Buyer's account
Export Subsidy	:	If the Govt. of India /or Govt. of Karnataka announces and / or declares incentives / subsides in respect of said good the benefits of such incentives, subsides shall be given to the Factory.
Delivery	:	Ex-Factory.

Other Terms & Conditions for exporters.
1) a) Exporter/Merchant exporter having an IEC. Code No. and RCMC certificate holder. **b)** Central & State GST "No Default Certificate" is essential. **c)** Exporter shall mention the name of country, where sugar will be exported. **2)** submit the tender on or before **20-09-2021 at 2.00 PM** at factory site by **E-mail or post or by hand** and negotiation date will be intimated separately. **3)** All terms and conditions under OGL &other scheme of Govt. are binding on exporter. **4)** The karkahana reserves the right to accept or to reject partly or fully tender without assigning any reason thereof.

Sd/-
(Shiv Kulkarni)
Managing Director

Sd/-
(C.S.Kothiwale)
Chairman

ಶಿವರಾಮ ಕಾರಂತ ಬಡಾವಣೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಬೆಂಗಳೂರು: ಶಿವರಾಮ ಕಾರಂತ ಬಡಾವಣೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಪ್ರದೇಶಗಳಲ್ಲಿರುವ ಕಟ್ಟಡಗಳಿಗೆ ಸಂಬಂಧಿಸಿದಂತೆ ಅರ್ಜಿ ಮತ್ತು ದಾಖಲೆ ಸಲ್ಲಿಸುವ ಕೊನೆಯ ದಿನಾಂಕವನ್ನು ಸುಪ್ರೀಂ ಕೋರ್ಟ್ ನೇಮಕ ಮಾಡಿರುವ ನ್ಯಾ. ಎ.ವಿ. ಚಂದ್ರಶೇಖರ್ ಸಮಿತಿ ಇದೇ 30ರವರೆಗೆ ವಿಸ್ತರಿಸಿದೆ.

ಮೇಡಿ ಅಗ್ರಹಾರ ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮದಲ್ಲಿರುವ ಸಹಾಯ ಕೇಂದ್ರಗಳು ಹಾಗೂ ಪ್ರಾಧಿಕಾರದ ಕೇಂದ್ರ ಕಚೇರಿಯ 'ಸಹಾಯ ಕೇಂದ್ರ'ಗಳಲ್ಲಿ ಅರ್ಜಿಗಳನ್ನು ಇದೇ 30ರವರೆಗೆ ಸ್ವೀಕರಿಸಲಾಗುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಸಾಹಿತ್ಯ ಅಕಾಡೆಮಿ ಗೌರವ

ಬಾಗಲಕೋಟೆ: ಹರಿದಾಸ ಸಾಹಿತ್ಯ ಸಂಶೋಧಕ ಡಾ.ಲಕ್ಷ್ಮೀಕಾಂತ ಪಾಟೀಲ ಅವರ 'ಪ್ರಸನ್ನವೆಂಕಟದಾಸಾರ್ಯ ಕೃತ ಶ್ರೀ ಲಕ್ಷ್ಮೀದೇವಿ ಅಪ್ರಕಟಿತ ಸ್ತುತಿರತ್ನಗಳು' ಕೃತಿಗೆ 2019ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ಇದೇ 12ರಂದು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Industrial & Factory

Out-Station

HINDUPUR AP border SALE 3 Industrial sheds half, One, Three acres with power compounded 2/3 side roads. Clear Titles. 9945199979

Rajajinagar

RAJAJINAGAR INDUSTRIAL Town, 60x100 Shed For Sale with 100HP Power, South Facing Rate:13250/- Negotiable: 9986999802

Residential/ Commercial

J P Nagar

RESIDENTIAL / Commercial Property for Sale: South West Corner House Opp to RV Dental College, JP nagar 1st Phase, Bangalore/ 3 BHK/1872 sqft/ 4 Cr/ Ct: 9901901903 / 9845668010

Mysore

FOR BUYING and Selling MUDA Sites, Houses, Apartments, Commercials, Alienated lands and Agriculture lands in Mysore Contact: Vishwanath Gowda Mysore Estates 9590911111

Sanjaynagar

1 BHK: 950 SqFt 1 BHK for Sale in Anriya Dwellington RMV Extn. 98450 13188

REAL ESTATE BUYING

Joint Development

General

RAILWAY PSU is Looking for 25-100 acres Land in JV within1-2kms from Railway lines for Construction of Warehouses, 8088593281

Sites

Mysore

MUDA SITES Wanted, Vijayanagara, Dattagalli, Kuvempunagara, Bogadi, Satagalli, Srirampura, Hebbal. Genuine sellers Contact Ravish: 9845608259

Vishweshwariah Layout

WANTED SITES 30x40, 20x30 Vishweswaraiah, Ramasandra, Manganahalli, Gidadakonena Halli Surronding, Brokers Excuse, Sites Owner Contact: G.S.DEVARAJ 8884412326.

BUILDERS ESSENTIAL

Building Contractors

CONTRACTORS/ SUB-CONTRACTORS/ Joint Venture Developers required at Devanahalli (NH-7 near Bengaluru International Airport).Contact info@basecap.in/ iceas04@yahoo.com, 9880228272

KANTHI CONSTRUCTIONS WE CONSTRUCT YOUR HOUSE. FREE:- SUMP, SOLAR, OVERHEADTANK. PER SQFT-1700/-9880785589/ 9066487178

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Commercial

INDIRA NAGAR OFFICE SPACE AVAILABLE 1200 sft Second Floor, Opp airtel office, First stage, Canara Bank Road. 9845680613

TO-LET OFFICE space 2nd floor: 1200 sft, 3rd floor: 700 sft, Vijayanagar club road, Bangalore Contact: 9845162186

TO-LET OFFICE space 2nd floor: 1200 sft,3rd floor: 700 sft, Vijayanagar club road, Bangalore Contact: 9845162186

15000 SQ. ft. R.C.C. double storied building in Hoskote Chinthamani Road (Bangalore) available for rent. Contact: 9845828871

FOR RENT 2250 and 4500 sft
office space Cox Town Contact 8217793784

Flats

RENTING / Sale 3BHK Semi furnished Apartment in Malleswaram, East facing, car parking 9845087670 9880504810

2 BHK flat in JP Nagar 1st phase.Rent 18,500 inclusive of maintenance. Call 9611919399

General

MINI PARTY Hall, Available For Lease/ Rent, Lift, AC, Building, Mahalaxmi Puram Pipeline Road: 9742628580

House

2 BEDROOM House for RENT. 1st Floor, Semi Furnished, at KORAMANGALA. Contact: 9845514967

FOR RENT 550 Sqft- Office Space with Attached bath in Teachers Colony 1st Stage, 1st Cross, on the way to Dayananda Sagar Engineering College immediate next to Ring Road, Suitable for CA/CLINIC/ATM/ Storage/ Teaching/ Mini Conference /Mini Function/ Rent Rs.12000/- Negotiable Phone: 080-26654479, 9880216323 Agents welcome.

Villas/Bunglows

SOBHA CITY 5-BHK Semi-furnished ROW-HOUSE VILLA available For Rent at Sobha City, Tanisandra Mian Road. Contact owner: +91 7337676822

JOB OPPORTUNITIES

Marketing & Sales

WANTED MARKETING EXECUTIVE with excellent communication skills in English and local language. Contact: 9513322228

General

FULFILL YOUR dreams/ desires with a Corporate which looks for NRIs,Ex-Bankers, State/Central VRS,Unemployed Teachers Educated Housewives with flexible timings.Benefits: Fixed salary,flexible timings, PF+ESI, Unlimited Incentives.Call:8660526113.

WANTED WELL experienced educated, smart sales girls/ sales boys for reputed silver showroom/ watch showroom/ jewellery showroom at Rajajinagar 1st block. contact: 9845039734.

Teachers/ Professors

WANTED TEACHER FOR IMMEDIATE Appointment Higher primary and High school to handle MATHS and SCIENCE Contact: St.Charles HIGH SCHOOL #1086, 1st Block, 3rd Stage,Adarshalayout WOC Road, Basaveshwaranagar, Bangalore:79. Phone: 080 23235220 9740677886

WANTED LADY Teachers for Primary School. Contact with your resume. CAMLIN ENGLISH SCHOOL, 4th Cross RPC Layout, Hampinagar, Bangalore. 080-23301363

WANTED ENGLISH, Hindi, Science, Maths TEACHERS (Higher-Primary) 'SRI-VIDYA KENDRA' Peenya, Bangalore-58 Contact: 9900708182, 28398833, 41179155

DIAMOND COLLEGE, TC-Palya,KR Puram. Required LECTURERS for Commerce and Computer. Contact: 8095058006 Mail: agnrdiamondcollege@gmail.com.

SECAB ENGLISH MEDIUM SCHOOL, Kadirenahalli, Bengaluru Phone: 080-42136268/ 9986993656 Requires Hindi, English, SocialStudies, Science, Maths TEACHERS. Contact office between 10.30- 2.30pm

WANTED QUALIFIED Experienced D.Ed/ BSc/ MSc/ B.Ed. Maths, Hindi Teachers, 5-10 years Office Accountant for Infant's Indian Primary High School, Austin Town. Contact - 9845199606

WANTED EXPERIENCED Faculties to teach UPSC-IAS Subjects & Admins Send resume to: ceo@vxplore.co.in /9740191676 VXplore IAS Academy Kengeri Satellite Town Bangalore

TEACHERS WITH very good English all subjects Contact 10-11AM United Education Primary, High school. Behind Vivekananda metro station Baiyapanahalli Extn (left) 4th cross.

R E S POLYTECHNIC
(Estd: 1986 - Run by Rajendra Education Society)
5, Sunkadakatte, Magadi Main Road, Hegganahalli Cross, Bangalore-560 091 Phone: 080-23484814
DIPLOMA COURSES OFFERED:
1. Automobile 2. Information Technology 3. Computer Science 4. Electrical & Electronics 5. Electronics & Commn. 6. Civil 7. Mechanical 8. Fashion Technology 9. Commercial Practice
REQUIRE GUEST LECTURERS / INSTRUCTORS
For CS, EC, EE, Mechanical, Civil, Automobile, FASHION TECHNOLOGY & COMMERCE
Send your CV to: respt450@gmail.com within a week
RES-21209

NewAge WORLD SCHOOL
Mylappanahalli, Near Yelahanka RTO, Bengaluru North - 89, Karnataka
We are **HIRING**
JOIN OUR NEWAGE WORLD SCHOOL
"EMPOWERING PASSIONATE TEACHERS IN A LEARN-GROW-CONTRIBUTE ENVIRONMENT"
- ADMIN EXECUTIVE
- ACCOUNTS ASSISTANT
- PRIMARY TEACHER for Computer Science & English
- Primary School Coordinator
- Front Office Executive (must have experience working in schools)

ONLY NORTH BENGALURU CANDIDATES
Send your CV to email ID careers@newageworldschool.com
+ 91 76194 82072
www.newageworldschool.com

WANTED TEACHERS FOR IMMEDIATE APPOINTMENT, SUBJECTS: ENGLISH, CBZ, PHYSICS and MATHEMATICS. Contact: St.YASH PUBLIC SCHOOL. Phone: 7204347583/ 7204347584/ 9066242255

REQUIRED
KAIRALEE NIKETHAN EDUCATION TRUST
(Established by Kerala Samajam (R) Bangalore)
Primary Teachers (Subjects to handle, Hindi, Kannada, English & Social Science) – B.A, B.Ed
English Lecturer – M.A,B.Ed (Required for Halasuru & DB Sandra , Vidyaranyapura Campus)
Apply within Seven days from the date of publication
To, The Secretary, Kairalee Nikethan Education Trust, 5th Main , 9th Cross , Indiranagar, 1st Stage ,Bangalore - 560 038
Ph:25256754 /9535800165
Email:knetrustinstitutions@gmail.com

Accounts & Finance

B.COM FRESHERS (Female) required for CA's office in Shankarapuram. Whatsapp you resume to 9845608707. Salary Rs. 7 K

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Hospital & Medical Jobs

WANTED NURSES for GEF EYE HOSPITAL, Hoskote, Bangalore Rural to work in the OPD /OT & Ward Qualification: Diploma in Nursing /B.Sc. Nursing, Remuneration Negotiable. Contact: 080-29700230, 9844789046

Multiple Vacancy

WANTED EXPERIENCED 1. Advocate with strong knowledge in civil conveyance with legal Opinion, Minimum of 5years of Experience 2. Civil Engineers for Residential Layout projects 3. Accountant Minimum 5year Experience Equinox Global Shelters Office @ Yelahanaka New Town, Attractive salary 8217482988, egsadm159@gmail.com

A PVT ltd advt co. Needs 30 ASM, 700 Sales Exe. all HQs, for pamphlet booking, bst pkg, send CV hr. bgmas@gmail.com

WANTED BILLING&DISPATCH, Accounts, Security, Loadingand Unloading, Production Manager, Unskilled Labours for Gayathri_Associates, Dodda Gubbi_Main_Road, Opp.to Gavi_Gudi, Bangalore. Call: 9448488536/ 9844083318

GEF EYE HOSPITAL Hoskote, Wanted candidates having Knowledge of Computer with Qualification of PUC /Degree/ DCA. Wanted Drivers for Four Wheeler Salary Negotiable. Contact: 080-29700230, 9844789046

Wanted

WANTED A mature pleasant & pretty Female travelling companion for a senior male executive in Bangalore. Age less than 50 years, height not less than 160 cms. Excellent remuneration package for right candidate. Please forward details via WhatsApp to Gautam 8217347627.

LIMITED MNC COMPANY Lost Job, Provide Work From Home Earn 30K to35K: 7019215243/ 9886641282

Receptionist/ Secretary

WANTED
FEMALE OFFICE ASSISTANT
Candidate in & around Nagarabhavi/ Chandra Layout, with PU/ B.Com
-:Contact:-
SHREE BIO-MED
9880878388

AUTOMOTIVE

Four Wheelers Selling

Ford

EXCELLENT CONDITION 2014 Ford Ecosport.New Ovion Leather Seats, New Tyres, Wipers, Power Booster, 5.95L, 9606026648

MATRIMONIAL

Brides Wanted

Hindu

MBBS MS GENERAL SURGEON 29 HANDSOME DOCTOR SEEKS ALLIANCE FROM AFFLUENT FAMILY, VEGETARIAN MD / MS MEDICAL BRIDE. 9353582028

Grooms Wanted

Bengali

BENGALI, BE/31/5'4'/EB/DEBARI/MNC Bangalore/20 LPA. contact biodata with photos.7044716088

Brahmin

WELL EDUCATED GROOM wanted from Brahmin community for 28 year old good looking, fair, Height 5 feet, Mumbai based Madhwa Brahmin girl. MSc Microbiology and employed in MNC.Call 9742176831

Muslim

GROOM REQUIRED
Matrimonial alliance is solicited for a Sunni Muslim Girl, aged 26 years, height 5.2" fair, beautiful BDS qualified practicing as a Dentist. The prospective Groom should be 28 to 31 years, well educated, BE, MBA B-Tech, M-Tech, BDS, MDS, Good looking Teetotaller, employed Muslim from educated, broadminded, religious family from Bangalore, employed in UAE etc. will also be considered
Contact: +91 9986254587

Telugu

GROOM WANTED
REDDY
M.TECH(IT), IIIT Software Engineer in MNC Bangalore, Sept 95 born/5'3" charming and intelligent girl seeks highly qualified handsome groom preferably IIT/IIM background well placed in MNCs or owning a start-up, working in Bangalore. Proposal from Bangalore based Doctor/I.A.S/K.A.S is also welcome. Father is a serving senior I.A.S. Officer.
Call : 9110266326
e-mail : subrasuraj1995@gmail.com

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

BUSINESS

Business Offers

Finance

ALL TYPES of funds avail from 8CR -150CR@ 8%P.A LAP, BUSINESS,PROJECTS, COST LESS PROCESS CT: 7200418844 E-MAIL: marcusgroups@yahoo.com

Business For Sale

ESTABLISHED PLASTIC Reprocessing Unit For Sale Having Good Customers at Bangalore, Owner Going Abroad, Total Investment 10-12 Lakhs, Only Genuine Buyers Contact: 9845227242

General

EARN REGULAR INCOME through online TRADING from your home. FOREX, EQUITY, COMMODITY, F & O. Get personal TRAINING from experts. Call: 8105303232

Business to Business

Business

WE DEAL in Court Related Litigated Properties in Bangalore/ Karnataka/ Khatha Related Matters, Call: 8088593281

Finance

COLLATERAL PAPERS Properties Required around Bengaluru. A & E-Khatha, Converted Land, on 50:50. Private funding-8088593281

EDUCATION CORNER

ADMISSION 2021-22
RAMAN POLYTECHNIC
12, Magadi Main Rd, Kamakshipalya, (Near Sumanahalli Bus Stop) B'lore-79
Mobile: 80500 66771 / 63609 03500 Web: www.ramaneducation.org
♦ Civil ♦ Mechanical ♦ Electrical ♦ Electronics ♦ Computer Science ♦ Automobile
RAMAN SCHOOL OF NURSING (GNM)
RAMAN I.T.I. COLLEGE
♦ Fitter ♦ Electronic ♦ Mechanic Electrician
CALIFORNIA PUBLIC SCHOOL
ICSE & State Syllabus. Nursery to X std
HOSTEL FACILITIES FOR BOYS & GIRLS
RMN-21201

B.E.T. SADATHUNNISA DEGREE COLLEGE FOR WOMEN
Affiliated to Bangalore City University
Bismillahnagar, Banerghatta Road Cross, Bangalore-29
ADMISSIONS ARE OPEN FOR B.Com, BCA, BA, BBA
With first language Kannada, Hindi & Urdu **& One year part time Kannada Certificate Course**
Contact: 9980340172, 9620060782

PUBLIC NOTICE

NOTICE
NO. DUBA/ Cons/ 434/MR/ 2021-(220) Dated: 01/09/2021 Mr. RIJIN SAJEEVAN S/o SAJEEVAN KALLADA Resident of KALLADA HOUSE, PALLIKUNNU CHALAD PO, KANNUR DT KERALA, INDIA. Present address: INTERNATIONAL CITY, RUSSIA V-11, DUBAI UAE. Miss VANISSA KOTIAN Daughter of VINOD CHRISTOPHER KOTIAN Resident of D202 MANTHRI FLORA, AMBALIPURA BANGALORE, PIN 560102, KARNATAKA, INDIA. Present address: OUD METHA, ELEGANZA APARTMENT, FLAT NO 407, OPPOSITE AMERICAN HOSPITAL, DUBAI UAE. Above mentioned Indian nationals presently residing in the UAE have given notice of intended marriage between them under the foreign marriages act, 1969. If anyone has any objection to the proposed marriage he/ she should file the same with the undersigned according to the procedure laid down under the act/rules within thirty days from the date of publication of this notice.
(Jitender Singh Negi) Marriage Officer, Consulate General of India, P.O Box: 737, Dubai (UAE), Fax No 009714-3970453,
Email: cons1.dubai@mea.gov.in, con3.dubai@mea.gov.in.
Homepage: www.cgidubai.gov.in

PERSONAL

Change of Name

I, BADRI NARAYAN SRINIVASAN & BADRI N SRINIVASAN R/@ No.304, Anandlok Apartments, 2nd cross, 5th Main, Kempapura, H A Farm, Bengaluru-560024 have changed my name to BADRE SRINIVASAN vide affidavit dated 11/09/2021 before notary A.R. MUNEER AHMED Bangalore

ASMITA W/O. JC672438K, SUB, Durga Das Tung Vill/Post: Brindabonpur, THE/Dist: Bankura, WB, my name ASMITA to ASMITA TUNG notary KV,Mani, Bangalore.

I, SARIKA W/o. Amit Srivastava R/a Flat #202, Ramaraju Residency, #48/49, 1st Cross, K.R.Layout, J.P.Nagar 6th Phase, Bengaluru- 560078 After Marriage Have Changed My Name as SARIKA SRIVASTAVA vide Affidavit Dated: 08.09.2021 Sworn Before Notary Aravind Patil.G.G. Bengaluru.

TAYAVVA W/O. 14825699M, HAV/MT, Lakshmappa Hulagannavar, Vill/Post: Chikkur Mudhol Bagalkot, my name TAYAVVA to TAYAVVA HULAGANNAVAR notary KV.Mani, Bangalore.

14865914P, SEP, Shantanu Paul, ASC Centre & College, mother name records USHA PAUL instead of USHARANI PAUL, notary KV.Mani, Bangalore.

14825699M, HAV/MT, Lakshmappa Hulagannavar 2ATC, daughter name service record JYOTI instead of JYOTI HULAGANNAVAR notary KV.Mani, Bangalore.

Lost

LOST
Original Mother Deed, belongs to Rajagopalan, Residing at #508, 2nd cross, Hanumanthappa Layout, Totadaguddadahalli, Nagasandra Post, Bengaluru-73. Site No: 5, deed Hosur Reg. No: 4604/ 1986 Book No: 1, Volume 1313, Pages 273 to 276 has been lost on 6/9/2021 at Bagalakunte surrounding.
Finder please call: 9972770200, 9980571417

For Online Classified Booking
Name Change / Education / Property / Job / Services and many more contact
9880856233 | 9886213331
dhclassifieds.com

ನಗರದ ಹಲಸೂರು ಕೆರೆಯಲ್ಲಿ ಶನಿವಾರ ಬಿಬಿಎಂಪಿ ಸಿಬ್ಬಂದಿ ಗಣೇಶ ಮೂರ್ತಿಗಳನ್ನು ವಿಸರ್ಜಿಸಿದರು (ಎಡ ಚಿತ್ರ), ಯಡಿಯೂರು ಕೆರೆಯಲ್ಲಿ ನಾಗರಿಕರು ಗಣೇಶ ಮೂರ್ತಿಗಳನ್ನು ವಿಸರ್ಜಿಸಿದರು –ಪ್ರಜಾವಾಣಿ ಚಿತ್ರಗಳು

ಜೆ.ಪಿ. ನಗರದ 7ನೇ ಹಂತದಲ್ಲಿರುವ ಅನಿತಾ ರಂಗರಾಜ್ ಅವರ ನಿವಾಸದಲ್ಲಿ ಗಣೇಶ ಮೂರ್ತಿಗಳ ಪ್ರದರ್ಶನ

ಭಾನುವಾರವೂ ಮೂರ್ತಿ ಪ್ರತಿಷ್ಠಾಪನೆಗೆ ಸಿದ್ಧತೆ • ಪೊಲೀಸರು–ಸಂಘಟಕರ ನಡುವೆ ಚಕಮಕಿ

ಗೊಂದಲಗಳ ನಡುವೆಯೂ ಗಣೇಶೋತ್ಸವ ಸಡಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ ಹಾಗೂ ಶನಿವಾರ ಹಬ್ಬದ ಸಂಭ್ರಮ ಮನೆ ಮಾಡಿತ್ತು. ಮನೆಗಳಲ್ಲಿ ಗೌರಿ–ಗಣೇಶ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸುವ ಮೂಲಕ ಜನ ಹಬ್ಬ ಆಚರಿಸಿದರು. ಆದರೆ, ಕೋವಿಡ್ ಮೂರನೇ ಅಲೆ ಕಾಣಿಸಿಕೊಳ್ಳುವ ಆತಂಕವಿರುವ ಕಾರಣ ಸಾರ್ವಜನಿಕ ಗಣೇಶೋತ್ಸವ ಆಚರಣೆಗೆ ಹಲವು ನಿರ್ಬಂಧಗಳನ್ನು ವಿಧಿಸಿದ್ದರಿಂದ ಬೀದಿಗಳಲ್ಲಿ ಹಬ್ಬದ ಸಡಗರ ಅಷ್ಟಾಗಿ ಕಂಡು ಬರಲಿಲ್ಲ.

ಕೆಲವೆಡೆ ಸಣ್ಣ ಪುಟ್ಟ ರಸ್ತೆಗಳು ಹಾಗೂ ಓಣಿಗಳಲ್ಲಿ ಸಾಮೂಹಿಕವಾಗಿ 4 ಅಡಿ ಎತ್ತರದವರೆಗಿನ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸಿದರು. ನಗರದ ಬಹುತೇಕ ಕಡೆಗಳಲ್ಲಿ ಚತುರ್ಥಿಯ ದಿನವೇ ಮೂರ್ತಿಗಳನ್ನು ವಿಸರ್ಜಿಸಲಾಯಿತು. ನಗರದ ಹಲಸೂರು ಕೆರೆ, ಯಡಿಯೂರು ಕೆರೆ, ಸ್ಯಾಂಕಿ ಕೆರೆ ಸೇರಿದಂತೆ ವಿವಿಧ ಕೆರೆಗಳಲ್ಲಿ ಪಾಲಿಕೆ ವತಿಯಿಂದ ಗಣೇಶ ಮೂರ್ತಿ ವಿಸರ್ಜನೆಗೆ ವ್ಯವಸ್ಥೆ ಕಲ್ಪಿಸ-ಲಾಗಿತ್ತು.

ಪ್ರತಿ ವಾರ್ಡ್‌ಗಳಲ್ಲಿ ಬಿಬಿಎಂಪಿ ವತಿಯಿಂದ ಸಂಚಾರ ತೊಟ್ಟಿಗಳಲ್ಲಿ ಮೂರ್ತಿ ವಿಸರ್ಜಿಸಿದರು. ಕೆಲವೆಡೆ ಸ್ಥಳೀಯ ಮುಖಂಡರೂ ಇಂತಹ ತೊಟ್ಟಿಗಳ ವ್ಯವಸ್ಥೆ ಮಾಡಿದ್ದರು.

ಪೊಲೀಸರಿಂದ ತಕರಾರು ಆರೋಪ: ‘ಬೀದಿ, ರಸ್ತೆಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿದ್ದಕ್ಕೆ ಪೊಲೀಸರು ತಕರಾರು ಮಾಡಿದ್ದಾರೆ. ಅನುಮತಿ ಪಡೆಯಲು ಬಿಬಿಎಂಪಿ ಕಚೇರಿಗೆ ಹೋದರೆ, ರಜೆ ಇತ್ತು. ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿದರೆ, ನಾವು ಈಗಾಗಲೇ ಆದೇಶ ಮಾಡಿಯಾಗಿದೆ. ಬೀದಿಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಬಹುದು ಎಂದು ಉತ್ತರಿಸಿದರು. ಆದರೂ ಪೊಲೀಸರು ಕಿರಿಕಿರಿಯನ್ನುಂಟು ಮಾಡಿದ್ದಾರೆ’ ಎಂದು ಕೆಲವು ಸಂಘಟಕರು ಆರೋಪಿಸಿದರು.

‘ಪೊಲೀಸ್ ಇಲಾಖೆಗೆ ಸರಿಯಾದ ಮಾಹಿತಿ ಇಲ್ಲದಿರುವುದರಿಂದ ಬಹುತೇಕ ಕಡೆ ಗಣೇಶನನ್ನು ಕೂರಿಸಲು ತೊಂದರೆಯಾಗುತ್ತಿದೆ. ಸುತ್ತೋಲೆ ಹೊರಡಿಸುತ್ತೇವೆ ಎಂದು ಹೇಳಿದ್ದ ಬಿಬಿಎಂಪಿಯು ಮೌಖಿಕ ಆದೇಶ ಮಾತ್ರ ನೀಡಿರುವುದರಿಂದ ಈ ಗೊಂದಲ ಸೃಷ್ಟಿಯಾಗಿದೆ’ ಎಂದು ಬೆಂಗಳೂರು ಮಹಾನಗರ ಗಣೇಶ ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ರಾಜು ದೂರಿದರು.

ಮೂರ್ತಿಗಳ ತೆರವು: ಬಿಟಿಎಂ ಬಡಾವಣೆಯಲ್ಲಿ ಕೂರಿಸಿದ್ದ ಗಣೇಶ ಮೂರ್ತಿಗಳನ್ನು ತೆರವುಗೊಳಿಸುವಂತೆ ಪೊಲೀಸರು ಶುಕ್ರವಾರ ಸಂಜೆ ಒತ್ತಾಯ ಮಾಡುತ್ತಿದ್ದಂತೆ ಗದ್ದಲ ಉಂಟಾಯಿತು. ಆಯೋಜಕರು ಪೊಲೀಸರ ವಿರುದ್ಧ ಪ್ರತಿಭಟನೆ ಮಾಡಿದರು.

‘ಬೇಗ ಮೂರ್ತಿಯನ್ನು ವಿಸರ್ಜಿಸಬೇಕು ಎಂದು ಪೊಲೀಸರು ಒತ್ತಡ ಹೇರಿದರು. ಸಂಜೆಯ ಮಂಗಳಾರತಿಗೂ ಅವಕಾಶ ನೀಡದೆ ಮೂರ್ತಿಗಳನ್ನು ತೆಗೆಯಿಸಿದರು’ ಗಣೇಶೋತ್ಸವ ಸಮಿತಿ ಪದಾಧಿಕಾರಿಗಳು ದೂರಿದರು.

ಹೆಬ್ಬಾಳ ಕೆರೆಯ ಬಳಿ ಸಂಚಾರಿ ತೊಟ್ಟಿಯಲ್ಲಿ ಭಕ್ತರು ಗಣೇಶ ಮೂರ್ತಿ ವಿಸರ್ಜಿಸಿದರು

ಶುಕ್ರವಾರ ವಿಸರ್ಜನೆಗೊಂಡ ಗಣೇಶ ಮೂರ್ತಿಗಳ ವಿವರ

ವಲಯ	ಸಂಚಾರ ತೊಟ್ಟಿಗಳಲ್ಲಿ	ಕೆರೆ/ಕಲ್ಯಾಣಿಗಳಲ್ಲಿ	ಒಟ್ಟು
ಪೂರ್ವ	1,813	ಹಲಸೂರು ಕೆರೆ–19,123	20,936
ಪಶ್ಚಿಮ	11,860	ಸ್ಯಾಂಕಿ ಕೆರೆ –15,650	27,510
ದಕ್ಷಿಣ	5,856	ಯಡಿಯೂರು ಕೆರೆ–20,500 ವಿವೇಕಾನಂದ ಕಲ್ಯಾಣಿ–6,650	33,006
ದಾಸರಹಳ್ಳಿ	468	ಚೊಕ್ಕಸಂದ್ರ–243	711
ಮಹದೇವಪುರ	1,846	ಕಲ್ಕೆರೆ–325 ವಿಭೂತಿಪುರ–225 ಕಾಶಿ ವಿಶ್ವನಾಥಸ್ವಾಮಿ ಕಲ್ಯಾಣಿ–117, ಮುನ್ನೇನಕೊಳಾಲು–137	2,650
ಬೊಮ್ಮನಹಳ್ಳಿ	2,296	–	2,296
ಯಲಹಂಕ	2,276	–	2,276
ಆರ್.ಆರ್. ನಗರ	3,315	ಹೇರೋಹಳ್ಳಿ–824	4,139
		ಒಟ್ಟು :	93,524

ಸೆ.20ರವರೆಗೆ ಆಚರಣೆ

‘ಬಿಬಿಎಂಪಿ ಅಧಿಕಾರಿಗಳು ಮತ್ತೂ ಪೊಲೀಸರ ನಡುವಣ ಹೊಂದಾಣಿಕೆ ಕೊರತೆಯಿಂದ ನಮಗೆ ಹಬ್ಬ ಮಾಡಲು ತೊಂದರೆಯಾಗುತ್ತಿವೆ. ಮೂರ್ತಿ ಪ್ರತಿಷ್ಠಾಪನೆಗೆ ಅನುಮತಿ ಪಡೆಯಲು ಏಕಗವಾಕ್ಷಿ ವ್ಯವಸ್ಥೆ ಮಾಡಬೇಕು ಎಂದು ಬಿಬಿಎಂಪಿ ಆಯುಕ್ತರು ಮತ್ತು ರಾಜ್ಯ ಸರ್ಕಾರವನ್ನು ಕೋರಿದ್ದೇವೆ. ಭಾನುವಾರವೂ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡುತ್ತೇವೆ. ಸೋಮವಾರದವರೆಗೆ (ಸೆ.20) ಉತ್ಸವ ಆಚರಿಸಲು ನಿರ್ಧರಿಸಿದ್ದೇವೆ’ ಎಂದು ಪ್ರಕಾಶ ರಾಜು ತಿಳಿಸಿದರು.

‘ಗಣೇಶ ಮೂರ್ತಿ ವಿಸರ್ಜನೆಗೆ ಎಲ್ಲಾ ಕಲ್ಯಾಣಿಗಳ-ಲ್ಲೂ ಅವಕಾಶ ನೀಡುತ್ತೇವೆ ಎಂದಿದ್ದ ಬಿಬಿಎಂಪಿ ಹಬ್ಬದ ದಿನವಾದ ಶುಕ್ರವಾರ ರಾತ್ರಿ 10 ಗಂಟೆಯವರೆಗೆ ಸ್ಯಾಂಕಿ ಟ್ಯಾಂಕ್ ಬಳಿ ಮಾತ್ರ ಅವಕಾಶ ನೀಡಿತ್ತು. ಅಲ್ಲಿಯೂ ಸರಿಯಾಗಿ ವ್ಯವಸ್ಥೆ ಮಾಡಿರಲಿಲ್ಲ. ಅದನ್ನು ಸರಿಪಡಿಸಿದೆವು. ಸೋಮವಾರದವರೆಗಾದರೂ ಬಿಬಿಎಂಪಿ ನುಡಿದಂತೆ ನಡೆಯಬೇಕು’ ಎಂದು ಅವರು ಒತ್ತಾಯಿಸಿದರು.

ಸುದ್ದಿ 2 ನಿಮಿಷ

‘ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆಯಾಗ್ಬೇಕಾ...?’

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಮ್ಮ ಅಡುಗೆ ಮನೆಯಲ್ಲಿ ಚಹಾ ಹೀರುತ್ತಾ, ‘ಎಲ್‌ಪಿಜಿ ಸಿಲಿಂಡರ್ ಬೆಲೆ ಇಳಿಕೆಯಾಗ್ಬೇಕಾ...?’ ಎಂಬ ಪ್ರಶ್ನೆ ಕೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಕಾರಣವಾಗಿದೆ.

ಸದಾಶಿವನಗರದಲ್ಲಿರುವ ತಮ್ಮ ಮನೆಯ ಅಡುಗೆ ಮನೆಯಲ್ಲಿ ಈ ವಿಡಿಯೊ ಮಾಡಿರುವ ಅವರು, ಟ್ವಿಟರ್ ಖಾತೆಯಲ್ಲಿ ಅದನ್ನು ಹಂಚಿಕೊಂಡಿದ್ದಾರೆ. ಆ ಮೂಲಕ, ಅಡುಗೆ ಅನಿಲ ದರ ಹೆಚ್ಚಳದ ವಿರುದ್ಧ ಜನಜಾಗೃತಿ ಮೂಡಿಸಲು ಮುಂದಾಗಿದ್ದಾರೆ.

ವಿಡಿಯೊದಲ್ಲಿ ಏನಿದೆ?: ‘ನಾನು ಯಾಕೆ ಅಡುಗೆ ಮನೆಯಲ್ಲಿದ್ದೀನಿ’ ಅಂತ ನಿಮಗೆ ಆಶ್ಚರ್ಯವಾಗಬಹುದು. ನಾನು ಮಾತನಾಡುತ್ತಿರುವ ವಿಷಯ ಅಡುಗೆ ಮನೆಗೆ ಸಂಬಂಧಿಸಿದ್ದು. ಈ ವಾರ ನಾನು ಕೇಳುವ ಪ್ರಶ್ನೆ, ಎಲ್‌ಪಿಜಿ ಗ್ಯಾಸ್ ಬೆಲೆ ಏರಿಕೆ ಆಗಿರುವುದು ಇಳಿಸಬೇಕಾ? ಬೇಡವಾ? ಎಂದು ಪ್ರಶ್ನಿಸುವ ಡಿ.ಕೆ. ಶಿವಕುಮಾರ್, ‘ರಾಜ್ಯದ ಜನತೆಗೆ ಎಂಥ ಸಂಕಷ್ಟ ನೋಡಿ... ಕೋವಿಡ್‌ನಿಂದಾಗಿ ಜನ ಸಾಯುತ್ತಿದ್ದಾರೆ. ಕೆಲಸ ಕಳ್ಕೊಳ್ಳುತ್ತಿದ್ದಾರೆ. ಆದರೆ, ಬೆಲೆ ಮಾತ್ರ ಕಡಿಮೆಯಾಗುತ್ತಿಲ್ಲ’ ಎಂದಿದ್ದಾರೆ.

‘ಎಲ್ಲರೂ ಬೆಲೆ ಏರಿಕೆಯಿಂದ ಬೆಂದು ಹೋಗಿದ್ದಾರೆ. ನಿರುದ್ಯೋಗದಿಂದ ಜನ ಆತ್ಮಹತ್ಯೆಗೆ ಶರಣಾಗುತ್ತಿ-ದ್ದಾರೆ. ಇಂಥ ಸಮಯದಲ್ಲಿ ಗ್ಯಾಸ್ ಸಿಲಿಂಡರ್ ಬೆಲೆ ಏರಿಕೆ ಮಾಡುವುದು ನ್ಯಾಯನಾ ಇಲ್ಲವಾ ಅನ್ನೋದನ್ನು ತಾವೇ ತೀರ್ಮಾನ ಮಾಡಬೇಕು. ನನ್ನ ಬೇಡಿಕೆ ಒಂದೇ ಒಂದು. ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು ಕನಿಷ್ಠ 150 ರೂಪಾಯಿಯಾದರೂ ಇಳಿಕೆ ಆಗಬೇಕಲ್ಲವೇ. ನಿಮ್ಮ ಅಭಿಪ್ರಾ-ಯವನ್ನು ಫೇಸ್‌ಬುಕ್, ಟ್ವಿಟರ್ ಮೂಲಕ ಮೂಲಕ ತಿಳಿಸಿ. ನಿಮ್ಮ ಉತ್ತರವನ್ನು ನಿರೀಕ್ಷಿಸುತ್ತೇನೆ’ ಎಂದಿದ್ದಾರೆ.

ಮಾದಕ ವಸ್ತು ಜಾಲ: ಆರೋಪಿಗೆ ನೀಡಿದ್ದ ಜಾಮೀನು ರದ್ದು

ಬೆಂಗಳೂರು: ಮಾದಕ ವಸ್ತು ಜಾಲ ಪ್ರಕರಣದಲ್ಲಿ ಪಶ್ಚಿಮ ಆಫ್ರಿಕಾದ ಸೆನೆಗಲ್ ಆರೋಪಿಗೆ ನೀಡಿದ್ದ ಜಾಮೀನನ್ನು ಹೈಕೋರ್ಟ್ ರದ್ದುಪಡಿಸಿದೆ. ಹೊಸದಾಗಿ ವಿಚಾರಣೆ ನಡೆಸುವಂತೆ ಅಧೀನ ನ್ಯಾಯಾಲಯಕ್ಕೆ ತಿಳಿಸಿದೆ.

ಈ ಪ್ರಕರಣದಲ್ಲಿ ಸಿಸಿಬಿ ಪೊಲೀಸರು 2020ರ ಸೆಪ್ಟೆಂಬರ್‌ನಲ್ಲಿ ಬಂಧಿಸಿದ್ದ ಲೂಮ್ ಪೆಪ್ಪರ್ ಸಾಂಬಾ ಎಂಬುವವರಿಗೆ 2021ರ ಫೆಬ್ರುವರಿಯಲ್ಲಿ ಅಧೀನ ನ್ಯಾಯಾಲಯ ಜಾಮೀನು ನೀಡಿತ್ತು.

ಪಾಸ್‌ಪೋರ್ಟ್ ಅವಧಿ ಮುಕ್ತಾಯವಾಗಿದ್ದರೂ ದೇಶದಲ್ಲೇ ಉಳಿದುಕೊಂಡು ಮಾದಕ ವಸ್ತು ಮಾರಾಟ ದಂಧೆಯಲ್ಲಿ ತೊಡಗಿಕೊಂಡಿ-ದ್ದಾರೆ. ಈ ವಿಷಯವನ್ನು ಅಧೀನ ನ್ಯಾಯಾಲಯ ಪರಿಗಣಿಸಿಲ್ಲ ಎಂದು ರಾಜ್ಯ ಸರ್ಕಾರದ ಪರ ವಕೀಲರು ವಾದಿಸಿದರು.

ರಾಗಿಣಿ ದ್ವಿವೇದಿ ಜಾಮೀನು ಅರ್ಜಿಯಲ್ಲಿ ಕೈಗೊಂಡ ತೀರ್ಮಾನವನ್ನೇ ಈ ಪ್ರಕರಣದಲ್ಲೂ ಕೈಗೊಳ್ಳಲು ಆಗುವುದಿಲ್ಲ ಎಂದು ಹೇಳಿದ ನ್ಯಾಯಮೂರ್ತಿ ಎಂ.ಜಿ. ಉಮಾ ಅವರಿದ್ದ ಪೀಠ, ಜಾಮೀನು ರದ್ದುಪಡಿಸಿತು.

ಸಾವಿನ ಸಂಖ್ಯೆ ಮರೆಮಾಚಿದ ಸರ್ಕಾರ: ರಾಮಲಿಂಗಾರೆಡ್ಡಿ

ಬೆಂಗಳೂರು: ‘ಕೋವಿಡ್‌ನಿಂದ ಮೃತ-ಪಟ್ಟವರಿಗೆ ಪರಿಹಾರ ನೀಡಬೇಕಾ-ಗುತ್ತದೆ ಎಂಬ ಕಾರಣಕ್ಕೆ ರಾಜ್ಯ ಮತ್ತು ಕೇಂದ್ರ ಸರ್ಕಾರ ಸಾವಿನ ಸಂಖ್ಯೆಯನ್ನು ಮರೆಮಾಚುತ್ತಿವೆ’ ಎಂದು ಆರೋಪಿಸಿದ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ, ‘ವಿಧಾನ ಮಂಡಲ ಅಧಿವೇಶನದ-ಲ್ಲಿ ಕೋವಿಡ್ ವಿಚಾರ ಚರ್ಚೆ ಬಂದಾಗ ಈ ವಿಷಯ ಪ್ರಸ್ತಾಪಿಸುತ್ತೇವೆ’ ಎಂದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ರಾಜ್ಯ ಬಿಜೆಪಿ ಸರ್ಕಾರದ ಮಾಹಿತಿ ಪ್ರಕಾರ ಕೋವಿಡ್‌ನಿಂದ ಸತ್ತಿರುವವರ ಸಂಖ್ಯೆ 37,318’ ಎಂದರು.

‘ಜನನ ಹಾಗೂ ಮರಣ ಇಲಾಖೆ ಪ್ರಕಾರ ರಾಜ್ಯದಲ್ಲಿ 2018ರಲ್ಲಿ 4,83,511, 2019ರಲ್ಲಿ 5,08,584, 2020ರಲ್ಲಿ 5,51,808 ಜನ ಸತ್ತಿದ್ದಾರೆ. ಪ್ರತಿ ವರ್ಷ ಸತ್ತವರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿದೆ. 2021ರ ಜುಲೈ ತಿಂಗಳವರೆಗೂ 4.21 ಲಕ್ಷ ಜನ ಸತ್ತಿದ್ದಾರೆ. ಪ್ರತಿವರ್ಷ ಆರಂಭಿಕ ಏಳು ತಿಂಗಳ ಸಾವಿನ ಸಂಖ್ಯೆ ನೋಡುವುದಾದರೆ, 2018ರಲ್ಲಿ 2.69 ಲಕ್ಷ , 2019ರಲ್ಲಿ 2.79 ಲಕ್ಷ, 2020ರಲ್ಲಿ 2.64 ಲಕ್ಷ ಜನ ಸತ್ತಿದ್ದರು. 2021ರಲ್ಲಿ 4,26,790 ಜನ ಸತ್ತಿದ್ದಾರೆ.

ರಾಮಲಿಂಗಾ ರೆಡ್ಡಿ

ಅಂದರೆ, 1.62 ಲಕ್ಷ ಜನ ಹೆಚ್ಚುವರಿ ಸತ್ತಿದ್ದಾರೆ. ಈ 1.62 ಲಕ್ಷ ಜನ ಹೇಗೆ ಸತ್ತಿದ್ದಾರೆ? ಸುನಾಮಿ, ಭೂಕಂಪ, ಚಂಡಮಾರುತ ಬಂದಿತ್ತೇ. ಕಾಲರಾ, ಪ್ಲೇಗ್‌ನಂಥ ಕಾಯಿಲೆ ಬಂದಿತ್ತೇ’ ಎಂದು ಪ್ರಶ್ನಿಸಿದರು.

‘ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ, ಕೋವಿಡ್ ಸೋಂಕಿತರಾಗಿ ಚಿಕಿತ್ಸೆ ಪಡೆದವರು, ಟಿಬಿ, ಕ್ಯಾನ್ಸರ್, ಹೃದಯ ಸಂಬಂಧಿ, ಬಿಪಿ, ಆರ್ಥರೈಟಿಸ್, ಪಾರ್ಶ್ವವಾಯು, ಸೇರಿದಂತೆ ಇತರ ಅನಾರೋಗ್ಯವಿರುವವರು ಸತ್ತರೆ ಕೋವಿಡ್ ಸಾವು ಎಂದು ಮರಣ ಪತ್ರ ನೀಡುವುದಿಲ್ಲ. ಸೋಂಕಿತರು ನಂತರ ನೆಗೆಟಿವ್ ಬಂದರೆ ಅವರನ್ನು ಕೋವಿಡ್ ಎಂದು ಪರಿಗಣಿಸುವುದಿಲ್ಲ. ಹೀಗೆ ಸರ್ಕಾರಗಳು ತಪ್ಪು ಸಾವಿನ ಲೆಕ್ಕ ನೀಡುತ್ತಿದೆ’ ಎಂದರು.

’ಈ ಅಂಕಿ ಅಂಶಗಳು ಕೇವಲ ಆಸ್ಪತ್ರೆಗೆ ದಾಖಲಾಗಿ ಮೃತಪಟ್ಟವರ ಸಂಖ್ಯೆಯಾದರೆ, ಆಸ್ಪತ್ರೆಗೆ ದಾಖಲಾಗದೇ ಮನೆಯಲ್ಲಿ ಮೃತಪಟ್ಟವರ ಸಂಖ್ಯೆ ಬೇರೆಯಾಗಿದೆ’ ಎಂದೂ ಹೇಳಿದರು.

ಕೋವಿಡ್ ಮರಣ ಪ್ರಮಾಣ ಶೇ 1.87ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದಾಗಿ ಶನಿವಾರ 15 ಜನ ಸಾವಿಗೀಡಾಗಿದ್ದು, ಮರಣ ಪ್ರಮಾಣ ದರ ಶೇ 1.87ಕ್ಕೆ ಏರಿಕೆ ಕಂಡಿದೆ.

ಒಂದು ದಿನದಲ್ಲಿ 801 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಈವರೆಗೆ ಸೋಂಕಿ-ಗೊಳಪಟ್ಟವರ ಸಂಖ್ಯೆ 29.60 ಲಕ್ಷಕ್ಕೆ ಹೆಚ್ಚಿದೆ. ಕೋವಿಡ್ ದೃಢ ಪ್ರಮಾಣ ಶೇ 0.67ರಷ್ಟಿದೆ.

ಹಿಂದಿನ 24 ಗಂಟೆಗಳಲ್ಲಿ 1,142 ಜನರಿಗೆ ಕಾಯಿಲೆ ವಾಸಿಯಾಗಿದೆ. ಗುಣಮುಖರ ಒಟ್ಟು ಸಂಖ್ಯೆಯು 29.06 ಲಕ್ಷಕ್ಕೆ ಏರಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ ಅಲ್ಪ ಇಳಿದಿದೆ. ಸದ್ಯ 16,672 ಜನ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯು ಕಡಿಮೆಯಾಗಿದೆ. ಶನಿವಾರ 1.19 ಲಕ್ಷ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರಿನಲ್ಲಿ ಹೊಸದಾಗಿ 207 ಮಂದಿಗೆ ಸೋಂಕು ತಗುಲಿದೆ. ಕೇರಳಕ್ಕೆ ಹೊಂದಿಕೊಂಡಂತಿರುವ ಗಡಿ ಜಿಲ್ಲೆಗಳ ಪೈಕಿ ದಕ್ಷಿಣ ಕನ್ನಡದಲ್ಲಿ 133 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ. ಕೊಡಗು ಹಾಗೂ ಮೈಸೂರಿನಲ್ಲಿ ಕ್ರಮವಾಗಿ 59 ಮತ್ತು 47 ಪ್ರಕರಣಗಳು ವರದಿಯಾಗಿವೆ. ಬೆಳಗಾವಿ (93) ಮತ್ತು ಉಡುಪಿಯಲ್ಲೂ (86) ಗರಿಷ್ಠ ಪ್ರಕರಣಗಳು ದಾಖಲಾಗಿವೆ. ಚಿಕ್ಕಬಳ್ಳಾ-ಪುರ, ಗದಗ, ಹಾವೇರಿ, ರಾಮನಗರ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 12 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ.

ರಾಜ್ಯದಲ್ಲಿ ಈವರೆಗೆ ಸಾವಿಗೀಡಾದ ವರ ಸಂಖ್ಯೆ 37,487ಕ್ಕೆ ಏರಿದೆ.





ದ್ವಿಚಕ್ರ ವಾಹನ: ಮೂರನೇ ಸವಾರನೂ ವಿಮೆಗೆ ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್ ಅಪಘಾತ ಸಂದರ್ಭದಲ್ಲಿ ಅದರಲ್ಲಿ ಮೂವರು ಸವಾರಿ ಮಾಡುತ್ತಿದ್ದರೆ, ಮೂರನೇ ಸವಾರನಿಗೂ ಪರಿಹಾರ ನೀಡಬೇಕು ಎಂದು ವಿಮಾ ಕಂಪನಿಗೆ ಹೈಕೋರ್ಟ್ ಆದೇಶಿಸಿದೆ.

2011ರಲ್ಲಿ ಕಲಬುರ್ಗಿಯಲ್ಲಿ ನಡೆದಿದ್ದ ಅಪಘಾತ ಪ್ರಕರಣದ-ಲ್ಲಿ ಮೂರನೇ ಸವಾರರಿಗೂ ವಿಮೆ ನೀಡಬೇಕು ಎಂದು ಮೋಟಾರು ವಾಹನ ನ್ಯಾಯಮಂಡಳಿ 2012ರಲ್ಲಿ ನೀಡಿದ್ದ ಆದೇಶವನ್ನು ವಿಮಾ ಕಂಪನಿ ಪ್ರಶ್ನಿಸಿತ್ತು. ಮೂರನೇ ಸವಾರನ ಕುಟುಂಬಕ್ಕೆ ₹8.10 ಲಕ್ಷ ಪರಿಹಾರ ನೀಡಲು ತಿಳಿಸಿತ್ತು.

‘ಬೈಕ್‌ನಲ್ಲಿ ಮೂವರು ಪ್ರಯಾಣಿಸುವ ಮೂಲಕ ವಿಮಾ ಷರತ್ತು ಉಲ್ಲಂಘಿಸಲಾಗಿದೆ. ಬೈಕ್ ಸವಾರ ಸರಿಯಾದ ಚಾಲನಾ ಪರವಾನಗಿ-ಯನ್ನೂ ಹೊಂದಿಲ್ಲ’ ಎಂದು ಕಂಪನಿ ಆರೋಪಿಸಿತ್ತು.

ಮೊಹಮದ್ ಸಿದ್ದೀಕ್ ಮತ್ತು ನ್ಯಾಷನಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ನಡುವಿನ ಪ್ರಕರಣದಲ್ಲಿ ‘ಮೂವರು ಪ್ರಯಾಣ ಮಾಡುತ್ತಿದ್ದರೂ ವಿಮಾ ಪಡೆಯಬಹುದು’ ಎಂಬ ಸುಪ್ರೀಂ ಕೋರ್ಟ್ ನೀಡಿದ್ದ ಆದೇಶವನ್ನು ಹಕ್ಕುದಾರರು ಉಲ್ಲೇಖಿ-ಸಿದ್ದರು.

ವಿಮಾ ಕಂಪನಿ ಮನವಿ ತಿರಸ್ಕರಿಸಿದ ನ್ಯಾಯಮೂರ್ತಿ ನಟರಾಜ್ ರಂಗಸ್ವಾಮಿ ಅವರಿದ್ದ ಪೀಠ, ‘ಬೈಕ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಮೂವರು ವ್ಯಕ್ತಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಆದ್ದರಿಂದ ವಿಮೆ ಪಡೆಯುವ ಹಕ್ಕು ನಿರಾಕರಿಸಲು ಆಗುವುದಿಲ್ಲ’ ಎಂದು ತಿಳಿಸಿತು.

ಜಲಿಯನ್ ವಾಲಾಬಾಗ್ ಕುರುಹು ನಾಶ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ಐತಿಹಾಸಿಕ ಸ್ಮಾರಕ ಜಲಿಯನ್ ವಾಲಾಬಾಗ್ ನವೀಕರಣದ ನೆಪದಲ್ಲಿ ಮನರಂಜನಾ ತಾಣವನ್ನಾಗಿ ಪರಿವರ್ತಿಸಲು ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮವನ್ನು ಎಐಡಿವೈಒ ರಾಜ್ಯ ಸಮಿತಿ ಖಂಡಿಸಿದೆ.

‘ಸಾವಿರಾರು ಮಂದಿ ನಾಗರಿಕರು ಬ್ರಿಟಿಷರ ಗುಂಡಿಗೆ ಎದೆಯೊಡ್ಡಿ ಅಸುನೀಗಿದ್ದರು. ಅವರ ನೆನಪಿಗಾಗಿ ಜನರಿಂದ ದೇಣಿಗೆ ಸಂಗ್ರಹಿಸಿ ಆ ಸ್ಥಳದಲ್ಲಿ ಐತಿಹಾಸಿಕ ಸ್ಮಾರಕ ನಿರ್ಮಿಸಲಾಗಿದೆ. ಈಗಲೂ ದೇಶದ ವಿವಿಧ ಭಾಗಗಳಿಂದ ಜನರು ಆ ಸ್ಥಳಕ್ಕೆ ಭೇಟಿ ನೀಡಿ ಹುತಾತ್ಮರನ್ನು ಸ್ಮರಿಸುತ್ತಾರೆ. ಇಂತಹ ಸ್ಥಳವನ್ನು ಮನರಂಜನಾ ತಾಣವನ್ನಾಗಿ ಮಾರ್ಪಾಡು ಮಾಡುತ್ತಿರುವುದು ಸರಿಯಲ್ಲ’ ಎಂದು ಎಐಡಿವೈಒ ರಾಜ್ಯ ಸಮಿತಿ ಅಧ್ಯಕ್ಷೆ ಎಂ.ಉಮಾದೇವಿ ತಿಳಿಸಿದ್ದಾರೆ.

‘ಶಾಹಿದಿ’ ಬಾವಿಯನ್ನು ನೀರಿನ ಕೊಳವಾಗಿ ಪರಿವರ್ತಿಸಲಾಗಿದೆ. ಜಲಿಯನ್ ವಾಲಾಬಾಗ್‌ನ ಕಿರಿದಾದ ದ್ವಾರವನ್ನು ವಿಶಾಲಗೊಳಿಸಲಾಗಿದೆ. ಅದಕ್ಕೆ ಹೊಸ ನೆಲಹಾಸು ಹಾಕಿ ಮೇಲೆ ಕಮಾನು ಕಟ್ಟಲಾಗಿದೆ. ಆ ಮೂಲಕ ಈ ಸ್ಥಳದ ಚಾರಿತ್ರಿಕ ಕುರುಹುಗಳನ್ನು ನಾಶ-ಪಡಿಸಲಾಗಿದೆ’ ಎಂದು ದೂರಿದ್ದಾರೆ.

‘ಜಲಿಯನ್ ವಾಲಾಬಾಗ್‌ನ ಚಾರಿತ್ರಿಕ ಕುರುಹುಗಳನ್ನು ಮರುಸ್ಥಾಪಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಕಾರ್ಯದರ್ಶಿ ಜಿ.ಎಸ್.ಕುಮಾರ್ ಒತ್ತಾಯಿಸಿದ್ದಾರೆ.

ಬಸ್, ರೈಲು ಸಂಚಾರಕ್ಕೆ ಇಲ್ಲದ ನಿರ್ಬಂಧ ಮೆಟ್ರೊ ರೈಲಿಗೆ ಮಾತ್ರವೇಕೆ – ನಾಗರಿಕರ ಪ್ರಶ್ನೆ

‘ಮೆಟ್ರೊ ರೈಲು ಸಂಚಾರದ ಅವಧಿ ವಿಸ್ತರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೆಟ್ರೊ ರೈಲುಗಳ ಸಂಚಾರದ ಅವಧಿಯನ್ನು ಕಡಿತಗೊಳಿಸಿರುವುದರಿಂದ ಸಾಕಷ್ಟು ತೊಂದರೆಯಾಗುತ್ತಿದ್ದು, ಅವಧಿಯನ್ನು ವಿಸ್ತರಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಬೈಯಪ್ಪನಹಳ್ಳಿ–ಕೆಂಗೇರಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭವಾದ ನಂತರ, ಪ್ರಯಾಣಿಕರ ಸಂಖ್ಯೆ ಶೇ 5ರಿಂದ ಶೇ 8ರಷ್ಟು ಹೆಚ್ಚಾಗಿದೆ. ಸದ್ಯ, ರೈಲುಗಳು ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಮಾತ್ರ ಸಂಚರಿಸುತ್ತಿವೆ. ರಾತ್ರಿ 9ರಿಂದ ಬೆಳಗಿನ ಜಾವ 5ರವರೆಗೆ ಕರ್ಫ್ಯೂ ವಿಧಿಸಿರುವುದರಿಂದ ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಸಂಚಾರದ ಅವಧಿ ಕಡಿತ ಮಾಡಿದೆ.

ಅನೇಕ ಐಟಿ ಕಂಪನಿಗಳು, ಶಾಲಾ–ಕಾಲೇಜುಗಳು ಆರಂಭವಾಗಿವೆ. ಬೆಳಿಗ್ಗೆ ಶಾಲಾ–ಕಾಲೇಜುಗಳಿಗೆ ಹೋಗುವವರಿಗೆ, ರಾತ್ರಿ ವೇಳೆ ಕಚೇರಿಯಿಂದ ಮರಳುವವರಿಗೆ ತೊಂದರೆಯಾಗುತ್ತಿದೆ. ಈ ಮೊದಲಿನಂತೆ ಬೆಳಿಗ್ಗೆ 6ರಿಂದ ರಾತ್ರಿ 11ರವರೆಗೆ ಮೆಟ್ರೊ ರೈಲು ಸಂಚಾರಕ್ಕೆ ಅನುಮತಿ ನೀಡಬೇಕು ಎಂದು ನಾಗರಿಕರು ಒತ್ತಾಯಿಸಿದ್ದಾರೆ.

‘ಬಸ್, ರೈಲುಗಳ ಸಂಚಾರ ಸಾಮಾನ್ಯವಾಗಿದೆ. ಆಟೊ, ಕ್ಯಾಬ್‌ಗಳ ಸಂಚಾರಕ್ಕೂ ಯಾವುದೇ ನಿರ್ಬಂಧವಿಲ್ಲ. ಬಸ್, ರೈಲುಗಳಲ್ಲಿ ತಡರಾತ್ರಿ ಬೆಂಗಳೂರಿಗೆ ಬರುವವರಿಗೆ ಅಥವಾ ಹೋಗುವವರಿಗೆ ಮೆಟ್ರೊ ರೈಲು ಸೌಲಭ್ಯವಿಲ್ಲದೆ ತೊಂದರೆಯಾಗುತ್ತಿದೆ. ಸಂಚಾರ ಸಮಯ ವಿಸ್ತರಿಸಲು ಅವಕಾಶನೀಡುವಂತೆ ಕೋರಿ ನಿಗಮವು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕು’ ಎಂದು ಖಾಸಗಿ ಕಂಪನಿ ಉದ್ಯೋಗಿ ಭಾವನಾ ಒತ್ತಾಯಿಸಿದರು.

‘ಕೋವಿಡ್ ನಿಯಂತ್ರಿಸುವ ಉದ್ದೇಶದಿಂದ ಸರ್ಕಾರ ಕರ್ಫ್ಯೂ ಹೇರಿದೆ. ಈ ನಿರ್ಬಂಧಗಳನ್ನು ಹಿಂತೆಗೆದುಕೊಂಡ ನಂತರವೇ ಮೆಟ್ರೊ ರೈಲು ಸಂಚಾರ ಅವಧಿ ವಿಸ್ತರಣೆಯ ಬಗ್ಗೆ ಯೋಚಿಸಬಹುದು’ ಎಂದು ನಿಗಮದ ಅಧಿಕಾರಿಗಳು ಹೇಳಿದರು.

‘ಅಸುರಕ್ಷತೆಯೇ ಹೆಚ್ಚು’

ಕಚೇರಿ ಕೆಲಸ ಮುಗಿಯುವುದಕ್ಕೇ ತಡವಾಗಿ ಬಿಡುತ್ತದೆ. ರಾತ್ರಿ 8ಗಂಟೆಯ ವೇಳೆಗೆ ಮೆಟ್ರೊ ನಿಲ್ದಾಣ ತಲುಪಲು ಸಾಧ್ಯವಾಗುತ್ತಿಲ್ಲ. ಮೆಟ್ರೊ ರೈಲು ಸಂಚಾರ ಇದ್ದರೆ ಯಾವುದೇ ಆತಂಕ, ಶ್ರಮವಿಲ್ಲದೆ ಬೇಗ ಮನೆ ತಲುಪಬಹುದು. ಇಲ್ಲದಿದ್ದರೆ, ರಾತ್ರಿಯ ವೇಳೆ ಬಸ್ ಅಥವಾ ಆಟೊದಲ್ಲಿ ಓಡಾಡಲು ಅಸುರಕ್ಷಿತ ಭಾವ ಕಾಡುತ್ತದೆ.

ಅನುಷಾ ಗಂಗಾಧರ್, ಖಾಸಗಿ ಕಂಪನಿ ಉದ್ಯೋಗಿ

ಸಾರ್ವಜನಿಕ ಸಾರಿಗೆ ಉತ್ತೇಜಿಸಿ

ಮೆಟ್ರೊ ರೈಲು ಸಂಚಾರದಿಂದ ಪರಿಸರ, ವಾಯು ಹಾಗೂ ಶಬ್ದಮಾಲಿನ್ಯ ಆದಷ್ಟು ತಗ್ಗುತ್ತದೆ. ಸಾರ್ವಜನಿಕರ ಸಾರಿಗೆ ಸಂಚಾರ ಉತ್ತೇಜಿಸುವ ಬದಲು, ಸರ್ಕಾರ ಹೀಗೆ ನಿರ್ಬಂಧ ವಿಧಿಸುವುದು ಸರಿಯಲ್ಲ. ರಾತ್ರಿಯ ವೇಳೆ ಆಟೊ, ಕ್ಯಾಬ್‌ಗಳಲ್ಲಿಯೂ ಓಡಾಡುವುದೂ ಕಷ್ಟವಾಗುತ್ತದೆ. ಹೆಚ್ಚು ಹಣವೂ ಖರ್ಚಾಗುತ್ತದೆ. ಮೆಟ್ರೊ ರೈಲು ಸಂಚಾರ ಸಮಯವನ್ನು ವಿಸ್ತರಿಸಬೇಕು.

ವಿನಯಾ, ಕಾಲೇಜು ವಿದ್ಯಾರ್ಥಿನಿ

ಬೆಳಿಗ್ಗೆಯೂ ಬೇಗ ಸಂಚಾರ ಆರಂಭಿಸಿ

ಬೆಳಿಗ್ಗೆ 7ರ ನಂತರವೇ ಮೆಟ್ರೊ ರೈಲು ಸಂಚಾರ ಆರಂಭವಾಗುತ್ತಿದೆ. ಬೆಳಿಗ್ಗೆಯೇ ಟ್ಯೂಷನ್‌ಗೆ ಹೋಗಿ ನಂತರವೇ ಕಾಲೇಜಿಗೆ ಹೋಗಬೇಕು. ಬಸ್, ರೈಲುಗಳು ಎಲ್ಲ ಸಂಚರಿಸುತ್ತಿರುವಾಗ ಮೆಟ್ರೊ ರೈಲು ಸಂಚಾರಕ್ಕೆ ಮಾತ್ರ ನಿರ್ಬಂಧ ಏಕೆ ಎಂಬುದು ಗೊತ್ತಾಗುತ್ತಿಲ್ಲ. ಮೊದಲಿನಂತೆ, ಬೆಳಿಗ್ಗೆ 6ರಿಂದಲೇ ಸಂಚಾರ ಆರಂಭಿಸಿದರೆ ಅನುಕೂಲವಾಗುತ್ತದೆ.

ಭಾವನಾ, ಎಂಜಿನಿಯರಿಂಗ್ ವಿದ್ಯಾರ್ಥಿನಿ

ಸಮಯ, ಹಣ ವ್ಯರ್ಥ

ನನ್ನ ಮನೆ ವಿದ್ಯಾರಣ್ಯಪುರದಲ್ಲಿ ಇದೆ. ಕೆಲಸ ಮಾಡುವುದು ವಿಜಯನಗರದಲ್ಲಿ. ಪೀಣ್ಯ ಮೆಟ್ರೊ ನಿಲ್ದಾಣದಿಂದ ವಿಜಯನಗರಕ್ಕೆ ಹೋಗುತ್ತಿದ್ದೆ. ಈಗ ಮೆಟ್ರೊ ಸಂಚಾರದ ಅವಧಿ ಕಡಿತಗೊಳಿಸಿರುವುದರಿಂದ ಸಮಯ ಮತ್ತು ಹಣ ಎರಡೂ ವ್ಯರ್ಥವಾಗುತ್ತಿದೆ. ಕಚೇರಿಯಿಂದ ಸಮಯಕ್ಕೆ ಸರಿಯಾಗಿ ನಿಲ್ದಾಣ ತಲುಪದಿದ್ದರೆ ಆಟೊಗೆ ಹೋಗಬೇಕು. ಜೊತೆಗೆ, ವಾಹನ ನಿಲುಗಡೆಗೂ ಹೆಚ್ಚು ಶುಲ್ಕ ತೆರಬೇಕಾಗಿದೆ

ಸುಬ್ರಮಣಿ ಸಂಪತ್, ಖಾಸಗಿ ಕಂಪನಿ ಉದ್ಯೋಗಿ

ಎಲ್ಲ ಸಾರಿಗೆ ವ್ಯವಸ್ಥೆಗೆ ಒಂದೇ ನಿಯಮವಿರಲಿ

ಬಸ್ ಮತ್ತು ರೈಲುಗಳ ಸಂಚಾರಕ್ಕೆ ಯಾವುದೇ ನಿರ್ಬಂಧ ಅಥವಾ ಸಮಯ ಮಿತಿ ಇಲ್ಲ. ಆದರೆ, ಮೆಟ್ರೊ ರೈಲು ಸಂಚಾರವನ್ನು ಮಾತ್ರ ಬೇಗ ಸ್ಥಗಿತಗೊಳಿಸಲಾಗುತ್ತಿದೆ. ದೂರದ ಊರಿಗೆ ಪ್ರಯಾಣಿಸಬೇಕೆಂದರೆ ಬಸ್ ಅಥವಾ ರೈಲುಗಳು ರಾತ್ರಿ 10 ಅಥವಾ 11ರ ನಂತರವೇ ಹೊರಡುತ್ತವೆ. 8 ಗಂಟೆಗೇ ಮೆಟ್ರೊ ರೈಲು ಸಂಚಾರ ಸ್ಥಗಿತಗೊಳ್ಳುವುದರಿಂದ ಸಮಸ್ಯೆ ಆಗುತ್ತದೆ.

ಕೆ.ಪಿ. ನಾಗೇಶ್, ಖಾಸಗಿ ಕಂಪನಿ ಉದ್ಯೋಗಿ

ನಗರದಲ್ಲಿ ಇಂದು

ಸಾವಿತ್ರಮ್ಮ – ಪ್ರೊ.ಎಂ.ವಿ. ಸೀತಾರಾಮಯ್ಯ ಸಾಹಿತ್ಯ ಪುರಸ್ಕಾರ: ಪ್ರಶಸ್ತಿ ಪುರಸ್ಕೃತರು–ಲೇಖಕ ಪ್ರೊ. ಶಿವರಾಮಯ್ಯ, ಪ್ರಶಸ್ತಿ ಪ್ರದಾನ–ಚಿಂತಕ ಎಸ್. ಜಿ.ಸಿದ್ದರಾಮಯ್ಯ, ಭಾಗವಹಿಸುವವರು–ಲೇಖಕ ಕೆ.ವೈ. ನಾರಾಯಣಸ್ವಾಮಿ, ನಾಡೋಜ ಪ್ರೊ. ಎಂ.ಎಚ್.ಕೃಷ್ಣಯ್ಯ, ಅಧ್ಯಕ್ಷತೆ–ಬಿ.ಎಂ. ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಆರ್. ಲಕ್ಷ್ಮೀನಾರಾಯಣ. ಆಯೋಜನೆ–ಬಿ.ಎಂ. ಶ್ರೀ. ಪ್ರತಿಷ್ಠಾನ ಮತ್ತು ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ, ಸ್ಥಳ–ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ–ಬೆಳಿಗ್ಗೆ 10:30.



ಸಿದ್ಧರಾಮಯ್ಯ

ಸುಮಾ ಸತೀಶ್ ಅವರ ‘ಅವನಿ’ ಕವನ ಸಂಕಲನ ಬಿಡುಗಡೆ: ಬಿಡುಗಡೆ ಮಾಡುವವರು–ವಸುಂಧರಾ ಭೂಪತಿ, ಕೃತಿ ಪರಿಚಯ–ಜೈನ್ ಕಾಲೇಜಿನ ಪ್ರಾಧ್ಯಾಪಕ ಪ್ರೊ.ವಸಂತ ಕುಮಾರ್, ಮುಖ್ಯ ಅತಿಥಿ–ಚಿಂತಕ ಎಸ್. ಜಿ.ಸಿದ್ದರಾಮಯ್ಯ, ಅಧ್ಯಕ್ಷತೆ–ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಕೆ.ಎಲ್.ನಟರಾಜ್, ಆಯೋಜನೆ–ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್, (ಆನ್‌ಲೈನ್ ಕಾರ್ಯಕ್ರಮ)–ಸಂಜೆ 5:30.

‘ಸತ್ಯಜಿತ್ ರೇ 100–ಚಲನಚಿತ್ರಗಳ ಹೊರಳು ನೋಟ’–ಸಂವಾದ ಸರಣಿ: ‘ಆಶಾನಿ ಸಂಕೇತ್’ ಕುರಿತು ಉಪನ್ಯಾಸ–ಉಪನ್ಯಾಸಕರು ನಿರ್ದೇಶಕ ಬಿ.ಸುರೇಶ, ಆಯೋಜನೆ–ಸಮುದಾಯ ಕರ್ನಾಟಕ, ಸಹಯಾನ, ಋತುಮಾನ, ಮನುಜ ಮತ ಸಿನಿಯಾನ (ಆನ್‌ಲೈನ್ ಕಾರ್ಯಕ್ರಮ)–ಬೆಳಿಗ್ಗೆ 11.

ನಿರ್ದೇಶಕ ಬಿ. ಸುರೇಶ

‘ತುರ್ತು ಆರೋಗ್ಯ ಸೇವೆ ಮನೆಯ ಬಾಗಿಲಿಗೆ’– 120 ಆಂಬ್ಯುಲೆನ್ಸ್‌ಗಳ ಲೋಕಾರ್ಪಣೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾಗವಹಿಸುವವರು–ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಎ.ನಾರಾಯಣ ಸ್ವಾಮಿ, ಎಂ.ರಾಜೀವ್ ಚಂದ್ರಶೇಖರ್, ಸಚಿವರಾದ ಡಾ.ಕೆ. ಸುಧಾಕರ್, ಆರಗ ಜ್ಞಾನೇಂದ್ರ, ಬಿ.ಶ್ರೀರಾಮುಲು ಮತ್ತು ಕೋಟ ಶ್ರೀನಿವಾಸ ಪೂಜಾರಿ, ಅಧ್ಯಕ್ಷತೆ–ಶಾಸಕ ರಿಜ್ವಾನ್ ಅರ್ಷದ್, ಆಯೋಜನೆ–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಥಳ–ವಿಧಾನಸೌಧದ ಪೂರ್ವ ದ್ವಾರ–ಬೆಳಿಗ್ಗೆ 10.

ಜಯನಗರದ ಕೆ.ಎಸ್.ಆರ್.ಟಿ.ಸಿ. ಆಸ್ಪತ್ರೆಯಲ್ಲಿನ 48 ಹಾಸಿಗೆ ಸಾಮರ್ಥ್ಯದ ಆರೋಗ್ಯ ಘಟಕ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಭಾಗವಹಿಸುವವರು–ಸಚಿವ ಬಿ.ಶ್ರೀರಾಮುಲು, ಸ್ಥಳ–ಜಯನಗರ 4ನೇ ಟಿ ಬ್ಲಾಕ್– ಮಧ್ಯಾಹ್ನ 12:15.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿವಿಧ ಪ್ರಶಸ್ತಿಗಳ ಪ್ರದಾನ: ಸಚಿವ ವಿ.ಸುನೀಲ್ ಕುಮಾರ್, ‘ಕನ್ನಡ ಕವಿಗಳು ಕಂಡ ಭಾರತ’ ಕೃತಿ ಬಿಡುಗಡೆ–ಸಂಸದ ತೇಜಸ್ವಿ ಸೂರ್ಯ, ಅಧ್ಯಕ್ಷತೆ–ಶಾಸಕ ಉದಯ್ ಗರುಡಾಚಾರ್, ಭಾಗವಹಿಸುವವರು– ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಚಂದ್ರಶೇಖರ ಕಂಬಾರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್, ಸ್ಥಳ–ರವೀಂದ್ರ ಕಲಾಕ್ಷೇತ್ರ–ಸಂಜೆ 5.



ಚಂದ್ರಶೇಖರ ಕಂಬಾರ

ಕಟ್ಟಡದಿಂದ ಬಿದ್ದು ಮೇಸ್ತ್ರಿ, ಕಾರ್ಮಿಕ ಸಾವು

ವೆಂಕಟಸ್ವಾಮಿ

ಬೆಂಗಳೂರು: ನಿರ್ಮಾಣ ಹಂತದ ಕಟ್ಟಡದಿಂದ ಬಿದ್ದು ಮೇಸ್ತ್ರಿ ಹಾಗೂ ಕಾರ್ಮಿಕ ಮೃತಪಟ್ಟ ಪ್ರತ್ಯೇಕ ಘಟನೆಗಳು ಸಂಭವಿಸಿದೆ.

ಡಿ.ಜೆ. ಹಳ್ಳಿಯ ವಾಹಬ್ ಗಾರ್ಡನ್ ನಿವಾಸಿ ವೆಂಕಟಸ್ವಾಮಿ (46) ಹಾಗೂ ಒಡಿಶಾದ ಜೇಸನ್ ಮಂಗೋರಿ (23) ಮೃತರು. 'ಗಾರೆ ಮೇಸ್ತ್ರಿ ವೆಂಕಟಸ್ವಾಮಿ ಅವರು ಶುಕ್ರವಾರ ಜೆ.ಸಿ.ನಗರ ಠಾಣೆ ವ್ಯಾಪ್ತಿಯಲ್ಲಿರುವ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದರು. 5ನೇ ಮಹಡಿಯಿಂದ ಆಯತಪ್ಪಿ ಬಿದ್ದು, ತೀವ್ರ ಗಾಯಗೊಂಡು ಅಸುನೀಗಿದ್ದಾರೆ' ಎಂದು ಪೊಲೀಸರು ಹೇಳಿದರು.

ಇನ್ನೊಂದು ಪ್ರಕರಣದಲ್ಲಿ ಕಾರ್ಮಿಕ ಜೇಸನ್ ಅವರು ಕಾಮಾಕ್ಷಿಪಾಳ್ಯ ಬಳಿ ನಿರ್ಮಿಸಲಾಗುತ್ತಿರುವ 'ಜಗಜೀವನ್ ರಾಮ್ ಸಭಾಂಗಣ' ಕಟ್ಟಡದ ಎರಡನೇ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾರೆ.

'ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಟ್ಟಡ ನಿರ್ಮಿಸಲಾಗುತ್ತಿತ್ತು. ಎ.ಸಿ ಭಾಗಗಳನ್ನು ಸಾಗಿಸುತ್ತಿದ್ದಾಗ ಈ ಅವಘಡ ಸಂಭವಿಸಿದೆ. ಗುತ್ತಿಗೆದಾರ ಪ್ರಕಾಶ್ ರೆಡ್ಡಿ, ವೋಲ್ಟಾಸ್ ಕಂಪನಿ ಪ್ರತಿನಿಧಿ ಗಿರಿ, ಎಂಜಿನಿಯರ್ ಅಲಿ ರಜಾಕ್ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಗರದ ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ ಎದುರಿನ ರಸ್ತೆಯನ್ನು ಕಾಮಗಾರಿ ಸಲುವಾಗಿ ಅಗೆಯಲಾಗಿದ್ದು, ಐದಾರು ತಿಂಗಳ ಬಳಿಕವೂ ದುರಸ್ತಿ ಕಾರ್ಯ ಪೂರ್ಣಗೊಂಡಿಲ್ಲ. ಇಲ್ಲಿ ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ (ಎಡಚಿತ್ರ), ನಗರದ ಜಸ್ಮಾದೇವಿ ಭವನ ರಸ್ತೆ ಹಾಳಾಗಿದ್ದು ವಾಹನ ಸವಾರರು ಓಡಾಡಲು ಕಷ್ಟಪಡುತ್ತಿರುವ ದೃಶ್ಯ ಶನಿವಾರ ಕಂಡುಬಂತು —ಪ್ರಜಾವಾಣಿ ಚಿತ್ರಗಳು

ರಾತ್ರಿ ವೇಳೆ ಗುಂಡಿ ಮುಚ್ಚಲು ಬಿಬಿಎಂಪಿ ಕ್ರಮ

ಬೆಂಗಳೂರು: ನಗರದ ವ್ಯಾಪ್ತಿಯ ಪ್ರಮುಖ ರಸ್ತೆ, ವಾರ್ಡ್ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವ ಕಾಮಗಾರಿಗಳನ್ನು ಬಿಬಿಎಂಪಿ ರಾತ್ರಿ ವೇಳೆ ನಡೆಸುತ್ತಿದೆ. ವಾಹನ ಸವಾರರಿಗೆ ಯಾವುದೇ ತೊಂದರೆಯಾಗಬಾರದು ಎಂಬ ಕಾರಣಕ್ಕೆ ಬಿಬಿಎಂಪಿ ಈ ಕ್ರಮ ಕೈಗೊಂಡಿದೆ.

ಮೈಸೂರು ರಸ್ತೆಯ ನಾಯಂಡಹಳ್ಳಿ ಜಂಕ್ಷನ್ ಬಳಿ, ನಾಗರಬಾವಿ ಸರ್ವೀಸ್ ರಸ್ತೆಯಿಂದ ನಾಯಂಡಹಳ್ಳಿ ವರ್ತುಲ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದರಿಂದ ಮಳೆ ನೀರು ತುಂಬಿ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ಇಲ್ಲಿ ಸಂಚಾರ ದಟ್ಟಣೆ ಸಮಸ್ಯೆಯೂ ಎದುರಾಗುತ್ತಿದ್ದು, ತ್ವರಿತವಾಗಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು ಎಂದು ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯವರು ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು.

ಪಾಲಿಕೆಯ ಸಂಚಾರ ಎಂಜಿನಿಯರಿಂಗ್ ವಿಭಾಗದವರು ರಾತ್ರಿ 2.30ರವರೆಗೂ ಡಾಂಬರೀಕರಣ ಕಾಮಗಾರಿ ನಡೆಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಪಾಲಿಕೆಯ ಎಂಟೂ ವಲಯಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ. ಜರಗನಹಳ್ಳಿ, ಬನಶಂಕರಿ ಎರಡನೇ ಹಂತ, ಎಚ್.ಎಂ.ಟಿ ಲೇಔಟ್, ಯಡಿಯೂರು, ಬೆಳ್ಳಂದೂರು, ಸಿದ್ದಣ್ಣ ಲೇಔಟ್, ತಿಗಳರ ಪಾಳ್ಯ (ಹೂಡಿ), ನ್ಯೂ ಬಿ.ಇ.ಎಲ್ ರಸ್ತೆ, ಭೂಪಸಂದ್ರ, ಹೆಬ್ಬಾಳ ಮುಖ್ಯ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕಾಮಗಾರಿ ನಡೆಸಲಾಗಿದೆ.

ಜೈಲಿನಲ್ಲೇ ಸಂಚು ಶ್ರೀಗಂಧ ಕಳವು

ಬೆಂಗಳೂರು: ನಗರದ ಹಲವೆಡೆ ಶ್ರೀಗಂಧದ ಮರಗಳನ್ನು ಕಳವು ಮಾಡಿದ್ದ ಆರೋಪದಡಿ ಐವರನ್ನು ಬಂಧಿಸಿರುವ ಗಂಗಮ್ಮನಗುಡಿ ಪೊಲೀಸರು, ಅವರಿಂದ 125 ಕೆ.ಜಿ ತೂಕದ ಶ್ರೀಗಂಧ ಮರದ ತುಂಡುಗಳ ಜಪ್ತಿ ಮಾಡಿದ್ದಾರೆ.

'ಜಾಲಹಳ್ಳಿಯಲ್ಲಿರುವ ವಾಯುದಳದ ಗ್ಯಾರಿಸನ್ ಎಂಜಿನಿಯರ್ಸ್ ಕ್ಯಾಂಪಸ್‌ನಲ್ಲಿದ್ದ ಶ್ರೀಗಂಧದ ಮರವನ್ನು ಆ. 8ರಂದು ರಾತ್ರಿ ಕಳವು ಮಾಡಲಾಗಿತ್ತು. ಈ ಸಂಬಂಧ ಅಧಿಕಾರಿ ಪಿ.ಕೆ. ಪಾಟ್ರೊ ದೂರು ನೀಡಿದ್ದರು. ಸೆ. 9ರಂದು ಕಾರಿನಲ್ಲಿ ಶ್ರೀಗಂಧದ ತುಂಡುಗಳನ್ನು ಸಾಗಿಸುತ್ತಿದ್ದರು. ಈ ಬಗ್ಗೆ ಅನುಮಾನಗೊಂಡ ಸಿಬ್ಬಂದಿ, ಕಾರು ತಡೆದು ಪರಿಶೀಲಿಸಿದಾಗ ಆರೋಪಿಗಳು ಸಿಕ್ಕಿಬಿದ್ದರು. ಪ್ರತ್ಯೇಕ ಪ್ರಕರಣಗಳಲ್ಲಿ ಬಂಧಿತರಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದ ಐವರಿಗೂ ಪರಿಚಯವಾಗಿ ಸ್ನೇಹ ಬೆಳೆದಿತ್ತು ಶ್ರೀಗಂಧ ಕಳವು ಮಾಡಿ ಮಾರಾಟ ಮಾಡುವ ಬಗ್ಗೆ ಜೈಲಿನಲ್ಲಿ ಸಂಚು ರೂಪಿಸಿದ್ದರು. ಜಾಮೀನು ಪಡೆದು ಹೊರಬಂದ ಬಳಿಕ ಆರೋಪಿಗಳು ಶ್ರೀಗಂಧದ ಮರಗಳನ್ನು ಕದ್ದಿದ್ದರು' ಎಂದು ಪೊಲೀಸರು ತಿಳಿಸಿದರು.

ದುಪ್ಪಟ್ಟು ಲಾಭದ ಆಮಿಷ ಸಾರ್ವಜನಿಕರಿಂದ ಹಣ ಪಡೆದು ₹ 1.91 ಕೋಟಿ ವಂಚನೆ

ವಂಚನೆ: 'ಇಕ್ರಾ' ನಿರ್ದೇಶಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಪ್ಪಟ್ಟು ಲಾಭದ ಆಮಿಷವೊಡ್ಡಿ ಸಾರ್ವಜನಿಕರಿಂದ ಹಣ ಪಡೆದು ವಂಚಿಸಿರುವ ಆರೋಪದಡಿ 'ಇಕ್ರಾ ವೆಲ್ತ್ ಮ್ಯಾನೇಜ್‌ಮೆಂಟ್' ಕಂಪನಿ ನಿರ್ದೇಶಕರು ಸೇರಿ ನಾಲ್ವರನ್ನು ತಿಲಕ್‌ನಗರ ಪೊಲೀಸರು ಬಂಧಿಸಿದ್ದಾರೆ.

'ಅಬ್ದುಲ್ ನಜೀಮ್ ಮೇಖ್ರಿ, ಹಿದಾಯತ್ ಉಲ್ಲಾ, ನಜೀಮ್ ಹಾಗೂ ಅಲೀಂ ಬಂಧಿತರು. ನಾಲ್ವರೂ ಸಹೋದರರು. ವಂಚನೆಗೀಡಾಗಿದ್ದ ಹೂಡಿಕೆದಾರರೊಬ್ಬರು ನೀಡಿದ್ದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಆರೋಪಿಗಳಾದ ಅಬ್ದುಲ್ ನಜೀಮ್ ಮೇಖ್ರಿ ಹಾಗೂ ಅಲೀಂ ಮೇಖ್ರಿ

'ಬಿಬಿಎಂ ಪದವೀಧರ ಅಬ್ದುಲ್ ನಜೀಮ್, ಸಹೋದರರನ್ನೇ ನಿರ್ದೇಶಕರನ್ನಾಗಿ ಮಾಡಿಕೊಂಡು 2017ರಲ್ಲಿ 'ಇಕ್ರಾ ವೆಲ್ತ್ ಮ್ಯಾನೇಜ್‌ಮೆಂಟ್' ಕಂಪನಿ ಆರಂಭಿಸಿದ್ದ. ಹಣ ಹೂಡಿಕೆ ಮಾಡಿದರೆ, ನಿಗದಿತ ದಿನದೊಳಗೆ ದುಪ್ಪಟ್ಟು ಲಾಭ ನೀಡುವುದಾಗಿ ಸಾರ್ವಜನಿಕರಿಗೆ ಆಮಿಷವೊಡ್ಡಿದ್ದ. ಅದನ್ನು ನಂಬಿದ್ದ ಜನ, ಕಂಪನಿಯಲ್ಲಿ ಹಣ ಹೂಡಿಕೆ ಮಾಡಿದ್ದರು' ಎಂದೂ ಮೂಲಗಳು ತಿಳಿಸಿವೆ.

34 ಮಂದಿಗೆ ವಂಚನೆ: 'ಕಂಪನಿಯ ಆರಂಭದಲ್ಲಿ 91 ಗ್ರಾಹಕರಿಂದ ₹ 4.21 ಕೋಟಿ ಹೂಡಿಕೆ ಮಾಡಿಸಿಕೊಳ್ಳಲಾಗಿತ್ತು. 2020ರವರೆಗೆ 57 ಗ್ರಾಹಕರಿಗೆ ₹ 2.31 ಕೋಟಿ ಮರಳಿಸಲಾಗಿದೆ. ಉಳಿದ 34 ಗ್ರಾಹಕರಿಗೆ ₹ 1.91 ಕೋಟಿ ನೀಡದೇ ವಂಚಿಸಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'2020ರ ಸೆಪ್ಟೆಂಬರ್‌ನಲ್ಲೇ ಕಂಪನಿ ಕಚೇರಿ ಬಂದ್ ಮಾಡಲಾಗಿದೆ. ಅಂದಿನಿಂದಲೇ ಕೆಲ ಸಾರ್ವಜನಿಕರು, ತಮ್ಮ ಹಣ ಮರಳಿಸುವಂತೆ ನಿರ್ದೇಶಕರನ್ನು ಒತ್ತಾಯಿಸುತ್ತಿದ್ದರು. ಆದರೆ, ಯಾವುದೇ ಸ್ಪಂದನೆ ಸಿಕ್ಕಿರಲಿಲ್ಲ' ಎಂದೂ ಮೂಲಗಳು ತಿಳಿಸಿವೆ.

'ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳನ್ನು ಬಂಧಿಸಲಾಯಿತು. ಅವರ ಮನೆಗಳ ಮೇಲೆ ದಾಳಿ ಮಾಡಿ ಲ್ಯಾಪ್‌ಟಾಪ್ ಹಾಗೂ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ದಾಖಲೆಗಳನ್ನು ಪರಿಶೀಲನೆಗಾಗಿ ಲೆಕ್ಕ ಪರಿಶೋಧಕರಿಗೆ ನೀಡಲಾಗಿದ್ದು, ಅದರ ವರದಿ ಬರಬೇಕಿದೆ' ಎಂದೂ ಹೇಳಿವೆ.

ವಿಚಾರಣೆ: 'ಹೂಡಿಕೆ ಮಾಡಿದ್ದ ಹಣವನ್ನು ಆರೋಪಿಗಳು, ಬೇರೆಯವರಿಗೆ ನೀಡಿದ್ದಾರೆ. ಅಂಥ ವರ ಪಟ್ಟಿ ಮಾಡಿ ವಿಚಾರಣೆ ನಡೆಸಲಾ ಗುತ್ತಿದೆ. ಕೆಲವರು, ನಗರ ತೊರೆದಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

₹ 13 ಕೋಟಿ ವಂಚನೆ: ರೋಸ್‌ಮೆರ್ಟಾ ಟೆಕ್ನಾಲಜಿಸ್ ಕಂಪನಿ ಮುಖ್ಯಸ್ಥ ವಶಕ್ಕೆ

ವಿವೇಕ್ ನಾಗಪಾಲ್

ಬೆಂಗಳೂರು: ₹ 13 ಕೋಟಿ ವಂಚನೆ ಆರೋಪದಡಿ 2016ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ 'ರೋಸ್‌ಮೆರ್ಟಾ ಟೆಕ್ನಾಲಜಿಸ್' ಕಂಪನಿ ಮುಖ್ಯಸ್ಥ ವಿವೇಕ್ ನಾಗಪಾಲ್ ಅವರನ್ನು ಸಿಐಡಿ ಪೊಲೀಸರು ಇತ್ತೀಚೆಗೆ ವಶಕ್ಕೆ ಪಡೆದಿದ್ದಾರೆ.

'ರಾಜ್ಯ ಸಾರಿಗೆ ಇಲಾಖೆಯಡಿ ವಾಹನ ನೋಂದಣಿ ಪತ್ರ (ಆರ್.ಸಿ), ಚಾಲನಾ ಪರವಾನಗಿ ಪತ್ರ (ಡಿ.ಎಲ್) ಹಾಗೂ ಇತರೆ ಸ್ಮಾರ್ಟ್ ಕಾರ್ಡ್‌ಗಳನ್ನು ಪೂರೈಸುವ ಗುತ್ತಿಗೆಯನ್ನು ರೋಸ್‌ಮೆರ್ಟಾ ಟೆಕ್ನಾಲಜಿಸ್ ಕಂಪನಿ ಪಡೆದಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಕಂಪನಿ ಮುಖ್ಯಸ್ಥ ವಿವೇಕ್ ಹಾಗೂ ಇತರರು, ಉಪಗುತ್ತಿಗೆ ಕೊಡಿಸುವ ಹೆಸರಿನಲ್ಲಿ ₹ 13 ಕೋಟಿಗಳಷ್ಟು ಹೂಡಿಕೆ ಮಾಡಿಸಿಕೊಂಡು ವಂಚಿಸಿದ್ದಾರೆ' ಎಂದು ಕೆಲವರು ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. 2016ರಿಂದಲೂ ಆರೋಪಿಗಳು ತಲೆಮರೆಸಿಕೊಂಡಿದ್ದರು. ಸೆ. 9ರಂದು ಹೈಗ್ರೌಂಡ್ಸ್ ಠಾಣೆ ವ್ಯಾಪ್ತಿಯ ಸ್ಥಳವೊಂದರಲ್ಲಿ ವಿವೇಕ್ ಕಾಣಿಸಿಕೊಂಡಿದ್ದರು. ಮಾಹಿತಿ ಪಡೆದಿದ್ದ ದೂರುದಾರರು, ಸ್ಥಳಕ್ಕೆ ಹೋಗಿ ಆರೋಪಿಯನ್ನು ಪ್ರಶ್ನಿಸಿದ್ದರು. ಇದೇ ಸಂದರ್ಭದಲ್ಲಿ ಗಲಾಟೆ ನಡೆದಿತ್ತು. ಸ್ಥಳಕ್ಕೆ ಹೋದ ಗಸ್ತು ಸಿಬ್ಬಂದಿ, ಆರೋಪಿಯನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು. ಸುದ್ದಿ ತಿಳಿದ ಸಿಐಡಿ ಇನ್‌ಸ್ಪೆಕ್ಟರ್ ನೇತೃತ್ವದ ತಂಡ, ಠಾಣೆಗೆ ಬಂದು ಆರೋಪಿಯನ್ನು ವಶಕ್ಕೆ ಪಡೆದು, ವಿಚಾರಣೆಗಾಗಿ ಕರೆದೊಯ್ದಿದೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಸ್ಮಾರ್ಟ್ ಕಾರ್ಡ್ ಪೂರೈಸುವುದಾಗಿ ಹೇಳಿ ಸಾರಿಗೆ ಇಲಾಖೆಯಿಂದ ಟೆಂಡರ್ ಪಡೆಯುತ್ತಿದ್ದ ಆರೋಪಿ, ಅದರ ಉಪಗುತ್ತಿಗೆ ನೀಡುವುದಾಗಿ ಹೇಳಿ ಹಲವರಿಂದ ಹಣ ಪಡೆಯುತ್ತಿದ್ದ ಮಾಹಿತಿ ಇದೆ. ಉಪಗುತ್ತಿಗೆ ಆಸೆಗೆ ಹಲವರು ಹಣ ಕೊಟ್ಟು ವಂಚನೆಗೆ ಒಳಗಾಗಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಸಿಐಡಿ ಹಿರಿಯ ಅಧಿಕಾರಿಯೊಬ್ಬರು, 'ತನಿಖೆ ನಡೆಯುತ್ತಿದೆ. ಸದ್ಯ ಯಾವುದೇ ಮಾಹಿತಿ ಬಹಿರಂಗಪಡಿಸಲಾಗದು' ಎಂದರು.

42 ಬಾರಿ ನಿಯಮ ಉಲ್ಲಂಘಿಸಿದ್ದ ಸವಾರನಿಗೆ ₹ 20,200 ದಂಡ

'ಜಂಟಿ ಕಮಿಷನರ್ ಅಭಿಮಾನಿ'ಯ ದ್ವಿಚಕ್ರ ವಾಹನ ಜಪ್ತಿ

ಬೆಂಗಳೂರು: ರಸ್ತೆ ಸಂಚಾರ ನಿಯಮಗಳನ್ನು 42 ಬಾರಿ ಉಲ್ಲಂಘಿಸಿದ್ದಕ್ಕಾಗಿ ಸವಾರ ಪಿ. ಗಿರೀಶ್ ಬಾಬು (58) ಎಂಬಾತನಿಗೆ ₹ 20,200 ದಂಡ ವಿಧಿಸಿರುವ ಸಂಚಾರ ಪೊಲೀಸರು, ಆತನ ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿದ್ದಾರೆ.

'ತ್ಯಾಗರಾಜನಗರದ ನೇತಾಜಿ ರಸ್ತೆಯ ನಿವಾಸಿ ಗಿರೀಶ್ ಬಾಬು, ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆ ಕಾರ್ಯಕರ್ತ ಎಂದು ಹೇಳಿಕೊಂಡು ಓಡಾಡುತ್ತಿದ್ದ. 'ಬೆಂಗಳೂರು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ಅವರ ಅಭಿಮಾನಿ', 'ಪ್ರೆಸ್' ಹಾಗೂ 'ನಮಸ್ಕಾರ ನಮ್ಮ ಪೊಲೀಸ್' ಎಂಬುದಾಗಿ ದ್ವಿಚಕ್ರ ವಾಹನದ ಮೇಲೆ ಬರೆಸಿಕೊಂಡಿದ್ದ' ಎಂದು ಪೊಲೀಸರು ಹೇಳಿದರು.

> **'ಠಾಣೆಗೆ ದೂರು ನೀಡಿ'**
>
> 'ಸವಾರನಿಗೆ ದಂಡ ವಿಧಿಸಿ, ವಾಹನ ಜಪ್ತಿ ಮಾಡಲಾಗಿದೆ. ಯಾರಾದರೂ ಪೊಲೀಸ್ ಅಧಿಕಾರಿಗಳು ಅಥವಾ ಮಾಧ್ಯಮದ ಹೆಸರನ್ನು ದುರುಪಯೋಗಪಡಿಸಿಕೊಳ್ಳುವುದು ಕಂಡುಬಂದಲ್ಲಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ದೂರು ನೀಡಬೇಕು' ಎಂದು ಬಿ.ಆರ್. ರವಿ ಕಾಂತೇಗೌಡ ಹೇಳಿದರು.

'ಹೊಂಡಾ ಆ್ಯಕ್ಟಿವಾ (ಕೆ.ಎ. 05 ಜೆಎಸ್ 2581) ದ್ವಿಚಕ್ರ ವಾಹನದಲ್ಲಿ ಸುತ್ತಾಡುತ್ತಿದ್ದ ಗಿರೀಶ್ ಬಾಬು, ಹೆಲ್ಮೆಟ್ ಧರಿಸುತ್ತಿರಲಿಲ್ಲ. ಹಲವು ಸಂಚಾರ ನಿಯಮಗಳನ್ನು ಉಲ್ಲಂಘಿಸುತ್ತಿದ್ದ. ಇದನ್ನು ಸಂಚಾರ ಪೊಲೀಸರು, ಕ್ಯಾಮೆರಾದಲ್ಲೂ ಸೆರೆ ಹಿಡಿದಿದ್ದರು. ಕೆಲ ಬಾರಿ ಸಂಚಾರ ಪೊಲೀಸರು, ಗಿರೀಶ್ ಬಾಬು ವಾಹನ ತಡೆದು ಪರಿಶೀಲನೆ ನಡೆಸಿದ್ದರು. 'ನಾನು ರವಿಕಾಂತೇಗೌಡ ಅಭಿಮಾನಿ. 'ಪ್ರೆಸ್'ನಲ್ಲಿ ಕೆಲಸ ಮಾಡುತ್ತೇನೆ ನನ್ನ ವಾಹನವನ್ನು ಬಿಡದಿದ್ದರೆ, ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಪೊಲೀಸರನ್ನೇ ಹೆದರಿಸುತ್ತಿದ್ದ. ಹಿರಿಯ ಅಧಿಕಾರಿಗಳ ಹೆಸರು ಹೇಳುತ್ತಿದ್ದರಿಂದ ಸಿಬ್ಬಂದಿ ವಾಹನ ಬಿಟ್ಟು ಕಳುಹಿಸುತ್ತಿದ್ದರು' ಎಂದೂ ಹೇಳಿದರು.

ಈ ಬಗ್ಗೆ ಕೆಲವರು, ನೇರವಾಗಿ ರವಿಕಾಂತೇಗೌಡ ಅವರಿಗೆ ಮಾಹಿತಿ ನೀಡಿದ್ದರು. ಜಯನಗರ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ಪಿ.ಎನ್. ಈಶ್ವರಿ ನೇತೃತ್ವದಲ್ಲಿ ತಂಡ ರಚಿಸಿದ್ದ ರವಿಕಾಂತೇಗೌಡ ವಾಹನದ ಪತ್ತೆಗೆ ಸೂಚಿಸಿದ್ದರು.

42 ಬಾರಿ ಸಂಚಾರ ನಿಯಮ ಉಲ್ಲಂಘಿಸಿದ್ದ ಗಿರೀಶ್ ಬಾಬುಗೆ ದಂಡ ವಿಧಿಸಿ, ರಸೀದಿ ನೀಡಿದ ಸಂಚಾರ ವಿಭಾಗದ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್

ನೀರು ಪೂರೈಕೆ ವ್ಯತ್ಯಯ ನಾಳೆ

ಬೆಂಗಳೂರು: ತೊರೆಕಾಡನಹಳ್ಳಿ ಪಂಪಿಂಗ್ ಸ್ಟೇಷನ್‌ನ ಮುಖ್ಯ ಮಾರ್ಗದಲ್ಲಿ ಸೋರಿಕೆ ಕಂಡು ಬಂದಿದ್ದು, ಇದರ ತುರ್ತು ಕಾಮಗಾರಿ ಕೈಗೆತ್ತಿಕೊಂಡಿರುವುದರಿಂದ ಇದೇ 13ರಂದು ನಗರದ ವಿವಿಧ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಇದೇ 12 ಮತ್ತು 13ರಂದು ನೀರು ಪೂರೈಕೆ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಈ ಮೊದಲು ಹೇಳಿತ್ತು.

ನಿಧನ ವಾರ್ತೆ

ಪತ್ರಿಕಾ ವಿತರಕ ಶಶಿಧರ್

ಬೆಂಗಳೂರು: ವಿಜಯನಗರದ ಪತ್ರಿಕಾ ವಿತರಕ ಶಶಿಧರ್ (34) ಅವರು ಹೃದಯಾಘಾತದಿಂದ ನಿಧನ ಹೊಂದಿದರು.

ಅವರಿಗೆ ತಾಯಿ ಹಾಗೂ ಸಹೋದರ ಇದ್ದಾರೆ.

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ
ಬೆಂಗಳೂರು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ವಿ. ಸೋಮಣ್ಣ
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು
ಕರ್ನಾಟಕ ಸರ್ಕಾರ

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ
ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಸೆಂಟರ್
ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ ಅನಾವರಣ
ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ
ಸಮಾರಂಭಕ್ಕೆ ಆಗಮಿಸುತ್ತಿರುವ
ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಬಸವರಾಜ ಎಸ್ ಬೊಮ್ಮಾಯಿ ರವರಿಗೆ
ಹಾಗೂ
ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ
ಶ್ರೀ ವಿ. ಸೋಮಣ್ಣ ರವರಿಗೆ
ಆದರದ ಸುಸ್ವಾಗತ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಡಯಾಲಿಸಿಸ್ ಕೇಂದ್ರ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪುತ್ಥಳಿ

ಕ್ರೀಡಾಸೌಧ, ಅಗ್ರಹಾರ ದಾಸರಹಳ್ಳಿ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸ್ಕೇಟಿಂಗ್ ರಿಂಕ್

ಸಮಯ: 12ನೇ ಸೆಪ್ಟೆಂಬರ್ 2021, ಭಾನುವಾರ
ಬೆಳಿಗ್ಗೆ, 11 ಗಂಟೆಗೆ,
ಸ್ಥಳ: ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ,
ಜಿ.ಕೆ.ಡಬ್ಲ್ಯೂ ಲೇಔಟ್,
ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉದ್ಯಾನವನ

ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು

ಸ್ವಾಗತ ಕೋರುವವರು:
ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಬಳಗ, ಗೋವಿಂದರಾಜನಗರ, ಬೆಂಗಳೂರು.

‘ಬಿಜೆಪಿಯವರು ಹಣದ ಆಫರ್ ಕೊಟ್ಟಿದ್ದರು’

ಶ್ರೀಮಂತ ಪಾಟೀಲ

ಬೆಳಗಾವಿ: ‘ನಾನು ಕಾಂಗ್ರೆಸ್‌ನಿಂದ ಬರುವುದಕ್ಕೆ ಬಿಜೆಪಿಯವರು ಹಣದ ಆಫರ್ ಕೊಟ್ಟಿದ್ದು ನಿಜ. ಎಷ್ಟು ಹಣ ಬೇಕೆಂದು ಕೇಳಿದ್ದರು. ಒಂದು ಪೈಸೆಯನ್ನೂ ಪಡೆಯುವುದಿಲ್ಲ, ಸರ್ಕಾರ ಬಂದ ನಂತರ ಒಳ್ಳೆಯ ಸ್ಥಾನಮಾನ ಕೊಡಿ ಚೆನ್ನಾಗಿ ನಿರ್ವಹಿಸಿ ಜನಸೇವೆ ಮಾಡುತ್ತೇನೆ ಎಂದು ಹೇಳಿದ್ದೆ’ ಎಂದು ಕಾಗವಾಡ ಬಿಜೆಪಿ ಶಾಸಕ ಶ್ರೀಮಂತ ಪಾಟೀಲ ಸ್ಫೋಟಕ ಹೇಳಿಕೆ ನೀಡಿದರು.

ಜಿಲ್ಲೆಯ ಕಾಗವಾಡ ತಾಲ್ಲೂಕಿನ ಐನಾಪೂರದಲ್ಲಿ ಪತ್ರಕರ್ತರೊಂದಿಗೆ ಶನಿವಾರ ಮಾತನಾಡಿದ ಅವರು, ‘ಹಣ ಪಡೆಯದೆ ಬಿಜೆಪಿ ಸೇರಿದ್ದೇನೆ. ಯಾವ ಕಾರಣದಿಂದ ಸಚಿವ ಸಂಪುಟದಲ್ಲಿ ನನಗೆ ಸ್ಥಾನ ಕೊಟ್ಟಿಲ್ಲವೋ ಗೊತ್ತಿಲ್ಲ. ಮುಂದಿನ ತಿಂಗಳಲ್ಲಿ ಸಚಿವ ಸಂಪುಟ ವಿಸ್ತರಣೆ ನಡೆದಾಗ ಖಂಡಿತವಾಗಿಯೂ ಅವಕಾಶ ಕೊಡುತ್ತೇವೆ ಎಂದು ಭರವಸೆ ನೀಡಿದ್ದಾರೆ’ ಎಂದು ಹೇಳಿದರು.

ಕಲಿಕಾ ಅವಧಿ ನಷ್ಟ ಸರಿದೂಗಿಸಲು ಚಿಂತನೆ: ಸಚಿವ ಬಿ.ಸಿ.ನಾಗೇಶ್

‘ಪಠ್ಯ ಪೂರ್ಣಕ್ಕೆ ಶಿಕ್ಷಕರ ರಜೆ ಕಡಿತ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಪಠ್ಯ ಕಡಿತಗೊಳಿಸದೇ, ಶಿಕ್ಷಕರ ರಜೆಗಳನ್ನು ಕಡಿಮೆ ಮಾಡಿ ಪಾಠಗಳನ್ನು ಪೂರ್ಣಗೊಳಿಸುವ ಕುರಿತು ಚರ್ಚೆ ನಡೆಯುತ್ತಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ನಗರದಲ್ಲಿ ಶನಿವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಇರುವ ಪಠ್ಯ ಪೂರ್ಣಗೊಳಿಸಿದರೆ ಮಕ್ಕಳಿಗೆ ಲಾಭವಾಗುತ್ತದೆ. ಪಠ್ಯ ಕಡಿತಗೊಳಿಸಿದರೆ ಅವರಿಗೆ ನಷ್ಟವಾಗುತ್ತದೆ. ಒಂದೂವರೆ ವರ್ಷಗಳಿಂದ ಮಕ್ಕಳಿಗೆ ಸಮರ್ಪಕ ರೀತಿಯಲ್ಲಿ ಕಲಿಕೆ ಸಾಧ್ಯವಾಗಿಲ್ಲ. ಶಿಕ್ಷಕರು ರಜೆಗಳನ್ನು ತ್ಯಾಗ ಮಾಡುವ ಮೂಲಕ ಮಕ್ಕಳಿಗೆ ಸೇತುಬಂಧ ಶಿಕ್ಷಣ (ಬ್ರಿಜ್ ಕೋರ್ಸ್) ಕೊಡಬೇಕಿದೆ. ಇದರಿಂದ ಕಲಿಕಾ ನಷ್ಟ ಸರಿದೂಗಿಸಬಹುದು. ಮುಂದಿನ ತರಗತಿಗಳಿಗೆ ಅನುಕೂಲವಾಗುತ್ತದೆ.

ಬಿ.ಸಿ. ನಾಗೇಶ್

ಇಂತಹ ನಿರ್ಣಯ ಕೈಗೊಳ್ಳಲು ಶಿಕ್ಷಕರ ಸಹಕಾರ ಅಗತ್ಯ’ ಎಂದು ಪ್ರತಿಪಾದಿಸಿದರು.

ಶಿಕ್ಷಕರು 6ರಿಂದ 10ನೇ ತರಗತಿಗಳನ್ನು ಚೆನ್ನಾಗಿ ನಿರ್ವಹಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್ ಹೆಚ್ಚಳವಾದರೆ ಶಾಲೆ ಬಂದ್: ಕೇರಳದಲ್ಲಿ ಕೋವಿಡ್ ಹೆಚ್ಚಾಗುತ್ತಿದೆ. ಮಂಗಳೂರು, ಉಡುಪಿಯಲ್ಲಿ ಕಡಿಮೆ ಆಗುತ್ತಿದೆ. ರಾಜ್ಯದಲ್ಲೂ ಹೆಚ್ಚಳವಾದರೆ ತಕ್ಷಣ ಭೌತಿಕ ತರಗತಿಗಳನ್ನು ನಿಲ್ಲಿಸಲಾಗುವುದು. ಅಂತಹ ಸಮಯ ಬಂದರೆ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವರು ತಿಳಿಸಿದರು.

ವರ್ಗಾವಣೆ ತಡೆಯಾಜ್ಞೆ ತೆರವಿಗೆ ಕ್ರಮ: ಶಿಕ್ಷಕರ ವರ್ಗಾವಣೆಗೆ ಕೆಲವು ಶಿಕ್ಷಕರು ಅಡ್ಡಿಯಾಗಿದ್ದಾರೆ. ಮೂರು ವರ್ಷಗಳಿಂದ ಶಿಕ್ಷಕರ ವರ್ಗಾವಣೆ ನನೆಗುದಿಗೆ ಬಿದ್ದಿದೆ. ಪ್ರತಿ ಬಾರಿಯೂ ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತಿದ್ದಾರೆ. ಸರ್ಕಾರ ತಕ್ಷಣ ಮೇಲ್ಮನವಿ ಸಲ್ಲಿಸಲಿದೆ. ತಡೆಯಾಜ್ಞೆ ತೆರವಿಗೆ ಪ್ರಯತ್ನ ಮಾಡಲಿದೆ. ಉಳಿದ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಹೇಳಿದರು.

‘ಸಮಿತಿ ಸಲಹೆ ಪಡೆದೇ ತರಗತಿ ಪ್ರಾರಂಭ’

ಹೊನ್ನಾವರ (ಉತ್ತರ ಕನ್ನಡ): ‘ಒಂದನೇ ತರಗತಿಯಿಂದ ಭೌತಿಕ ಬೋಧನೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ಆದರೆ, ಕೋವಿಡ್ ಸಂಬಂಧ ತಾಂತ್ರಿಕ ಸಲಹಾ ಸಮಿತಿಯ ಅಭಿಪ್ರಾಯ ಪಡೆಯದೇ ತರಗತಿಗಳನ್ನು ಪ್ರಾರಂಭಿಸುವುದಿಲ್ಲ’ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಸ್ಪಷ್ಟಪಡಿಸಿದ್ದಾರೆ.

ತಾಲ್ಲೂಕಿನ ಬಂಗಾರಮಕ್ಕಿಯಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಂದಿನ ಶೈಕ್ಷಣಿಕ ವರ್ಷದಿಂದಲೇ ಎನ್.ಇ.ಪಿ ಅಡಿ ಬೋಧನೆ ಆರಂಭಿಸಲು ಪ್ರಯತ್ನಿಸಲಾಗುತ್ತಿದೆ’ ಎಂದೂ ತಿಳಿಸಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್ಇಪಿ) ಕಾಂಗ್ರೆಸ್ ವಿರೋಧದ ಬಗ್ಗೆ ಪ್ರತಿಕ್ರಿಯಿಸಿ, ‘ಕಸ್ತೂರಿರಂಗನ್ ಅವರಂಥ ಮೇಧಾವಿಯ ನೇತೃತ್ವದಲ್ಲಿ ಸಿದ್ಧಪಡಿಸಲಾದ ನೀತಿಯನ್ನು ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ವ್ಯಂಗ್ಯವಾಡುತ್ತಾರೆ. ಮನಮೋಹನ್ ಸಿಂಗ್ ಅವರಿಗೆ 10 ವರ್ಷ ಸಲಹೆಗಾರ ಆಗಿದ್ದವರ ಬಗ್ಗೆಯೇ ಟೀಕಿಸುತ್ತಾರೆ. ಕಸ್ತೂರಿರಂಗನ್ ಅವರು ಮನಮೋಹನ್ ಸಿಂಗ್ ಜತೆಗಿದ್ದಾಗ ಸರಿ, ಹೊರ ಬಂದಾಗ ಆರ್‌ಎಸ್‌ಎಸ್ ಎಂದು ಅರ್ಥವೇ’ ಎಂದು ಪ್ರಶ್ನಿಸಿದರು.

ಪಠ್ಯ ಪುನರ್ ರಚನೆ ಪರಿಶೀಲನಾ ಸಮಿತಿಯ ನೇಮಕದ ಬಗ್ಗೆ ಕಾಂಗ್ರೆಸ್ ಮುಖಂಡರ ಅಸಮಾಧಾನದ ಕುರಿತು ಮಾತನಾಡಿದ ಅವರು, ‘ಬಿ.ಜೆ.ಪಿ.ಯವರು ಏನೇ ಮಾಡಿದರೂ ಟೀಕಿಸುವ ಕೆಟ್ಟ ಅಭ್ಯಾಸ ಕಾಂಗ್ರೆಸ್‌ನವರದ್ದಾಗಿದೆ. ಕಾಂಗ್ರೆಸ್‌ಗೆ ಆಡಳಿತ ಪಕ್ಷವಾಗಿ ವರ್ತಿಸಿ ಗೊತ್ತಿದೆಯೇ ಹೊರತು ವಿರೋಧ ಪಕ್ಷವಾಗಿ ಗೊತ್ತಿಲ್ಲ. ಎಲ್ಲ ಕಡೆ ಜಾತಿ, ಧರ್ಮವನ್ನು ಅಡ್ಡ ತರುತ್ತಾರೆ. ಮಕ್ಕಳ ಪಠ್ಯ ಸರಿಯಾಗಿದೆಯೇ ಎಂದು ಪರಿಶೀಲಿಸಲು ಸಮಿತಿ ರಚಿಸಲಾಗಿದೆ’ ಎಂದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು ‘Deccan Herald--Prajavani Relief Trust’ ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.fnc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

‘Deccan Herald-Prajavani Relief Trust’
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದೇಣಿಗೆ ನೀಡುವವರು ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಕೊಡುಗೆ’ ಎಂದು ನಮೂದಿಸಲು ಮನವಿ.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ ‘ಶೈಕ್ಷಣಿಕ ನೆರವಿಗೆ ಅರ್ಜಿ’ ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

‘2ಎ’ಗೆ ಪಂಚಮಸಾಲಿ ಸೇರ್ಪಡೆ ಬೇಡ: ಪುಟ್ಟಸಿದ್ದಶೆಟ್ಟಿ

ಮೈಸೂರು: ‘ಪಂಚಮಸಾಲಿ ಸಮುದಾಯವನ್ನು ಯಾವುದೇ ಕಾರಣಕ್ಕೂ 2ಎ ಮೀಸಲಾತಿಗೆ ಸೇರಿಸಬಾರದು. ಸಂವಿಧಾನದ ಚೌಕಟ್ಟನ್ನು ಮೀರಿ ಅವರನ್ನು ಸೇರಿಸಿದರೆ ರಾಜ್ಯದಾದ್ಯಂತ ಉಗ್ರ ಹೋರಾಟ ನಡೆಸಲಾಗುವುದು’ ಎಂದು ರಾಜ್ಯ ಕಾಯಕ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕೆ.ಸಿ.ಪುಟ್ಟಸಿದ್ದಶೆಟ್ಟಿ ಎಚ್ಚರಿಸಿದರು.

ನಗರದಲ್ಲಿ ಶನಿವಾರ ಕಾಯಕ ಸಮಾಜಗಳ ಒಕ್ಕೂಟದ ಸಭೆಯಲ್ಲಿ ಮಾತನಾಡಿದ ಅವರು, ‘ಈ ಸಂಬಂಧ ಇದೇ 20 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಯಲಿದೆ. ಮುಖ್ಯಮಂತ್ರಿ, ಸಮಾಜ ಕಲ್ಯಾಣ ಇಲಾಖೆ ಸಚಿವರು ಮತ್ತು ಹಿಂದುಳಿದ ವರ್ಗಗಳ ಆಯೋಗಕ್ಕೆ ಮನವಿ ಸಲ್ಲಿಸಲಾಗುವುದು’ ಎಂದು ಹೇಳಿದರು.

‘ಪಂಚಮಸಾಲಿಗಳು ಗಡುವು ವಿಧಿಸಿದ್ದಾರೆಂದು ತರಾತುರಿಯಲ್ಲಿ ತೀರ್ಮಾನ ಕೈಗೊಳ್ಳಬಾರದು. ತೀರ್ಮಾನಿಸುವುದೇ ಆದರೆ ಕಾಯಕ ಸಮಾಜದ ಮುಖಂಡರ ಸಮಾಧಿಯ ಮೇಲೆ ನಿಲ್ಲಬೇಕಾಗುತ್ತದೆ. ನಾವು ಜೀವ ಕೊಡಲು ಸಿದ್ಧರಾಗಿದ್ದೇವೆ. ಸಮುದಾಯದ ಮಂದಿ ಮುಂದಿನ ಚುನಾವಣೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರ ಗಂಟುಮೂಟೆ ಕಟ್ಟಿಸಿ ಮನೆಗೆ ಕಳುಹಿಸುತ್ತಾರೆ’ ಎಂದು ಎಚ್ಚರಿಸಿದರು.

‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಕೃತಿಗಳ ಆಹ್ವಾನ

ಮಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ಪ್ರತಿವರ್ಷ ಮುಸ್ಲಿಂ ಬರಹಗಾರರ ಅತ್ಯುತ್ತಮ ಕನ್ನಡ ಕೃತಿಗೆ ರಾಜ್ಯ ಮಟ್ಟದ ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ ನೀಡುತ್ತಿದ್ದು, 2020ನೇ ಸಾಲಿನ ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಿದೆ. ಪ್ರಶಸ್ತಿಯು ₹10ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ.

ಕನ್ನಡದಲ್ಲಿ ಪ್ರಕಟಿತ 2020ನೇ ಸಾಲಿನ ಕೃತಿಯ ನಾಲ್ಕು ಪ್ರತಿಗಳನ್ನು ಇದೇ 30ರ ಒಳಗಾಗಿ ಸಂಚಾಲಕರು, ಮುಸ್ಲಿಂ ಸಾಹಿತ್ಯ ಪ್ರಶಸ್ತಿ, ಮುಸ್ಲಿಂ ಲೇಖಕರ ಸಂಘ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು – 575001 (ಮೊ.ಸಂ.9845054191, 0824– 2410358) ಈ ವಿಳಾಸಕ್ಕೆ ಕಳುಹಿಸುವಂತೆ ಕೋರಲಾಗಿದೆ.

ಅನುವಾದಿತ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲ್ಲ ಎಂದು ಸಂಘದ ಅಧ್ಯಕ್ಷ ಉಮರ್ ಯು. ಎಚ್ ತಿಳಿಸಿದ್ದಾರೆ.

ಪ್ರತಿ ವರ್ಷ ಪರಿಸರ ಬಜೆಟ್: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಪರಿಸರ ಹಾನಿಯನ್ನು ಭರಿಸಲು ಪರಿಸರ ಬಜೆಟ್ ಆರಂಭಿಸಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಷ್ಟ್ರೀಯ ಅರಣ್ಯ ಹುತಾತ್ಮರ ದಿನಾಚರಣೆ ಅಂಗವಾಗಿ ಅರಣ್ಯ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಅರಣ್ಯ ಹುತಾತ್ಮರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

‘ರಾಜ್ಯದಲ್ಲಿ ಪ್ರತಿವರ್ಷ ನಾಶವಾಗುವ ಒಟ್ಟು ಹಸಿರು ಪ್ರದೇಶ ಎಷ್ಟು ಎಂಬುದನ್ನು ಅಂದಾಜಿಸುವ ವಿಧಾನ ಆರಂಭಿಸಬೇಕಿದೆ. ಆಗ ಮಾತ್ರ ಹಸಿರಿನ ಕೊರತೆ ಎಷ್ಟು ಎಂದು ಗೊತ್ತಾಗುತ್ತದೆ. ಪರಿಸರ ಬಜೆಟ್‌ನಿಂದ ಈ ನಷ್ಟ ತುಂಬಿಸಿಕೊಳ್ಳಬಹುದು’ ಎಂದರು.

‘ನೈಸರ್ಗಿಕ ಸಂಪತ್ತಿನ ವಿಚಾರದಲ್ಲಿ ನಮ್ಮ ಮನಸ್ಥಿತಿ ಬದಲಾಯಿಸಿಕೊಳ್ಳಬೇಕು. ಕಾಡಿಲ್ಲದೆ ಮಳೆ ಇಲ್ಲ ಎನ್ನುವುದನ್ನು ಅರ್ಥ ಮಾಡಿಕೊಳ್ಳಬೇಕು. ಮನುಷ್ಯನ ಅತಿಯಾಸೆಯಿಂದ ನಿಸರ್ಗ ನಾಶವಾಗುತ್ತಿದೆ. ಎರಡು ಸಾವಿರ ವರ್ಷಗಳಲ್ಲಿ ನಾಶವಾಗುವಷ್ಟು ಅರಣ್ಯವನ್ನು ಕೇವಲ 20 ವರ್ಷಗಳಲ್ಲಿ ನಾಶ ಮಾಡಿದ್ದೇವೆ. ಪರಿಸರ ಹಾನಿಯ ವೇಗ ಅಷ್ಟು ತೀವ್ರಗೊಂಡಿದೆ. ಇದು ನಿಜಕ್ಕೂ ಆತಂಕಕಾರಿ’ ಎಂದರು.

ಅರಣ್ಯ ಇಲಾಖೆಯಲ್ಲಿ ಕರ್ತವ್ಯ ನಿರತರಾಗಿದ್ದಾಗ ಹುತಾತ್ಮರಾದವರಿಗೆ ರಾಜ್ಯ ಮೀಸಲು ಪೊಲೀಸ್ ಪಡೆ ಗೌರವ ವಂದನೆ ಸಲ್ಲಿಸಿತು ಪ್ರಜಾವಾಣಿ ಚಿತ್ರ

‘ಮುಂದಿನ ಪೀಳಿಗೆಗಾಗಿ ಅರಣ್ಯ ಸಂರಕ್ಷಿಸುವ ಅಗತ್ಯ ಮತ್ತು ಅನಿವಾರ್ಯ ಇದೆ. ಅವಶ್ಯಕ್ಕಿಂತ ಹೆಚ್ಚು ನಿಸರ್ಗವನ್ನು ನಾಶಪಡಿಸಿದರೆ, ಭವಿಷ್ಯದ ಕಳವು ಮಾಡಿದಂತೆ. ನಮ್ಮ ಹಿರಿಯರು ಉಳಿಸಿದ್ದರಿಂದ ಈ ಸಂಪತ್ತನ್ನು ನಾವು ಅನುಭವಿಸುತ್ತಿದ್ದೇವೆ. ಮುಂದಿನ ಜನಾಂಗದ ಪಾಲನ್ನು ನಾವೇ ಬಳಕೆ ಮಾಡಬಾರದು ಎಂಬ ಅರಿವಿನಿಂದ ಇಲಾಖೆ ಕೆಲಸ ಮಾಡಬೇಕು. ಆಗ ಮಾತ್ರ ಹುತಾತ್ಮರ ದಿನಾಚರಣೆಗೆ ಅರ್ಥ ಬರುತ್ತದೆ’ ಎಂದರು.

‘ರಾಜ್ಯದಲ್ಲಿ 43 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅರಣ್ಯವಿದೆ. ಪ್ರಸ್ತುತ ಶೇ 21.50ರಷ್ಟು ಅರಣ್ಯದ ಕೊರತೆ ಇದೆ. ಕಾಡುಗಳ್ಳರನ್ನು ನಿಯಂತ್ರಿಸಿ, ಕಾಡು ಉಳಿಸಿ ಬೆಳೆಸುವ ಕ್ರಮಗಳನ್ನು ಕೈಗೊಳ್ಳಬೇಕು. ಮನುಷ್ಯ– ಪ್ರಾಣಿಗಳ ನಡುವಿನ ಸಂಘರ್ಷ ಕಡಿಮೆ ಮಾಡಬೇಕು. ಈ ಸವಾಲುಗಳನ್ನು ಸಮರ್ಥವಾಗಿ ಎದುರಿಸಬೇಕು. ಇಲಾಖೆಯ ಕಾರ್ಯಚಟುವಟಿಕೆ ವಿಸ್ತರಿಸಿ, ಕಾಡು ಉಳಿಸುವ ಕೆಲಸವನ್ನು ದಕ್ಷತೆಯಲ್ಲಿ ಮಾಡಬೇಕು’ ಎಂದರು.

ಅಧಿಕಾರಿಗಳ ಜೊತೆ ಸಭೆ: ಕಾರ್ಯಕ್ರಮದ ಬಳಿಕ ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಮತ್ತು ಇತರ ಅಧಿಕಾರಿಗಳ ಜೊತೆ ಮುಖ್ಯಮಂತ್ರಿ ಸಭೆ ನಡೆಸಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116.50	10,306	10,939
ಹಾರಂಗಿ	2,859	2,858.07	2,750	3,350
ಕಬಿನಿ	2284.00	2,282	4,236	700
ಹೇಮಾವತಿ	2,922	2,915.42	5,076	5,222
ಲಿಂಗನಮಕ್ಕಿ	1,819	1,814.20	13,668	-
ಸೂಪಾ (ಮೀ)	564	555.85	8,943	2,377
ಮಾಣಿ	594	587.02	1,334	-
ತುಂಗಭದ್ರಾ	1,633	1632.92	20.532	20.565
ಮಲಪ್ರಭಾ	2079.5	2,072.20	3,614	1,994
ಘಟಪ್ರಭಾ	2175	2,175.00	6,662	6,662
ಭದ್ರಾ	186	185.60	5,353	4,751
ಆಲಮಟ್ಟಿ (ಮೀ)	519.6	519.58	48,800	53,685
ನಾರಾಯಣಪುರ (ಮೀ)	492.25	492.02	58,000	64,000

* ನೆಲಮಟ್ಟದಿಂದ

‘ಲಂಚ ಆರೋಪ ಸಾಬೀತುಪಡಿಸಿ’

ಬಿ.ಸಿ. ಪಾಟೀಲ

ಚಿತ್ರದುರ್ಗ: ‘ನಾನು ಭ್ರಷ್ಟನಲ್ಲ. ನಾನು ಲಂಚ ಪಡೆದಿದ್ದೇನೆ ಎಂದು ಆರೋಪಿಸುವವರು ಸಾಬೀತುಪಡಿಸಬೇಕು. ಇಲ್ಲದಿದ್ದರೆ, ಅವರ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತೇನೆ’ ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ ಹೇಳಿದರು.

ಹಿರಿಯೂರಿನಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಉಕ್ಕಿನ ಸೇತುವೆ ನಿರ್ಮಾಣದಲ್ಲಿ ₹ 500 ಕೋಟಿ ಪಡೆದಿದ್ದಾರೆ ಎಂಬ ಆರೋಪ ಇತ್ತು. ಆರೋಪ ಮಾಡಿದ ಮಾತ್ರಕ್ಕೆ ಎಲ್ಲವೂ ಸತ್ಯವಾಗುವುದಿಲ್ಲ’ ಎಂದು ಹೇಳಿದರು.

‘ಕೃಷಿ ಇಲಾಖೆ ಪಾರದರ್ಶಕವಾಗಿದೆ. ಎಲ್ಲವೂ ಆನ್‌ಲೈನ್ ಮೂಲಕವೇ ನಡೆಯುತ್ತದೆ. ಸರ್ಕಾರವೇ ರೈತರ ಹೊಲ–ಮನೆ ಬಾಗಿಲಿಗೆ ಹೋಗುವ ಕೆಲಸ ಮಾಡುತ್ತಿದೆ’ ಎಂದರು.

ಉಡುಪಿಯಲ್ಲಿ ಮತಾಂತರ ಚಟುವಟಿಕೆ ಹೆಚ್ಚಳವಾಗುತ್ತಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ರಾಜ್ಯದಲ್ಲಿ ಯಾರೇ ಮತಾಂತರ ಮಾಡುವುದಕ್ಕೆ ಮುಂದಾದರೂ ಅಂಥವರ ಮೇಲೆ ರಾಜ್ಯ ಸರ್ಕಾರ ಉಗ್ರ ಕ್ರಮ ಕೈಗೊಳ್ಳಲಿದೆ’ ಎಂದರು.

ಕಲಬುರ್ಗಿ ಮಹಾನಗರ ಪಾಲಿಕೆ, ದೊಡ್ಡಬಳ್ಳಾಪುರ ನಗರಸಭೆ ಚುಕ್ಕಾಣಿಗಾಗಿ

ಮೈತ್ರಿ ಕಸರತ್ತು: ಎಚ್‌ಡಿಕೆ ಭೇಟಿಯಾದ ಅಶೋಕ

ಪ್ರಜಾವಾಣಿ ವಾರ್ತೆ

ರಾಮನಗರ: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹಿಡಿಯಲು ಬಿಜೆಪಿ ಕಸರತ್ತು ಮುಂದುವರಿದಿದ್ದು, ಕಂದಾಯ ಸಚಿವ ಆರ್. ಅಶೋಕ ಶನಿವಾರ ಬಿಡದಿಯ ತೋಟದ ಮನೆಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಜೊತೆ ಮಾತುಕತೆ ನಡೆಸಿದರು.

ಕಲಬುರ್ಗಿ ಮಹಾನಗರ ಪಾಲಿಕೆ ಹಾಗೂ ದೊಡ್ಡಬಳ್ಳಾಪುರ ನಗರಸಭೆ ಚುನಾವಣೆ ಸಂಬಂಧ ಅಶೋಕ, ಕುಮಾರಸ್ವಾಮಿ ಅವರೊಂದಿಗೆ ಮಾತನಾಡಿದರು. ದೊಡ್ಡಬಳ್ಳಾಪುರದಲ್ಲಿ ಮೈತ್ರಿಗೆ ಹಸಿರು ನಿಶಾನೆ ತೋರಿರುವ ಎಚ್‌ಡಿಕೆ, ಕಲಬುರ್ಗಿ ವಿಚಾರದಲ್ಲಿ ದೇವೇಗೌಡರನ್ನು ಸಂಪರ್ಕಿಸಿದ ಬಳಿಕವಷ್ಟೇ ಅಂತಿಮ ನಿರ್ಧಾರ ಕೈಗೊಳ್ಳುವುದಾಗಿ ತಿಳಿಸಿದರು ಎನ್ನಲಾಗಿದೆ.

ಭೇಟಿ ಬಳಿಕ ಪತ್ರಕರ್ತರ ಜೊತೆ ಮಾತನಾಡಿದ ಅಶೋಕ, ‘ಹೊಂದಾಣಿಕೆ ಬಗ್ಗೆ ಬಿಜೆಪಿಯಿಂದ ಪ್ರಸ್ತಾವ ಮಾಡಿದ್ದೇನೆ. ಸೋಮವಾರದಿಂದ ವಿಧಾನ ಮಂಡಲ ಅಧಿವೇಶನ ನಡೆಯಲಿದ್ದು, ಆ ಸಂದರ್ಭ ಮಾತುಕತೆ ನಡೆಸುವುದಾಗಿ ಕುಮಾರಸ್ವಾಮಿ ಹೇಳಿದ್ದಾರೆ’ ಎಂದು ತಿಳಿಸಿದರು.

‘ಚುನಾವಣೆ ಮಾತುಕತೆಗೆ ಬರುವಂತೆ ಶಾಸಕ ಸಾ.ರಾ. ಮಹೇಶ್ ದೂರವಾಣಿ ಮೂಲಕ ಆಹ್ವಾನ ನೀಡಿದ್ದರು. ಈ ಹಿನ್ನೆಲೆಯಲ್ಲಿ ಭೇಟಿ ನೀಡಿದ್ದೇನೆ. ದೊಡ್ಡಬಳ್ಳಾಪುರಕ್ಕೆ ಸಂಬಂಧಿಸಿದಂತೆ ಪಾಸಿಟಿವ್ ಅಭಿಪ್ರಾಯ ಸಿಕ್ಕಿದೆ. ಸೋಮವಾರ ಮಧ್ಯಾಹ್ನ 4ಕ್ಕೆ ಜೆಡಿಎಸ್ ಸಭೆ ನಡೆಯಲಿದ್ದು, ಆ ಬಳಿಕ ಅವರು ಅಭಿಪ್ರಾಯ ತಿಳಿಸಲಿದ್ದಾರೆ’ ಎಂದರು.

‘ಕಲಬುರ್ಗಿ ಪಾಲಿಕೆಯಲ್ಲಿ ಮೇಯರ್ ಸ್ಥಾನಕ್ಕೆ ಜೆಡಿಎಸ್ ಬೇಡಿಕೆ ಇಟ್ಟಿಲ್ಲ’ ಎಂದು ಅವರು ಸ್ಪಷ್ಟನೆ ನೀಡಿದರು.

‘ಕಲಬುರ್ಗಿಯಲ್ಲಿ ಈಗಾಗಲೇ ಜೆಡಿಎಸ್ ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದೆ ಎನ್ನುವುದು ಸುಳ್ಳು ಸುದ್ದಿ. ಈ ವಿಚಾರದಲ್ಲಿ ಕಾಂಗ್ರೆಸ್‌ನಲ್ಲೇ ಗೊಂದಲ ಇದೆ. ಜೆಡಿಎಸ್ ಜೊತೆ ಇನ್ನೂ ಸಿದ್ದರಾಮಯ್ಯ ಅವರೇ ಒಪ್ಪಿಲ್ಲ’ ಎಂದರು.

ಕಲಬುರ್ಗಿ: ‘ಕೈ’ ನಾಯಕರ ತೆರೆಮರೆ ತಂತ್ರ

ಬೆಂಗಳೂರು: ಅತಂತ್ರ ಸ್ಥಿತಿ ನಿರ್ಮಾಣ ಆಗಿರುವ ಕಲಬುರ್ಗಿ ಮಹಾನಗರಪಾಲಿಕೆಯಲ್ಲಿ ಅಧಿಕಾರ ಚುಕ್ಕಾಣಿಗಾಗಿ ತೆರೆಮರೆಯಲ್ಲಿ ರಾಜಕೀಯ ಲೆಕ್ಕಾಚಾರ ಬಿರುಸುಗೊಂಡಿದೆ. ಈ ಮಧ್ಯೆ, ಪಾಲಿಕೆಯ ಚುನಾಯಿತ ಆರು ಕಾಂಗ್ರೆಸ್ ಸದಸ್ಯರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಶನಿವಾರ ಭೇಟಿ ಮಾಡಿ ಚರ್ಚೆ ನಡೆಸಿದರು.

ಸದಾಶಿವನಗರದಲ್ಲಿರುವ ಶಿವಕುಮಾರ್ ಅವರ ನಿವಾಸಕ್ಕೆ ಶಾಸಕ ಪ್ರಿಯಾಂಕ್ ಖರ್ಗೆ ಜೊತೆ ಬಂದ ಪಾಲಿಕೆ ಸದಸ್ಯರು, ಜೆಡಿಎಸ್ ಜೊತೆ ಮೈತ್ರಿ ಮಾಡಿಕೊಳ್ಳುವ ಕುರಿತು ಕೆಲಹೊತ್ತು ಚರ್ಚೆ ನಡೆಸಿದರು.

ಬಳಿಕ ಮಾತನಾಡಿದ ಪಾಲಿಕೆ ಸದಸ್ಯ ಸಚಿನ್ ಸಿರವಾಳ, ‘ನಾವು ನಮ್ಮ ಅಭಿಪ್ರಾಯವನ್ನು ಅಧ್ಯಕ್ಷರಿಗೆ ತಿಳಿಸಿದ್ದೇವೆ. ಪಕ್ಷದ ವರಿಷ್ಠರು ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತಾರೆ. ಆ ನಿರ್ಧಾರಕ್ಕೆ ನಾವು ಬದ್ಧ’ ಎಂದರು.

ಪ್ರಿಯಾಂಕ್ ಖರ್ಗೆ ಮಾತನಾಡಿ,ಬಿಜೆಪಿಯವರು ನಮ್ಮ ಪಕ್ಷದ ಸದಸ್ಯರಿಗೆ ಮಂಡಳಿ ಸದಸ್ಯ ಮಾಡುತ್ತೇವೆ, ಸ್ಥಾಯಿ ಸಮಿತಿ ಅಧ್ಯಕ್ಷ ಸ್ಥಾನ ನೀಡುತ್ತೇವೆ ಎಂದು ಆಮಿಷ ಒಡ್ಡುತ್ತಿದ್ದಾರೆ. ಸರ್ಕಾರ ಎಲ್ಲ ರೀತಿಯಲ್ಲಿ ಆಡಳಿತ ಯಂತ್ರ ದುರುಪಯೋಗ ಮಾಡಿಕೊಳ್ಳುತ್ತಿದೆ’ ಎಂದು ದೂರಿದರು.

‘ಹುಬ್ಬಳ್ಳಿ– ಧಾರವಾಡ ಮತ್ತು ಕಲಬುರ್ಗಿ ಎರಡೂ ಮಹಾನಗರಪಾಲಿಕೆಗಳಲ್ಲಿ ಬಿಜೆಪಿಗೆ ಸಂಖ್ಯಾ ಬಲ ಇಲ್ಲ. ಹೀಗಾಗಿ, ಅವರು ಮೇಯರ್ ಆಯ್ಕೆಗೆ ಅಧಿಸೂಚನೆ ಹೊರಡಿಸುತ್ತಿಲ್ಲ’ ಎಂದು ಟೀಕಿಸಿದರು.

ಎಚ್‌ಡಿಡಿ ಜೊತೆ ಖರ್ಗೆ ಚರ್ಚೆ– ಶಿವಕುಮಾರ್

‘ಕಲಬುರ್ಗಿಯಲ್ಲಿ ಅಧಿಕಾರ ಹಿಡಿಯುವ ವಿಚಾರವಾಗಿ ಪಕ್ಷದ ರಾಷ್ಟ್ರೀಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಜೆಡಿಎಸ್ ರಾಷ್ಟ್ರೀಯ ನಾಯಕ ದೇವೇಗೌಡರ ಜತೆ ಮಾತುಕತೆ ನಡೆಸಿದ್ದಾರೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಕಲಬುರ್ಗಿಯಲ್ಲಿ ಕಳೆದ ಬಾರಿಗಿಂತ ಈ ಬಾರಿ ಹೆಚ್ಚು ಸಂಖ್ಯೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆದ್ದಿದ್ದಾರೆ. ಹುಬ್ಬಳ್ಳಿ-ಧಾರವಾಡದಲ್ಲಿ ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿ, ಕೇಂದ್ರ ಸಚಿವರು ಇದ್ದರೂ ಬಿಜೆಪಿ 39, ನಾವು 33 ಸ್ಥಾನಗಳನ್ನು ಗೆದ್ದಿದ್ದೇವೆ. ನಮ್ಮ ಬಂಡಾಯ ಸದಸ್ಯರೂ ಗೆದ್ದಿದ್ದಾರೆ’ ಎಂದರು.

ಕಲಬುರ್ಗಿ ವಿಷಯದಲ್ಲಿ ದೇವೇಗೌಡ ಮತ್ತು ಕುಮಾರಸ್ವಾಮಿ ಜೊತೆ ಮಾತನಾಡುತ್ತೀರಾ ಎಂಬ ಪ್ರಶ್ನೆಗೆ, ‘ಅವಶ್ಯಕತೆ ಇದ್ದಾಗ ಏನು ಮಾಡಬೇಕೊ ಅದನ್ನೆಲ್ಲಾ ಮಾಡುತ್ತೇನೆ’ ಎಂದರು.

ಅರ್ಜುನ್ ಸರ್ಜಾ ಪ್ರಕರಣ; ಸಾಕ್ಷಿದಾರರಿಗೆ ನೋಟಿಸ್

ಬೆಂಗಳೂರು: ನಟಿ ಶ್ರುತಿ ಹರಿಹರನ್ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ನಟ ಅರ್ಜುನ್ ಸರ್ಜಾ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖೆ ಮರುಜೀವ ಪಡೆದುಕೊಂಡಿದ್ದು, ಕಬ್ಬನ್ ಪಾರ್ಕ್ ಠಾಣೆ ಪೊಲೀಸರು ಸಾಕ್ಷಿದಾರರಿಗೆ ಇತ್ತೀಚೆಗೆ ನೋಟಿಸ್ ನೀಡಿದ್ದಾರೆ.

ಶ್ರುತಿ ಅವರು ನೀಡಿದ್ದ ದೂರು ಆಧರಿಸಿ ಸಂಜ್ಞೆ ಮೂಲಕ ಮಹಿಳೆ ಗೌರವಕ್ಕೆ ಧಕ್ಕೆ (354,509) ಲೈಂಗಿಕ ಕಿರುಕುಳ (ಐಪಿಸಿ 354ಎ) ಹಾಗೂ ಜೀವಬೆದರಿಕೆ (ಐಪಿಸಿ 506) ಆರೋಪದಡಿ 2018ರಲ್ಲಿ ಪ್ರಕರಣ ದಾಖಲಾಗಿತ್ತು. ಆರೋಪಿ ಹಾಗೂ ಇತರರ ಹೇಳಿಕೆಯನ್ನೂ ಪೊಲೀಸರು ದಾಖಲಿಸಿಕೊಂಡಿದ್ದರು.

‘ವಿಸ್ಮಯ ಸಿನಿಮಾ ಚಿತ್ರೀಕರಣದ ವೇಳೆಯಲ್ಲೂ ನಟಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಮಾಹಿತಿ ಇದೆ. ಇದನ್ನು ಖಚಿತಪಡಿಸಿಕೊಳ್ಳಲು ಸಿನಿಮಾ ನಿರ್ದೇಶಕ ಅರುಣ್ ವೈದ್ಯನಾಥನ್, ಛಾಯಾಗ್ರಾಹಕ ಅರವಿಂದ್ ಕೃಷ್ಣ ಹಾಗೂ ನಿರ್ಮಾಪಕ ಜಯರಾಮ್ ಅವರಿಂದ ಸಾಕ್ಷಿಯಾಗಿ ಹೇಳಿಕೆ ಪಡೆಯಬೇಕಿದೆ. ಹಲವು ಬಾರಿ ನೋಟಿಸ್ ನೀಡಿದರೂ ಅವರು ವಿಚಾರಣೆಗೆ ಬಂದಿಲ್ಲ. ಹೀಗಾಗಿ, ಇತ್ತೀಚೆಗೆ ಪುನಃ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲಸ ನಿಮಿತ್ತ ವಿದೇಶದಲ್ಲಿರುವುದಾಗಿ ಹೇಳಿರುವ ಅರುಣ್, ವಿಚಾರಣೆಗೆ ಬರಲು ಕಾಲಾವಕಾಶ ಕೋರಿದ್ದಾರೆ. ಇತರರು ಸದ್ಯದಲ್ಲೇ ಠಾಣೆಗೆ ಬರುವುದಾಗಿ ಹೇಳಿದ್ದಾರೆ’ ಎಂದೂ ತಿಳಿಸಿವೆ.

‘ಪ್ರಕರಣ ದಾಖಲಾಗುತ್ತಿದ್ದಂತೆ ದೂರುದಾರ, ಆರೋಪಿ ಹಾಗೂ ಸಾಕ್ಷಿದಾರರ ಹೇಳಿಕೆ ಪಡೆಯುವುದು ಕಾನೂನು ಪ್ರಕ್ರಿಯೆ. ಸಾಕ್ಷಿದಾರರಿಗೆ ನೋಟಿಸ್ ನೀಡಿರುವುದಕ್ಕೆ ಹೆಚ್ಚು ಒತ್ತು ನೀಡುವ ಅಗತ್ಯವಿಲ್ಲ. ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ಸಾಕ್ಷಿದಾರರು ಹೇಳಿಕೆ ಕೊಟ್ಟ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದೂ ಹೇಳಿದರು.

ನಿಧನ ವಾರ್ತೆ

ಪ್ರಭಾ ವಾಗೀಶ್

ತ್ಯಾವಣಿಗೆ: ಮಾಜಿ ಮುಖ್ಯಮಂತ್ರಿ ದಿವಂಗತ ಜೆ.ಎಚ್. ಪಟೇಲ್ ಅವರ ಸಹೋದರ ದಿವಂಗತ ವಿ.ಎಚ್. ಪಟೇಲ್ ಅವರ ಪತ್ನಿ ಪ್ರಭಾ ವಾಗೀಶ್ ಪಟೇಲ್ (74) ಹೃದಯಾಘಾತದಿಂದ ಶುಕ್ರವಾರ ಬೆಳಿಗ್ಗೆ ನಿಧನರಾದರು.

ಅವರಿಗೆ ರೈತ ಮುಖಂಡ ತೇಜಸ್ವಿ ಪಟೇಲ್, ಪುತ್ರಿ ಶುಭಾ ವಿ. ಪಟೇಲ್ ಇದ್ದಾರೆ. ಶುಭಾ ವಿ. ಪಟೇಲ್ ಅವರ ದಾವಣಗೆರೆ ನಿವಾಸದಲ್ಲಿ ಪ್ರಭಾ ನಿಧನರಾಗಿದ್ದಾರೆ. ಕಾರಿಗನೂರಿನಲ್ಲಿ ಜೆ.ಎಚ್. ಪಟೇಲ್ ಸಮಾಧಿಯ ಸಮೀಪವಿರುವ ವಿ.ಎಚ್. ಪಟೇಲ್ ಸಮಾಧಿಯ ಬಳಿ ಶುಕ್ರವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು.

Karnataka Golf Association
No.1, Golf Avenue, Kodihalli, Bengaluru - 560 008.

NOTICE

Notice is hereby given under Rule 19.7 of the Karnataka Golf Association read with 11 (3) of Karnataka Societies Registration Act 1960 of a **Special General Meeting** of the Members of Karnataka Golf Association to be held at the KGA Club House on Monday, the **4th October 2021 at 3.00 PM** to consider and pass certain resolutions circulated to all Members individually.

NOTICE

Notice is hereby given that the **45th Annual General Meeting** of the Karnataka Golf Association will be held at the KGA Club House on Monday, the **4th October 2021** at **5.00 PM.**
Due to the pandemic, elections could not be held in 2020 and in accordance with rule 19.6.7 the same stand postponed to the 46th Annual General Meeting.

Date: 12.09.2021.
Place: Bengaluru.
Sd/-
Prithvi Raj Urs
Hon. Secretary

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
Azadi Ka Amrit Mahotsav

ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯೂಎಫ್/ಡಬ್ಲ್ಯೂ/21–22/06 ದಿನಾಂಕ: 09.09.2021

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು ವೆಬ್‌ಸೈಟ್ http://www.ireps.gov.in (Works) ಆನ್‌ಲೈನ್ ಮೂಲಕ ಕೆಳಗೆ ತಿಳಿಸಿರುವ ಕೆಲಸಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರಮ ಸಂಖ್ಯೆ	ಟೆಂಡರ್ ಸಂಖ್ಯೆ	ವಿವರ	ಅಂದಾಜು ಮೌಲ್ಯ ರೂ.	ಟೆಂಡರ್ ತೆರೆಯುವ ದಿನಾಂಕ ಹಾಗೂ ಸಮಯ
1	ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/966	ಆಕ್ಸಲ್ ಶಾಪ್ ಶಟ್‌ಡೌನ್ ಕಾಮಗಾರಿಗಳು – 2021	3519033.27	01/10/2021 ಬೆಳಿಗ್ಗೆ 11.00 ಗಂಟೆಗೆ.

ಈ ಟೆಂಡರ್ ಪ್ರಕಟಣೆಯನ್ನು ನಮ್ಮ ವೆಬ್‌ಸೈಟ್ www.rwf.indianrailways.gov.in ನಲ್ಲಿ ವೀಕ್ಷಿಸಬಹುದು.
ಉಪ ಮುಖ್ಯ ಇಂಜಿನಿಯರ್

ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪ

ಟೆಂಡರ್ ಅಕ್ರಮ: ₹ 34 ಕೋಟಿ ಕಿಕ್ ಬ್ಯಾಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಉಪಕರಣಾಗಾರ ಹಾಗೂ ತರಬೇತಿ ಕೇಂದ್ರದ (ಜಿಟಿಟಿಸಿ) ಟೆಂಡರ್‌ನಲ್ಲಿ ಅಕ್ರಮ ನಡೆದಿದ್ದು, ಸುಮಾರು ₹ 34 ಕೋಟಿ ಕಿಕ್ ಬ್ಯಾಕ್ ಪಡೆಯಲಾಗಿದೆ’ ಎಂದು ಕಾಂಗ್ರೆಸ್ ನಾಯಕ ವಿ.ಎಸ್. ಉಗ್ರಪ್ಪ ಆರೋಪಿಸಿದರು.

ಪಕ್ಷದ ಮತ್ತೊಬ್ಬ ನಾಯಕ ಎಚ್.ಎಂ. ರೇವಣ್ಣ ಜತೆ ಸುದ್ದಿ ಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಉನ್ನತ ಶಿಕ್ಷಣ ಸಚಿವಾಲಯ ವ್ಯಾಪ್ತಿಯಲ್ಲಿ ಬರುವ ಜಿಟಿಟಿಸಿಯಲ್ಲಿ ಉಪಕರಣಗಳ ಖರೀದಿ ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ ಅವರ ಅನುಮತಿ ಮೇರೆಗೆ ನಡೆದಿದೆ. ಈ ವಿಚಾರವಾಗಿ ಸಿಬಿಐ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.

‘ರಾಜಾಜಿನಗರ ಕೈಗಾರಿಕಾ ಪ್ರದೇಶದಲ್ಲಿರುವ ಜಿಟಿಟಿಸಿಯ ವ್ಯವಸ್ಥಾಪಕ ನಿರ್ದೇಶಕ, ಆಡಳಿತ ವ್ಯವಸ್ಥಾಪಕ ಮತ್ತು ಖರೀದಿ ಅಧಿಕಾರಿ, ಸಚಿವರ ಗಮನದಲ್ಲೇ ₹ 61.52 ಕೋಟಿ ಮೊತ್ತದ ಎಂಟು ಟೆಂಡರ್ ಕರೆದಿದ್ದಾರೆ. ಖರೀದಿಗೆ ಕಾರ್ಯಾದೇಶ ನೀಡಿದ ಉಪಕರಣಗಳ ಮಾರುಕಟ್ಟೆ ಮೊತ್ತ ₹ 27.15 ಕೋಟಿ ಮಾತ್ರ. ಈ ಟೆಂಡರ್‌ಗಳಲ್ಲಿ ಬಹುತೇಕ ಬಿಡ್‌ಗಳನ್ನು ಅಕ್ವಾ ಟೆಕ್ವಿಪ್ಮೆಂಟ್ಸ್‌ಗೆ ನೀಡಲಾಗಿದೆ.

ವಿ.ಎಸ್.ಉಗ್ರಪ್ಪ

ಬಿಡ್ ನಂ. 7 ಅನ್ನು ರವಿತೇಜ ಎಲೆಕ್ಟ್ರೋ ಸಿಸ್ಟಮ್ಸ್‌ಗೆ ನೀಡಲಾಗಿದ್ದು, ಇದು ಅಕ್ವಾ ಟೆಕ್ವಿಪ್ಮೆಂಟ್ಸ್‌ನ ಸ್ನೇಹಿತರಾಗಿದ್ದಾರೆ. ಮೊದಲ ಬಿಡ್ ಅನ್ನು ಲಾರೆನ್ಸ್ ಅಂಡ್ ಮೇಯೋ ಅವರಿಗೆ ನೀಡಿದ್ದಾರೆ. ಈ ಟೆಂಡರ್‌ನಲ್ಲಿ ಭಾಗಿಯಾಗಿರುವವರು ಉತ್ಪನ್ನ ತಯಾರಕರಲ್ಲ, ಸರಬರಾಜು ಏಜೆನ್ಸಿಗಳೂ ಅಲ್ಲ’ ಎಂದರು.

‘ಪಾರದರ್ಶಕ ಟೆಂಡರ್ ಕಾಯ್ದೆ ಪ್ರಕಾರ ₹ 1 ಕೋಟಿಗೂ ಹೆಚ್ಚು ಮೊತ್ತದ ಟೆಂಡರ್‌ಗೆ ಪೂರ್ವಭಾವಿ ಸಭೆ ಕರೆಯಬೇಕು. ಯಾವುದೇ ಪೂರ್ವಭಾವಿ ಸಭೆ ನಡೆಸಿಲ್ಲ. 2019ರಲ್ಲಿ ತಲಾ ₹ 28.98 ಲಕ್ಷಕ್ಕೆ 5 ಸಿಎಂಸಿ ಯಂತ್ರಗಳನ್ನು ಖರೀದಿಸಿದ್ದರೆ, ಅದೇ ಯಂತ್ರಗಳನ್ನು 2021ರಲ್ಲಿ ತಲಾ ₹ 31.27 ಲಕ್ಷ ನೀಡಿ 6 ಖರೀದಿಸಲಾಗಿದೆ. ಮಾರ್ಚ್‌ನಲ್ಲಿ ₹ 99.12 ಲಕ್ಷದಂತೆ 4 ಯಂತ್ರ ಖರೀದಿಸಲಾಗಿದೆ. ಹೀಗೆ ಒಂದು ಯಂತ್ರವನ್ನು ಮೂರು ಪಟ್ಟು ಬೆಲೆಯಲ್ಲಿ ಖರೀದಿಸಲಾಗಿದೆ’ ಎಂದು ಆರೋಪಿಸಿದರು.

‘ಪಾರದರ್ಶಕ ಕಾಯ್ದೆ ಪ್ರಕಾರ ಒಂದು ಅಥವಾ ಎರಡು ಕಂಪನಿಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದರೆ, ಅದನ್ನು ರದ್ದುಗೊಳಿಸಿ ಮರು ಟೆಂಡರ್ ಕರೆಯಬೇಕು. 8 ಟೆಂಡರ್‌ಗಳಲ್ಲಿ 2 ಕಂಪನಿಗಳು ಭಾಗವಹಿಸಿದ್ದರೂ ಮರು ಟೆಂಡರ್ ಕರೆಯಲಿಲ್ಲ’ ಎಂದರು.

ಲ್ಯಾಪ್‌ಟಾಪ್ ಖರೀದಿ: ‘ಎಸ್‌ಸಿ, ಎಸ್‌ಟಿ ಮಕ್ಕಳಿಗಾಗಿ ಎಸಿಇಆರ್ ಕಂಪನಿಯಿಂದ ತಲಾ ₹ 14,500ಕ್ಕೆ 28 ಸಾವಿರ ಲ್ಯಾಪ್‌ಟಾಪ್ ಖರೀದಿಸಿದ್ದಕ್ಕೆ ಯಡಿಯೂರಪ್ಪ ಹೋರಾಟ ಮಾಡಿದ್ದರು. ಆದರೆ, ಅಶ್ವತ್ಥನಾರಾಯಣ ಅದೇ ಎಸಿಇಆರ್ ಕಂಪನಿಯಿಂದ ಅದೇ ಲ್ಯಾಪ್‌ಟಾಪ್‌ನ್ನು ತಲಾ ₹ 28 ಸಾವಿರ ನೀಡಿ 1.10 ಲಕ್ಷ ಲ್ಯಾಪ್‌ಟಾಪ್ ಖರೀದಿಸಿದ್ದಾರೆ’ ಎಂದು ಎಚ್.ಎಂ. ರೇವಣ್ಣ ಆರೋಪಿಸಿದರು.

‘ಕಿಕ್ ಬ್ಯಾಕ್ ಕಾಂಗ್ರೆಸ್ ಸಂಸ್ಕೃತಿ’

ಡಾ.ಸಿ.ಎನ್. ಅಶ್ವತ್ಥ ನಾರಾಯಣ

‘ಜಿಟಿಟಿಸಿ ಟೆಂಡರ್‌ನಲ್ಲಿ ಅಕ್ರಮ ನಡೆದಿದೆ ಎಂದು ಸುಳ್ಳು ಆರೋಪ ಮಾಡಿರುವ ವಿ.ಎಸ್. ಉಗ್ರಪ್ಪ ಮತ್ತು ಎಚ್.ಎಂ. ರೇವಣ್ಣ ಅವರಿಗೆ ಲೀಗಲ್ ನೋಟಿಸ್ ನೀಡಲಾಗುವುದು’ ಎಂದು ಎಚ್ಚರಿಕೆ ನೀಡಿದ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ‘ಕಿಕ್ ಬ್ಯಾಕ್, ಫುಲ್ ಬ್ಯಾಕ್ ಎನ್ನುವುದು ಕಾಂಗ್ರೆಸ್ ನಾಯಕರ ಸಂಸ್ಕೃತಿ’ ಎಂದರು.

‘ಜಿಟಿಟಿಸಿ ಟೆಂಡರ್ ಬಗ್ಗೆ ಸುಳ್ಳಿನ ಸೌಧ ಕಟ್ಟಿದ್ದಾರೆ. ಗಾಳಿಯಲ್ಲಿ ಗುಂಡು ಹೊಡೆಯುವ ಕೀಳುಮಟ್ಟದ ಆರೋಪ. ಅಲ್ಲದೆ, ನಮಗೆ ಮಸಿ ಬಳಿಯುವ ದುರುದ್ದೇಶವಷ್ಟೇ. ಆರೋಪ ಮಾಡಿದವರಿಗೆ ಬುದ್ಧಿಭ್ರಮಣೆ ಆಗಿರಬೇಕು’ ಎಂದರು.

‘ವೈಮಾನಿಕ ಅಭಿವೃದ್ಧಿ ಸಂಸ್ಥೆ(ಎಡಿಎ), ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ಹಾಗೂ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು (ಎಂಎಸ್‌ಎಂಇ) ಸಚಿವಾಲಯದ ಸಂಸ್ಥೆಗಳ ವಿಜ್ಞಾನಿಗಳು ಮತ್ತು ಅಧಿಕಾರಿಗಳು ಟೆಂಡರ್ ತಾಂತ್ರಿಕ ಸಮಿತಿಯ ಸದಸ್ಯರು. ಅವರ ಸಲಹೆ ಮೇಲೆಯೇ ಎಲ್ಲವೂ ನಡೆಯುತ್ತಿದೆ. ಬಹುತೇಕ ಉಪಕರಣಗಳನ್ನು ಕೇಂದ್ರ ಸರ್ಕಾರಿ ಸ್ವಾಮ್ಯದ ಎಚ್‌ಎಂಟಿ ಸಂಸ್ಥೆಯಿಂದ ಖರೀದಿ ಮಾಡಲಾಗುತ್ತಿದೆ. ಅದೂ ಟೆಂಡರ್ ಮೂಲಕ ಪಾರದರ್ಶಕವಾಗಿ ನಡೆಯುತ್ತದೆ’ ಎಂದರು.

ಎನ್‌ಐಆರ್‌ಎಫ್: ಮೈಸೂರು ವಿಶ್ವವಿದ್ಯಾಲಯಕ್ಕೆ 19ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಮೈಸೂರು: ಶಿಕ್ಷಣ ಸಚಿವಾಲಯ ಪ್ರಕಟಿಸಿದ 2021ನೇ ಸಾಲಿನ ನ್ಯಾಷನಲ್ ಇನ್‌ಸ್ಟಿಟ್ಯೂಷನಲ್ ರ್‍ಯಾಂಕಿಂಗ್ ಫ್ರೇಮ್‌ವರ್ಕ್‌ನ (ಎನ್‌ಐಆರ್‌ಎಫ್) ಶ್ರೇಯಾಂಕ ಪಟ್ಟಿಯ ವಿಶ್ವವಿದ್ಯಾಲಯಗಳ ವಿಭಾಗದಲ್ಲಿ ಮೈಸೂರು ವಿಶ್ವವಿದ್ಯಾಲಯ 19ನೇ ಸ್ಥಾನ ಪಡೆದುಕೊಂಡಿದೆ.

ವಿಶ್ವವಿದ್ಯಾಲಯಗಳು, ಐಐಟಿ, ಐಐಎಸ್‌ಸಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ಸೇರಿದಂತೆ ದೇಶದ 1,657 ಶಿಕ್ಷಣ ಸಂಸ್ಥೆಗಳ ಒಟ್ಟಾರೆ ರ್‍ಯಾಂಕಿಂಗ್‌ನಲ್ಲಿ 34ನೇ ಸ್ಥಾನ ಲಭಿಸಿದೆ.

‘ಹಿಂದಿನ ವರ್ಷ ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ 27, ಒಟ್ಟಾರೆಯಾಗಿ 47ನೇ ಸ್ಥಾನ ದೊರೆತಿತ್ತು. ಈ ಬಾರಿ ರ್‍ಯಾಂಕಿಂಗ್‌ನಲ್ಲಿ ಇನ್ನಷ್ಟು ಸುಧಾರಣೆಯಾಗಿದೆ’ ಎಂದು ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಪ್ರತಿಕ್ರಿಯಿಸಿದ್ದಾರೆ.

‘ದೇಶದ ವಿಶ್ವವಿದ್ಯಾಲಯಗಳ ಪಟ್ಟಿಯ ಅಗ್ರ 20 ರಲ್ಲಿ ಕಾಣಿಸಿಕೊಳ್ಳಬೇಕೆಂಬ ಗುರಿಯನ್ನು ಸಾಧಿಸಿದಂತಾಗಿದೆ. ಕಾಯಂ ಬೋಧಕರ ಕೊರತೆ ಸೇರಿದಂತೆ ಕೆಲವು ಮಿತಿಗಳ ನಡುವೆಯೂ ಉತ್ತಮ ಶ್ರೇಯಾಂಕ ಲಭಿಸಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸಾಧನೆಗೆ ಇದು ಪ್ರೇರಣೆಯಾಗಿದೆ’ ಎಂದರು.

ಜೆಎಸ್‌ಎಸ್ 56 ನೇ ಸ್ಥಾನ: ಮೈಸೂರಿನ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು (ಜೆಎಸ್‌ಎಸ್‌ಎಎಚ್‌ಇಆರ್) ಒಟ್ಟಾರೆ ರ್‍ಯಾಂಕಿಂಗ್‌ನಲ್ಲಿ 56ನೇ ಸ್ಥಾನ ಗಳಿಸಿದೆ.

ಬೋಧನೆ, ಕಲಿಕೆ ಮತ್ತು ಸಂಪನ್ಮೂಲಗಳು, ಸಂಶೋಧನೆ, ಪದವಿ ಫಲಿತಾಂಶ, ಹಾಗೂ ಸಂಸ್ಥೆಗಳ ಕುರಿತು ಜನಾಭಿಪ್ರಾಯ ಸೇರಿದಂತೆ ಹಲವು ಮಾನದಂಡಗಳೊಂದಿಗೆ ಮೌಲ್ಯಮಾಪನ ಮಾಡಿ ಶ್ರೇಯಾಂಕ ನೀಡಲಾಗುತ್ತದೆ.

ಉತ್ತರಹಳ್ಳಿ: ಕೊಳವೆಬಾವಿಗಳಲ್ಲಿ ಕೊಳಚೆ ನೀರು • ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳು ಅಸ್ವಸ್ಥ

ಕಲುಷಿತ ನೀರು ಬಳಸಿದವರು ಆಸ್ಪತ್ರೆ ಪಾಲು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನಿವಾಸಿಗಳು ಹಬ್ಬದ ಸಂಭ್ರಮದಲ್ಲಿದ್ದರೆ, ಉತ್ತರಹಳ್ಳಿ ವಾರ್ಡ್ ಸಂಖ್ಯೆ 184ರ ರಾಮಾಂಜನೇಯ ನಗರದ ಕೆಲವು ನಿವಾಸಿಗಳು ಆಸ್ಪತ್ರೆಗೆ ಓಡಾಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಈ ಪ್ರದೇಶದ ಕೊಳವೆ ಬಾವಿಗಳಿಂದ ಕಲುಷಿತ ನೀರು ಪೂರೈಕೆಯಾಗುತ್ತಿದ್ದು, ಇದನ್ನು ಬಳಸಿದವರು ತಲೆನೋವು, ವಾಂತಿ-ಭೇದಿ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ದುರ್ವಾಸನೆ ತಾಳಲಾರದೆ ಹಲವು ಮಕ್ಕಳು ಪ್ರಜ್ಞೆ ತಪ್ಪಿದ್ದಾರೆ.

'16 ದಿನಗಳಿಂದ ಈ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ. ಏಳು ಅಪಾರ್ಟ್‌ಮೆಂಟ್ಸ್ ಸಮುಚ್ಚಯಗಳಲ್ಲಿ ಈ ಸಮಸ್ಯೆ ಕಾಣಿಸಿಕೊಂಡಿದೆ. ಕೊಳವೆ ಬಾವಿಗಳ ಮೂಲಕ ಕೊಳಚೆ ನೀರು ಬರುತ್ತಿದೆ. ಕಲುಷಿತ ನೀರು ಪರೀಕ್ಷಿಸಲು ಸರ್ಕಾರಿ ಪ್ರಯೋಗಾಲಯದವರು ಒಪ್ಪಲಿಲ್ಲ. ಖಾಸಗಿ ಪ್ರಯೋಗಾಲಯದವರು ಪರೀಕ್ಷೆ ನಡೆಸಿದ್ದು, ವರದಿ ಇನ್ನಷ್ಟೇ ಬರಬೇಕಾಗಿದೆ' ಎಂದು ಎಂ.ಆರ್. ಸನ್ನಿಧಿ ಅಪಾರ್ಟ್‌ಮೆಂಟ್ಸ್ ಸಮುಚ್ಚಯದ ನಿವಾಸಿ ಸಂದೇಶ್ ತಿಳಿಸಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಎಚ್.ವಿ.ಜೆ, ಶ್ರೀರಾಮ, ಯಶೋದಾ, ಎಂ.ಆರ್. ಸನ್ನಿಧಿ ಅಪಾರ್ಟ್‌ಮೆಂಟ್ಸ್, ಚೈತ್ರಶ್ರೀ ಡೆವಲಪರ್ಸ್ ಸೇರಿ ಹಲವು ಅಪಾರ್ಟ್‌ಮೆಂಟ್ಸ್ ಸಮುಚ್ಚಯಗಳಲ್ಲಿ ಈ ಸಮಸ್ಯೆ ಕಾಣಿಸಿಕೊಂಡಿದೆ.

'ಕೊಳವೆ ಬಾವಿಗಳಿಂದ ಕಪ್ಪು ಮತ್ತು ಹಸಿರು ಬಣ್ಣದ ನೀರು ಬರುತ್ತಿದೆ. ಒಂದೊಂದು ಅಪಾರ್ಟ್‌ಮೆಂಟ್ಸ್ ಸಮುಚ್ಚಯಗಳಲ್ಲೂ 15ರಿಂದ 20 ಜನ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಕೊಳವೆ ಬಾವಿಯ ನೀರನ್ನು ಬಳಸದೆ ಟ್ಯಾಂಕರ್‌ನಿಂದ ನೀರು ತರಿಸಿಕೊಳ್ಳುತ್ತಿದ್ದೇವೆ' ಎಂದು ನಿವಾಸಿಗಳು ಅಳಲು ತೋಡಿಕೊಂಡರು.

'ಎರಡು ಕೊಳವೆಬಾವಿಗಳು ಇದ್ದವರು ಒಂದನ್ನು ಸ್ಥಗಿತಗೊಳಿಸಿ, ಮತ್ತೊಂದನ್ನು ಬಳಸುತ್ತಿದ್ದಾರೆ. ಆದರೆ, ಒಂದೇ ಕೊಳವೆಬಾವಿ ಹೊಂದಿದವರಿಗೆ ತೊಂದರೆಯಾಗುತ್ತಿದೆ. ಐದಾರು ಟ್ಯಾಂಕರ್‌ಗಳಷ್ಟು ನೀರು ತರಿಸಿಕೊಳ್ಳಬೇಕಾಗಿದೆ. ಜಲಮಂಡಳಿಯಿಂದ ಎರಡು ದಿನಕ್ಕೆ ಒಮ್ಮೆ ಅರ್ಧ ತಾಸು ಮಾತ್ರ ಕಾವೇರಿ ನೀರು ಸರಬರಾಜು ಆಗುತ್ತಿದೆ. ಸಮಸ್ಯೆ ಪರಿಹಾರವಾಗುವವರೆಗೆ ಎರಡು ತಾಸುಗಳಾದರೂ ನೀರು ಪೂರೈಸಬೇಕು' ಎಂದು ಯಶೋದಾ ಅಪಾರ್ಟ್‌ಮೆಂಟ್ಸ್ ಸಮುಚ್ಚಯದ ಎನ್.ಪಿ. ಶ್ರೀನಿವಾಸ್ ಒತ್ತಾಯಿಸಿದರು.

'ಭೂಗರ್ಭ ವಿಜ್ಞಾನಿಗಳನ್ನು ಸ್ಥಳಕ್ಕೆ ಕರೆಯಿಸಿ, ಕೊಳವೆಬಾವಿಗಳಿಗೆ ಕ್ಯಾಮೆರಾಗಳನ್ನು ಇಳಿಸಿ ಪರಿಶೀಲಿಸಿದ್ದೇವೆ. ಕೆಲವು ಕಡೆ 135 ಅಡಿಗಳಷ್ಟು, ಇನ್ನೂ ಕೆಲವು ಕಡೆ 60ರಿಂದ 80 ಅಡಿಗಳಷ್ಟು ಆಳದಲ್ಲಿ ಕೊಳಚೆ ನೀರು ಸೇರುತ್ತಿದೆ. ಇನ್ನು ಕೆಲವೆಡೆ 200 ಅಡಿಯಿಂದ 300 ಅಡಿಗಳಷ್ಟು ಆಳದಲ್ಲಿ ಕಲುಷಿತ ನೀರು ಸೇರಿಕೊಳ್ಳುತ್ತಿದೆ. ಆದರೆ, ಈ ಕೊಳಚೆ ನೀರಿನ ಮೂಲ ಯಾವುದು ಎಂದು ತಿಳಿಯುತ್ತಿಲ್ಲ' ಎಂದು ನಿವಾಸಿ ವಿಜಯ್‌ಕುಮಾರ್ ಹೇಳಿದರು.

ರಾಮಾಂಜನೇಯ ನಗರದ ಅಪಾರ್ಟ್‌ಮೆಂಟ್ ಸಮುಚ್ಚಯದ ಕೊಳವೆಬಾವಿಯ ಕೊಳಚೆ ನೀರು

ಕೊಳವೆಬಾವಿ ಸ್ವಚ್ಛತೆಗೆ ₹2.40 ಲಕ್ಷ ವೆಚ್ಚ!

ಕೊಳವೆಬಾವಿಗಳನ್ನು ಸ್ವಚ್ಛಗೊಳಿಸಲು (ಫ್ಲಷಿಂಗ್) ಏಳು ಅಪಾರ್ಟ್‌ಮೆಂಟ್ಸ್ ಸಮುಚ್ಚಯ ಗಳ ನಿವಾಸಿಗಳು ಸೇರಿ ಒಟ್ಟು ₹2.40 ಲಕ್ಷ ಖರ್ಚು ಮಾಡಿದ್ದಾರೆ. ಕೊಳವೆಬಾವಿಯೊಳಗೆ ರಭಸವಾಗಿ ನೀರು ನುಗ್ಗಿಸಿ ಸ್ವಚ್ಛಗೊಳಿಸಿದ್ದಾರೆ. ಆದರೂ, ಸಮಸ್ಯೆ ಪರಿಹಾರವಾಗಿಲ್ಲ.

'ಮನೆಯಲ್ಲೆಲ್ಲ ಹೆಗ್ಗಣ, ಇಲಿ ಸತ್ತ ವಾಸನೆ ಬರುತ್ತಿದೆ. ಮನೆ ತುಂಬಾ ಸುಗಂಧ ದ್ರವ್ಯ ಸಿಂಪಡಿಸಿಕೊಂಡು ಇರಬೇಕಾದ ಸ್ಥಿತಿ ಇದೆ' ಎಂದು ನಿವಾಸಿಗಳು ಅಳಲು ತೋಡಿಕೊಂಡರು.

'ಜಲಮಂಡಳಿ ಸಮಸ್ಯೆ ಅಲ್ಲ'

'ನಮ್ಮ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದಾರೆ. ಆದರೆ, ಈ ಪ್ರದೇಶಗಳಿಗೆ ಜಲಮಂಡಳಿಯಿಂದ ಯಾವುದೇ ಸಂಪರ್ಕ ಕಲ್ಪಿಸಲಾಗಿಲ್ಲ. ಇದರಲ್ಲಿ ಮಂಡಳಿಯ ತಪ್ಪು ಇಲ್ಲ' ಎಂದು ಜಲಮಂಡಳಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಬಿ.ಎಂ. ಮಂಜುನಾಥ ಪ್ರತಿಕ್ರಿಯಿಸಿದರು.

'ಒಂದು ವೇಳೆ, ಮಂಡಳಿ ನಿರ್ವಹಿಸುವ ಒಳಚರಂಡಿ ಮಾರ್ಗದಿಂದಲೇ ಈ ಸಮಸ್ಯೆಯಾಗಿದ್ದರೆ, 5 ಅಡಿ ಅಥವಾ 6 ಅಡಿ ಆಳದಲ್ಲಿಯೇ ಕಲುಷಿತ ನೀರು ಸೇರುವ ಸಾಧ್ಯತೆ ಇರುತ್ತದೆ. 150 ಅಡಿ ಅಥವಾ 200 ಅಡಿ ಆಳದಲ್ಲಿ ಸೇರ್ಪಡೆಯಾಗುತ್ತಿದೆ. ಹಾಗಾಗಿ ಹತ್ತಿರದ ತೆರೆದ ಬಾವಿಯಿಂದಲೂ ಸೇರಿರಬಹುದು' ಎಂದು ಅವರು ಹೇಳಿದರು.

'ಅಧಿಕಾರಿಗಳನ್ನು ಮತ್ತೊಮ್ಮೆ ಸ್ಥಳಕ್ಕೆ ಕಳುಹಿಸಿ ಪರಿಶೀಲನೆ ನಡೆಸಲಾಗುವುದು. ಬಿಬಿಎಂಪಿಯ ಗಮನಕ್ಕೂ ತರಲಾಗುವುದು' ಎಂದು ಅವರು ತಿಳಿಸಿದರು.

ಮನೆಯಲ್ಲಿ ಎಲ್ಲರೂ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಶಾಸಕರು, ಅಧಿಕಾರಿಗಳಿಗೆ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. 16 ದಿನಗಳಿಂದ ನರಕಯಾತನೆ ಅನುಭವಿಸುತ್ತಿದ್ದೇವೆ

ಅಶ್ವಿನಿ, ಎಂ.ಆರ್ ಸನ್ನಿಧಿ ಅಪಾರ್ಟ್‌ಮೆಂಟ್ಸ್ ಸಮುಚ್ಚಯದ ನಿವಾಸಿ

ಕಲುಷಿತ ನೀರಿನ ದುರ್ವಾಸನೆ ತಾಳಲಾರದೆ ನನ್ನ 12 ವರ್ಷದ ಮಗಳು ಪ್ರಜ್ಞೆ ತಪ್ಪಿ ಬಿದ್ದಿದ್ದಳು. ಈ ನೀರಿನಿಂದ ಸ್ನಾನ ಮಾಡಿದರೆ ಮೈ-ತಲೆ ಮೇಲೆಲ್ಲ ಗುಳ್ಳೆಗಳು ಆಗುತ್ತಿವೆ.

ವಿಜಯ್‌ಕುಮಾರ್, ಎಂಆರ್‌ಎಸ್ ಅಪಾರ್ಟ್‌ಮೆಂಟ್ಸ್ ಸಮುಚ್ಚಯದ ನಿವಾಸಿ

ಬಿಎಸ್‌ವೈಗೆ ವೀರಭದ್ರೇಶ್ವರ ಪ್ರಶಸ್ತಿ

ಬೆಳಗಾವಿ: 'ವೀರಶೈವ ಲಿಂಗಾಯತ ಸಂಘಟನೆಯು ಇದೇ 14ರಂದು ಸಂಜೆ 6ಕ್ಕೆ ಬೆಂಗಳೂರಿನ ಬಸವೇಶ್ವರ ಸುಜ್ಞಾನ ಮಂಟಪದಲ್ಲಿ ಹಮ್ಮಿಕೊಂಡಿರುವ ವೀರಭದ್ರೇಶ್ವರ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ, ಶಾಸಕ ಬಿ.ಎಸ್. ಯಡಿಯೂರಪ್ಪ ಅವರಿಗೆ 'ವೀರಭದ್ರೇಶ್ವರ ಪ್ರಶಸ್ತಿ' ಪ್ರದಾನ ಮಾಡಲಾಗುವುದು' ಎಂದು ಹುಕ್ಕೇರಿ ಹಿರೇಮಠದ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

'ಇದು ಮೊದಲ ಪ್ರಶಸ್ತಿಯಾಗಿದ್ದು, ಶ್ರೀಮಠದಿಂದ ನೀಡಲಾಗುತ್ತಿದೆ. ₹ 50 ಸಾವಿರ ಮೌಲ್ಯದ ವಸ್ತುವನ್ನು ಕಾಣಿಕೆಯಾಗಿ ನೀಡಲಾಗುವುದು. ತಮ್ಮ ಮನೆ ದೇವರು ವೀರಭದ್ರೇಶ್ವರ ಆಗಿರುವುದರಿಂದ ಅವರು ಪ್ರಶಸ್ತಿ ಸ್ವೀಕರಿಸಲು ಒಪ್ಪಿದ್ದಾರೆ. ಮಠ-ಮಾನ್ಯಗಳ ವಿಚಾರದಲ್ಲಿ ಸಹಾಯಕ್ಕೆ ಮುಂಚೂಣಿಯಲ್ಲಿ ಇರುವುದರಿಂದಾಗಿ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಹೇಳಿದರು.

ದೇವಾಲಯ ಧ್ವಂಸ: ಟ್ವಿಟರ್‌ನಲ್ಲಿ ಬಿಸಿಬಿಸಿ ಚರ್ಚೆ

ಮೈಸೂರು: ನಂಜನಗೂಡು ತಾಲ್ಲೂಕಿನ ಉಚ್ಚಗಣಿ ಗ್ರಾಮದ ರಾಜ್ಯ ಹೆದ್ದಾರಿ 57ರಲ್ಲಿದ್ದ ಮಹದೇವಮ್ಮ ದೇವಾಲಯವನ್ನು ಕೆಡವಿದ ಬಳಿಕ ಸಾಮಾಜಿಕ ಮಾಧ್ಯಮಗಳಲ್ಲಿ ಬಿಸಿ ಚರ್ಚೆ ನಡೆಯುತ್ತಿದೆ.

ಇತ್ತೀಚೆಗೆ ಕೆಡಿಪಿ ಸಭೆಯಲ್ಲಿ, 'ಹಿಂದೂ ದೇವಾಲಯಗಳಷ್ಟೇ ಕಾಣಿಸುತ್ತವೆಯೇ' ಎಂದು ಆಕ್ಷೇಪಿಸಿದ್ದ ಸಂಸದ ಪ್ರತಾಪಸಿಂಹ ಅವರ ಹೇಳಿಕೆಗೆ ಶಾಸಕ ತನ್ವೀರ್ ಸೇಠ್ 'ನಾವೇನು ಬಳೆ ತೊಟ್ಟುಕೊಂಡಿಲ್ಲ' ಎಂದು ಪ್ರತಿ ಹೇಳಿಕೆ ನೀಡಿದ್ದು ಚರ್ಚೆಗೆ ವೇದಿಕೆಯನ್ನು ಒದಗಿಸಿದೆ. ಕಾಂಗ್ರೆಸ್, ಬಿಜೆಪಿ ಸರ್ಕಾರವನ್ನು ಕೆಲವರು ಟೀಕಿಸಿದ್ದಾರೆ.

ಗ್ರಾಮಸ್ಥರಿಗೆ ಮಾಹಿತಿ ನೀಡದೇ ಪ್ರಾಚೀನ ಹಿಂದೂ ದೇವಾಲಯವನ್ನು ಧ್ವಂಸಗೊಳಿಸಿರುವುದು ಖಂಡನೀಯ. ಪರ್ಯಾಯ ಸ್ಥಳವನ್ನು ಒದಗಿಸಬೇಕು

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

ದೇವಾಲಯ ಧ್ವಂಸವನ್ನು ಖಂಡಿಸಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟ್ವೀಟ್ ಮಾಡಿದ್ದು, 'ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿರುವ ಘಟನೆಗೆ ಸರ್ಕಾರವೇ ಹೊಣೆ' ಎಂದಿದ್ದಾರೆ. ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಲಕ್ಷ್ಮಣ್ ಕಾರ್ಕಳ್, 'ತನಿಖೆ ಆಗಬೇಕು ಸರ್. ಯಾರು ಪರವಾನಗಿ ಕೊಟ್ರು? ಯಾಕೆ ಕೆಡವಿದರು ಎಂದು ತನಿಖೆ ಆಗಲೇಬೇಕು. ಬೇರೆ ಸರ್ಕಾರ ಇದ್ದಾಗ ಆಗಿದ್ದರೆ ಇವರು ಸುಮ್ಮನೆ ಇರುತ್ತಿದ್ದರೆ' ಎಂದು ಪ್ರಶ್ನಿಸಿದ್ದಾರೆ. 'ಕಾಂಗ್ರೆಸ್‌ಗೆ ನಿಜವಾಗಲೂ ಕಾಳಜಿ ಇದ್ದರೆ ದೇವಾಲಯಗಳನ್ನು ರಕ್ಷಿಸಿ ಆಂದೋಲನ ಆರಂಭಿಸಲಿ. ಇದೊಂದು ಕಣ್ಣೊರೆಸುವ ಪ್ರಯತ್ನವಷ್ಟೇ' ಎಂದು ಮಹೇಶ್ ಪಾಟೀಲ್ ಟೀಕಿಸಿದ್ದಾರೆ.

'...ಬಿಜೆಪಿಯವರು ಆದ್ರೆ ನಿಜವಾಗಿಯೂ ಹಿಂದೂ ವಿರೋಧಿ ಎಂದು ಸಾಬೀತಾಗಿದೆ' ಎಂದು ಮೈಸೂರಿನ ಗಂಗರಾಜು ಪ್ರತಿಕ್ರಿಯಿಸಿದ್ದಾರೆ.

ಪ್ರಜಾವಾಣಿ DH
EXAM ಪರಿಚಯಿಸುತ್ತಿದ್ದೇವೆ
MASTERMIND

ಪ್ರಿಯ ಸ್ಪರ್ಧಾರ್ಥಿಗಳೇ,

ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿದ್ದೀರಾ? ರ್‍ಯಾಂಕ್, ಅತ್ಯುತ್ತಮ ಅಂಕ ಗಳಿಸಿ ಸರ್ಕಾರಿ ಉದ್ಯೋಗ ಗಿಟ್ಟಿಸುವ ಕನಸು ಕಂಡಿದ್ದೀರಾ? ಹಾಗಾದರೆ ನಿಮ್ಮ ಕನಸನ್ನು ನನಸಾಗಿಸಲು ನಿಮ್ಮ ಹೆಮ್ಮೆಯ 'ಪ್ರಜಾವಾಣಿ -ಡೆಕ್ಕನ್ ಹೆರಾಲ್ಡ್' ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಿವೆ ಯುಪಿಎಸ್‌ಸಿ, ಕೆಪಿಎಸ್‌ಸಿ, ಬ್ಯಾಂಕಿಂಗ್, ರೈಲ್ವೆ, ಸಬ್ ಇನ್‌ಸ್ಪೆಕ್ಟರ್, ಪೊಲೀಸ್ ಕಾನ್‌ಸ್ಟೇಬಲ್, ಎಫ್‌ಡಿಎ.. ಹೀಗೆ ಎಲ್ಲಾ ಬಗೆಯ ಸ್ಪರ್ಧಾತ್ಮಕ ಪರೀಕ್ಷೆಗಳ ಓದಿಗೆ ನೆರವು ನೀಡುವ 'ಎಕ್ಸಾಂ ಮಾಸ್ಟರ್‌ಮೈಂಡ್' ಇ-ಪೇಪರ್ ಹೊರತರುತ್ತಿವೆ.

ಇಂಗ್ಲಿಷ್ ಮತ್ತು ಕನ್ನಡ ಎರಡೂ ಭಾಷೆಯಲ್ಲಿರುವ ಮತ್ತು ವಾರದ ಐದು ದಿನ ಲಭ್ಯವಿರುವ 'ಎಕ್ಸಾಂ ಮಾಸ್ಟರ್‌ಮೈಂಡ್' ಈ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲು ಸೂಕ್ತ ಅಧ್ಯಯನ ಸಾಮಗ್ರಿಯನ್ನು ಒಳಗೊಂಡಿದೆ. ಜನರಲ್ ಸ್ಟಡೀಸ್, ಸ್ಟ್ಯಾಟಿಕ್, ಕರೆಂಟ್ ಅಫೇರ್ಸ್, ರೀಸನಿಂಗ್ ಎಬಿಲಿಟಿ, ಇಂಗ್ಲಿಷ್ ಲ್ಯಾಂಗ್ವೇಜ್ ಆ್ಯಂಡ್ ವರ್ಬಲ್ ಎಬಿಲಿಟಿ, ಕ್ವಾಲಿಟೇಟಿವ್ ಆಪ್ಟಿಟ್ಯೂಡ್, ಪ್ರಬಂಧಗಳು, ಉಪಯುಕ್ತ ಸಲಹೆಗಳು ಮುಂತಾದವುಗಳ ಜೊತೆಗೆ ಮಾದರಿ ಪ್ರಶ್ನೋತ್ತರಗಳನ್ನು ಹಾಗೂ ಪೂರಕವಾದ ಆಡಿಯೊ ಮತ್ತು ವಿಡಿಯೊಗಳನ್ನು ನೀಡಲಿದೆ.

ಚಂದಾದಾರರಾಗಲು ಸಂಪರ್ಕಿಸಿ
ಎಕ್ಸಿಕ್ಯೂಟಿವ್ ಹೆಸರು: ಅರುಣ್ ಸ್ಟ್ಯಾನ್ಲಿ
ಮೊಬೈಲ್: 98454 42703
bit.ly/emmstudent

ನಾಲ್ವರು ಹಿರಿಯರಿಗೆ ಆಶ್ವಾಸನ ಪ್ರಶಸ್ತಿ

ಬೆಂಗಳೂರು: ಮಹಾನಗರದಲ್ಲಿ ಹಿರಿಯ ನಾಗರಿಕರ ಹಿತರಕ್ಷಣೆಗಾಗಿ ಸ್ಥಾಪಿತವಾಗಿರುವ 'ಆಶ್ವಾಸನ' ಸಂಸ್ಥೆಯು ನಾಲ್ವರು ಹಿರಿಯ ಮಹನೀಯರಿಗೆ ಪ್ರಶಸ್ತಿ ನೀಡಲು ನಿರ್ಧರಿಸಿದೆ.

'ಸುಗಮ ಸಂಗೀತ ಕ್ಷೇತ್ರದ ಸಾಧಕ ಹೊ.ನಾ. ರಾಘವೇಂದ್ರ ಗರ್ತಿಕೆರೆ, ಹಿಂದೂಸ್ತಾನಿ ಗಾಯಕ ಶಿವಮೊಗ್ಗದ ಎಸ್.ಎಲ್. ವೇಣುಗೋಪಾಲ, ಯಕ್ಷಗಾನ ವೇಷಧಾರಿ ಗೋಕರ್ಣದ ಅನಂತ ಹಾವಗೋಡಿ, ಇಡಗುಂಜಿಯ ರಥ ಶಿಲ್ಪಿ ಗಂಗಾಧರ ಆಚಾರ್ಯ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. 'ಅಕ್ಟೋಬರ್‌ನಲ್ಲಿ ಹಿರಿಯರ ದಿನದಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿ ಫಲಕ ಮತ್ತು ₹15 ಸಾವಿರ ನಗದು ನೀಡಿ ಮಹನೀಯರನ್ನು ಗೌರವಿಸಲಾಗುವುದು' ಎಂದು ಆಯ್ಕೆ ಸಮಿತಿಯ ಮುಖ್ಯಸ್ಥ ಜಿ.ಎಸ್. ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಘವೇಂದ್ರ ಗರ್ತಿಕೆರೆ

ಅನಂತ ಹಾವಗೋಡಿ



ವೇಣುಗೋಪಾಲ

ಗಂಗಾಧರ ಆಚಾರ್ಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಅವರಿಂದ
12ನೇ ಸೆಪ್ಟೆಂಬರ್ 2021, ಭಾನುವಾರ
ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ
ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಿಲಾನ್ಯಾಸ
ಅಧ್ಯಕ್ಷತೆ : ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಉದ್ಘಾಟನೆ

ಮಾರುತಿ ಮಂದಿರ ವಾರ್ಡ್-126ರಲ್ಲಿ
- ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಡಯಾಲಿಸಿಸ್ ಆಸ್ಪತ್ರೆ
- ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಉದ್ಯಾನವನ, ಸ್ಕೇಟಿಂಗ್ ಟ್ರ್ಯಾಕ್
- ಶಾಲಾ ಕಟ್ಟಡ

ಅಗ್ರಹಾರ ದಾಸರಹಳ್ಳಿ ವಾರ್ಡ್-105ರಲ್ಲಿ
- ನೂತನ ಪದವಿ ಪೂರ್ವ ಕಾಲೇಜು
- ಪ್ರಾಥಮಿಕ ಮತ್ತು ಪ್ರೌಢಶಾಲೆ
- ಅಗ್ರಹಾರ ದಾಸರಹಳ್ಳಿ ಕ್ರೀಡಾ ಸಂಕೀರ್ಣ

ಉದ್ಘಾಟನಾ ಕಾಮಗಾರಿಗಳ ಒಟ್ಟು ವೆಚ್ಚ ರೂ.25.00 ಕೋಟಿಗಳು

ಶಿಲಾನ್ಯಾಸ

ಡಾ. ರಾಜ್‌ಕುಮಾರ್ ವಾರ್ಡ್-106ರಲ್ಲಿ
- ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದ ನವೀಕರಣ ಕಾಮಗಾರಿ
- ಪೊಲೀಸ್ ಕಾಲೋನಿಯ ಶಾಲಾ ಸಂಕೀರ್ಣ

ನಾಯಂಡಹಳ್ಳಿ ವಾರ್ಡ್-131ರಲ್ಲಿ
- 150 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಪಂತರಪಾಳ್ಯ
- ವಾರ್ಡ್ ಕಚೇರಿ ಹಾಗೂ ಶಾಲಾ ಕಟ್ಟಡ

ನಾಗರಭಾವಿ ವಾರ್ಡ್-128ರಲ್ಲಿ
- ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಾಗರಭಾವಿ ಆರ್.ಕೆ. ಉರ್ದು ಶಾಲೆ,

ಶಿಲಾನ್ಯಾಸ ಕಾಮಗಾರಿಗಳ ಒಟ್ಟು ವೆಚ್ಚ ರೂ.61.50 ಕೋಟಿಗಳು



ಸಮಯ: ಬೆಳಗ್ಗೆ 11.00 ಗಂಟೆಗೆ ಸ್ಥಳ: ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ, ಜಿ.ಕೆ.ಡಬ್ಲ್ಯೂ ಲೇಔಟ್, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ, ಬೆಂಗಳೂರು

ದಿವ್ಯ ಸಾನ್ನಿಧ್ಯ

ಪರಮ ಪೂಜ್ಯ ಶ್ರೀ ಶ್ರೀ ಶ್ರೀ ನಿರಂಜನಾನಂದಪುರಿ ಸ್ವಾಮೀಜಿಗಳು
ಪೀಠಾಧ್ಯಕ್ಷರು,
ಶ್ರೀ ಕಾಗಿನೆಲೆ ಮಹಾಸಂಸ್ಥಾನ ಮಠ

ಪರಮ ಪೂಜ್ಯ ಶ್ರೀ ಶ್ರೀ ಶ್ರೀ ಈಶ್ವರಾನಂದಪುರಿ ಸ್ವಾಮೀಜಿಗಳು
ಪೀಠಾಧ್ಯಕ್ಷರು,
ಹೊಸದುರ್ಗ ಶಾಖಾ ಮಠ

ಮಾನ್ಯ ವಸತಿ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಕಾಮಗಾರಿ ಪರಿಶೀಲಿಸುತ್ತಿರುವುದು.

ಜ್ಯೋತಿ ಬೆಳಗಿಸುವವರು

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಶ್ರೀ ಎಂ. ರಾಜೀವ್ ಚಂದ್ರಶೇಖರ್
ಮಾನ್ಯ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ, ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ

ಡಾ || ಕೆ.ಸುಧಾಕರ್
ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು

ಶ್ರೀ ಬಿ.ಸಿ.ನಾಗೇಶ್
ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು

ಮುಖ್ಯ ಅತಿಥಿಗಳು

ಶ್ರೀ ಆರ್. ಅಶೋಕ – ಮಾನ್ಯ ಕಂದಾಯ ಸಚಿವರು
ಡಾ|| ಸಿ.ಎನ್. ಅಶ್ವತ್ಥ ನಾರಾಯಣ – ಮಾನ್ಯ ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಸಚಿವರು
ಶ್ರೀ ಬಿ.ಎ. ಬಸವರಾಜ – ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಎಸ್.ಟಿ. ಸೋಮಶೇಖರ್ – ಮಾನ್ಯ ಸಹಕಾರ ಸಚಿವರು
ಶ್ರೀ ಗೋಪಾಲಯ್ಯ ಕೆ. – ಮಾನ್ಯ ಅಬಕಾರಿ ಸಚಿವರು
ಶ್ರೀ ಎನ್. ಮುನಿರತ್ನ – ಮಾನ್ಯ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರು
ಶ್ರೀ ಎನ್. ನಾಗರಾಜು(ಎಂ.ಟಿ.ಬಿ) – ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರು
ಶ್ರೀ ಎಸ್.ಆರ್. ವಿಶ್ವನಾಥ್ – ಮಾನ್ಯ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ
ಶ್ರೀ ಎಂ. ಕೃಷ್ಣಪ್ಪ – ಮಾನ್ಯ ಅಧ್ಯಕ್ಷರು, ಒಕ್ಕಲಿಗರ ಅಭಿವೃದ್ಧಿ ನಿಗಮ ಹಾಗೂ ಶಾಸಕರು, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
ಶ್ರೀ ಎಲ್.ಎಸ್. ತೇಜಸ್ವಿ ಸೂರ್ಯ – ಮಾನ್ಯ ಸಂಸದರು (ಲೋಕಸಭೆ), ಬೆಂಗಳೂರು ದಕ್ಷಿಣ ಕ್ಷೇತ್ರ
ಶ್ರೀ ಕೆ.ಸಿ. ರಾಮಮೂರ್ತಿ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜೈರಾಮ್ ರಮೇಶ್ – ಮಾನ್ಯ ಸಂಸದರು (ರಾಜ್ಯಸಭೆ)
ಡಾ|| ಎಲ್. ಹನುಮಂತಯ್ಯ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಜಿ.ಸಿ. ಚಂದ್ರಶೇಖರ್ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ನಾರಾಯಣ ಕೊರಗಪ್ಪ – ಮಾನ್ಯ ಸಂಸದರು (ರಾಜ್ಯಸಭೆ)
ಶ್ರೀ ಬಿ.ಕೆ. ಹರಿಪ್ರಸಾದ್ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪುಟ್ಟಣ್ಣ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಕೆ. ಗೋವಿಂದರಾಜ್ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಪಿ.ಆರ್. ರಮೇಶ್ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಅ. ದೇವೇಗೌಡ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಹೆಚ್.ಎಂ. ರಮೇಶಗೌಡ – ಮಾನ್ಯ ಶಾಸಕರು (ವಿಧಾನ ಪರಿಷತ್)
ಶ್ರೀ ಮುನಿರಾಜು ಗೌಡ ಪಿ.ಎಂ.(ತುಳಸಿ) – ಮಾನ್ಯ ಶಾಸಕರು (ವಿಧಾನ ಪರಿಷತ್)

ನಗರದ ಎಲ್ಲಾ ಮಾನ್ಯ ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್ ಸದಸ್ಯರುಗಳಿಗೆ ಆದರದ ಸ್ವಾಗತ

"ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ".

ರಾಕೇಶ್ ಸಿಂಗ್, ಭಾ.ಆ.ಸೇ
ಆಡಳಿತಗಾರರು, ಬಿಬಿಎಂಪಿ

ಗೌರವ ಗುಪ್ತ, ಭಾ.ಆ.ಸೇ
ಮುಖ್ಯ ಆಯುಕ್ತರು, ಬಿಬಿಎಂಪಿ

ಬಾಗಿಲು ಹಾಕಿರುವ ಬಿದರಿ ಕಲೆ ತರಬೇತಿ ಕೇಂದ್ರ ● ಕಡತದಲ್ಲಿಯೇ ಉಳಿದ 'ಸೋಲಾರ್ ಕ್ಲಸ್ಟರ್' ಯೋಜನೆ

ಘೋಷಣೆಯಲ್ಲೇ ಉಳಿದ ಉದ್ಯೋಗ ಸೃಷ್ಟಿ ಯೋಜನೆಗಳು

● ನಾಗರಾಜ ಚಿನಗುಂಡಿ / ಬಿ.ಜಿ. ಪ್ರವೀಣಕುಮಾರ

ರಾಯಚೂರು: ಬೀದರ್, ಯಾದಗಿರಿ, ಕೊಪ್ಪಳ, ಕಲಬುರ್ಗಿ ಹಾಗೂ ರಾಯಚೂರು ಜಿಲ್ಲೆಗಳ ಅಭಿವೃದ್ಧಿಗಾಗಿ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ ಯೋಜನೆಗಳು ನನೆಗುದಿಗೆ ಬಿದ್ದಿವೆ.

ಬೀದರ್‌ನಲ್ಲಿ 'ಬಿದರಿ ಕಲೆಯ ಗ್ಯಾಲರಿ' ಸ್ಥಾಪಿಸಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಮೂರು ವರ್ಷಗಳ ಹಿಂದೆಯೇ ಭೂಮಿಕೆ ಸಿದ್ಧಪಡಿಸಲಾಗಿತ್ತು. ಇದಕ್ಕಾಗಿ ₹ 10 ಕೋಟಿ ಬಿಡುಗಡೆಯಾಗಿತ್ತು. ಆದರೆ, ಜಾಗದ ವಿವಾದ ಪರಿಹಾರವಾಗದ ಕಾರಣ ನನೆಗುದಿಗೆ ಬಿದ್ದಿದೆ.

ನೌಬಾದ್‌ನಲ್ಲಿ ಆರಂಭಿಸಿದ್ದ ಬಿದರಿ ಕಲೆ ತರಬೇತಿ ಕೇಂದ್ರವು ಬಾಗಿಲು ಮುಚ್ಚಿ 16 ವರ್ಷಗಳಾಗಿವೆ. ಬಿದರಿ ಕಲೆ ನಂಬಿಕೊಂಡಿರುವ ಕುಶಲಕರ್ಮಿಗಳ ಸಮಸ್ಯೆ ಆಲಿಸುವವರೇ ಇಲ್ಲದಂತಾಗಿದೆ.

ಜಗದೀಶ ಶೆಟ್ಟರ್ ಕೈಗಾರಿಕಾ ಸಚಿವರಾಗಿದ್ದಾಗ ಕೊಪ್ಪಳದಲ್ಲಿ ವರ್ಷದ ಹಿಂದೆ ಆಟಿಗೆ ಕ್ಲಸ್ಟರ್ ಸ್ಥಾಪನೆಗೆ ಚಾಲನೆ ನೀಡಿದ್ದರು. ಸುಮಾರು 25 ಸಾವಿರ ನೇರ ಉದ್ಯೋಗ ಸೃಷ್ಟಿಸುವುದಾಗಿಯೂ ಹೇಳಿದ್ದರು. ಆದರೆ, ಈ ಯೋಜನೆ ಇನ್ನೂ ಭೂಮಿ ಸಮತಟ್ಟು ಮಾಡುವ ಹಂತದಲ್ಲೇ ಇದೆ.

ಹೆಚ್ಚಾಗಿ ಬಿಸಿಲನ್ನೇ ಸಂಪನ್ಮೂಲ ಮಾಡಿಕೊಂಡು ಕಲಬುರ್ಗಿ ತಾಲ್ಲೂಕಿನ ಹೊನ್ನಕಿರಣಗಿ ಗ್ರಾಮದಲ್ಲಿ 'ಸೋಲಾರ ಪಾರ್ಕ್' ಸ್ಥಾಪಿಸುವ ಯೋಜನೆಯನ್ನು ರೂಪಿಸಲಾಗಿತ್ತು. ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಇದ್ದಾಗ 'ಸೋಲಾರ್ ಕ್ಲಸ್ಟರ್' ಯೋಜನೆ ಘೋಷಿಸಿದ್ದರು. ಈ ಯೋಜನೆ ಈಗಲೂ ಕಡತಗಳಲ್ಲೇ ಉಳಿದುಕೊಂಡಿದೆ.

ಕೇಂದ್ರ ಸರ್ಕಾರವು ರಾಷ್ಟ್ರೀಯ ಹೂಡಿಕೆ ಮತ್ತು ತಯಾರಿಕಾ ವಲಯ (ನಿಮ್ಝ್)ವನ್ನು ಕಲಬುರ್ಗಿ ಮತ್ತು ತುಮಕೂರು ಜಿಲ್ಲೆಯ ವಸಂತ ನರಸಾಪುರ ಏಕಕಾಲಕ್ಕೆ ಘೋಷಿಸಿತ್ತು. ತುಮಕೂರು ಜಿಲ್ಲೆಯ ಯೋಜನೆ ಕಾರ್ಯಗತಗೊಂಡಿದೆ. ಆದರೆ, ಕಲಬುರ್ಗಿ ಯೋಜನೆ ಟೇಕಾಫ್ ಆಗಲೇ ಇಲ್ಲ.

ಯಾದಗಿರಿಯಲ್ಲಿ 'ಫಾರ್ಮಾ ಪಾರ್ಕ್' ಸ್ಥಾಪಿಸುವ ಯೋಜನೆಯೂ ಕಾರ್ಯಗತಗೊಂಡಿಲ್ಲ. 'ಯಾದಗಿರಿಯಲ್ಲಿ ₹ 100 ಕೋಟಿ ವೆಚ್ಚದಲ್ಲಿ ಫಾರ್ಮಾ ಪಾರ್ಕ್ ಸ್ಥಾಪಿಸಲಾಗುವುದು. ಆದರೆ, ರಾಜ್ಯ ಸರ್ಕಾರವು ಮೂಲಸೌಕರ್ಯಗಳನ್ನು ಒದಗಿಸಬೇಕಿದೆ' ಎಂದು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಈಚೆಗೆ ಹೇಳಿಕೆ ನೀಡಿದ್ದಾರೆ.

ರಾಯಚೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪನೆ ಪ್ರಸ್ತಾವ ಏಳು ದಶಕದಿಂದ ಇದ್ದಲ್ಲೇ ಇದೆ. ಜವಾಹರಲಾಲ್ ನೆಹರೂ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಒಮ್ಮೆ ಚೆನ್ನೈನತ್ತ ಪ್ರಯಾಣಿಸುತ್ತಿದ್ದ ವಿಮಾನವು 1957 ಫೆ. 26ರಂದು ರಾಯಚೂರಿನ ಯರಮರಸ್ ಬಯಲು ಪ್ರದೇಶದಲ್ಲಿ ತುರ್ತು ಭೂಸ್ಪರ್ಶ ಮಾಡಿತ್ತು. ಅಂದಿನಿಂದಲೂ ವಿಮಾನ ನಿಲ್ದಾಣಕ್ಕಾಗಿ 402 ಎಕರೆ ಜಾಗ ಕಾದಿರಿಸಲಾಗಿದೆ.

ಕೊಪ್ಪಳದ ಆಟಿಕೆ ಕ್ಲಸ್ಟರ್, ಯಾದಗಿರಿ ಜಿಲ್ಲೆ ಕಡೇಚೂರಿನ ಫಾರ್ಮಾ ಪಾರ್ಕ್ ಆರಂಭವಾದರೆ ಇಲ್ಲಿನವರಿಗೆ ಉದ್ಯೋಗ ಸಿಗಲಿದೆ. ಈ ಬಗ್ಗೆ ಸಿ.ಎಂಗೆ ಮನವಿ ಸಲ್ಲಿಸುತ್ತೇವೆ
ಪ್ರಶಾಂತ ಮಾನಕರ, ಹೈ-ಕ ವಾಣಿಜ್ಯೋದ್ಯಮ ಸಂಸ್ಥೆಯ ಅಧ್ಯಕ್ಷ, ಕಲಬುರ್ಗಿ

ಕುಶಲಕರ್ಮಿಗಳ ಅಭಿವೃದ್ಧಿಗೆ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನ ಗೊಳಿಸುವ ಉದ್ದೇಶವಿದೆ ಎಂದು ಅಧಿಕಾರಿಗಳು ಹೇಳುತ್ತಲೇ ಇದ್ದಾರೆ. ಆದರೆ, ಕೆಲಸ ಆಗಿಲ್ಲ
ರಾಜಕುಮಾರ ನಾಗೇಶ್ವರ, ಬಿದರಿ ಕುಶಲಕರ್ಮಿ, ಬೀದರ್

ರಾಯಚೂರಿನಲ್ಲಿ ವಿಮಾನ ನಿಲ್ದಾಣ ಯಾವಾಗಲೋ ಆಗಬೇಕಿತ್ತು. ಸರ್ಕಾರಕ್ಕೆ ನಿರ್ಲಕ್ಷ್ಯ ಧೋರಣೆ; ಇಲ್ಲಿನ ರಾಜಕಾರಣಿಗಳಿಗೂ ಇಚ್ಛಾಶಕ್ತಿ ಇಲ್ಲ
–ಅಶೋಕಕುಮಾರ್ ಜೈನ್, ಸಾಮಾಜಿಕ ಕಾರ್ಯಕರ್ತ, ರಾಯಚೂರು



ಕೊಪ್ಪಳ ತಾಲ್ಲೂಕಿನ ಮುನಿರಾಬಾದ್ ಸಮೀಪದ ತುಂಗಭದ್ರಾ ಜಲಾಶಯದಲ್ಲಿ ಹೂಳು ತುಂಬಿರುವ ದೃಶ್ಯ –ಪ್ರಜಾವಾಣಿ ಚಿತ್ರ

ನವಲಿ ಜಲಾಶಯ: ಸಮೀಕ್ಷಾ ಕಾರ್ಯಕ್ಕೆ ತಡೆ

ಯೋಜನಾ ವರದಿಯೇ ಇಲ್ಲ

● ಸಿದ್ದನಗೌಡ ಪಾಟೀಲ

ಕೊಪ್ಪಳ: ಕೊಪ್ಪಳ, ರಾಯಚೂರು, ಅವಿಭಜಿತ ಬಳ್ಳಾರಿ ಜಿಲ್ಲೆಗಳ ಜೀವನಾಡಿಯಾದ ತುಂಗಭದ್ರಾ ಜಲಾಶಯ ನಿರ್ಮಾಣಗೊಂಡು ಏಳು ದಶಕ ಸಮೀಪಿಸುತ್ತಿದೆ. ಹೂಳು ತುಂಬಿಕೊಂಡಿರುವುದರಿಂದ ಕರ್ನಾಟಕದ ಪಾಲಿನ ಪೂರ್ತಿ ನೀರು ಲಭ್ಯವಾಗುತ್ತಿಲ್ಲ. ಕನಕಗಿರಿ ತಾಲ್ಲೂಕಿನ ನವಲಿ ಬಳಿ 35 ಟಿಎಂಸಿ ಅಡಿ ಸಾಮರ್ಥ್ಯದ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಸರ್ಕಾರ ಅನುಮೋದನೆ ನೀಡಿ ಹಲವು ವರ್ಷಗಳಾದರೂ ಯೋಜನಾ ವರದಿ ಇನ್ನೂ ಸಿದ್ಧಗೊಂಡಿಲ್ಲ.

ಈ ನಡುವೆ ಸುತ್ತಲಿನ ಗ್ರಾಮಸ್ಥರ ವಿರೋಧದಿಂದಾಗಿ ಯೋಜನೆಯ ಅನುಷ್ಠಾನ ಮತ್ತಷ್ಟು ವಿಳಂಬವಾಗಲಿದೆ ಎಂಬುದು ನೀರಾವರಿ ತಜ್ಞರ ಕಳವಳಕ್ಕೆ ಕಾರಣವಾಗಿದೆ.

135 ಟಿಎಂಸಿ ಅಡಿ ಸಾಮರ್ಥ್ಯದ ತುಂಗಭದ್ರಾ ಜಲಾಶಯದಲ್ಲಿ 35 ಟಿಎಂಸಿ ಅಡಿಗೂ ಹೆಚ್ಚು ಪ್ರಮಾಣದ ಹೂಳು ತುಂಬಿದೆ. ಇಷ್ಟೊಂದು ಪ್ರಮಾಣದ ಹೂಳು ತೆಗೆಯುವುದು ತುಂಬಾ ವೆಚ್ಚದಾಯಕ. ರಾಜ್ಯದ ಪಾಲಿನ 30 ಟಿಎಂಸಿ ಅಡಿ ನೀರು ಖೋತಾ ಆಗುತ್ತಿದೆ. ಅದಕ್ಕಾಗಿ ಸರ್ಕಾರ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಮುಂದಾಗಿದೆ.

15 ಗ್ರಾಮ ಮುಳುಗಡೆ: ಜಲಾಶಯ ನಿರ್ಮಾಣವಾಗುವುದರಿಂದ ಗುಡೂದೂರು, ಮಲ್ಲಾಪುರ, ಕರಡೋಣಿ, ಈಚನಾಳ, ಬುನ್ನಟ್ಟಿ, ಯತ್ನಟ್ಟಿ, ಗೊಲ್ಲರಹಟ್ಟಿ, ಪುರ, ಬುಕನಟ್ಟಿ, ಉಮಲೋಟಿ, ನೀರಲೂಟಿ, ಕಾಟಾಪುರ, ಮಲ್ಲಿಗೆವಾಡ, ಚಿಕ್ಕಖೇಡ, ಹಿರೇಖೇಡ ಸೇರಿದಂತೆ 15 ಗ್ರಾಮಗಳು ಮುಳುಗಡೆಯಾಗಲಿವೆ ಎಂದು ಅಂದಾಜಿಸಲಾಗಿದೆ. ವಿಸ್ತೃತ ಯೋಜನಾ ವರದಿಯ ನಂತರ ಗ್ರಾಮಗಳ ಮುಳುಗಡೆ ಬಗ್ಗೆ ಖಚಿತ ಮಾಹಿತಿ ದೊರೆಯಲಿದೆ.

ಏರುತ್ತಿರುವ ಯೋಜನಾ ವೆಚ್ಚ: ಜಲಾಶಯ ನಿರ್ಮಾಣಕ್ಕೆ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಕಳೆದ ಬಜೆಟ್‌ನಲ್ಲಿ ₹ 14.30 ಕೋಟಿ ಮೀಸಲಿರಿಸಿದ್ದು, ₹ 13.30 ಕೋಟಿ ಅನುದಾನ ಬಿಡುಗಡೆಯಾಗಿದೆ. ಸಿದ್ದರಾಮಯ್ಯ ಸರ್ಕಾರ ಇದ್ದಾಗ ಈ ಜಲಾಶಯದ ಯೋಜನಾ ವೆಚ್ಚ ₹ 5,800 ಕೋಟಿ ಎಂದು ಅಂದಾಜಿಸಲಾಗಿತ್ತು. ಈಗ ಯೋಜನಾ ವೆಚ್ಚ ₹12 ಸಾವಿರ ಕೋಟಿಗೆ ತಲುಪುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಮುಖ್ಯಾಂಶಗಳು
- ಯೋಜನೆ ವಿಳಂಬಕ್ಕೆ ರಾಜಕೀಯ ಇಚ್ಛಾಶಕ್ತಿ ಕೊರತೆ
- ಜಮೀನು, ಮನೆ ಕಳೆದು-ಕೊಳ್ಳಲಿರುವ ಗ್ರಾಮಸ್ಥರಿಂದ ವಿರೋಧ
- ಸಮೀಕ್ಷೆ ನಡೆಸದಂತೆ ನಿರಂತರ ಪ್ರತಿಭಟನೆ



ಸಮಾನಾಂತರ ಜಲಾಶಯ ಕಣ್ಣೊರೆಸುವ ತಂತ್ರ. ಮಸ್ಕಿ ಉಪ ಚುನಾವಣೆ ಗೆಲ್ಲಲು ಬಿಜೆಪಿ ಏನೇನೋ ಕಸರತ್ತು ಮಾಡಿತ್ತು. ಚುನಾವಣೆಯಲ್ಲಿ ಸೋತ ನಂತರ ಅಪಸ್ವರ ಎಬ್ಬಿಸುತ್ತಿದ್ದಾರೆ.
ಚಾಮರಸ ಮಾಲಿಪಾಟೀಲ, ಅಧ್ಯಕ್ಷ, ರಾಜ್ಯ ರೈತ ಸಂಘ

ನೀರಿನ ಸದ್ಬಳಕೆಗೆ ನವಲಿ ಜಲಾಶಯ ನಿರ್ಮಾಣಕ್ಕೆ ಸರ್ಕಾರ ಒಪ್ಪಿಗೆ ನೀಡಿದೆ. ಏನೇ ತಾಂತ್ರಿಕ ಮತ್ತು ಜನರ ಸಮಸ್ಯೆಗಳಿದ್ದರೂ ಅದನ್ನು ಸರ್ಕಾರದ ಗಮನಕ್ಕೆ ತಂದು ಸಮೀಕ್ಷೆ ಕಾರ್ಯ ನಡೆಸಲಾಗುವುದು
ಮಲ್ಲಿಕಾರ್ಜುನ ಗುಂಗೆ, ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ನೀರಾವರಿ ನಿಗಮ ನಿ.

ಕಣ್ಣಿಗೆ ಕಾಣದ 'ಕಲ್ಯಾಣ'

ಒಂದನೇ ಪುಟದಿಂದ

ಜನರ ಜೀವನಮಟ್ಟ ಅಳೆಯುವ ಹತ್ತು ಮಾನದಂಡ ಇಟ್ಟು ಕೊಂಡು ನೀತಿ ಆಯೋಗ ನಡೆಸಿದ 2021 ಸಾಲಿನ ಅಧ್ಯಯನದ ಪ್ರಕಾರ, ಬೆಂಗಳೂರು ನಗರ ಜಿಲ್ಲೆಯಲ್ಲಿ 'ಬಡವರ' ಸಂಖ್ಯೆ (Headcount Ratio) ಶೇ 1.9ರಷ್ಟಿದ್ದರೆ, ಯಾದಗಿರಿ ಜಿಲ್ಲೆಯಲ್ಲಿ ಅವರ ಪ್ರಮಾಣ ಶೇ 49ರಷ್ಟಿದೆ!

ಅಭಿವೃದ್ಧಿ ಆದ್ಯತಾ ವಲಯದ ನಿರ್ಲಕ್ಷ್ಯ: 'ಕೆಕೆಆರ್‌ಡಿಬಿಯ ಹೆಚ್ಚಿನ ಅನುದಾನ ರಸ್ತೆ ಮತ್ತು ಕಟ್ಟಡ ನಿರ್ಮಾಣಕ್ಕೇ ವ್ಯಯವಾಗುತ್ತಿದೆ. ಆರೋಗ್ಯ, ಶಿಕ್ಷಣ, ಉದ್ಯೋಗ ಸೃಜನೆಯಂತಹ ಮಾನವ ಸಂಪನ್ಮೂಲ ಅಭಿವೃದ್ಧಿಯ ಆದ್ಯತಾ ವಲಯವನ್ನು ನಿರ್ಲಕ್ಷಿಸಲಾಗುತ್ತಿದೆ. ಈ ಕಾರಣಕ್ಕಾಗಿಯೇ ಅಪೌಷ್ಟಿಕತೆ, ರಕ್ತ ಹೀನತೆ, ವಲಸೆ ಸಮಸ್ಯೆಗೆ ಮುಕ್ತಿ ದೊರೆತಿಲ್ಲ. ಕೆಕೆಆರ್‌ಡಿಬಿಗೆ 'ಮಿನಿ ಸರ್ಕಾರ'ದಂತೆ ಕೆಲಸ ಮಾಡುವ ಅಧಿಕಾರ ಇದ್ದರೂ ಅದನ್ನು ಮಾಡುತ್ತಿಲ್ಲ. ಮಾನವ ಸಂಪನ್ಮೂಲ ಸದ್ಬಳಕೆ ಮತ್ತು ಯುವಜನತೆಯಲ್ಲಿ ಕೌಶಲ ಹೆಚ್ಚಿಸುವ ಕಾರಣಕ್ಕಾಗಿ ರಾಜ್ಯ ಸರ್ಕಾರ ಸ್ಥಾಪಿಸಿರುವ ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಹಾಗೂ ಸಾಂಸ್ಕೃತಿಕ ಸಂಘವೂ, ತಾಲ್ಲೂಕುಗಳಲ್ಲಿ ಸಾಂಸ್ಕೃತಿಕ ಭವನಗಳನ್ನು ನಿರ್ಮಿಸುತ್ತಿರುವುದು ದುರಂತವೇ ಸರಿ' ಎನ್ನುತ್ತಾರೆ ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿಯ ಉಪಾಧ್ಯಕ್ಷ, ರಾಯಚೂರಿನ ರಜಾಕ್ ಉಸ್ತಾದ್.

ಪ್ರಕೃತಿ ಸಹಜ ಅತಿವೃಷ್ಟಿ-ಅನಾವೃಷ್ಟಿಯ ಹಾವಳಿ ಒಂದೆಡೆಯಾದರೆ, ರಾಜಕೀಯ ಪ್ರಾತಿನಿಧ್ಯದ ಕೃತಕ ಬರವನ್ನೂ ಈ ಸರ್ಕಾರ ಸೃಷ್ಟಿಸಿದೆ. ರಾಜ್ಯ ಸಂಪುಟದಲ್ಲಿ ಕಲಬುರ್ಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಿಗೆ ಪ್ರಾತಿನಿಧ್ಯವೇ ಇಲ್ಲ.

ಕಲ್ಯಾಣ ಕರ್ನಾಟಕ ನಾಮಕರಣ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಈ ಭಾಗಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವುದಾಗಿ ಘೋಷಿಸಿದ್ದರು. ಅದು ಇನ್ನೂ ಈಡೇರಿಲ್ಲ. ಕೆಎಟಿ ಕಲಬುರ್ಗಿ ಪೀಠ ಕಾರ್ಯಾರಂಭ ಮಾಡಿದೆ. ಆದರೆ, ಮಾಹಿತಿ ಆಯೋಗಕ್ಕೆ ಈಗಷ್ಟೇ ಜಾಗ ಗುರುತಿಸಲಾಗಿದೆ.

ಮೀಸಲಾತಿ, ನೌಕರಿ ಫಲ: ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಿದ್ದರ ಫಲ ಈ ಭಾಗದವರಿಗೆ ಸಿಗುತ್ತಿದೆ. ಬಡ ಪ್ರತಿಭಾವಂತ ವಿದ್ಯಾರ್ಥಿಗಳೂ ವೈದ್ಯಕೀಯ ಶಿಕ್ಷಣ ಪಡೆಯುವಂತಹ ಅವಕಾಶದ ಹೆಬ್ಬಾಗಿಲು ತೆರೆದಿದೆ. ಈ ವರೆಗೆ 30 ಸಾವಿರದಷ್ಟು ಜನರಿಗೆ ಸರ್ಕಾರಿ ನೌಕರಿ ಸಿಕ್ಕಿದೆ.

ಜನಸಂಖ್ಯೆಯಲ್ಲಿನ ಬಡವರ ಶೇಕಡಾವಾರು ಪ್ರಮಾಣ

ವಸತಿ ರಹಿತರು, ಶೌಚಾಲಯ–ಅಡುಗೆ ಅನಿಲ ಸೌಲಭ್ಯ ಹೊಂದಿರದವರು, ಶಾಲೆಯಿಂದ ಹೊರಗುಳಿದ ಮಕ್ಕಳು, ಸಾಕ್ಷರತೆ, ಅಪೌಷ್ಟಿಕತೆ, ತಾಯಿ–ಶಿಶು ಮರಣ ಪ್ರಮಾಣ ಹೀಗೆ ಬಹು ಆಯಾಮಗಳನ್ನು ಇಟ್ಟುಕೊಂಡು ನೀತಿ ಆಯೋಗ ನಡೆಸಿದ ಸಮೀಕ್ಷೆಯ 2021ರ ವರದಿಯಲ್ಲಿ ಕಂಡು ಬಂದ ಅಂಶಗಳಿವು. ಜನಸಂಖ್ಯೆಯಲ್ಲಿನ ಬಡವರ ಶೇಕಡಾವಾರು ಪ್ರಮಾಣ (Headcount Ratio)



ಮಕ್ಕಳ ಆರೋಗ್ಯ ಸ್ಥಿತಿಗತಿ (ಶೇಕಡಾವಾರು ಪ್ರಮಾಣ)

	ರಾಜ್ಯ	ಕಲ್ಯಾಣ ಕರ್ನಾಟಕ
ಬೆಳವಣಿಗೆ ಕುಂಠಿತಗೊಂಡ ಮಕ್ಕಳು	35.4	36.4
ಅಪೌಷ್ಟಿಕತೆ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳು	19.5	26.1
ತೀವ್ರತರಹದ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳು	8.4	10.5
ಕಡಿಮೆ ತೂಕದ ಮಕ್ಕಳು	32.9	35.2
ಹೆಚ್ಚು ತೂಕದ ಮಕ್ಕಳು	3.2	2.6

(ಆಧಾರ: ಆರೋಗ್ಯ ಇಲಾಖೆ)

ಹೊಸ ಸಮೀಕ್ಷೆ ನಡೆಯಲಿ

ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಡಾ.ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿ ನೀಡಿದ್ದ ವರದಿಯ ಮಾನದಂಡವನ್ನೇ 'ಕೆಕೆಆರ್‌ಡಿಬಿ'ಯ ಅನುದಾನ ಬಳಕೆಗೆ ಅನುಸರಿಸಲಾಗುತ್ತಿದೆ. 2000ನೇ ಇಸ್ವಿಯಲ್ಲಿ ರಚನೆಯಾಗಿದ್ದ ಈ ಸಮಿತಿ 2002ರಲ್ಲಿ ವರದಿ ನೀಡಿತ್ತು. ಎರಡು ದಶಕಗಳಲ್ಲಿ ಸಾಕಷ್ಟು ಬದಲಾವಣೆ ಆಗಿದೆ.

'ನಂಜುಂಡಪ್ಪ ವರದಿ ಬಂದಾಗ ಗಂಗಾವತಿ ತಾಲ್ಲೂಕು ಒಂದೇ ಇತ್ತು. ಅದು ಹಿಂದುಳಿದ ತಾಲ್ಲೂಕು ಪಟ್ಟಿಯಲ್ಲಿತ್ತು. ಈಗ ಅಲ್ಲಿ ಕನಕಗಿರಿ, ಕಾರಟಗಿ ಎರಡು ತಾಲ್ಲೂಕು ಆಗಿವೆ. ಗಂಗಾವತಿ ಪಟ್ಟಣ ಮುಂದುವರೆದಿರಬಹುದು. ಆದರೆ, ಗ್ರಾಮೀಣ ಪ್ರದೇಶದ ಸ್ಥಿತಿ ಇನ್ನೂ ಹಾಗೇ ಇದೆ. ಮೂರೂ ತಾಲ್ಲೂಕು ಸೇರಿ ಕೊಡುತ್ತಿರುವ ಅನುದಾನ ಕಡಿಮೆ ಇದೆ. ಅತೀ ಹಿಂದುಳಿದ ತಾಲ್ಲೂಕಿಗೆ ಸಿಗುತ್ತಿರುವ ಅನುದಾನ ಇದಕ್ಕೆ ಮೂರುಪಟ್ಟು ಹೆಚ್ಚಿಗೆ ಇದೆ. ಅಂದು ಅತಿ ಹಿಂದುಳಿದ ತಾಲ್ಲೂಕುಗಳು ಈಗ ನೀರಾವರಿ–ಕೈಗಾರಿಕಾ ಅಭಿವೃದ್ಧಿಯ ಕಾರಣ ಮುಂದುವರೆದಿವೆ. ಆದರೂ, ಆ ತಾಲ್ಲೂಕುಗಳಿಗೆ ಹೆಚ್ಚಿನ ಅನುದಾನ ಹೋಗುತ್ತಿದೆ. ಇಂತಹ ತಾರತಮ್ಯ ಹೋಗಲಾಡಿಸಲು ರಾಜ್ಯ ಸರ್ಕಾರ ಇನ್ನೊಮ್ಮೆ ಆರ್ಥಿಕ ಸಮೀಕ್ಷೆ ನಡೆಸಿ ಹೊಸ ಮಾನದಂಡ ಅಳವಡಿಸಿಕೊಳ್ಳಬೇಕು' ಎನ್ನುವುದು ರಜಾಕ್ ಉಸ್ತಾದ್ ಅವರ ಒತ್ತಾಯ.

ನಂಜುಂಡಪ್ಪ ವರದಿ ಅನುಷ್ಠಾನ ಮೇಲ್ವಿಚಾರಣಾ ಉನ್ನತಾಧಿಕಾರ ಸಮಿತಿಯ ಅಧ್ಯಕ್ಷರೂ ಆಗಿದ್ದ ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ. ನಮೋಶಿ, 'ನಾನು ಅಧ್ಯಕ್ಷನಾಗಿದ್ದಾಗಲೇ ಪುನರ್ ಸಮೀಕ್ಷೆ ನಡೆಸಬೇಕು ಎಂಬ ಚರ್ಚೆ ನಡೆದಿತ್ತು. ನಮ್ಮ ಸರ್ಕಾರ ಹೋದ ನಂತರ ಅದು ಅರ್ಧಕ್ಕೆ ನಿಂತಿತು. ಹೊಸ ಸಮೀಕ್ಷೆ ನಡೆಯಬೇಕು' ಎನ್ನುತ್ತಾರೆ.

ತಲಾ ಆದಾಯ

ವಿಭಾಗಾವಾರು ತಲಾ ಆದಾಯ	
ಬೆಂಗಳೂರು ವಿಭಾಗ	₹2,74,413
ಮೈಸೂರು	₹1,88,472
ಬೆಳಗಾವಿ	₹1,19,752
ಕಲಬುರ್ಗಿ	₹1,08,118
ಜಿಲ್ಲಾವಾರು	
ಬಳ್ಳಾರಿ	₹1,50,319
ಯಾದಗಿರಿ	₹1,03,677
ಬೀದರ್	₹98,754
ಕೊಪ್ಪಳ	₹96,036
ರಾಯಚೂರು	₹95,451
ಕಲಬುರ್ಗಿ	₹92,298
(*ರಾಜ್ಯದ ಸರಾಸರಿ ₹2,23,175)	

ಆಧಾರ: ಕರ್ನಾಟಕ ಆರ್ಥಿಕ ಸಮೀಕ್ಷೆ–2020–21)

ಅನುದಾನ ಕೊಡಿ ಸ್ವಾಮಿ...

ಕಲ್ಯಾಣ ಕರ್ನಾಟಕ ಪ್ರದೇಶವನ್ನು 2030ರ ವೇಳೆಗೆ ಸಮಗ್ರ ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ಗುರಿ ಹಾಕಿಕೊಂಡಿದ್ದು, ಇದಕ್ಕಾಗಿ ₹ 1,500 ಕೋಟಿಗಳಿಂದ ₹ 3 ಸಾವಿರ ಕೋಟಿ ಮೊತ್ತದ ವಿಶೇಷ ಅನುದಾನವನ್ನು ಐದು ವರ್ಷಗಳವರೆಗೆ ಕೊಡಿ ಎಂದು ಪ್ರಸಕ್ತ ವರ್ಷದ ಫೆಬ್ರುವರಿ 15ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಪತ್ರ ಬರೆದಿದ್ದರು.

'ನಂಜುಂಡಪ್ಪ ಸಮಿತಿ ಗುರುತಿಸಿದ್ದ ರಾಜ್ಯದ ಹಿಂದುಳಿದ 114 ತಾಲ್ಲೂಕುಗಳ ಪೈಕಿ 29 ತಾಲ್ಲೂಕುಗಳು ಈ ಭಾಗದಲ್ಲಿವೆ. ತೆಲಂಗಾಣ 371 (ಡಿ) ಮತ್ತು ವಿದರ್ಭ 371 (2) ತಿದ್ದುಪಡಿಯನ್ನು ಮಾದರಿಯಾಗಿಟ್ಟುಕೊಂಡೇ 371 (ಜೆ) ತಿದ್ದುಪಡಿ ತಂದು ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿದೆ. ಇದು ಸತತ ಬರ ಪೀಡಿತ ಪ್ರದೇಶ. ಇಲ್ಲಿಯ ಮಾನವ ಸಂಪನ್ಮೂಲ ಅಭಿವೃದ್ಧಿ ಅತ್ಯಂತ ಕೆಳಮಟ್ಟದಲ್ಲಿದೆ. ಈ ಭಾಗದ ಜನರ ಜೀವನ ಮಟ್ಟ ಸುಧಾರಣೆ ಹಾಗೂ ಸಬಲೀಕರಣಕ್ಕಾಗಿ ಕೇಂದ್ರ ಸರ್ಕಾರದ ವಿಶೇಷ ಅನುದಾನದ ಅವಶ್ಯಕತೆ ಇದೆ' ಎಂದು ಉಲ್ಲೇಖಿಸಿದ್ದ ಅವರು, ಈ ಭಾಗ ಹಿಂದುಳಿದಿರುವಿಕೆ ಬಗ್ಗೆ ನೀತಿ ಆಯೋಗದ ನೀಡಿದ್ದ ವರದಿಯನ್ನೇ ಈ ಪತ್ರದೊಂದಿಗೆ ಲಗತ್ತಿಸಿದ್ದರು. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ' ಮಾಡಲು ವಿಶೇಷ ಅನುದಾನ ಕೊಡಿ ಎಂದು ಕೇಳಿದ್ದರು. ಆದರೆ, ಕೇಂದ್ರ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎನ್ನುತ್ತವೆ ರಾಜ್ಯ ಸರ್ಕಾರದ ಮೂಲಗಳು.

ಯಾರು ಏನಂತಾರೆ?

ಬಿಜೆಪಿ ಸರ್ಕಾರದಿಂದ ಅನ್ಯಾಯ
ಬಿಜೆಪಿಯು ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಕಲ್ಯಾಣ ಕರ್ನಾಟಕಕ್ಕೆ ನಿರಂತರ ಅನ್ಯಾಯವಾಗುತ್ತಿದೆ. ಹೊಸ ಯೋಜನೆ ನೀಡುವುದು ಹೋಗಲಿ, ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ನೀಡಿದ ಯೋಜನೆಗಳನ್ನೂ ಕಿತ್ತುಕೊಳ್ಳಲಾಗಿದೆ.
–ಪ್ರಿಯಾಂಕ್ ಖರ್ಗೆ, ಕೆಪಿಸಿಸಿ ವಕ್ತಾರ, ಚಿತ್ತಾಪುರ ಶಾಸಕ

ಹಳೇ ಅಂಕಿ–ಅಂಶದಲ್ಲೇ ಅನುದಾನ
ನಂಜುಂಡಪ್ಪ ವರದಿ ಭಗವದ್ಗೀತೆ ಇದ್ದಂತೆ. ಆದರೆ, 2002ರಲ್ಲಿಯ ಅಂಕಿಅಂಶ ಇಟ್ಟುಕೊಂಡು ಈಗಲೂ ಅನುದಾನ ಹಂಚಿಕೆ ಎಷ್ಟು ಸರಿ? ಅಪೌಷ್ಟಿಕತೆಯ ಪ್ರಮಾಣ ಆಗಿನದಕ್ಕಿಂತ ಈಗ ಹೆಚ್ಚಾಗಿದೆ. ಕಲ್ಯಾಣ ಕರ್ನಾಟಕಕ್ಕೇ ಸೀಮಿತವಾಗಿ ಗ್ರಾಮಗಳನ್ನು ಘಟಕವಾಗಿ ಇಟ್ಟುಕೊಂಡು ಹೊಸದಾಗಿ ಅಧ್ಯಯನ ನಡೆಸಿ ಅದರ ಆಧಾರದ ಮೇಲೆ ಅನುದಾನ ಹಂಚಿಕೆಯಾಗಬೇಕು
–ಪ್ರೊ.ಸಂಗೀತಾ ಕಟ್ಟಿಮನಿ, ಅರ್ಥಶಾಸ್ತ್ರ ಉಪನ್ಯಾಸಕಿ

₹100 ಕೋಟಿ ಬಿಡುಗಡೆ
ಸಂಘಕ್ಕೆ ರಾಜ್ಯ ಸರ್ಕಾರ ₹ 300 ಕೋಟಿ ಘೋಷಿಸಿದ್ದು, ಈವರೆಗೆ ₹ 100 ಕೋಟಿ ಬಿಡುಗಡೆ ಮಾಡಿದೆ. ಯುಪಿಎಸ್‌ಸಿ ಪರೀಕ್ಷೆ, ಬ್ಯಾಂಕಿಂಗ್ ಪರೀಕ್ಷೆಗಳಿಗೆ ತರಬೇತಿ ನೀಡಲಾಗುತ್ತಿದೆ.80 ಕಡೆಗಳಲ್ಲಿ ತಲಾ ಗರಿಷ್ಠ ₹ 22 ಲಕ್ಷ ವೆಚ್ಚದಲ್ಲಿ ಸಾಂಸ್ಕೃತಿಕ ಭವನವನ್ನು ನಿರ್ಮಿಸಲಾಗುತ್ತಿದೆ
ಬಸವರಾಜ ಪಾಟೀಲ ಸೇಡಂ, ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ, ಸಾಂಸ್ಕೃತಿಕ ಸಂಘದ ಅಧ್ಯಕ್ಷ

ವಿ.ವಿ.ಗಳ ಹುದ್ದೆ ಭರ್ತಿಗೆ ನಿರ್ಲಕ್ಷ್ಯ

● ಮನೋಜಕುಮಾರ್ ಗುದ್ದಿ

ಕಲಬುರ್ಗಿ: ರಾಜ್ಯ ಸರ್ಕಾರ ಈ ಭಾಗದ ಉನ್ನತ ಶೈಕ್ಷಣಿಕ ಸಂಸ್ಥೆಗಳ ಬೆಳವಣಿಗೆಗೆ ಒತ್ತು ನೀಡುತ್ತಿಲ್ಲ ಎಂಬುದನ್ನು ಗುಲಬರ್ಗಾ ವಿಶ್ವವಿದ್ಯಾಲಯ, ಹಂಪಿ ಕನ್ನಡ ವಿ.ವಿ., ಇನ್ನಷ್ಟೇ ಆರಂಭವಾಗಬೇಕಿರುವ ರಾಯಚೂರು ವಿ.ವಿ. ಯನ್ನು ನೋಡಿದಾಗ ಸ್ಪಷ್ಟವಾಗಿ ಗೋಚರಿಸುತ್ತದೆ.

ಈ ಭಾಗದಲ್ಲಿ ಹಳೆಯದಾದ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಬಹಳ ವರ್ಷಗಳಿಂದ ಬೋಧಕರು ಹಾಗೂ ಬೋಧಕೇತರ ಸಿಬ್ಬಂದಿಯ ನೇಮಕಾತಿ ನಡೆದಿಲ್ಲ. ಪ್ರೊ.ಎಸ್.ಆರ್. ನಿರಂಜನ ಅವರು ಕುಲಪತಿಯಾಗಿದ್ದ ಸಂದರ್ಭದಲ್ಲಿ 169 ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಉನ್ನತ ಶಿಕ್ಷಣ ಇಲಾಖೆ ಅಧಿಸೂಚನೆ ಹೊರಡಿಸಿತ್ತು. ಆಯ್ಕೆ ಪ್ರಕ್ರಿಯೆ ನಡೆಸಬೇಕು ಎನ್ನುವಷ್ಟರಲ್ಲಿ ವಿಧಾನಸಭೆ ಚುನಾವಣೆ, ಲೋಕಸಭೆ ಚುನಾವಣೆಗಳು ಬಂದಿದ್ದರಿಂದ ಮುಂದಕ್ಕೆ ಹಾಕಲಾಯಿತು.

ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಅವರು ಈಚೆಗೆ ವಿ.ವಿ.ಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ವಿಷಯ ಪ್ರಸ್ತಾಪಿಸಿದ ಕುಲಪತಿ ಪ್ರೊ. ದಯಾನಂದ ಅಗಸರ ಅವರಿಗೆ ಹುದ್ದೆ ಭರ್ತಿಯ ಬಗ್ಗೆ ಯಾವ ಭರವಸೆಯೂ ಸಿಗಲಿಲ್ಲ. ಬದಲಾಗಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳಿ ಎಂದು ಸಚಿವರು ಸಲಹೆ ನೀಡಿದರು!

ರಾಯಚೂರು ವಿಶ್ವವಿದ್ಯಾಲಯ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಆರಂಭವಾಗಲು ಸಿದ್ಧತೆ ನಡೆಸಿದೆ. ಆದರೆ, ಸ್ವಂತ ಕಟ್ಟಡವಿಲ್ಲ. ಬೋಧನಾ ಕೊಠಡಿಗಳು, ವಸತಿ ನಿಲಯ, ಸಿಬ್ಬಂದಿ ವಸತಿ ಗೃಹಗಳ ನಿರ್ಮಾಣ ಇನ್ನೂ ಆರಂಭವಾಗಿಲ್ಲ. ಹೀಗಾಗಿ ಬೇರೊಂದು ಕಟ್ಟಡದಲ್ಲಿ ತಾತ್ಕಾಲಿಕವಾಗಿ ತರಗತಿ ನಡೆಸಬೇಕಿದೆ.

ಐಐಐಟಿಗೆ ಶಾಶ್ವತ ನೆಲೆಯಿಲ್ಲ: ರಾಯಚೂರಿಗೆ ಮಂಜೂರಾಗಿರುವ ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ (ಐಐಐಟಿ)ಯು ಇನ್ನೂ ಹೈದರಾಬಾದ್ ಐಐಟಿ ಕಾಲೇಜಿನಲ್ಲಿ ಉಳಿದಿದೆ. ಎರಡು ವರ್ಷಗಳಿಂದ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸಲಾಗಿದ್ದು, ಇದುವರೆಗೂ ಆನ್‌ಲೈನ್ ತರಗತಿಗಳು ನಡೆಯುತ್ತಿವೆ.

ತಾತ್ಕಾಲಿಕ ನೆಲೆಯಾಗಿ ರಾಯಚೂರಿನ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್‌ನಲ್ಲಿ ಕೆಲವು ಕಟ್ಟಡಗಳನ್ನು ಮೀಸಲಿಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಅನುದಾನದಲ್ಲಿ ತಾತ್ಕಾಲಿಕ ಕ್ಯಾಂಪಸ್‌ನಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ. ರಾಯಚೂರು ಹೊರವಲಯ ಸಿಂಗನೋಡಿ ಗ್ರಾಮದ ಬಳಿ 65 ಎಕರೆ ಭೂಮಿಯನ್ನು ಐಐಐಟಿ ಶಾಶ್ವತ ಕ್ಯಾಂಪಸ್‌ಗಾಗಿ ಮೀಸಲಿರಿಸಲಾಗಿದೆ.

ವಿ.ವಿಯಲ್ಲಿ ಖಾಲಿ ಹುದ್ದೆಗಳ ಭರ್ತಿಗೆ ಶೀಘ್ರ ಅನುಮೋದನೆ ನೀಡಬೇಕು. ಇಲ್ಲದಿದ್ದರೆ ನ್ಯಾಕ್ ಸಮಿತಿಯಲ್ಲಿ ಉತ್ತಮ ಗ್ರೇಡ್ ಸಿಗುವುದಿಲ್ಲ
ಡಾ.ದಯಾನಂದ ಅಗಸರ ಗುಲಬರ್ಗಾ ವಿ.ವಿ. ಕುಲಪತಿ

ರಾಯಚೂರು ವಿ.ವಿ.ಗೆ ಸಿಬ್ಬಂದಿ ನೇಮಕಾತಿಗೆ ಉನ್ನತ ಶಿಕ್ಷಣ ಇಲಾಖೆ ಅನುಮೋದನೆ ನೀಡಬೇಕು. ಕೆಕೆಆರ್‌ಡಿಬಿ ₹ 30 ಕೋಟಿ ಒದಗಿಸಿದರೆ ಕಟ್ಟಡ ಶುರು ಮಾಡಬಹುದು
ಡಾ. ಹರೀಶ್ ರಾಮಸ್ವಾಮಿ ರಾಯಚೂರು ವಿ.ವಿ. ಕುಲಪತಿ

ವಿದ್ಯುತ್, ರಸ್ತೆ ಹಾಗೂ ನೀರಿನ ಸಂಪರ್ಕ ಕಲ್ಪಿಸಿದ ಬಳಿಕವೇ ಕೇಂದ್ರದಿಂದ ಅನುದಾನ ದೊರೆಯಲಿದೆ. ಇದುವರೆಗೂ ನೂತನ ಕ್ಯಾಂಪಸ್ ಅಭಿವೃದ್ಧಿ ಕಾಮಗಾರಿ ಆರಂಭವಾಗಿಲ್ಲ.

ವಿಜಯನಗರ ಜಿಲ್ಲೆ ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯ 25 ವರ್ಷ ಪೂರೈಸಿದೆ. ಆದರೆ, ಆರ್ಥಿಕ ಮುಗ್ಗಟ್ಟಿನಿಂದ ರಚನಾತ್ಮಕ ಕೆಲಸ ನಡೆಯುತ್ತಿಲ್ಲ.

ವಿಶ್ವವಿದ್ಯಾಲಯಕ್ಕೆ ಪ್ರತಿವರ್ಷ ಸರಾಸರಿ ₹ 5 ಕೋಟಿ ಅಭಿವೃದ್ಧಿ ಅನುದಾನ ಬರುತ್ತದೆ. ಆದರೆ, ಅದು ಸಿಬ್ಬಂದಿ ವೇತನ ಪಾವತಿಗಷ್ಟೇ ಸೀಮಿತವಾಗಿದೆ. ಕೋವಿಡ್ ಲಾಕ್‌ಡೌನ್ ನಂತರ ಪರಿಸ್ಥಿತಿ ಹದಗೆಟ್ಟಿದೆ. ಕೋವಿಡ್ ನೆಪದಲ್ಲಿ ಅನುದಾನಕ್ಕೆ ಕತ್ತರಿ ಬಿದ್ದಿದ್ದು, ಸಕಾಲಕ್ಕೆ ವಿದ್ಯುತ್ ಬಿಲ್ ಭರಿಸಲು ಕೂಡ ಸಾಧ್ಯವಾಗುತ್ತಿಲ್ಲ.

ನಾಡಿನ ಏಕೈಕ ಭಾಷಾ ವಿಶ್ವವಿದ್ಯಾಲಯಕ್ಕೆ ಸರ್ಕಾರ ಈ ವರ್ಷದ ಆರಂಭದಲ್ಲಿ ₹ 3.25 ಕೋಟಿ ಅನುದಾನ ಬಿಡುಗಡೆ ಮಾಡಿತು. ಅದು ಕಾಯಂ ನೌಕರರು, ಗುತ್ತಿಗೆ ಆಧಾರಿತ ನೌಕರರ ವೇತನ ಭರಿಸಲು ಖರ್ಚಾಗಿದೆ. ಅನುದಾನ ಕಡಿತದಿಂದ ವಿಶ್ವವಿದ್ಯಾಲಯ ಆರ್ಥಿಕ ಕೊರತೆ ಎದುರಿಸುತ್ತಿದೆ. ವಿವಿಧ ವಿಭಾಗಗಳಲ್ಲಿ ಪ್ರಾಧ್ಯಾಪಕರು ನಿವೃತ್ತರಾಗಿದ್ದಾರೆ.

–ಪೂರಕ ಮಾಹಿತಿ: ಶಶಿಕಾಂತ ಎಸ್. ಶೆಂಬೆಳ್ಳಿ, ಸತೀಶ್ ಬಿ.

ಅನುಭವ ಮಂಟಪ: ₹200 ಕೋಟಿ ಬಂದರೂ ಆರಂಭವಾಗದ ಕಾಮಗಾರಿ

● ಚಂದ್ರಕಾಂತ ಮಸಾನಿ

ಬೀದರ್: ಬಸವಕಲ್ಯಾಣದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅನುಭವ ಮಂಟಪವು ರಾಜಕೀಯ ಸುಳಿಯಲ್ಲಿ ಸಿಲುಕಿದೆ. ಈ ವರ್ಷವೂ ಕಾಮಗಾರಿ ಆರಂಭವಾಗುವ ಲಕ್ಷಣಗಳು ಕಾಣುತ್ತಿಲ್ಲ. ಕಾರಣ ಭೂಸ್ವಾಧೀನ ಪ್ರಕ್ರಿಯೆಯೇ ಪೂರ್ಣಗೊಂಡಿಲ್ಲ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಚಿಸಿದ ಗೊ.ರು.ಚನ್ನಬಸಪ್ಪ ನೇತೃತ್ವದ ತಜ್ಞರ ಸಮಿತಿ ಸರ್ಕಾರಕ್ಕೆ ವರದಿ ಸಲ್ಲಿಸಿ ₹650 ಕೋಟಿ ಒದಗಿಸುವಂತೆ ಕೋರಿತ್ತು. ಚುನಾವಣೆ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಬಸವಕಲ್ಯಾಣದಲ್ಲಿ ಅನುಭವ ಮಂಟಪ ನಿರ್ಮಾಣ ಮಾಡುವ ಭರವಸೆ ನೀಡಿದ್ದರು.

2021ರ ಜನವರಿ 6ರಂದು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನೂತನ ಅನುಭವ ಮಂಟಪಕ್ಕೆ ಶಂಕುಸ್ಥಾಪನೆ ನೆರವೇರಿಸಿ ಎರಡು ವರ್ಷಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಂದ ಲೋಕಾರ್ಪಣೆ ಮಾಡಿಸಲಾಗುವುದು ಎಂದಿದ್ದರು. ಈ ವರೆಗೆ ₹ 200 ಕೋಟಿ ಬಿಡುಗಡೆಯಾದರೂ ಕಾಮಗಾರಿ ಆರಂಭವಾಗಿಲ್ಲ.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲೇ ಅನುಭವ ಮಂಟಪ ನಿರ್ಮಾಣ ಯೋಜನೆ ಘೋಷಣೆಯಾಗಿದೆ. ಬಸವಕಲ್ಯಾಣ ಉಪ ಚುನಾವಣೆ ಪೂರ್ವದಲ್ಲಿ ಯಡಿಯೂರಪ್ಪ ಅವರು ತಕ್ಷಣ ಅನುಭವ ಮಂಟಪ ನಿರ್ಮಾಣ ಮಾಡುತ್ತೇವೆ ಎಂದು ವಾಗ್ದಾನ ಮಾಡಿದ್ದರು. ಅನುಭವ ಮಂಟಪಕ್ಕೆ ಒಟ್ಟು 100 ಎಕರೆ ಭೂಮಿ ಬೇಕು. 69 ಎಕರೆ ಜಮೀನು ಭೂಸ್ವಾಧೀನ ಮಾಡಿಕೊಳ್ಳಬೇಕಾಗಿದೆ. ಸರ್ಕಾರ ತಕ್ಷಣ ರೈತರಿಂದ ಜಮೀನು ಖರೀದಿಸಬೇಕು ಹಾಗೂ ಕಟ್ಟಡದ ನಿರ್ಮಾಣ ಕಾಮಗಾರಿ ಆರಂಭಿಸಬೇಕು' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಅಖಿಲ ಭಾರತ ವೀರಶೈವ ಮಹಾಸಭಾ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ಒತ್ತಾಯಿಸುತ್ತಾರೆ.

ಪ್ರಸ್ತುತ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಬಳಿ 20 ಎಕರೆ ಹಾಗೂ ದಾನವಾಗಿ ಬಂದಿರುವ 11 ಎಕರೆ ಸೇರಿ 31 ಎಕರೆ ಭೂಮಿ ಇದೆ. ಇನ್ನುಳಿದ 69 ಎಕರೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಬೇಕಿದೆ.

ಜಿಲ್ಲಾಡಳಿತ ಭೂ ಮಾಲೀಕರನ್ನು ಕರೆಯಿಸಿ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನ ನಡೆಸಿದೆ. ಪ್ರತಿ ಎಕರೆಗೆ ₹ 25 ಲಕ್ಷ ಕೊಡಬೇಕು ಎಂದು ರೈತರು ಕೇಳುತ್ತಿದ್ದಾರೆ. ಯಾವುದೂ ಅಂತಿಮವಾಗಿಲ್ಲ.

ಅನುಭವ ಮಂಟಪ ಟ್ರಸ್ಟ್‌ನವರು ಒಂದು ಜಾಗ ಹೇಳಿದರೆ, ಟ್ರಸ್ಟ್‌ನಲ್ಲಿ ಇಲ್ಲದವರು ಬೇರೊಂದು ಜಾಗದಲ್ಲಿ ಅನುಭವ ಮಂಟಪ ನಿರ್ಮಾಣವಾಗಬೇಕು ಎಂದು ಒತ್ತಾಯಿಸುತ್ತಾರೆ. ಮೂಲ ಅನುಭವ ಮಂಟಪದ ಸಂಶೋಧನೆ ನಡೆಸಿ, ನಂತರ ಹೊಸ ಅನುಭವ ಮಂಟಪ ನಿರ್ಮಿಸಬೇಕು ಎನ್ನುವುದು ಇನ್ನೂ ಕೆಲವರ ಬೇಡಿಕೆಯಾಗಿದೆ.

ಮುಖ್ಯಾಂಶಗಳು
- ಪೂರ್ಣಗೊಳ್ಳದ ಭೂಸ್ವಾಧೀನ ಪ್ರಕ್ರಿಯೆ
- ಜಾಗ ಗುರುತಿಸದೆ ಟೆಂಡರ್ ಕರೆದ ಆರೋಪ
- ಸ್ಪಷ್ಟ ಜಾಗ ಗುರುತಿಸಲು ಆಗ್ರಹ

ಮೂವರು ಮುಖ್ಯಮಂತ್ರಿಗಳು ಬಂದು ಹೋದರೂ ಅಗತ್ಯವಿರುವಷ್ಟು ಭೂಮಿಯನ್ನೇ ಇನ್ನೂ ಪಡೆದಿಲ್ಲ. ಕಾಮಗಾರಿ ಆರಂಭವಾಗಲು ಹೇಗೆ ಸಾಧ್ಯ?
ಶ್ರೀಕಾಂತ ಸ್ವಾಮಿ, ಬೀದರ್ ಜಿಲ್ಲಾ ಸಮಗ್ರ ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ

ನೂತನ ಅನುಭವ ಮಂಟಪ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 200 ಕೋಟಿ ಬಿಡುಗಡೆ ಮಾಡಿದೆ
ಭುವನ್ ಪಾಟೀಲ, ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಪ್ರಭಾರ ಆಯುಕ್ತ

₹ 500 ಕೋಟಿ ಮಂಜೂರು ಮಾಡಿ, ₹ 200 ಕೋಟಿ ಬಿಡುಗಡೆ ಮಾಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬೇಗ ಕಾಮಗಾರಿ ಆರಂಭವಾಗುವ ವಿಶ್ವಾಸವಿದೆ
ಬಸವಲಿಂಗ ಪಟ್ಟದ್ದೇವರು, ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ

ಪದಬಂಧ 4716 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾಲೇಜಿನ ಪ್ರಾಧ್ಯಾಪಕ ನೀಡುವ ವ್ಯಾಖ್ಯಾನ (4)
3.ಮುಖ್ಯ ಕಥೆಯ ನಡುವೆ ಬರುವ ಸಣ್ಣ ಕಥೆ (4)
5.ಸುಲಭ ಸಾಧ್ಯವಲ್ಲದುದು (3)
6.ಶೂನ್ಯತೆ ಅಥವಾ ಖಾಲಿ (2)
7.ಕೆಲಸಕ್ಕೆ ಬಾರದ ಮಾತಿದು (5)
10.ಕೆಡುಕಾಗಲೆಂದು ಬಯಸಿ ಹೇಳುವ ಮಾತು (2)
12.ಒನಪು ತೋರುವಾಗಿನ ಸ್ಮರಣೆ! (3)
14.ಈತ ಅದೃಷ್ಟವಿಲ್ಲದವನು (4)
15.ವನದಲ್ಲಿನ ಬೆಳವಣಿಗೆ ಕಾಣುತ್ತಿದೆಯೇ? (4)

ಮೇಲಿಂದ ಕೆಳಕ್ಕೆ
1.ಉರಿಯೊಳಗಿರುವ ಗೊಡವೆ! (4)
2.ಎರಡು ರಾಶಿಗಳು ಸಮವೆಂದು ದೃಢೀಕರಿಸುವುದು (5)
3.ಬೆಳಗಿನ ಕಾಲ (2)
4.ಹೊಸದಾಗಿ ಅಭಿನಯಿಸುತ್ತಿರುವವಳು (4)
5.ಇಲ್ಲಿ ಗದ್ದಲ ಕಾಣುತ್ತಿದೆ (3)
7.ಬಿನ್ನಾಣವನ್ನು ಹೀಗೆನ್ನಿ! (3)
8.ಬೆಳ್ಳಿ ಹಬ್ಬವಿದು (5)
9.ಮನದೊಳಗಿರುವ ಕುಲ (4)
11.ಸಂಪೂರ್ಣ ಅರಿವಿದು (4)
13.ಇಷ್ಟರಲ್ಲೇ ಕಾಣಿಸಿಕೊಂಡಿರುವ ಅಪೇಕ್ಷೆ! (2)



4715ನೇ ಪದಬಂಧದ ಉತ್ತರ
ಎಡದಿಂದ ಬಲಕ್ಕೆ: 1.ಚದುರಂಗ 3.ಮನೋಜಾಡ್ಯ 4.ಯಾತ್ರಿಕ 5.ಸದಾಚಾರ 7.ರಸಪೂರ್ಣ 9.ನವರಂ 11.ಮರಕತ 12.ರಥಿಕ 14.ಉಪವಾಸ 15.ದಸಕತ್ತು
ಮೇಲಿಂದ ಕೆಳಕ್ಕೆ: 1.ಚಟ್ಟ 2.ಗಡಿಯಾರ 3.ಮಧುಕರ 6.ದಾನವ 8.ಪೂರ್ವಿಕ 10.ಗರಗಸ 11.ಮಕರಂದ 13.ತುತ್ತು

ಸುಡೊಕು 5102

	9			5			2	
3			2		1	7		
	1			9			3	5
5		7				1		
							8	
9		8			4	5		2
1		2		8			6	
			5		6	2		3
6		3		4			5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5101 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಫ್ಗಾನಿಸ್ತಾನ: ಅಮೆರಿಕದ ಸೇನೆ ಹಿಂತೆಗೆತ ಬಳಿಕ ಮೊದಲ ವಿದೇಶಿ ವಾಣಿಜ್ಯ ವಿಮಾನ ಸಂಚಾರ

ನಾಳೆಯಿಂದ ಕಾಬೂಲ್‌ಗೆ ಪಾಕ್ ವಿಮಾನ

ಇಸ್ಲಾಮಾಬಾದ್ (ಎಎಫ್‌ಪಿ/ಪಿಟಿಐ/ ರಾಯಿಟರ್ಸ್): ಅಫ್ಗಾನಿಸ್ತಾನದ ರಾಜಧಾನಿ ಕಾಬೂಲ್‌ಗೆ ಪಾಕಿಸ್ತಾನವು ಸೋಮವಾರದಿಂದ ವಿಮಾನ ಹಾರಾಟ ಆರಂಭಿಸಲಿದೆ.

ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಕ್ಕೆ ಪಡೆದುಕೊಂಡ ಮೇಲೆ ಅಧಿಕೃತವಾಗಿ ವಾಣಿಜ್ಯ ವಿಮಾನ ಸಂಚಾರ ಆರಂಭಿಸುತ್ತಿರುವ ಮೊದಲ ದೇಶ ಪಾಕಿಸ್ತಾನವಾಗಿದೆ.

ಅಫ್ಗನ್‌ನಿಂದ ವಿವಿಧ ದೇಶಗಳ ನಾಗರಿಕರ ತೆರವು ಕಾರ್ಯಾಚರಣೆ ಪೂರ್ಣಗೊಂಡ ಬಳಿಕ ಕಾಬೂಲ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತೀವ್ರವಾಗಿ ಹಾನಿಗೊಳಗಾಗಿದೆ. ಸಾವಿರಾರು ಜನರು ಜಮಾವಣೆಗೊಂಡಿದ್ದರಿಂದ ನಿಲ್ದಾಣದ ಮೇಲೆ ತೀವ್ರ ಒತ್ತಡ ಉಂಟಾಗಿತ್ತು. ಆಗಸ್ಟ್ 30ರಂದು ಅಮೆರಿಕದ ಪಡೆಗಳು ವಿಮಾನ ಹಾರಾಟವನ್ನು ಕೊನೆಗೊಳಿಸಿದವು.

ವಿಮಾನ ಹಾರಾಟ ನಡೆಸಲು ತಾಂತ್ರಿಕ ಅನುಮತಿಗಾಗಿ ಕಾಯುತ್ತಿರುವುದಾಗಿ ಪಾಕಿಸ್ತಾನ ಅಂತರರಾಷ್ಟ್ರೀಯ ವಿಮಾನಯಾನದ (ಪಿಐಎ) ವಕ್ತಾರ ಅಬ್ದುಲ್ಲಾ ಹಫೀಜ್ ಖಾನ್ ತಿಳಿಸಿದ್ದಾರೆ. 'ನಮ್ಮ ಮೊದಲ ವಾಣಿಜ್ಯ ಉದ್ದೇಶದ ವಿಮಾನವು ಸೆ. 13ರಂದು ಕಾಬೂಲ್‌ಗೆ ಹಾರಾಟ ನಡೆಸಲಿದೆ' ಎಂದಿದ್ದಾರೆ. ಬೇಡಿಕೆಯನ್ನು ಆಧರಿಸಿ ವಿಮಾನಗಳ ಹಾರಾಟ ನಿರ್ಧರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಈ ಸಂಬಂಧ ವಿವಿಧ ಏಜೆನ್ಸಿಗಳು ಹಾಗೂ ಪತ್ರಕರ್ತರಿಂದ ಈವರೆಗೆ 73 ಮನವಿಗಳು ಬಂದಿವೆ ಎಂದು ಅವರು ಹೇಳಿದ್ದಾರೆ. ಅಫ್ಗಾನಿಸ್ತಾನವು ಕಳೆದ ವಾರ ದೇಶೀಯ ವಿಮಾನ ಸಂಚಾರವನ್ನು ಆರಂಭಿಸಿದೆ.

ಕತಾರ್ ಏರ್‌ವೇಸ್‌ನಿಂದ ತೆರವು ಕಾರ್ಯ (ವಾಷಿಂಗ್ಟನ್ ವರದಿ): ಕಳೆದ ಮೂರು ದಿನಗಳಲ್ಲಿ ಕಾಬೂಲ್ ವಿಮಾನ ನಿಲ್ದಾಣದಿಂದ 250ಕ್ಕೂ ಹೆಚ್ಚು ವಿದೇಶಿಗರನ್ನು ತೆರವು ಮಾಡಲಾಗಿದೆ. ಕತಾರ್ ಏರ್‌ವೇಸ್ ವಿಮಾನಗಳು ಈ ಕಾರ್ಯಾಚರಣೆ ನಡೆಸಿವೆ.

ಅಮೆರಿಕದ ನಾಗರಿಕರನ್ನು ಸುರಕ್ಷಿತವಾಗಿ ಕರೆತರಲು ನೆರವಾದ ಕತಾರ್ ಸರ್ಕಾರವನ್ನು ಹಾಗೂ ತೆರವು ಕಾರ್ಯಾಚರಣೆಗೆ ನೆರವು ನೀಡಿದ ತಾಲಿಬಾನ್ ಆಡಳಿತವನ್ನು ಅಮೆರಿಕದ ವಿಶೇಷ ಪ್ರತಿನಿಧಿ ಝಲ್ಮೆ ಖಲೀಲ್‌ಜಾದ್ ಶ್ಲಾಘಿಸಿದ್ದಾರೆ.

'ದೇಶ ತೊರೆಯಲು ಇಚ್ಛಿಸುವ ನಾಗರಿಕರು, ವಿದೇಶಿಗರನ್ನು ಕರೆತರುವ ನಿಟ್ಟಿನಲ್ಲಿ ಕತಾರ್, ತಾಲಿಬಾನ್ ಹಾಗೂ ಇತರರ ಜೊತೆ ಸಂಪರ್ಕದಲ್ಲಿ ಇರಲಿದ್ದೇವೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

ಆದಾಗ್ಯೂ, ಅಮೆರಿಕದ ನಾಗರಿಕರು ಮತ್ತು ಹಸಿರು ಕಾರ್ಡ್ ಹೊಂದಿರುವವರು ಸೇರಿದಂತೆ ನೂರಾರು ಅಫ್ಗಾನ್ ಜನರು ಮಜರ್-ಎ-ಷರೀಫ್‌ನಲ್ಲಿ ಸಿಲುಕಿಕೊಂಡಿದ್ದಾರೆ. ಪ್ರಯಾಣ ದಾಖಲೆಗಳನ್ನು ಮುಂದಿಟ್ಟುಕೊಂಡು ತಾಲಿಬಾನ್ ಅವರಿಗೆ ತಡೆ ನೀಡಿದ್ದು, ಸ್ಥಳಾಂತರಗೊಳ್ಳಲು ಅವರೆಲ್ಲ ಕಾಯುತ್ತಿದ್ದಾರೆ.

ಕಾಬೂಲ್‌ನ ಶಹೀದ್ ರಬ್ಬಾನಿ ಶೈಕ್ಷಣಿಕ ವಿಶ್ವವಿದ್ಯಾಲಯದ ಹೊರ ಆವರಣದಲ್ಲಿ ತಾಲಿಬಾನ್ ಆಡಳಿತ ಬೆಂಬಲಿಸಿ ಶನಿವಾರ ನಡೆದ ಮಹಿಳೆಯರ ಜಾಥಾಕ್ಕೆ ಶಸ್ತ್ರಸಜ್ಜಿತ ತಾಲಿಬಾನ್ ಬಂಡುಕೋರರು ಬೆಂಗಾವಲಾಗಿದ್ದರು —ಎಎಫ್‌ಪಿ ಚಿತ್ರ

ಮಹಿಳಾ ಕ್ರಿಕೆಟ್‌ಗೆ ಅವಕಾಶ?

ಸಿಡ್ನಿ ವರದಿ: ಅಫ್ಗಾನಿಸ್ತಾನದಲ್ಲಿ ಮಹಿಳೆಯರು ಕ್ರಿಕೆಟ್ ಆಡಲು ಅವಕಾಶ ಸಿಗುವ ಸಾಧ್ಯತೆಯಿದೆ ಎಂದು ಅಫ್ಗಾನಿಸ್ತಾನದ ಕ್ರಿಕೆಟ್ ಮಂಡಳಿ ಮುಖ್ಯಸ್ಥ ಅಜೀಜುಲ್ಲಾ ಫಜ್ಲಿ ಅವರು ಆಸ್ಟ್ರೇಲಿಯಾದ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಇದನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಕ್ರಿಕೆಟ್ ಆಡಳಿತ ಮಂಡಳಿಯು ಕಾರ್ಯೋನ್ಮುಖವಾಗಿದೆ ಎಂದು ಅವರು ವಿವರಿಸಿದ್ದಾರೆ.

ಅಫ್ಗನ್ ಮಾಜಿ ಉಪಾಧ್ಯಕ್ಷನ ಸಹೋದರನ ಕೊಲೆ

ಕಾಬೂಲ್ (ಎಪಿ): ಅಫ್ಗಾನಿಸ್ತಾನದ ಮಾಜಿ ಉಪಾಧ್ಯಕ್ಷ ಅಮರುಲ್ಲಾ ಸಲೇಹ್ ಅವರ ಸಹೋದರ ಮತ್ತು ಅವರ ಕಾರು ಚಾಲಕರನ್ನು ತಾಲಿಬಾನ್ ಸೈನಿಕರು ಗುಂಡಿಕ್ಕಿ ಕೊಂದಿದ್ದಾರೆ. ಉತ್ತರ ಪಂಜ್‌ಶೀರ್ ಪ್ರಾಂತ್ಯದಲ್ಲಿ ಗುರುವಾರ ಈ ಘಟನೆ ನಡೆದಿದೆ ಎಂದು ಸಲೇಹ್ ಅವರ ಸಂಬಂಧಿ ಶುರೇಶ್ ಶನಿವಾರ ಮಾಹಿತಿ ನೀಡಿದ್ದಾರೆ.

'ರೋಹುಲ್ಲಾ ಅಜೀಜಿ ಅವರು ಕಾರಿನಲ್ಲಿ ಹೋಗುತ್ತಿದ್ದಾಗ ತಾಲಿಬಾನ್ ಬಂಡುಕೋರರು ಚೆಕ್‌ಪಾಯಿಂಟ್‌ನಲ್ಲಿ ಅವರನ್ನು ತಡೆದರು. ಬಳಿಕ ಗುಂಡಿಟ್ಟು ಕೊಂದರು' ಎಂದು ಶುರೇಶ್ ಸಲೇಹ್ ಹೇಳಿದ್ದಾರೆ.

'ತಾಲಿಬಾನ್ ವಿರೋಧಿ ಹೋರಾಟಗಾರರೂ ಆಗಿರುವ ನನ್ನ ಚಿಕ್ಕಪ್ಪ ಅಜೀಜಿ ಅವರು ತಾಲಿಬಾನ್ ಬಂಡುಕೋರರ ವಶಕ್ಕೆ ಪಡೆಯುವ ಮುನ್ನ ಎಲ್ಲಿಗೆ ಹೊರಟಿದ್ದರು ಎಂಬುದು ತಿಳಿದುಬಂದಿಲ್ಲ. ಈ ಪ್ರದೇಶದಲ್ಲಿ ಫೋನ್‌ಗಳು ಕಾರ್ಯನಿರ್ವಹಿಸುತ್ತಿಲ್ಲ' ಎಂದು ಶುರೇಶ್ ಹೇಳಿದ್ದಾರೆ.

ತಜಕಿಸ್ತಾನಕ್ಕೆ ರಷ್ಯಾ ಸೇನಾ ವಾಹನ

ಮಾಸ್ಕೋ ವರದಿ: ತಜಕಿಸ್ತಾನಕ್ಕೆ 12 ಶಸ್ತ್ರಸಜ್ಜಿತ ವಾಹನಗಳು ಮತ್ತು ಸೇನಾ ಉಪಕರಣಗಳನ್ನು ಕಳುಹಿಸಲಾಗಿದೆ ಎಂದು ರಷ್ಯಾದ ರಕ್ಷಣಾ ಸಚಿವರು ಶನಿವಾರ ತಿಳಿಸಿದ್ದಾರೆ.

ಅಫ್ಗಾನಿಸ್ತಾನದ ಜೊತೆ ಗಡಿ ಹಂಚಿಕೊಂಡಿರುವ ತಜಕಿಸ್ತಾನದ ಜೊತೆ ಸಂಬಂಧ ಗಟ್ಟಿ ಮಾಡಿಕೊಳ್ಳಲು ಈ ಮೂಲಕ ರಷ್ಯಾ ಯತ್ನಿಸಿದೆ. ಅಲ್ಲದೇ, ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಪ್ರಾಬಲ್ಯಕ್ಕೆ ಬಂದ ನಂತರ ಹಾಗೂ ಅಲ್ಲಿಂದ ಅಮೆರಿಕ ಸೇನೆ ವಾಪಸಾದ ಬಳಿಕ ತಜಕಿಸ್ತಾನದಲ್ಲಿರುವ ತನ್ನ ವಾಯುನೆಲೆಯಲ್ಲಿ ರಷ್ಯಾ ಸೇನಾ ಕಸರತ್ತು ನಡೆಸಿದೆ. ಮಧ್ಯ ಏಷ್ಯಾಕ್ಕೆ ಇಸ್ಲಾಮಿಕ್ ಉಗ್ರರು ಒಳನುಸುಳುವ ಸಾಧ್ಯತೆಗಳ ಬಗ್ಗೆ ರಷ್ಯಾ ಆತಂಕದಲ್ಲಿದೆ.

'ತಜಕಿಸ್ತಾನದ ಗಡಿಯಲ್ಲಿ ಉಲ್ಬಣಿಸುತ್ತಿರುವ ಅಸ್ಥಿರತೆಯ ಹಿನ್ನೆಲೆಯಲ್ಲಿ, ನಮ್ಮ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ನಾವು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ' ಎಂದು ಮೇಜರ್ ಜನರಲ್ ಯೆವ್ಗೆನಿ ಸಿಂಡ್ಯಾಯ್ಕಿನ್ ಹೇಳಿದ್ದಾರೆ.

ತಾಲಿಬಾನ್ ಬೆಂಬಲಿಸಿದ ಮಹಿಳೆಯರು: ಕಾಬೂಲ್ ವಿಶ್ವವಿದ್ಯಾಲಯದ ಉಪನ್ಯಾಸ ರಂಗಮಂದಿರದಲ್ಲಿ ಸೇರಿದ್ದ 300ಕ್ಕೂ ಹೆಚ್ಚು ಮಹಿಳೆಯರು ಲಿಂಗ ಪ್ರತ್ಯೇಕತೆಯ ತಾಲಿಬಾನ್‌ನ ಕಠಿಣ ನೀತಿಗಳಿಗೆ ಬದ್ಧರಾಗಿರುವುದಾಗಿ ಪ್ರತಿಜ್ಞೆ ಮಾಡಿದರು.

ಶಿಕ್ಷಣ ಪಡೆಯುವ ಮಹಿಳೆಯರು ಅನುಸರಿಸಬೇಕಾದ ಕಟ್ಟುನಿಟ್ಟಾದ ಹೊಸ ಉಡುಗೆ ನೀತಿಗಳಿಗೆ ಅನುಗುಣವಾಗಿ, ಮುಖವನ್ನು ಪೂರ್ಣವಾಗಿ ಮುಚ್ಚುವ ಮುಸುಕುಗಳನ್ನು ಧರಿಸಿದ್ದ ಅವರು, ತಾಲಿಬಾನ್ ಧ್ವಜಗಳನ್ನು ಹಿಡಿದಿದ್ದರು.

ಕಳೆದ ಬಾರಿಯ ತಾಲಿಬಾನ್ ಆಡಳಿತದಲ್ಲಿ ಮಹಿಳೆಯರ ಹಕ್ಕುಗಳು ಮೊಟಕುಗೊಂಡಿದ್ದವು. ಈ ಬಾರಿ ಮಹಿಳೆಯರು ವಿಶ್ವವಿದ್ಯಾಲಯಕ್ಕೆ ಹಾಜರಾಗಲು ಅವಕಾಶ ನೀಡಲಾಗುವುದು ಎಂದು ತಾಲಿಬಾನ್ ಶಿಕ್ಷಣ ಪ್ರಾಧಿಕಾರ ಹೇಳಿತ್ತು.

ಪಾಟೀದಾರ್ ಸಮುದಾಯಕ್ಕೆ ಮುಖ್ಯಮಂತ್ರಿ ಪಟ್ಟ ಸಾಧ್ಯತೆ

ಗುಜರಾತ್ ಸಿ.ಎಂ ರೂಪಾಣಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾಣಿ ಅವರು ಶನಿವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಮೂಲಕ, ನಾಯಕತ್ವ ಬದಲಾವಣೆ ಬಗ್ಗೆ ಕೆಲವು ದಿನಗಳಿಂದ ಇದ್ದ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

2022ರ ಕೊನೆಯಲ್ಲಿ ನಡೆಯಲಿರುವ ಗುಜರಾತ್ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಈ ಬದಲಾವಣೆ ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ರೂಪಾಣಿ ಅವರ ಬದಲಿಗೆ ಪಾಟೀದಾರ್ ಸಮುದಾಯಕ್ಕೆ ಸೇರಿದ ಪ್ರಬಲ ವ್ಯಕ್ತಿಯನ್ನು ಮುಖ್ಯಮಂತ್ರಿ ಸ್ಥಾನಕ್ಕೆ ನೇಮಕ ಮಾಡಲಾಗುತ್ತದೆ ಎಂದು ಪಕ್ಷದ ವಲಯದಲ್ಲಿ ಚರ್ಚೆಯಾಗುತ್ತಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಬೇಡಿಕೆ ಇಟ್ಟಿದ್ದ ಪಾಟೀದಾರ್ ಸಮುದಾಯವನ್ನು ಓಲೈಸುವ ಉದ್ದೇಶ ಇದರಲ್ಲಿದೆ.

ಸೋಮವಾರ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದ್ದು, ಅಲ್ಲಿ ರೂಪಾಣಿ ಅವರ ಸ್ಥಾನಕ್ಕೆ ಯಾರನ್ನು ನೇಮಿಸಬೇಕು ಎಂಬ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಬಿಜೆಪಿ ಪದಾಧಿಕಾರಿಗಳು ತಿಳಿಸಿದ್ದಾರೆ.

'ಗುಜರಾತ್‌ಗೆ ಹೊಸ ಶಕ್ತಿಯುತ ನಾಯಕತ್ವದ ಅಗತ್ಯವಿದೆ ಎಂದುಕೊಂಡಿದ್ದೇನೆ. ಹೀಗಾಗಿ, ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುತ್ತಿದ್ದೇನೆ' ಎಂದು ರಾಜಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರೂಪಾಣಿ ಹೇಳಿದರು.

ಬದಲಾವಣೆ ಹಿಂದಿನ ಕಾರಣಗಳು

ಪಾಟೀದಾರ್ ಸಮುದಾಯಕ್ಕೆ ಮುಖ್ಯಮಂತ್ರಿ ಹುದ್ದೆ ಬೇಕು ಎಂದು ಸಮುದಾಯದ ಮುಖಂಡ ನರೇಶ್ ಪಟೇಲ್ ಇತ್ತೀಚೆಗೆ ಹೇಳಿದ್ದರು. ಸಮುದಾಯದ 'ಲೆವುವಾ' ಮತ್ತು 'ಕಡವಾ ಪಟೇಲ್ಸ್' ಪಂಗಡಗಳು ಒಂದಾಗಿ ಇಟ್ಟಿದ್ದ ಈ ಬೇಡಿಕೆಯನ್ನು ನಿರ್ಲಕ್ಷಿಸುವುದು ಬಿಜೆಪಿಗೆ ಸಾಧ್ಯವಿರಲಿಲ್ಲ ಎಂದು ಪಕ್ಷದ ಮೂಲಗಳು ತಿಳಿಸಿದೆ.

ರೂಪಾಣಿ ಅವರನ್ನು ಬದಲಿಸುವುದರ ಹಿಂದೆ ಇನ್ನೂ ಇತರ ಕಾರಣಗಳಿವೆ. ಅವರಿಗೆ ಇರುವ 'ರಿಮೋಟ್ ಕಂಟ್ರೋಲ್ ಮುಖ್ಯಮಂತ್ರಿ' ಎಂಬ ಇಮೇಜ್. ಪಕ್ಷದ ರಾಜ್ಯಾಧ್ಯಕ್ಷ ಸಿ.ಆರ್. ಪಾಟೀಲ್ ಅವರು 'ಸೂಪರ್ ಸಿಎಂ' ರೀತಿ ವರ್ತಿಸುತ್ತಿದ್ದು, ಐಎಎಸ್ ಅಧಿಕಾರಿಗಳು ಸಚಿವರಿಗಿಂತ ಪ್ರಬಲವಾಗಿದ್ದಾರೆ ಎಂಬ ಮಾತುಗಳಿಗೆ. ರೂಪಾಣಿ ಅವರು ಕೋವಿಡ್ ನಿರ್ವಹಿಸಿದ ಬಗ್ಗೆ ಜನರಲ್ಲಿ ಕೋಪವಿದೆ ಎಂದು ಪಕ್ಷದ ಮುಖಂಡರು ಹೇಳಿದ್ದಾರೆ.

ಮುಂಬೈ: ಅತ್ಯಾಚಾರ ಸಂತ್ರಸ್ತೆ ಸಾವು

ಒಂದನೇ ಪುಟದಿಂದ

ಗಂಭೀರವಾಗಿ ಗಾಯಗೊಂಡು, ತೀವ್ರ ರಕ್ತಸ್ರಾವದಿಂದ ಅಸ್ವಸ್ಥಗೊಂಡಿದ್ದ ಮಹಿಳೆಯನ್ನು ಇಲ್ಲಿನ ರಾಜವಾಡಿಯ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ದೇಹವನ್ನು ಹೊಕ್ಕ ಸರಳು ಕರುಳನ್ನು ತುಂಡರಿಸಿತ್ತು ಎನ್ನಲಾಗಿದೆ. 33 ಗಂಟೆಗಳವರೆಗೆ ಜೀವನ್ಮರಣ ಹೋರಾಟ ನಡೆಸಿದ ಸಂತ್ರಸ್ತೆ, ಚಿಕಿತ್ಸೆಗೆ ಸ್ಪಂದಿಸದೇ ಶನಿವಾರ ನಸುಕಿನಲ್ಲಿ ಮೃತಪಟ್ಟಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

'ಮಾಹಿತಿ ಸಿಕ್ಕ ಹತ್ತು ನಿಮಿಷಗಳ ಒಳಗಾಗಿ ಪೊಲೀಸರು ಸ್ಥಳದಲ್ಲಿದ್ದರು. ಸಮಯ ವ್ಯರ್ಥ ಮಾಡದೇ, ಅದೇ ಟೆಂಪೊದಲ್ಲಿ ಸಂತ್ರಸ್ತೆಯನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು' ಎಂದು ಮುಂಬೈ ಪೊಲೀಸ್ ಆಯುಕ್ತ ಹೇಮಂತ್ ನಗರಾಳೆ ತಿಳಿಸಿದ್ದಾರೆ.

ಸಂತ್ರಸ್ತೆಯು ಪ್ರಜ್ಞಾಹೀನಳಾಗಿದ್ದರಿಂದ, ಹೇಳಿಕೆ ಪಡೆಯಲು ಆಗಲಿಲ್ಲ ಎಂದಿದ್ದಾರೆ.

ಆ ಪ್ರದೇಶದ ಸಿ.ಸಿ. ಟಿ.ವಿ. ದೃಶ್ಯಗಳನ್ನು ಆಧರಿಸಿ, ಪೊಲೀಸರು 45 ವರ್ಷದ ಆರೋಪಿ ಮೋಹನ್ ಚೌಹಾಣ್ ಎಂಬಾತನನ್ನು ಶುಕ್ರವಾರವೇ ಬಂಧಿಸಿದ್ದರು. ಆತ ಉತ್ತರಪ್ರದೇಶದ ಜಾನಪುರದವನು ಎಂದು ತಿಳಿದುಬಂದಿದ್ದು, ಸೆ.21ರವರೆಗೆ ಪೊಲೀಸ್ ವಶಕ್ಕೆ ನೀಡಲಾಗಿದೆ.

ಬಂಧಿತ ಆರೋಪಿ ಮಾತ್ರ ಸ್ಥಳದಲ್ಲಿ ಇದ್ದದ್ದು ಸಿ.ಸಿ.ಟಿ.ವಿ ದೃಶ್ಯಗಳ ಪರಿಶೀಲನೆಯಿಂದ ತಿಳಿದುಬಂದಿದೆ. ಹೀಗಾಗಿ ಸಾಮೂಹಿಕ ಅತ್ಯಾಚಾರ ನಡೆದಿಲ್ಲ ಎಂದಿದ್ದಾರೆ. ಸಂತ್ರಸ್ತೆಯು ಎರಡು ಮಕ್ಕಳ ತಾಯಿಯಾಗಿದ್ದು, ಸಾಕಿನಾಕಾದ ನಿವಾಸಿಯೇ ಆಗಿದ್ದರೆಂಬುದು ತಿಳಿದುಬಂದಿದೆ. ಆದರೆ, ಆಕೆಗೆ ಆರೋಪಿಯ ಪರಿಚಯ ಇತ್ತೇ ಅಥವಾ ಇಲ್ಲವೇ ಎಂಬುದು ತನಿಖೆಯಾಗಬೇಕಿದೆ. ಮಹಿಳೆಯ ರಕ್ತಸಿಕ್ತ ಬಟ್ಟೆಯನ್ನು ವಶಕ್ಕೆ ಪಡೆಯಲಾಗಿದೆ. ಆರೋಪಿಯನ್ನು ವಶಕ್ಕೆ ಪಡೆದಿದ್ದು ತನಿಖೆ ಮುಂದುವರಿದಿದೆ ಎಂದು ಪೊಲೀಸ್ ಆಯುಕ್ತ ತಿಳಿಸಿದ್ದಾರೆ.

ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆಯ 302 (ಕೊಲೆ), 376 (ಅತ್ಯಾಚಾರ), 323 (ಉದ್ದೇಶಪೂರ್ವಕ ಹಲ್ಲೆ), 504 (ಉದ್ದೇಶಪೂರ್ವಕ ದಾಳಿ) ಸೆಕ್ಷನ್ ಅಡಿ ಪ್ರಕರಣ ದಾಖಲಿಸಲಾಗಿದೆ. 2012ರಲ್ಲಿ ದೆಹಲಿಯಲ್ಲಿ ಚಲಿಸುತ್ತಿದ್ದ ಬಸ್‌ವೊಂದರಲ್ಲಿ ಯುವತಿಯೊಬ್ಬಳ ಮೇಲೆ ದುರುಳರು ಸಾಮೂಹಿಕ ಅತ್ಯಾಚಾರ ನಡೆಸಿ, ಆಕೆಯ ಗುಪ್ತಾಂಗವನ್ನು ಹರಿತವಾದ ವಸ್ತುಗಳಿಂದ ಗಾಸಿಗೊಳಿಸಿದ್ದರು. ಜೀವನ್ಮರಣ ಹೋರಾಟ ನಡೆಸಿ, ಆಕೆ ಅಸುನೀಗಿದ್ದಳು. ಮೃತಪಟ್ಟ ಸಂತ್ರಸ್ತೆಯನ್ನು 'ನಿರ್ಭಯಾ' ಎಂದು ಹೆಸರಿಸಲಾಗಿತ್ತು. ಘಟನೆಯನ್ನು ಖಂಡಿಸಿ, ಅದೇ ಹೆಸರಿನಲ್ಲಿ ದೇಶದಾದ್ಯಂತ ವ್ಯಾಪಕ ಪ್ರತಿಭಟನೆಗಳು ನಡೆದಿದ್ದವು.

ಮಹಿಳಾ ಆಯೋಗ ಆಘಾತ: ಘಟನೆಯ ಆಘಾತ ವ್ಯಕ್ತಪಡಿಸಿರುವ ರಾಷ್ಟ್ರೀಯ ಮಹಿಳಾ ಆಯೋಗ, ಈ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯನ್ನು ನಿಗದಿತ ಗಡುವಿನಲ್ಲಿ ನಿಷ್ಪಕ್ಷಪಾತದಿಂದ ನಡೆಸುವಂತೆ ಮಹಾರಾಷ್ಟ್ರ ಡಿಜಿಪಿ ಸಂಜಯ್ ಪಾಂಡೆ ಹಾಗೂ ಮುಂಬೈ ಪೊಲೀಸ್ ಆಯುಕ್ತ ಹೇಮಂತ್ ನಗರಾಳೆ ಅವರನ್ನು ಒತ್ತಾಯಿಸಿದೆ.

ಘಟನೆಯಲ್ಲಿ ಇನ್ನೂ ಹೆಚ್ಚು ಜನರು ಭಾಗಿಯಾಗಿದ್ದಾರೆಯೇ ಎಂಬುದರತ್ತಲೂ ಪೊಲೀಸರು ತನಿಖೆ ಮಾಡಬೇಕು ಎಂದು ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಆಗ್ರಹಿಸಿದ್ದಾರೆ.

ಗಲ್ಲು ಶಿಕ್ಷೆಗೆ ಆಗ್ರಹ: ಮಹಾರಾಷ್ಟ್ರ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್, ಘಟನೆಗೆ ದುಃಖ ವ್ಯಕ್ತಪಡಿಸಿದ್ದಾರೆ.

ಶಿವಸೇನಾ ನೇತೃತ್ವದ ಮಹಾರಾಷ್ಟ್ರ ಸರ್ಕಾರದಲ್ಲಿ ಮಹಿಳೆಯರಿಗೆ ರಕ್ಷಣೆ ಇಲ್ಲ ಎಂದು ಹರಿಹಾಯ್ದಿರುವ ಅವರು, ತಪ್ಪಿತಸ್ಥನಿಗೆ ಗಲ್ಲುಶಿಕ್ಷೆ ಆಗಬೇಕು ಎಂದಿದ್ದಾರೆ.

ವಿಶೇಷ ತನಿಖಾ ತಂಡ ರಚನೆ

ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಸರ್ಕಾರವು, ಎಸಿಪಿ ಜ್ಯೋತ್ಸ್ನಾ ರಾಸಂ ನೇತೃತ್ವದ ವಿಶೇಷ ತನಿಖಾ ತಂಡ ರಚಿಸಿದೆ. ತನಿಖೆ ಪೂರ್ಣಗೊಳಿಸಲು ಒಂದು ತಿಂಗಳ ಗಡುವು ನೀಡಿದೆ.

'ಮಾನವೀಯತೆಗೆ ಕಳಂಕ': ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, 'ಇದು ಗಂಭೀರವಾದ ಹಾಗೂ ಮಾನವೀಯತೆಯನ್ನೇ ಅವಮಾನಿಸಿದ ಘಟನೆ' ಎಂದಿದ್ದಾರೆ.

ಈ ಪ್ರಕರಣದ ವಿಚಾರಣೆಯು ವಿಶೇಷ ತ್ವರಿತ ನ್ಯಾಯಾಲಯದಲ್ಲಿ ನಡೆಯಲಿದೆ ಎಂದಿರುವ ಅವರು, ಸಂತ್ರಸ್ತೆಗೆ ನ್ಯಾಯ ಸಿಗಲಿದೆ ಎಂದರು.

ಮಾನಸಿಕ ಅಸ್ವಸ್ಥ ಬಾಲಕಿ ಮೇಲೆ ಅತ್ಯಾಚಾರ: ಬಂಧನ

ಪಾಲ್ಘರ್ (ಪಿಟಿಐ): ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಮಾನಸಿಕ ಅಸ್ವಸ್ಥ ಬಾಲಕಿಯೊಬ್ಬಳನ್ನು ಅಪಹರಿಸಿ, ಅತ್ಯಾಚಾರ ಎಸಗಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ಹೇಳಿದ್ದಾರೆ.

31 ವರ್ಷದ ಆರೋಪಿಯು, ಜಿಲ್ಲೆಯ ವಸೈನಲ್ಲಿರುವ ನಾಲ ಸೋಪಾರ ಪ್ರದೇಶದಲ್ಲಿ ಕೂಲಿ ಕಾರ್ಮಿಕನಾಗಿದ್ದ ಎಂದು ಹಿರಿಯ ಇನ್‌ಸ್ಪೆಕ್ಟರ್ ಪ್ರಮೋದ್ ಬಢಕ್ ಹೇಳಿದರು.

ಅಫ್ಗನ್: ಅಧಿಕಾರ ಸ್ವೀಕಾರ ಸಮಾರಂಭ ಮುಂದಕ್ಕೆ

ನವದೆಹಲಿ: ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ನೇತೃತ್ವದ ಮಧ್ಯಂತರ ಸರ್ಕಾರದ ಉದ್ಘಾಟನಾ ಸಮಾರಂಭವನ್ನು ಮುಂದೂಡಲಾಗಿದೆ ಎಂದು ರಷ್ಯಾದ 'ಟಾಸ್' ಸುದ್ದಿ ಸಂಸ್ಥೆ ವರದಿ ಮಾಡಿದ್ದಾಗಿ ಹಲವು ಮಾಧ್ಯಮಗಳು ಉಲ್ಲೇಖಿಸಿವೆ.

ಅಮೆರಿಕದ ಅವಳಿ ವಾಣಿಜ್ಯ ಸಂಕೀರ್ಣಗಳನ್ನು ಉಗ್ರರು ಧ್ವಂಸಗೊಳಿಸಿದ 20ನೇ ವರ್ಷಾಚರಣೆಯಂದು, ಅಂದರೆ ಸೆಪ್ಟೆಂಬರ್ 11ರಂದು ಅಧಿಕಾರ ಸ್ವೀಕಾರ ಸಮಾರಂಭ ನಿಗದಿಯಾಗಿತ್ತು.

'ಹೊಸ ಸರ್ಕಾರದ ಉದ್ಘಾಟನಾ ಸಮಾರಂಭವನ್ನು ಕೆಲವು ದಿನಗಳ ಹಿಂದೆ ರದ್ದುಪಡಿಸಲಾಗಿದೆ. ಸಂಪುಟದ ಒಂದು ಭಾಗವನ್ನು ಘೋಷಿಸಿದ್ದು, ಅದು ಈಗಾಗಲೇ ಕಾರ್ಯಾರಂಭ ಮಾಡಿದೆ' ಎಂದು ಅಫ್ಗಾನ್ ಸರ್ಕಾರದ ಸಾಂಸ್ಕೃತಿಕ ಆಯೋಗದ ಸದಸ್ಯ ಇನಾಮುಲ್ಲಾ ಸಮಂಗಾನಿ ಅವರು ಟ್ವಿಟರ್‌ನಲ್ಲಿ ಹೇಳಿದ್ದಾರೆ.

ರಷ್ಯಾ, ಇರಾನ್, ಚೀನಾ, ಕತಾರ್ ಮತ್ತು ಪಾಕಿಸ್ತಾನವನ್ನು ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು. ದಾಳಿಯ ವಾರ್ಷಿಕೋತ್ಸವ ದಿನದಂದೇ ಉದ್ಘಾಟನಾ ಸಮಾರಂಭ ನಡೆದಲ್ಲಿ ತಾನು ಭಾಗವಹಿಸುವುದಿಲ್ಲ ಎಂದು ರಷ್ಯಾ ತಿಳಿಸಿತ್ತು ಎನ್ನಲಾಗಿದೆ.

ವಾರ್ಷಿಕೋತ್ಸವದ ದಿನ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳದಂತೆ ಕತಾರ್ ಮೂಲಕ ಅಮೆರಿಕ ಮಿತ್ರಪಡೆಗಳು ತಾಲಿಬಾನ್‌ಗೆ ಒತ್ತಡ ಹೇರಿದ್ದವು ಎಂದು ವರದಿಯಾಗಿದೆ. ಅಂದೇ ಉದ್ಘಾಟನೆ ಮಾಡಿದಲ್ಲಿ, ತಾಲಿಬಾನಿಗಳಿಗೆ ಅಂತರರಾಷ್ಟ್ರೀಯ ಮನ್ನಣೆ ಸಿಗದಿರಬಹುದು ಎಂದು ಎಚ್ಚರಿಸಿದ್ದವು ಎನ್ನಲಾಗಿದೆ.

ಇಂದಿರಾ ಗಾಂಧಿ ಅನರ್ಹಗೊಳಿಸಿದ್ದು ಧೈರ್ಯದ ತೀರ್ಪು: ಸಿಜೆಐ

ಅಲಹಾಬಾದ್ (ಪಿಟಿಐ): 1975ರಲ್ಲಿ ಅಲಹಾಬಾದ್ ಹೈಕೋರ್ಟ್ ನ್ಯಾಯಮೂರ್ತಿ ಜಗಮೋಹನ್‌ಲಾಲ್ ಸಿನ್ಹಾ ಅವರು ಅಂದಿನ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಅನರ್ಹಗೊಳಿಸಿ ನೀಡಿದ ತೀರ್ಪು ಅತ್ಯಂತ ಧೈರ್ಯದ ನಿರ್ಧಾರವಾಗಿತ್ತು ಎಂದು ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ (ಸಿಜೆಐ) ಎನ್.ವಿ. ರಮಣ ಅವರುಅಭಿಪ್ರಾಯಪಟ್ಟಿದ್ದಾರೆ.

ಈ ತೀರ್ಪು ಇಡೀ ದೇಶವನ್ನು ನಡುಗಿಸಿದ್ದಲ್ಲದೇ, ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಲು ಕಾರಣವಾಯಿತು ಎಂದಿದ್ದಾರೆ.

ಉತ್ತರ ಪ್ರದೇಶ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ ಮತ್ತು ಅಲಹಾಬಾದ್ ಹೈಕೋರ್ಟ್‌ನ ಹೊಸ ಕಟ್ಟಡದ ಶಂಕುಸ್ಥಾಪನೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಮಮತಾ ವಿರುದ್ಧ ಪ್ರಿಯಾಂಕಾ ಟಿಬ್ರೆವಾಲ್ ಬಿಜೆಪಿ ಅಭ್ಯರ್ಥಿ

ಪ್ರಿಯಾಂಕಾ

ಕೋಲ್ಕತ್ತ (ಪಿಟಿಐ): 'ಭವಾನಿಪುರ ವಿಧಾನಸಭೆ ಕ್ಷೇತ್ರಕ್ಕೆ ಸೆ.30ರಂದು ನಡೆಯಲಿರುವ ಉಪಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಬಿಜೆಪಿ ನಿರ್ಭೀತ ಅಭ್ಯರ್ಥಿಯಾಗಿ ನನ್ನನ್ನು ಕಣಕ್ಕಿಳಿಸಿದೆ. ರಾಜ್ಯದಲ್ಲಿ ವಿಧಾನಸಭಾ ಚುನಾವಣೆಯ ನಂತರ ನಡೆದಿರುವ ಕ್ರೌರ್ಯ ಮತ್ತು ಹಿಂಸಾಚಾರವೇ ಚುನಾವಣಾ ವಿಷಯವಾಗಿದೆ' ಎಂದು ಪ್ರಿಯಾಂಕಾ ಟಿಬ್ರೆವಾಲ್ ಹೇಳಿದ್ದಾರೆ.

'ಅವರು (ಮಮತಾ ಬ್ಯಾನರ್ಜಿ) ಈಗಾಗಲೇ ನಂದಿಗ್ರಾಮದಿಂದ ಸೋತಿದ್ದಾರೆ. ವಿಧಾನಸಭಾ ಚುನಾವಣೆಯ ನಂತರ ಅವರ ಪಕ್ಷವು ವಿರೋಧ ಪಕ್ಷದ ಕಾರ್ಯಕರ್ತರ ಮೇಲೆ ನಡೆಸಿದ ದೌರ್ಜನ್ಯ, ಕ್ರೌರ್ಯ ಮತ್ತು ಹಿಂಸೆಯ ಬಗ್ಗೆ ಕ್ಷೇತ್ರದ ಜನರಿಗೆ ತಿಳಿಸುವುದು ನನ್ನ ಕೆಲಸವಾಗಿದೆ. ಭವಾನಿಪುರದ ಜನರು ನನಗೆ ಮತ ಹಾಕಿ, ಮಮತಾ ಅವರನ್ನು ಸೋಲಿಸುವ ವಿಶ್ವಾಸವಿದೆ' ಎಂದು ಪ್ರಿಯಾಂಕಾ ಹೇಳಿದರು. ಮಿಲನ್ ಘೋಷ್ ಮತ್ತು ಸುಜಿತ್ ದಾಸ್ ಅವರ ಹೆಸರನ್ನು ಕ್ರಮವಾಗಿ ಸಂಸರ್‌ಗಂಜ್ ಮತ್ತು ಜಂಗೀಪುರ ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳಾಗಿ ಬಿಜೆಪಿ ಘೋಷಿಸಿದೆ.

ಕರ್ನಾಲ್ ಸಂಘರ್ಷ: ನ್ಯಾಯಾಂಗ ತನಿಖೆಗೆ ಆದೇಶಿಸಿದ ಸರ್ಕಾರ

ಚಂಡೀಗಡ (ಪಿಟಿಐ): ಕರ್ನಾಲ್‌ನಲ್ಲಿ ಆಗಸ್ಟ್ 28ರಂದು ರೈತರು ಮತ್ತು ಪೊಲೀಸರು ನಡುವೆ ನಡೆದ ಸಂಘರ್ಷದ ನ್ಯಾಯಾಂಗ ತನಿಖೆಗೆ ರಾಜ್ಯ ಸರ್ಕಾರ ಶನಿವಾರ ಆದೇಶಿಸಿದೆ. ಹೀಗಾಗಿ, ಕರ್ನಾಲ್ ಜಿಲ್ಲಾ ಕೇಂದ್ರದ ಹೊರಗೆ ನಡೆಸುತ್ತಿದ್ದ ಪ್ರತಿಭಟನೆಯನ್ನು ರೈತರು ಅಂತ್ಯಗೊಳಿಸಿದ್ದಾರೆ.

'ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ಈ ಪ್ರಕರಣದ ತನಿಖೆ ನಡೆಯಲಿದೆ. ತಿಂಗಳೊಳಗೆ ತನಿಖೆ ಪೂರ್ಣ ಗೊಳ್ಳಲಿದೆ. ಈ ಸಮಯದಲ್ಲಿ ಐಎಎಸ್ ಅಧಿಕಾರಿ ಆಯುಷ್ ಸಿನ್ಹಾ ರಜೆಯಲ್ಲಿರುತ್ತಾರೆ' ಎಂದು ಹರಿಯಾಣದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದೇವೇಂದರ್ ಸಿಂಗ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿದ್ದ ರೈತ ನಾಯಕ ಗುರ್‌ನಾಮ್ ಸಿಂಗ್ ಚದೌನಿ ಅವರು, 'ಜಿಲ್ಲಾ ಕೇಂದ್ರದ ಹೊರಗೆ ನಡೆಸುತ್ತಿದ್ದ ಪ್ರತಿಭಟನೆಯನ್ನು ಅಂತ್ಯಗೊಳಿಸಿದ್ದೇವೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಯೋಜನೆ ಯಶಸ್ವಿಯಾದರೆ ದೇಶದಾದ್ಯಂತ ವಿಸ್ತರಣೆ'

ತೆಲಂಗಾಣದ 16 ಹಸಿರು ವಲಯಗಳಲ್ಲಿ ಡ್ರೋನ್ ಮೂಲಕ ಔಷಧಿ, ಲಸಿಕೆ ವಿತರಣೆ

ವಿಕರಾಬಾದ್ (ತೆಲಂಗಾಣ) (ಪಿಟಿಐ): ಡ್ರೋನ್ ಮೂಲಕ ಔಷಧಗಳು ಮತ್ತು ಲಸಿಕೆಗಳನ್ನು ವಿತರಣೆ ಮಾಡುವ 'ಆಕಾಶದಿಂದ ಔಷಧಗಳು' ಯೋಜನೆಯನ್ನು 16 ಹಸಿರು ವಲಯಗಳಲ್ಲಿ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗಿದ್ದು, ಇದರ ದತ್ತಾಂಶ ಆಧರಿಸಿ ಈ ಯೋಜನೆಯನ್ನು ರಾಷ್ಟ್ರಮಟ್ಟಕ್ಕೆ ವಿಸ್ತರಿಸಲಾಗುತ್ತಿದೆ ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಶನಿವಾರ ಹೇಳಿದರು.

'ಆಕಾಶದಿಂದ ಔಷಧಗಳು' ಯೋಜನೆಗೆ ಇಲ್ಲಿ ಚಾಲನೆ ನೀಡಿದ ಅವರು, ಈ ಯೋಜನೆ ಇಡೀ ದೇಶಕ್ಕೆ ಮಾದರಿಯಾಗಲಿದೆ. ಇಂದು ತೆಲಂಗಾಣ ಮಾತ್ರವಲ್ಲ ಇಡೀ ದೇಶಕ್ಕೆ ಕ್ರಾಂತಿಕಾರಿ ದಿನ ಎಂದು ಹೇಳಿದರು.

ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಹೊಸ ಡ್ರೋನ್ ನೀತಿಯನ್ನು ಇತ್ತೀಚೆಗೆ ಜಾರಿಗೆ ತಂದಿದೆ. ಪ್ರಧಾನಿ ಮೋದಿಯವರ ದೂರದೃಷ್ಟಿಯ ನಾಯಕತ್ವದಲ್ಲಿ ಡ್ರೋನ್ ನೀತಿಯನ್ನು ರೂಪಿಸಲಾಗಿದೆ. ಡ್ರೋನ್ ಕಾರ್ಯಾಚರಣೆಗೆ ಸಂಬಂಧಿಸಿದ ನಿಬಂಧನೆಗಳನ್ನು 25ರಿಂದ 5ಕ್ಕೆ, ಶುಲ್ಕದ ವಿಧಗಳನ್ನು 72ರಿಂದ 4ಕ್ಕೆ ಇಳಿಸಿ, ಡ್ರೋನ್ ಕಾರ್ಯಾಚರಣೆ ಸುಗಮಗೊಳಿಸಲಾಗಿದೆ ಎಂದು ಸಿಂಧಿಯಾ ಹೇಳಿದರು.

ಹಸಿರು ವಲಯದಡಿ ಡ್ರೋನ್‌ಗಳ ಹಾರಾಟಕ್ಕೆ ಯಾವುದೇ ಅನುಮತಿಯ ಅಗತ್ಯವಿಲ್ಲ. ಕೆಂಪು ವಲಯಗಳು ಹಾರಾಟದ ಪ್ರದೇಶಗಳಲ್ಲದಿದ್ದರೂ ಹಳದಿ ವಲಯದಲ್ಲಿ ಅನುಮತಿ ಪಡೆಯುವ ಅಗತ್ಯವಿದೆ. '16 ಹಸಿರು ವಲಯಗಳಲ್ಲಿ 'ಆಕಾಶದಿಂದ ಔಷಧಗಳು' ಯೋಜನೆ ಕೈಗೆತ್ತಿಕೊಳ್ಳಲಾಗಿದೆ. ಇದರ ದತ್ತಾಂಶವನ್ನು ಮೂರು ತಿಂಗಳವರೆಗೆ ವಿಶ್ಲೇಷಿಸಲಾಗುತ್ತದೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ, ಆರೋಗ್ಯ ಸಚಿವಾಲಯ, ಐ.ಟಿ ಸಚಿವಾಲಯ, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಒಟ್ಟಾಗಿ ದತ್ತಾಂಶ ವಿಶ್ಲೇಷಿಸಲಿವೆ ಎಂದರು.

ತೆಲಂಗಾಣದ ಐ.ಟಿ ಮತ್ತು ಕೈಗಾರಿಕಾ ಸಚಿವ ಕೆ.ಟಿ. ರಾಮರಾವ್ ಹೈದರಾಬಾದ್‌ನ ಬೇಗಂಪೇಟೆ ವಿಮಾನ ನಿಲ್ದಾಣದಲ್ಲಿ ವಾಯುಯಾನ ವಿಶ್ವವಿದ್ಯಾಲಯ ಅಥವಾ ಶ್ರೇಷ್ಠತಾ ಕೇಂದ್ರ ಸ್ಥಾಪಿಸುವಂತೆ ಕೇಂದ್ರ ಸಚಿವರಿಗೆ ಮನವಿ ಮಾಡಿದರು.

ಹಲವು ವಿಮಾನಗಳ ಸಂಚಾರ ಮಾರ್ಗ ಬದಲಾವಣೆ

ದೆಹಲಿ: ಭಾರಿ ಮಳೆ, ಹಲವೆಡೆ ಜಲಾವೃತ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ ಬೆಳಿಗ್ಗೆ ಸುರಿದ ಭಾರಿ ಮಳೆಯಿಂದಾಗಿ ಇಲ್ಲಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಮುಂಭಾಗ ಸೇರಿದಂತೆ ನಗರದ ಹಲವು ಪ್ರದೇಶಗಳು ಜಲಾವೃತಗೊಂಡಿವೆ.

ಸ್ಥಳೀಯ ಸಂಸ್ಥೆಗಳ ಮಾಹಿತಿ ಪ್ರಕಾರ, ದೆಹಲಿ ವಿಮಾನ ನಿಲ್ದಾಣ ಸೇರಿದಂತೆ ನಗರದ ಮೋತಿ ಬಾಘ್, ಆರ್.ಕೆ. ಪುರಂ, ಮಧು ವಿಹಾರ್, ಹರಿನಗರ, ರೋಹ್ತಕ್ ರಸ್ತೆ, ಬದಾರ್‌ಪುರ, ಸೋಮ್ ವಿಹಾರ, ವರ್ತುಲ ರಸ್ತೆ ಸಮೀಪವಿರುವ ಐಪಿ ಸ್ಟೇಷನ್, ವಿಕಾಸ್ ಮಾರ್ಗ್, ಸಂಗಮ್ ವಿಹಾರ್, ಮೆಹುರುಲಿ-ಬಾದರ್‌ಪುರ ರಸ್ತೆ, ಪೌಲ್ ಪ್ರಹ್ಲಾಪುರ ಕೆಳ ಸೇತುವೆ, ಮುನಿರ್ಕಾ, ರಾಜ್‌ಪುರ ಖುರ್ದ್, ನಂಗ್ಲೊಯಿ ಮತ್ತು ಕಿರಾರಿ ಪ್ರದೇಶಗಳೆಲ್ಲ ಜಲಾವೃತಗೊಂಡಿವೆ. ನಾಗರಿಕರು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಜಲಾವೃತಗೊಂಡಿರುವ ಛಾಯಾಚಿತ್ರಗಳನ್ನು ಹಂಚಿಕೊಂಡಿದ್ದಾರೆ.

'ವಿಮಾನ ನಿಲ್ದಾಣದ ಮುಂಭಾಗದಲ್ಲಿ ಸ್ವಲ್ಪ ಸಮಯದವರೆಗೆ ಮಳೆ ನೀರು ತುಂಬಿತ್ತು. ಸದ್ಯ ಈ ಸಮಸ್ಯೆಯನ್ನು ಬಗೆಹರಿಸಿದ್ದೇವೆ' ಎಂದು ದೆಹಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಲಿ. (ಡಿಐಎಎಲ್) ಟ್ವೀಟ್ ಮಾಡಿದೆ.

'ಹವಾಮಾನ ವೈಪರೀತ್ಯದಿಂದಾಗಿ ಇಂದು ಬೆಳಿಗ್ಗೆ ಐದು ವಿಮಾನಗಳ ಸಂಚಾರ ಮಾರ್ಗವನ್ನು ಬದಲಿಸಲಾಗಿದೆ' ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ. ಲೋಕೋಪಯೋಗಿ ಇಲಾಖೆ ಸಿಬ್ಬಂದಿ ರಸ್ತೆಯಲ್ಲಿ ನಿಂತಿದ್ದ ಮಳೆ ನೀರನ್ನು ತೆರವುಗೊಳಿಸುವಲ್ಲಿ ನಿರತರಾಗಿದ್ದಾರೆ.

ದೆಹಲಿಯಲ್ಲಿ ಶನಿವಾರ ಮುಂಜಾನೆ ಸುರಿದ ಭಾರಿ ಮಳೆಯಿಂದಾಗಿ ರಸ್ತೆಗಳು ಜಲಾವೃತಗೊಂಡವು —ಪಿಟಿಐ ಚಿತ್ರ

ಅಂಡರ್‌ಪಾಸ್‌ನಲ್ಲಿ ಸಿಲುಕಿದ ಬಸ್: 40 ಜನರ ರಕ್ಷಣೆ

ಪಾಲಂ ಫ್ಲೈಓವರ್‌ನ ಅಂಡರ್‌ಪಾಸ್‌ನಲ್ಲಿ 40 ಪ್ರಯಾಣಿಕರನ್ನು ಸಾಗಿಸುತ್ತಿದ್ದ ಖಾಸಗಿ ಬಸ್ ಪ್ರವಾಹದ ನೀರಲ್ಲಿ ಸಿಲುಕಿ ಅಪಾಯ ಎದುರಾಗಿತ್ತು. ಮಥುರಾಗೆ ತೆರಳುತ್ತಿದ್ದ ಈ ಬಸ್‌ನಲ್ಲಿ ಮಹಿಳೆಯರು ಹಾಗೂ ಮಕ್ಕಳು ಇದ್ದರು. ಸ್ಥಳಕ್ಕೆ ದೌಡಾಯಿಸಿದ ಅಗ್ನಿಶಾಮಕ ದಳದ ಸಿಬ್ಬಂದಿಗಳು ಪ್ರಯಾಣಿಕರನ್ನು ರಕ್ಷಿಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 12-9-1996

- **ಭಾರತ ಅಣ್ವಸ್ತ್ರ ತಯಾರಿಸದು- ಪ್ರಧಾನಿ**

ಟೋಕಿಯೊ, ಸೆ. 11 (ಪಿಟಿಐ)- ಭಾರತ ಅಣ್ವಸ್ತ್ರಗಳನ್ನು ತಯಾರಿಸುವುದಿಲ್ಲ ಹಾಗೂ ಅಣ್ವಸ್ತ್ರ ಪರೀಕ್ಷೆಗಳನ್ನು ನಡೆಸುವುದಿಲ್ಲ ಎಂದು ಪ್ರಧಾನಿ ಎಚ್.ಡಿ. ದೇವೇಗೌಡ ಹೇಳಿದ್ದಾರೆ.

ಜಪಾನಿನ ಪತ್ರಿಕೆಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಅವರು 'ಭಾರತದ ಅಣುಶಕ್ತಿ ಕಾರ್ಯಕ್ರಮ ಕೇವಲ ವಿದ್ಯುತ್ ಉತ್ಪಾದನೆಗೆ ಮಾತ್ರ ಸೀಮಿತ' ಎಂದು ಪುನರುಚ್ಚರಿಸಿದ್ದಾರೆ. ಸಮಗ್ರ ಅಣ್ವಸ್ತ್ರ ನಿಷೇಧ ಒಪ್ಪಂದಕ್ಕೆ (ಸಿಟಿಬಿಟಿ) ಸಹಿ ಹಾಕದೇ ಅಣ್ವಸ್ತ್ರ ಪರೀಕ್ಷೆ ನಡೆಸುವುದು ಅಂತರರಾಷ್ಟ್ರೀಯ ಸಮುದಾಯ ಮತ್ತು ವಿಶ್ವದ ಬಲಿಷ್ಠ ಶಕ್ತಿಗಳ ಹಿತಕ್ಕೆ ವಿರುದ್ಧವಾದುದು ಎಂದು ಅಮೆರಿಕ ತಿಳಿಸಿದೆ.

50 ವರ್ಷಗಳ ಹಿಂದೆ

ಭಾನುವಾರ, 12-9-1971

- **ರಾಜ್ಯದ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಪ್ರಾಶಸ್ತ್ಯ ನೀಡಲು ಒತ್ತಾಯ**

ಬೆಳಗಾವಿ, ಸೆ. 11- ಕನ್ನಡ ನಾಡಿನಲ್ಲಿ ಕನ್ನಡದ ಸ್ಥಾನಮಾನದ ಏಳಿಗೆಗಾಗಿ ಮೀಸಲಾದ ಒಂದು ವ್ಯವಸ್ಥಿತ ಚಳವಳಿಯ ಅಗತ್ಯ ಈಗ ಎಂದಿಗಿಂತಲೂ ಹೆಚ್ಚಾಗಿದೆ ಎಂದು ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥರಾದ ಡಾ. ಹಾ.ಮಾ.ನಾಯಕ್ ಅವರು ಹೇಳಿದರು.

ತಿಳಕವಾಡಿಯ ಕಲಾಮಂದಿರದಲ್ಲಿ ಪ್ರಾರಂಭವಾದ ಎರಡು ದಿನಗಳ ಬೆಳಗಾವಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಿದ ಶ್ರೀಯುತರು, ರಾಜ್ಯದಲ್ಲಿನ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಪ್ರಾಶಸ್ತ್ಯ ಸಿಗಬೇಕಾದ ಅಗತ್ಯದ ಕುರಿತು ಒತ್ತಿ ಹೇಳಿದರು.

ದಿನ ಭವಿಷ್ಯ

ಭಾನುವಾರ ಸೆಪ್ಟೆಂಬರ್ 12, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ಷಷ್ಠಿ ಗಂ. 33-22 (ರಾ. 7-35) ಭಾನುವಾರ ನಿತ್ಯ ನಕ್ಷತ್ರ ವಿಶಾಖ ಗಂ. 16-57 (ಹ. 1-02) ವೈಧೃತಿ ನಾಮ ಯೋಗ ಗ. 23-33 ಕೌಲವ ಕರಣ ಗಂ. 6-19 ವಿಷ ಗಂ. 26-15 ಅಮೃತ ಶೇಷ ಗಂ. 0-9 ಅಮೃತ ಗಂ 48-36: ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30: ಸೂರ್ಯೋದಯ: 6-12 ಸೂರ್ಯಾಸ್ತ: 6-21 ಅದೃಷ್ಟ ಸಂಖ್ಯೆ 5

ಮೇಷ: ಉದ್ಯಮವೊಂದರ ಪ್ರಾರಂಭದ ವಿಚಾರ ಮಾಡಲಿದ್ದೀರಿ. ವ್ಯಾಪಾರ ವ್ಯವಹಾರಗಳಿಂದ ಉತ್ತಮ ಲಾಭ. ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವುದರಿಂದ ಆತ್ಮಸಂತೋಷ. ಅಪರೂಪದ ವ್ಯಕ್ತಿಯೊಬ್ಬರ ದರ್ಶನ ಸಾಧ್ಯತೆ.

ವೃಷಭ: ಆರ್ಥಿಕ ಪ್ರಗತಿಗಾಗಿ ಹೊಸ ಮಾರ್ಗವೊಂದನ್ನು ಕಂಡುಕೊಳ್ಳಲಿದ್ದೀರಿ. ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಚಿಂತನೆ. ಮನೆಯವರ ಇಷ್ಟಾರ್ಥದಂತೆ ಹೊಸ ವಸ್ತ್ರ ಒಡವೆಗಳನ್ನು ಖರೀದಿಸುವ ಸಾಧ್ಯತೆ.

ಮಿಥುನ: ಹಮ್ಮಿಕೊಂಡ ಕೆಲಸ–ಕಾರ್ಯಗಳು ನಿಧಾನವಾದರೂ ಪ್ರಗತಿಯಲ್ಲಿರುವವು. ವಿನಾ ಕಾರಣ ಚಿಂತೆಯನ್ನು ಬಿಟ್ಟು ಕಾರ್ಯಮಗ್ನರಾಗುವುದು ಉತ್ತಮ. ಮನೆಯವರೊಂದಿಗೆ ದೂರದ ಪ್ರಯಾಣ.

ಕರ್ಕಾಟಕ: ಮಕ್ಕಳ ವಿವಾಹದ ಸಲುವಾಗಿ ಕಾರ್ಯೋನ್ಮುಖರಾಗುವ ಸಾಧ್ಯತೆ. ವ್ಯವಹಾರದಲ್ಲಿ ಹೊಸತನವನ್ನು ಚಿಂತಿಸಲಿದ್ದೀರಿ. ಉತ್ಸಾಹದ ದಿನ. ಮನೆಯಲ್ಲಿ ಸಂಭ್ರಮದ ವಾತಾವರಣ.

ಸಿಂಹ: ಕೆಲಸ–ಕಾರ್ಯಗಳಿಂದ ಬಿಡುವು ದೊರೆತು ವಿರಾಮ. ಸಂಗಾತಿಯೊಂದಿಗೆ ಬಂಧು–ಬಾಂಧವರ ಭೇಟಿಗಾಗಿ ಪ್ರಯಾಣ ಮಾಡುವ ಸಾಧ್ಯತೆ. ಆರೋಗ್ಯದ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಕನ್ಯಾ: ಯಂತ್ರೋಪಕರಣಗಳ ಖರೀದಿ ಸಾಧ್ಯತೆ. ನೇಕಾರರಿಗೆ, ದರ್ಜಿಗಳಿಗೆ ಹೆಚ್ಚಿನ ವ್ಯವಹಾರ ಕುದುರುವುದರಿಂದಾಗಿ ಆದಾಯದಲ್ಲಿ ಹೆಚ್ಚಳ. ಕಂದಾಯ, ತೆರಿಗೆ ಅಧಿಕಾರಿಗಳಿಗೆ ಬಿಡುವಿಲ್ಲದ ದಿನ.

ತುಲಾ: ಸರ್ಕಾರಿ ನೌಕರರಿಗೆ ಸರ್ಕಾರದಿಂದ ವಿಶೇಷ ಸೌಲಭ್ಯ ಸಾಧ್ಯತೆ. ಕಲಾವಿದರಿಗೆ ಬಿಡುವಿಲ್ಲದ ಕೆಲಸಗಳೊಂದಿಗೆ ಹೆಚ್ಚಿನ ಧನಾಗಮನ. ರಾಜಕೀಯ ಮೇಲಾಟಗಳು ನಡೆದು ಕಿರಿಕಿರಿ ಉಂಟಾಗುವ ಸಾಧ್ಯತೆ.

ವೃಶ್ಚಿಕ: ಸ್ತ್ರೀಯರಿಗೆ ಉನ್ನತ ಸ್ಥಾನಮಾನಗಳು ಪ್ರಾಪ್ತವಾಗುವ ಜೊತೆಗೆ ಗೌರವಾದರಗಳು ಪ್ರಾಪ್ತವಾಗಲಿದೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡವರಿಗೆ ಬಿಡುವಿಲ್ಲದ ಕೆಲಸ.

ಧನು: ಆರಕ್ಷಕರು, ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿರುವವರಿಗೆ ತುರ್ತು ಕೆಲಸಗಳು ಎದುರಾಗುವ ಸಾಧ್ಯತೆ. ಭೂಮಿ, ನಿವೇಶನಗಳ ಖರೀದಿ ಸಾಧ್ಯತೆ. ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಳ್ಳಲಿದ್ದೀರಿ.

ಮಕರ: ಆರ್ಥಿಕ ಅನುಕೂಲಕ್ಕಾಗಿ ಕೈಗೊಂಡ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ಮಕ್ಕಳ ಆರೋಗ್ಯದ ವಿಚಾರದಲ್ಲಿ ಹೆಚ್ಚಿನ ಕಾಳಜಿ ಅವಶ್ಯ. ಸಂಸಾರ ಸಮೇತ ದೇವತಾ ದರ್ಶನ ಮಾಡಲಿದ್ದೀರಿ.

ಕುಂಭ: ಸಭೆ ಸಮಾರಂಭಗಳಲ್ಲಿ ವಿರಾಜಮಾನರಾಗುವ ಅವಕಾಶ. ಸಾಂಸ್ಕೃತಿಕ ಕ್ಷೇತ್ರದ ಉನ್ನತಿಗಾಗಿ ಧನ ಸಹಾಯ ಮಾಡಬೇಕಾದೀತು. ಸಾಮಾಜಿಕ ಗೌರವಾದರಗಳು ನಿಮ್ಮ ಪಾಲಿಗೆ ಬಂದೊದಗಲಿದೆ.

ಮೀನ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ತುರುಸಿನ ಕೆಲಸಗಳು ಎದುರಾಗುವ ಸಾಧ್ಯತೆ. ಅನಿವಾರ್ಯ ಪ್ರಯಾಣ ಎದುರಾಗಲಿದೆ. ಸಂಸಾರದ ವಿಚಾರದಲ್ಲಿ ಅಸಡ್ಡೆ ಸಲ್ಲದು. ವಿಶೇಷ ಭೋಜನಕ್ಕಾಗಿ ಖರ್ಚು.

ನಿಮ್ಮ ಜನ್ಮದಿನ 12-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಜೀವನದ ಹೊಸ ಮೆಟ್ಟಿಲೊಂದನ್ನು ತುಳಿಯಲಿದ್ದೀರಿ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣತಿ ಹೊಂದಿದ್ದರೂ ಕೃಷಿ ಕ್ಷೇತ್ರದಲ್ಲಿ ಆಸಕ್ತಿ. ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಯಶಸ್ಸನ್ನೂ ಸಾಧಿಸಿ ಸಾಮಾಜಿಕ ಗೌರವವನ್ನು ಹೊಂದುವಿರಿ.

‘ಮೀಸಲಾತಿ ಕಿತ್ತುಕೊಳ್ಳುವ ಹುನ್ನಾರ’

ಪ್ರಜಾವಾಣಿ ವಾರ್ತೆ

ಖರ್ಗೆ

ಮಂಗಳೂರು: ಕೇಂದ್ರ ಸರ್ಕಾರದ ಆಸ್ತಿ ನಗದೀಕರಣ ಯೋಜನೆಯು ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡುವ ಉದ್ದೇಶ ಹೊಂದಿದ್ದು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರಿಗೆ ನೀಡಲಾಗಿರುವ ಮೀಸಲಾತಿಯನ್ನು ಕಿತ್ತುಕೊಳ್ಳುವ ಹುನ್ನಾರ ಎಂದು ರಾಜ್ಯಸಭೆ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಇಬ್ಬರು ಮಾಡುತ್ತಿರುವ ಮಾರಾಟವನ್ನು ಇಬ್ಬರು ಖರೀದಿಸುತ್ತಿರುವ ಪರಿಸ್ಥಿತಿಗೆ ದೇಶವನ್ನು ತಂದು ನಿಲ್ಲಿಸಲಾಗಿದೆ. ಆದರೂ ಕಾಂಗ್ರೆಸ್ ಏನು ಮಾಡಿದೆ ಎಂದು ಪ್ರಶ್ನಿಸುತ್ತಿರುವುದು ದುರ್ದೈವ’ ಎಂದರು.

ಸುಳ್ಳು ಹೇಳುವುದರಲ್ಲಿ ನಿಸ್ಸೀಮವಾಗಿರುವ ಕೇಂದ್ರ ಸರ್ಕಾರ, ಆಯಿಲ್ ಬಾಂಡ್ ವಿಷಯದಲ್ಲೂ ಸುಳ್ಳು ಹೇಳುತ್ತಿದೆ. ಆಯಿಲ್ ಬಾಂಡ್ ಬಂದಿದ್ದು ಎನ್‌ಡಿಎ ಅಧಿಕಾರದಲ್ಲಿದ್ದಾಗ. ಆಯಿಲ್ ಬಾಂಡ್ ಮೇಲೆ ಇದ್ದ ಸಾಲ ₹1.34 ಲಕ್ಷ ಕೋಟಿ. ಏಳು ವರ್ಷದಲ್ಲಿ ತೆರಿಗೆ, ಜಿಎಸ್‌ಟಿ ರೂಪದಲ್ಲಿ ₹25 ಲಕ್ಷ ಕೋಟಿ ಸಂಗ್ರಹವಾಗಿದೆ. ಆದರೆ ಆಯಿಲ್ ಬಾಂಡ್‌ಗೆ ಪಾವತಿಯಾಗಿದ್ದು ₹35 ಸಾವಿರ ಕೋಟಿ ಮಾತ್ರ ಎಂದು ಹೇಳಿದರು.

ಜಾತ್ಯತೀತರ ಬೆಂಬಲ: ‘ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಜಾತ್ಯತೀತರ ಬೆಂಬಲದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ. ಈ ನಿಟ್ಟಿನಲ್ಲಿ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರ ಜೊತೆ ಮಾತನಾಡಿದ್ದು, ಅವರ ಬೆಂಬಲದ ವಿಶ್ವಾಸವಿದೆ’ ಎಂದು ತಿಳಿಸಿದರು.

‘ಎಲ್ಲ ಜಾತ್ಯತೀತರು ಬಿಜೆಪಿಯ ವಿರುದ್ಧವಿದ್ದು, ಬೆಂಬಲ ಕೋರಲಾಗಿದೆ. ಎಲ್ಲವೂ ವಿಶ್ವಾಸದ ಮೇಲೆ ನಡೆಯುತ್ತದೆ’ ಎಂದ ಅವರು, ಜೆಡಿಎಸ್ ಮೇಯರ್ ಸ್ಥಾನ ಕೇಳಿದರೆ ನೀಡಲು ಸಿದ್ಧವೇ ಎಂಬ ಪ್ರಶ್ನೆಗೆ, ‘ಅದು ಅಲ್ಲಿನ ಸ್ಥಳೀಯ ವಿಚಾರ. ಅವರು ನಿರ್ಧರಿಸುತ್ತಾರೆ’ ಎಂದರು.

ಇದಕ್ಕೂ ಮೊದಲು ಖರ್ಗೆ ಅವರು ಯೇನೆಪೋಯ ಆಸ್ಪತ್ರೆಗೆ ಭೇಟಿ ನೀಡಿ, ರಾಜ್ಯಸಭೆ ಸದಸ್ಯ ಆಸ್ಕರ್ ಫರ್ನಾಂಡಿಸ್ ಅವರ ಆರೋಗ್ಯ ವಿಚಾರಿಸಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಬಿಪಿಎಲ್ ಕುಟುಂಬದ ಸದಸ್ಯರಿಗೆ ತಲುಪದ ಸರ್ಕಾರದ ನೆರವು

ಕೋವಿಡ್: 2 ತಿಂಗಳಾದರೂ ಸಿಕ್ಕಿಲ್ಲ ₹ 1 ಲಕ್ಷ ಪರಿಹಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕೋವಿಡ್‌ನಿಂದಾಗಿ ದುಡಿಯುವ ಸದಸ್ಯರನ್ನು ಕಳೆದುಕೊಂಡ ಬಡತನ ರೇಖೆಗಿಂತ ಕೆಳಗಿನ (ಬಿಪಿಎಲ್) ಪ್ರತಿ ಕುಟುಂಬಕ್ಕೆ ರಾಜ್ಯ ಸರ್ಕಾರ ₹ 1 ಲಕ್ಷ ಆರ್ಥಿಕ ಪರಿಹಾರ ಘೋಷಿಸಿ ಎರಡು ತಿಂಗಳು ಕಳೆದರೂ ಫಲಾನುಭವಿ ಕುಟುಂಬಗಳಿಗೆ ಹಣ ಪಾವತಿ ಆಗಿಲ್ಲ.

ರಾಜ್ಯದಲ್ಲಿ 2020 ಮಾರ್ಚ್‌ನಿಂದ ಕೋವಿಡ್ ಮೊದಲ ಮತ್ತು ನಂತರ ಎರಡನೇ ಅಲೆ ಸಂದರ್ಭದಲ್ಲಿ ಹಲವರು ಮೃತಪಟ್ಟಿದ್ದಾರೆ. ಈ ಪೈಕಿ, ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ದುಡಿಯುವ ಸದಸ್ಯರನ್ನು ಕಳೆದುಕೊಂಡಿದೆ ಎಂಬ ಕಾರಣಕ್ಕೆ, ಅಂಥ ಕುಟುಂಬಗಳಿಗೆ ತಲಾ ₹ 1 ಲಕ್ಷ ನೆರವನ್ನು ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಘೋಷಿಸಿದ್ದರು. ಜುಲೈ 8ರಂದು ಈ ಬಗ್ಗೆ ಆದೇಶ ಹೊರಡಿಸಲಾಗಿದೆ.

ಮೃತರ ಪತ್ನಿ ಅಥವಾ ಕುಟುಂಬದ ಕಾನೂನುಬದ್ಧ ವಾರಸುದಾರರ ಬ್ಯಾಂಕ್ ಖಾತೆಗೆ ಹಣವನ್ನು ಆರ್‌ಟಿಜಿಎಸ್ ಅಥವಾ ನೆಫ್ಟ್ ಮೂಲಕ ನೇರವಾಗಿ ಜಮೆ ಮಾಡುವ ಹೊಣೆಯನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ನಿರ್ದೇಶಕರಿಗೆ ನೀಡಲಾಗಿದೆ. ಆದರೆ, ನೆರವಿಗೆ ಅರ್ಜಿ ಆಹ್ವಾನಿಸುವ ಪ್ರಕ್ರಿಯೆಯೇ ಆರಂಭ ಆಗಿಲ್ಲ! ಮೃತರ ವಾರಸುದಾರರಿಂದ ಅರ್ಜಿ ಆಹ್ವಾನಿಸಿ, ಬೆರಳೊತ್ತಿದರೆ ಪರಿಹಾರ ಹಣ ಖಾತೆಗೆ ಜಮೆ ಆಗುವವರೆಗಿನ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ನಡೆಸಬೇಕು ಎಂದು ಸರ್ಕಾರ ಸ್ಪಷ್ಟವಾಗಿ ತಿಳಿಸಿದೆ. ಹೀಗಾಗಿ, ಎನ್‌ಐಸಿ (ನ್ಯಾಷನಲ್ ಇನ್‌ಫಾರ್ಮಟಿಕ್ ಸೆಂಟರ್) ಮೂಲಕ ಹೊಸ ತಂತ್ರಾಂಶವನ್ನು ಪಿಂಚಣಿ ನಿರ್ದೇಶನಾಲಯ ಅಭಿವೃದ್ಧಿಪಡಿಸುತ್ತಿದೆ. ಈ ಕಾರ್ಯ ಇನ್ನೂ ಪ್ರಾಯೋಗಿಕ ಹಂತದಲ್ಲಿದೆ.

> **ವಾರದ ಹಿಂದೆಯಷ್ಟೇ ನಾನು ನಿರ್ದೇಶಕ ಹುದ್ದೆ ವಹಿಸಿಕೊಂಡಿದ್ದೇನೆ. ಆನ್‌ಲೈನ್ ಅರ್ಜಿ ಸ್ವೀಕರಿಸಲು ತಂತ್ರಾಂಶ ಅಭಿವೃದ್ಧಿ ಕಾರ್ಯ ಅಂತಿಮ ಹಂತದಲ್ಲಿದೆ**
>
> **ಸತೀಶ್‌ಕುಮಾರ್ ಡಿ.ಎಂ.** ನಿರ್ದೇಶಕ, ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯ

‘ಮೃತರ ಪತ್ನಿ ಅಥವಾ ಕಾನೂನು ಬದ್ಧ ವಾರಸುದಾರರು ನಾಡ ಕಚೇರಿಗೆ ತೆರಳಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿಯ ಆಧಾರದಲ್ಲಿ ಗ್ರಾಮ ಸಹಾಯಕರು (ವಿಎ) ಮೃತಪಟ್ಟವರ ಮನೆಗಳಿಗೆ ತೆರಳಿ ಪರಿಶೀಲಿಸಿ, ಕಂದಾಯ ನಿರೀಕ್ಷಕರಿಗೆ ವರದಿ ನೀಡಲಿದ್ದಾರೆ. ಅವರು ತಹಶೀಲ್ದಾರ್, ಬಳಿಕ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಿದ್ದಾರೆ. ಕೋವಿಡ್‌ನಿಂದ ವ್ಯಕ್ತಿ ಮೃತಪಟ್ಟ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿಯಿಂದ ಮಾಹಿತಿ ಪಡೆದು, ವಾರಸುದಾರರನ್ನು ಜಿಲ್ಲಾಧಿಕಾರಿಗಳು ಖಚಿತಪಡಿಸಿ ಹಣ ಬಿಡುಗಡೆಗೆ ಶಿಫಾರಸು ಮಾಡಲಿದ್ದಾರೆ. ಈ ಎಲ್ಲ ಪ್ರಕ್ರಿಯೆ ಕೇವಲ ಒಂದು ತಿಂಗಳಲ್ಲಿ ಮುಗಿಯಲಿದೆ’ ಎಂದು ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದ ನಿರ್ದೇಶಕ ಸತೀಶ್‌ಕುಮಾರ್ ಡಿ.ಎಂ. ತಿಳಿಸಿದರು.

‘ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಕೋವಿಡ್‌ನಿಂದ ಆಗುವ ಮರಣಗಳನ್ನು ದೃಢಪಡಿಸಲು ಮಾನದಂಡಗಳನ್ನು ನಿಗದಿಪಡಿಸಿದೆ. ಅದನ್ನು ಆಧರಿಸಿ, ಜಿಲ್ಲಾ ವೈದ್ಯಾಧಿಕಾರಿಗಳು ದೃಢಪಡಿಸಿದ ಸಾವಿನ ಪ್ರಕರಣಗಳಿಗೆ ಮಾತ್ರ ಪರಿಹಾರ ಪಾವತಿಸಲಾಗುತ್ತದೆ. ಒಂದು ಬಿಪಿಎಲ್ ಕುಟುಂಬದಲ್ಲಿ ಒಂದಕ್ಕಿಂತ ಹೆಚ್ಚು ಸದಸ್ಯರು ಕೋವಿಡ್‌ನಿಂದ ಮೃತಪಟ್ಟಿದ್ದರೂ ಒಬ್ಬರಿಗೆ ಮಾತ್ರ ನೆರವು ಸಿಗಲಿದೆ’ ಎಂದೂ ವಿವರಿಸಿದರು.

‘ಒಂದೇ ಬಾರಿಗೆ ಹಣ’

‘ಜಿಲ್ಲಾಧಿಕಾರಿಗಳು ಪರಿಶೀಲಿಸಿ ಅನುಮೋದನೆ ನೀಡಿದ ಬಳಿಕ ಎಲ್ಲ ಫಲಾನುಭವಿಗಳ ಖಾತೆಗೆ ಒಂದೇ ಬಾರಿಗೆ ಹಣ ಮಂಜೂರು ಮಾಡಲಾಗುವುದು. ಎಲ್ಲ ಪ್ರಕ್ರಿಯೆ ಆನ್‌ಲೈನ್ ಮೂಲಕ ನಡೆಯುವುದರಿಂದ ಮಾನವ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲ. ಕೋವಿಡ್‌ನಿಂದ ರಾಜ್ಯದಲ್ಲಿ ಸುಮಾರು 37 ಸಾವಿರ ಮೃತ ಪ್ರಕರಣಗಳಿದ್ದು, ಬಿಪಿಎಲ್ ಕುಟುಂಬದವರು ಪ್ರತಿ ಜಿಲ್ಲೆಯಲ್ಲಿ 500 ಇರಬಹುದು. ಅರ್ಜಿ ಬಂದ ನಂತರವೇ ಸರಿಯಾದ ಮಾಹಿತಿ ಲಭ್ಯ ಆಗಬಹುದು’ ಎಂದು ಸತೀಶ್‌ಕುಮಾರ್ ಡಿ.ಎಂ ತಿಳಿಸಿದರು.

ಪ್ರಯಾಣಿಕರ ಕೊರತೆ ರೈಲು ಸಂಚಾರ ರದ್ದು

ಹೊಸಪೇಟೆ (ವಿಜಯನಗರ): ಪ್ರಯಾಣಿಕರ ಕೊರತೆ ಕಾರಣ ನೈರುತ್ಯ ರೈಲ್ವೆ ಹೊಸಪೇಟೆ ವಿಭಾಗದ ಕೆಲ ರೈಲುಗಳ ಸಂಚಾರವನ್ನು ಮುಂದಿನ ಆದೇಶದವರೆಗೆ ರದ್ದುಗೊಳಿಸಲಾಗಿದೆ.

ಸೆ.14ರಿಂದ ಬೆಂಗಳೂರು-ಹೊಸಪೇಟೆ ಎಕ್ಸ್‌ಪ್ರೆಸ್ ವಿಶೇಷ ರೈಲು ಹಾಗೂ ಹೊಸಪೇಟೆ-ಹರಿಹರ ಪ್ಯಾಸೆಂಜರ್ ವಿಶೇಷ ರೈಲು ಸೇವೆಗಳನ್ನು ರದ್ದುಗೊಳಿಸಲಾಗಿದೆ.

ಸೆ.15ರಿಂದ ಹೊಸಪೇಟೆ-ಬೆಂಗಳೂರು ಎಕ್ಸ್‌ಪ್ರೆಸ್ ವಿಶೇಷ ರೈಲು ಹಾಗೂ ಹರಿಹರ-ಹೊಸಪೇಟೆ ಪ್ಯಾಸೆಂಜರ್ ವಿಶೇಷ ರೈಲುಗಳನ್ನು ಮುಂದಿನ ಆದೇಶದವರೆಗೂ ರದ್ದುಗೊಳಿಸಿ ಪ್ರಕಟಣೆ ಹೊರಡಿಸಿದೆ.

ಮುಂಬೈನಲ್ಲಿ ಗಣೇಶ ಚತುರ್ಥಿ ಆಚರಣೆಯ ಸಂದರ್ಭದಲ್ಲಿ ಸ್ವಯಂ ಸೇವಕರೊಬ್ಬರು ಶನಿವಾರ ಗಣೇಶ ಮೂರ್ತಿಯನ್ನು ಕೃತಕವಾಗಿ ನಿರ್ಮಿಸಲಾಗಿದ್ದ ಕೊಳದಲ್ಲಿ ವಿಸರ್ಜನೆ ಮಾಡಿದರು —ಪಿಟಿಐ ಚಿತ್ರ

ರಾಜ್ಯ ಕೋವಿಡ್ ಅಂಕಿ-ಅಂಶ

29,60,932 ▲	ಒಟ್ಟು ಸೋಂಕಿತರು (29,59,164 ಗುರುವಾರದ ವಿವರ)
16,672 ▼	ಸಕ್ರಿಯ ಪ್ರಕರಣಗಳು
29,06,746 ▲	ಗುಣಮುಖರಾದವರು
37,487 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	801	▼
ಗುಣಮುಖ	1,142	▲
ಸಾವು	15	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ದೀಪಾವಳಿಗೆ ‘ಜಿಯೊಫೋನ್ ನೆಕ್ಸ್ಟ್’

ನವದೆಹಲಿ (ಪಿಟಿಐ): ಗೂಗಲ್ ಜೊತೆಗೂಡಿ ತಯಾರಿಸಿರುವ ಅತಿ ಕಡಿಮೆ ಬೆಲೆಯ ‘ಜಿಯೊಫೋನ್ ನೆಕ್ಸ್ಟ್’ ಸ್ಮಾರ್ಟ್‌ಫೋನ್ ಅನ್ನು ದೀಪಾವಳಿಗೆ ಬಿಡುಗಡೆ ಮಾಡುವುದಾಗಿ ಜಿಯೊ ಕಂಪನಿಯು ತಿಳಿಸಿದೆ.

ಕಂಪನಿ ಈ ಹಿಂದೆ ಘೋಷಿಸಿದ್ದ ಪ್ರಕಾರ, ಸ್ಮಾರ್ಟ್‌ಫೋನ್ ಅನ್ನು ಶುಕ್ರವಾರ ಬಿಡುಗಡೆ ಮಾಡಬೇಕಿತ್ತು. ಆದರೆ, ಬಿಡುಗಡೆ ದಿನಾಂಕ ಮುಂದೂಡಿರುವುದಾಗಿ ಕಂಪನಿಯು ತಿಳಿಸಿದೆ.

2ಜಿ ಯಿಂದ 4ಜಿ ಸಂಪರ್ಕಕ್ಕೆ ಅಪ್‌ಗ್ರೇಡ್ ಆಗಲು ಬಯಸುವವರಿಗೆ ಈ ಸ್ಮಾರ್ಟ್‌ಫೋನ್ ಸೂಕ್ತವಾಗಿದೆ ಎಂದು ಕಂಪನಿ ಹೇಳಿಕೊಂಡಿದೆ. ಆದರೆ, ಇದರ ಬೆಲೆ ಎಷ್ಟಿರಲಿದೆ ಎನ್ನುವ ಮಾಹಿತಿಯನ್ನು ಕಂಪನಿ ನೀಡಿಲ್ಲ.

ಈ ಹೆಚ್ಚುವರಿ ಕಾಲಾವಕಾಶ ದೊರೆತಿರುವುದರಿಂದ ಸೆಮಿಕಂಡಕ್ಟರ್ ಕೊರತೆಯಿಂದ ಆಗುವ ಸಮಸ್ಯೆಯನ್ನು ನಿವಾರಿಸಲು ಅನುಕೂಲ ಆಗಲಿದೆ ಎಂದು ಜಿಯೊ ಹೇಳಿದೆ.

ಜುಲೈನಲ್ಲಿ ಕೈಗಾರಿಕಾ ಉತ್ಪಾದನೆ ಶೇ 11.5ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯು ಜುಲೈನಲ್ಲಿ ಶೇ 11.5ರಷ್ಟು ಬೆಳವಣಿಗೆ ಕಂಡಿದೆ. ತಯಾರಿಕೆ, ಗಣಿಗಾರಿಕೆ ಮತ್ತು ಇಂಧನ ವಲಯಗಳ ಉತ್ತಮ ಬೆಳವಣಿಗೆಯಿಂದಾಗಿ ಈ ಪ್ರಗತಿ ಸಾಧ್ಯವಾಗಿದೆ.

ಹಿಂದಿನ ವರ್ಷದ ಜುಲೈನಲ್ಲಿ ಕೈಗಾರಿಕಾ ಉತ್ಪಾದನೆ ಕುಸಿತ ಕಂಡಿದ್ದು ಸಹ 2021ರ ಜುಲೈನಲ್ಲಿ ಈ ಪ್ರಮಾಣದ ಬೆಳವಣಿಗೆಗೆ ಕಾರಣವಾಗಿದೆ. 2020ರ ಜುಲೈನಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 10.5ರಷ್ಟು ಕುಸಿದಿತ್ತು. 2021ರ ಜೂನ್ ತಿಂಗಳಿಗೆ ಹೋಲಿಸಿದರೆ ಶೇ 2.2ರಷ್ಟು ಇಳಿಕೆ ಆಗಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ 77.63ರಷ್ಟು ಕೊಡುಗೆ ನೀಡುವ ತಯಾರಿಕಾ ವಲಯವು ಜುಲೈನಲ್ಲಿ ಶೇ 10.5ರಷ್ಟು ಬೆಳವಣಿಗೆ ಕಂಡಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಾಹಿತಿ ನೀಡಿದೆ.

ಗಣಿಗಾರಿಕೆ ವಲಯದ ಉತ್ಪಾದನೆಯು ಶೇ 19.5 ರಷ್ಟು ಹಾಗೂ ಇಂಧನ ವಲಯದ ಉತ್ಪಾದನೆಯು ಶೇ 11.1ರಷ್ಟು ಪ್ರಗತಿ ಕಂಡಿವೆ. ಬಂಡವಾಳ ಸರಕುಗಳ ವಲಯವು ಶೇ 29.5ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ವರ್ಷದ ಜುಲೈನಲ್ಲಿ ಶೇ 22.8ರಷ್ಟು ಕುಸಿದಿತ್ತು.

ಗ್ರಾಹಕ ಬಳಕೆ ವಸ್ತುಗಳ ಉತ್ಪಾದನೆಯು ಶೇ 20.2ರಷ್ಟು ಪ್ರಗತಿ ಕಂಡಿದೆ. ಕಳೆದ ವರ್ಷದ ಜುಲೈನಲ್ಲಿ ಶೇ 23.7ರಷ್ಟು ಕುಸಿದಿತ್ತು ಎಂದು ಎನ್‌ಎಸ್‌ಒ ತಿಳಿಸಿದೆ. 2020ರ ಜುಲೈನಲ್ಲಿ ಐಐಪಿ 117.9 ರಷ್ಟಿತ್ತು. ಇದು 2021ರ ಜುಲೈನಲ್ಲಿ 131.4ಕ್ಕೆ ಏರಿಕೆ ಆಗಿದೆ.

ಕೈಗಾರಿಕಾ ಉತ್ಪಾದನೆಯು ಚೇತರಿಕೆ ಕಂಡುಕೊಳ್ಳುತ್ತಿದೆಯಾದರೂ 2019ರ ಜುಲೈನಲ್ಲಿ ಕಂಡಿದ್ದ ಬೆಳವಣಿಗೆಗೆ ಹೋಲಿಸಿದರೆ ಕಡಿಮೆ ಮಟ್ಟದಲ್ಲಿಯೇ ಇದೆ. ಕೋವಿಡ್ ಸಾಂಕ್ರಾಮಿಕದಿಂದಾಗಿ ಕೈಗಾರಿಕಾ ಉತ್ಪಾದನೆಯು ಕಳೆದ ವರ್ಷದ ಮಾರ್ಚ್‌ನಲ್ಲಿ ಶೇ 18.7ರಷ್ಟು ಕುಸಿತ ಕಂಡಿತ್ತು. 2020ರ ಆಗಸ್ಟ್‌ವರೆಗೂ ನಕಾರಾತ್ಮಕ ಮಟ್ಟದಲ್ಲಿಯೇ ಇತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1565 (1575)
ಸೋಯಾ (ರಿಫೈನ್ಡ್)	₹1370(1385)
ಸೂರ್ಯಕಾಂತಿ(ರಿಫೈನ್ಡ್)	₹1415(1440)
ಪಾಮೋಲಿನ್	₹1220 (1242)

ರಾಮನಗರ ರೇಷ್ಮೆ ಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹243-503
ದ್ವಿತಳಿ (ಬಿ.ವಿ)	₹288-539

ಮುಂಬೈ ಧಾರಣೆ

ಶೇಂಗಾ

11-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1575 (1585)
ಒಂದು ವಾರದ ಡೆಲಿವರಿ	1570 (1580)
ಸೋಯಾ ಕಚ್ಚಾ	1330 (1345)
ಪಾಮ್ ವಾರದ ಡೆಲಿವರಿ	1218 (1240)
ಸೂರ್ಯಕಾಂತಿ ಎಣ್ಣೆ ಕಚ್ಚಾ	1355 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,770 (47,050)
ಬೆಳ್ಳಿ ಕೆ.ಜಿ 63,300 (64,100)

ಆವರಣದಲ್ಲಿ ಗುರುವಾರದ ಧಾರಣೆ

ಖಾದ್ಯ ತೈಲ ಆಮದು ಸುಂಕ ಇಳಿಕೆ

ನವದೆಹಲಿ (ಪಿಟಿಐ): ಹಬ್ಬದ ಋತುವಿನಲ್ಲಿ ಖಾದ್ಯ ತೈಲಗಳ ಬೆಲೆಯನ್ನು ನಿಯಂತ್ರಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಶನಿವಾರದಿಂದ ಜಾರಿಗೆ ಬರುವಂತೆ ತಾಳೆ ಎಣ್ಣೆ, ಸೋಯಾ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆಗಳ ಮೇಲಿನ ಮೂಲ ಆಮದು ಸುಂಕವನ್ನು ಕಡಿಮೆ ಮಾಡಿದೆ.

ಹಣಕಾಸು ಸಚಿವಾಲಯದ ಪ್ರಕಟಣೆಯು ಪ್ರಕಾರ, ಕಚ್ಚಾ ತಾಳೆ ಎಣ್ಣೆಯ ಮೇಲಿನ ಮೂಲ ಆಮದು ಸುಂಕ ಶೇ 10ರಷ್ಟು ಇದ್ದಿದ್ದು ಶೇ 2.5ಕ್ಕೆ ಇಳಿಕೆ ಆಗಿದೆ. ಕಚ್ಚಾ ಸೋಯಾ ಎಣ್ಣೆ ಮತ್ತು ಕಚ್ಚಾ ಸೂರ್ಯಕಾಂತಿ ಎಣ್ಣೆಯ ಮೇಲಿನ ಸುಂಕವನ್ನು ಶೇ 7.5ರಿಂದ ಶೇ 2.5ಕ್ಕೆ ತಗ್ಗಿಸಲಾಗಿದೆ.

ಸಂಸ್ಕರಿಸಿದ ತಾಳೆ ಎಣ್ಣೆ, ಸೋಯಾ ಮತ್ತು ಸೂರ್ಯಕಾಂತಿ ಎಣ್ಣೆಗಳ ಮೇಲಿನ ಸುಂಕವು ಶೇ 35.75ರಷ್ಟಾಗಿದೆ.

ಈ ಸುಂಕ ಕಡಿತದಿಂದಾಗಿ ಪ್ರತಿ ಲೀಟರ್ ಮೇಲಿನ ಚಿಲ್ಲರೆ ಮಾರಾಟ ದರದಲ್ಲಿ ₹ 4–5ರಷ್ಟು ಕಡಿಮೆ ಆಗುವ ಸಾಧ್ಯತೆ ಇದೆ. ಆದರೆ, ಭಾರತವು ಆಮದು ಸುಂಕ ತಗ್ಗಿಸಿದ ಬಳಿಕ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಹೆಚ್ಚಾಗುವುದು ಸಾಮಾನ್ಯವಾಗಿದೆ. ಹೀಗಾದಲ್ಲಿ ಪ್ರತಿ ಲೀಟರ್ ಚಿಲ್ಲರೆ ಮಾರಾಟ ದರದಲ್ಲಿ ₹ 2–3 ರಷ್ಟು ಮಾತ್ರವೇ ಇಳಿಕೆ ಆಗಬಹುದು ಎಂದು ಸಾಲ್ವೆಂಟ್ ಎಕ್ಸ್‌ಟ್ರ್ಯಾಕ್ಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಎಸ್‌ಇಎ) ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ. ಮೆಹ್ತಾ ತಿಳಿಸಿದ್ದಾರೆ.

ಆಮ್ಲಜನಕ ಘಟಕ: ಸಿಎಸ್‌ಬಿ ಬ್ಯಾಂಕ್ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಆಮ್ಲಜನಕ ಸಿಲಿಂಡರ್ ಕೊರತೆಯನ್ನು ನೀಗಿಸುವ ಕಾರ್ಯದಲ್ಲಿ ಸಿಎಸ್‌ಬಿ ಬ್ಯಾಂಕ್ ಸಹ ಕೈಜೋಡಿಸಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ಕೇರಳದಲ್ಲಿನ ಪುಷ್ಪಗಿರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯ ಆವರಣದಲ್ಲಿ ಆಮ್ಲಜನಕ ಉತ್ಪಾದನಾ ಘಟಕ ನಿರ್ಮಾಣಕ್ಕಾಗಿ ₹ 1 ಕೋಟಿ ಮೊತ್ತವನ್ನು ನೀಡಿದೆ. ಈ ಘಟಕವು 100 ರೋಗಿಗಳಿಗೆ ನಿರಂತರ ಆಮ್ಲಜನಕ ಪೂರೈಸುವ ಸಾಮರ್ಥ್ಯವನ್ನು ಹೊಂದಿದೆ.

ಕೇರಳದ ಮೀನುಗಾರಿಕೆ, ಸಂಸ್ಕೃತಿ ಮತ್ತು ಯುವಜನ ಕಲ್ಯಾಣ ಸಚಿವ ಸಾಜಿ ಚೆರಿಯನ್ ಅವರು ಶನಿವಾರ ಈ ಘಟಕವನ್ನು ಉದ್ಘಾಟಿಸಿದ್ದಾರೆ. ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ವಿ.ಆರ್. ರಾಜೇಂದ್ರನ್ ಸೇರಿದಂತೆ ಇನ್ನೂ ಹಲವರು ಈ ವೇಳೆ ಉಪಸ್ಥಿತರಿದ್ದರು.

ಮೊದಲು ದೇಶದಲ್ಲೇ ತಯಾರಿಕೆ ಆರಂಭಿಸಿ: ಟೆಸ್ಲಾಗೆ ಸರ್ಕಾರ ಸೂಚನೆ

ನವದೆಹಲಿ (ಪಿಟಿಐ): ಟೆಸ್ಲಾ ಕಂಪನಿಯ ವಿದ್ಯುತ್ ಚಾಲಿತ ವಾಹನಗಳಿಗೆ ತೆರಿಗೆ ರಿಯಾಯಿತಿಗಳನ್ನು ಪರಿಗಣಿಸುವ ಮೊದಲು ಭಾರತದಲ್ಲಿಯೇ ತಯಾರಿಕೆಯನ್ನು ಆರಂಭಿಸುವಂತೆ ಬೃಹತ್ ಕೈಗಾರಿಕೆಗಳ ಸಚಿವಾಲಯವು ಆ ಕಂಪನಿಗೆ ಸೂಚಿಸಿದೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಭಾರತದಲ್ಲಿ ವಿದ್ಯುತ್ ಚಾಲಿತ ವಾಹನಗಳ ಮೇಲಿನ ಆಮದು ಸುಂಕವನ್ನು ಕಡಿತ ಮಾಡುವಂತೆ ಟೆಸ್ಲಾ ಕಂಪನಿಯು ಬೇಡಿಕೆ ಇಟ್ಟಿದೆ.

ಕೇಂದ್ರ ಸರ್ಕಾರವು ಯಾವುದೇ ವಾಹನ ತಯಾರಿಕಾ ಕಂಪನಿಗೆ ತೆರಿಗೆ ರಿಯಾಯಿತಿಗಳನ್ನು ನೀಡುತ್ತಿಲ್ಲ. ಟೆಸ್ಲಾ ಕಂಪನಿಗೆ ರಿಯಾಯಿತಿ ನೀಡಿದಲ್ಲಿ ದೇಶದಲ್ಲಿ ಕೋಟಿಗಟ್ಟಲೆ ಹೂಡಿಕೆ ಮಾಡಿರುವ ಬೇರೆ ಕಂಪನಿಗಳಿಗೆ ಉತ್ತಮ ಸಂದೇಶ ನೀಡಿದಂತಾಗುವುದಿಲ್ಲ ಎಂದು ಮೂಲಗಳು ಹೇಳಿವೆ.

ಪ್ರಸ್ತುತ, ಭಾರತವು ₹ 29.60 ಲಕ್ಷಕ್ಕೂ ಅಧಿಕ ಮೌಲ್ಯ (ಸಿಐಎಫ್-ವೆಚ್ಚ, ವಿಮೆ ಮತ್ತು ಸಾಗಣೆ ವೆಚ್ಚ) ಹೊಂದಿರುವ ಸಂಪೂರ್ಣ ಆಮದು ಮಾಡಿದ ಕಾರುಗಳ ಮೇಲೆ ಶೇ 60ರಿಂದ ಶೇ 100 ರವರೆಗೆ ಆಮದು ಸುಂಕವನ್ನು ವಿಧಿಸುತ್ತಿದೆ.

ಸದ್ಯ ಭಾರತದಲ್ಲಿ ಇರುವ ಆಮದು ಸುಂಕವು ವಿಶ್ವದಲ್ಲಿಯೇ ಅತಿ ಹೆಚ್ಚಿನ ಪ್ರಮಾಣದ್ದಾಗಿದೆ. ಹೀಗಾಗಿ ಎಲೆಕ್ಟ್ರಿಕ್ ವಾಹನಗಳಿಗೆ ತಾತ್ಕಾಲಿಕ ಸುಂಕ ಪರಿಹಾರವನ್ನು ನಿರೀಕ್ಷಿಸಲಾಗುತ್ತಿದೆ ಎಂದು ಟೆಸ್ಲಾ ಕಂಪನಿಯ ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಎಲಾನ್ ಮಸ್ಕ್ ಅವರು ಈಚೆಗಷ್ಟೇ ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ವೈಕುಂಠ ಸಮಾರಾಧನೆ

ಶ್ರೀ ಎಂ. ನಂಜಪ್ಪರೆಡ್ಡಿ
ಇವರು ದಿನಾಂಕ 02-09-2021 ಗುರುವಾರ ಬೆಳಿಗ್ಗೆ 3.55ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯ ಕಾರ್ಯವನ್ನು ದಿನಾಂಕ 12-09-2021 ಭಾನುವಾರ ಬೆಳಿಗ್ಗೆ 9:00 ಘಂಟೆಯಿಂದ 12:00 ಘಂಟೆಯವರೆಗೆ ರಾಮಸಂದ್ರ ಗ್ರಾಮದಲ್ಲಿ ನೆರವೇರಿಸಲು ತೀರ್ಮಾನಿಸಿದ್ದೇವೆ. ಬಂಧುಗಳು, ಆತ್ಮೀಯರು ಹಾಗೂ ಹಿತೈಷಿಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತ ಕುಟುಂಬಸ್ಥರು.

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಉದ್ಯೋಗಾವಕಾಶ
General
WORK STUDY and settle your future with salary. Are you a student with 10th, Plus-2, willing to work in HOMECARE-SERVICES, if yes call 6366883838, 9606347575. MAJ HEALTH CARE-SERVICES, Gandhinagar, Bangalore.

ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. 45 ವಯಸ್ಸಿನ ಒಳಗಿನವರು.ಊಟ, ವಸತಿ, ಸಂಬಳ ಕೊಡಲಾಗುವುದು. ಕನಕಪುರ ರಸ್ತೆ, ಬೆಂಗಳೂರು. ಸಂಪರ್ಕಿಸಿ: 9606173617.

✓ TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

Multiple Vacancy
A PVT ltd advt co. Needs 30 ASM, 700 Sales Exe. all HQs, for pamphlet booking, bst pkg, send CV hr. bgmas@gmail.com

Wanted
WE ARE Leading Channel Partners for ALL BANKS for Loans PL/ BL/ HL/ AL/ Mortgages.We are Looking for Insurance Agents, Retired/ VRS Govt Employees, Freelancer Marketers, Chit-fund Agents, Real Estate Agents. Contact: Money Sense 9533401177/ 8500499977

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ.ಬೆಂಗಳೂರು-56 ಸಂಪರ್ಕಿಸಿ: 9606385001, 9606523337

WANTED MALE & Female PUC/Graduates Freshers & Experience(M.Sc Chemistry or B.Sc Chemistry): 8660018006/ 9019696123

ಕನ್ನಡ ಪ್ರೂಫ್‌ರೀಡರ್‌ಗಳು ಬೇಕಾಗಿದ್ದಾರೆ. ನುಡಿ ಇಮೇಲ್‌ನಲ್ಲಿ ಪರಿಣಿತಿ ಇದ್ದರೆ ಆದ್ಯತೆ. ನಿಮ್ಮ ಸಂಕ್ಷಿಪ್ತ ಮಾಹಿತಿಯೊಂದಿಗೆ ಮೆಸೇಜ್ ಮಾಡಿ 9845168802

ವ್ಯಾಪಾರ
Business Offers
Finance
★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 08222841175, 08278291749.ಏಜೆಂಟರು ಸಂಪರ್ಕಿಸಬಹುದು.

ALL TYPES of funds avail from 8CR -150CR@ 8%P.A LAP, BUSINESS,PROJECTS, COST LESS PROCESS CT: 7200418844 E-MAIL: marcusgroups@yahoo.com

ಶಿಕ್ಷಣ
General
ಪರಿಚಯಿಸಲಾಗುತ್ತಿದೆ ವಿಜ್ಞಾನದ ಹೊಸ ಯುಟ್ಯೂಬ್ ಚಾನೆಲ್ Francis Verse.ಪ್ರೌಢಶಾಲಾ ವಿದ್ಯಾರ್ಥಿಗಳಿಗೆ,ಶಿಕ್ಷಕರಿಗೆ ವಿಜ್ಞಾನಕ್ಕೆ ಸಂಬಂಧಿಸಿದ ವಿಡಿಯೋ ಮತ್ತು ಶಾರ್ಟ್ಸ್ ವಿಡಿಯೋಗಳು.Subscribe ಮಾಡಿ https://www.youtube.com/c/FrancisVerse

HEALTH SPECIAL
ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್
ಸೇವಿಸಿ ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಿ
ಮಧುಮೇಹ ಕೊಲೆಸ್ಟ್ರಾಲ್ ಥೈರಾಡ್ ಸಮಸ್ಯೆಗಳಿಗೆ ಉತ್ತಮ ಪರಿಣಾಮ
“ಸಿರಿಚೈತನ್ಯ ಮಿಲ್ಲೆಟ್ ಮಿಕ್ಸ್ ಸೇವನೆ ದಿನವೆಲ್ಲ ಉತ್ಸಾಹ”
ರಾಜ್ಯಾದ್ಯಂತ ವಿತರಕರು ಬೇಕಾಗಿದ್ದಾರೆ. 99002 65678
ವಿತರಕರು: ಮಾರುತಿ ಟ್ರೇಡರ್ಸ್, ಬೆಂಗಳೂರು. 89701 15803
ಸಾಯಿ ಫಾರ್ಮ ಏಜೆನ್ಸಿ. ಚಂದ್ರಲೇಔಟ್ 99722 20720
ನೇಹಾ ಏಜೆನ್ಸಿ. ವಿಜಯನಗರ 70196 64608
ಹೊಯ್ಸಳ ಏಜೆನ್ಸಿ, ನೆಲಮಂಗಲ. 89701 15803
ತ್ಯಾಮಗೊಂಡ್ಲು. 9945776407
Our MILLET SOUP is available all KADAMBA HOTELS


ಭವಿಷ್ಯ
Astrology
“ಉಚಿತ ಭವಿಷ್ಯ, ಕ್ಷಣದಲ್ಲಿ ಪರಿಹಾರ” ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ, ಧನವಶೀಕರಣ, ಶತ್ರುವಶೀಕರಣ, ಸ್ತ್ರೀಪುರುಷವಶೀಕರಣ, ನಿಮ್ಮಲ್ಲಿ ಸಮಸ್ಯೆಯೇ?? ಪರಿಹಾರವಾಗಬೇಕೆ?? ಒಂದೇಕರೆಯಲ್ಲಿ ವಶೀಕರಣದ ವಿಶೇಷತಾಂತ್ರಿಕರಾದ ಗುರುರಾಜನ್ “ನಂಬಿದವರ ಪಾಲಿನಬೆಳಕು” 9731309181

★||ಶ್ರೀಶಾಕಾಂಬರಿದೇವಿ||★ ಆರಾಧಕರು ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂಯಾವುದೇ ಕಠಿಣ,ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈವಾಹಿಕ
Brides Wanted
Kannada
ಬ್ರಾಹ್ಮಣ, ವಧು, ವಯಸ್ಸು, 27, SSLC ಕಲಿತಿರುವ/ ವಯಸ್ಸು 32, PUC ವಧುವಿಗೆ ವರ ಬೇಕಾಗಿದೆ. 'ಮ್ಯಾರೇಜ್ ಬ್ಯೂರೋ'. ಮಂಗಳೂರು.9483260248

Matrimonial Bureaus
SC/ST ಮಾತೃಶ್ರೀ ವೈವಾಹಿಕ ಮಾಹಿತಿ ಕೇಂದ್ರ (ರಿ.) BE, M.Tech, MBA, MCA, MSc, MBBS, MS, MDS, PG/Degree, M.Com, MEd, ಛಲವಾದಿ, ಮಾದಿಗ, ನಾಯಕ, ಭೋವಿ ಆದಿಕರ್ನಾಟಕ, ಆದಿದ್ರಾವಿಡ, ಎಲ್ಲಾ ವಿದ್ಯಾರ್ಹತೆಯ ಮತ್ತು ಸರ್ಕಾರಿ-ಖಾಸಗಿ ಉದ್ಯೋಗದ ಸಾವಿರಾರು ವಧು-ವರರ ಮಾಹಿತಿಗಾಗಿ ಸಂಪರ್ಕಿಸಿ ಶ್ರೀ ಲಿಂಗರಾಜು #123, Amar Towers, Gandhinagar, Majestic, B'lore - 09. 8861107346

ಪ್ರವಾಸ
Travel
ಗೌರಿಗಣೇಶ ಹಬ್ಬದ ಶುಭಾಶಯಗಳು: 16.10.2021 7ದಿನಗಳ ತಮಿಳುನಾಡು, 24.10.2021 6ದಿನಗಳ ಕಾಶಿ,ಗಯಾ, 18.10.2021 12ದಿನಗಳ ಗುಜರಾತ್, ಮಧ್ಯಪ್ರದೇಶ, 18.10.2021,24.10.2021 10ದಿನಗಳ ಲೇಹ್‌ಲಡಾಕ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, 9342848791, 9880847001

ಶ್ರೀರಾಜರಾಜೇಶ್ವರಿ ಟೂರ್ಸ 9743895346, 9739618243 11-10-2021, 10ದಿನಗಳ ದಸರಾ ಪ್ರಯುಕ್ತ ರಾಜಸ್ಥಾನ, ಕುಲ್ ಭಾರ ವಿಲೇಜ್, ಸ್ಯಾಮ್ ಡೆಸೇರ್ಟ್, ನಾಥದ್ವಾರ ಪ್ರವಾಸ.

ಕಾಶಿ, ಗಯಾ, ಬುದ್ಧಗಯಾ, ಕೋಲ್ಕತ, ಭುವನೇಶ್ವರ್, ಕೊನಾರ್ಕ್,ಪುರಿಜಗನ್ನಾಥ್, ನವಂಬರ್,ಡಿಸೆಂಬರಿನಲ್ಲಿ. ಪ್ರತಿದಿನ ತಿರುಪತಿ ಪ್ಯಾಕೇಜ್ ವಿಜಯ ಟ್ರಾವಲ್ಸ್ ಮಲ್ಲೇಶ್ವರಂ, ಬೆಂಗಳೂರು. 9448294477

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

ಅತಿ ಹೆಚ್ಚು ಗ್ರ್ಯಾನ್ ಸ್ಲಾಂ ಪ್ರಶಸ್ತಿ ದಾಖಲೆಯ ಹೊಸ್ತಿಲಲ್ಲಿ ಸರ್ಬಿಯಾ ಆಟಗಾರ; ರಷ್ಯಾದ ಮೆಡ್ವೆಡೆವ್ ಎದುರಾಳಿ

ಕ್ಲೀನ್ ಸ್ವೀಪ್ ಸನಿಹ ನೊವಾಕ್

ನ್ಯೂಯಾರ್ಕ್: ಅರ್ಧ ಶತಮಾನದ ಹಿಂದಿನ ದಾಖಲೆ ಹಿಂದಿಕ್ಕಲು ಸರ್ಬಿಯಾದ ನೊವಾಕ್ ಜೊಕೊವಿಚ್ ಸಜ್ಜಾಗಿದ್ದಾರೆ. ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪ್ರಶಸ್ತಿ ಸುತ್ತು ಪ್ರವೇಶಿಸಿರುವ ಜೊಕೊವಿಚ್ ಫೈನಲ್‌ನಲ್ಲಿ ಜಯ ಸಾಧಿಸಿದರೆ ಪುರುಷರ ವಿಭಾಗದಲ್ಲಿ ವರ್ಷದ ಎಲ್ಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಗೆದ್ದ ಮೂರನೇ ಆಟಗಾರ ಎನಿಸಿಕೊಳ್ಳಲಿದ್ದಾರೆ.

ಶುಕ್ರವಾರ ರಾತ್ರಿ ನಡೆದ ನಾಲ್ಕರ ಘಟ್ಟದ ಪಂದ್ಯದಲ್ಲಿ ಜೊಕೊವಿಚ್ 4-6, 6-2, 6-4, 4-6, 6-2ರಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಎದುರು ಜಯ ಸಾಧಿಸಿದರು. ಟೋಕಿಯೊ ಒಲಿಂಪಿಕ್ಸ್‌ನ ಸೆಮಿಫೈನಲ್‌ನಲ್ಲಿ ಜ್ವೆರೆವ್ ವಿರುದ್ಧ ಜೊಕೊವಿಚ್ ಸೋತಿದ್ದರು. ಜ್ವೆರೆವ್ ಚಾಂಪಿಯನ್ ಆಗಿದ್ದರು. ಆದರೆ ಗ್ರ್ಯಾನ್‌ಸ್ಲಾಂ ಟೂರ್ನಿಯಲ್ಲಿ ಈ ವರ್ಷದ ಅಜೇಯ ಓಟ ಮುಂದುವರಿಸಿದರು. ಇದು ಈ ಬಾರಿ ಅವರ ಸತತ 27ನೇ ಜಯವಾಗಿದೆ.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಜೊಕೊವಿಚ್ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ರಷ್ಯಾ ಆಟಗಾರ ಡ್ಯಾನಿಯಲ್ ಮೆಡ್ವೆಡೆವ್ ವಿರುದ್ಧ ಸೆಣಸುವರು. ಈ ಪಂದ್ಯದಲ್ಲಿ ಗೆದ್ದರೆ ಅವರು ಹೊಸತೊಂದು ಮೈಲುಗಲ್ಲು ಸ್ಥಾಪಿಸಲಿದ್ದಾರೆ. ಇದು ಅವರ ದಾಖಲೆಯ 21ನೇ ಗ್ರ್ಯಾನ್‌ಸ್ಲಾಂ ಪ್ರಶಸ್ತಿ ಆಗಲಿದೆ. ಸದ್ಯ ಅತಿಹೆಚ್ಚು ಗ್ರ್ಯಾನ್ ಸ್ಲಾಂ ಪ್ರಶಸ್ತಿಯ ದಾಖಲೆಯನ್ನು ಅವರು ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಮತ್ತು ಸ್ಪೇನ್‌ನ ರಫೆಲ್ ನಡಾಲ್ ಜೊತೆ ಹಂಚಿಕೊಂಡಿದ್ದಾರೆ.

34 ವರ್ಷದ ಜೊಕೊವಿಚ್ ಫೆಬ್ರುವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಪ್ರಶಸ್ತಿ ಗೆದ್ದುಕೊಂಡಿದ್ದ ಅವರು ಜೂನ್‌ನಲ್ಲಿ ಫ್ರೆಂಚ್ ಓಪನ್ ಮತ್ತು ಜುಲೈನಲ್ಲಿ ವಿಂಬಲ್ಡನ್ ಪ್ರಶಸ್ತಿ ತಮ್ಮದಾಗಿಸಿಕೊಂಡಿದ್ದರು. 25 ವರ್ಷದ ಮೆಡ್ವೆಡೆವ್ ಅವರಿಗೆ ಇದು ಮೂರನೇ ಗ್ರ್ಯಾನ್‌ಸ್ಲಾಂ ಫೈನಲ್. 2019ರ ಅಮೆರಿಕ ಓಪನ್ ಫೈನಲ್‌ನಲ್ಲಿ ನಡಾಲ್‌ಗೆ ಮಣಿದಿದ್ದ ಅವರು ಈ ವರ್ಷದ ಆಸ್ಟ್ರೇಲಿಯನ್ ಓಪನ್‌ನಲ್ಲಿ ಜೊಕೊವಿಚ್ ಎದುರು ಸೋತಿದ್ದರು.

ಶುಕ್ರವಾರ ರಾತ್ರಿ ನಡೆದ ಸೆಮಿಫೈನಲ್‌ನಲ್ಲಿ ಮೆಡ್ವೆಡೆವ್ 12ನೇ ಶ್ರೇಯಾಂಕಿತ ಕೆನಡಾ ಆಟಗಾರ ಫೆಲಿಕ್ಸ್ ಆಗರ್ ಅಲಿಯಾಸಿಮ್ ಅವರನ್ನು 6-4, 7-5, 6-2ರಲ್ಲಿ ಮಣಿಸಿದ್ದರು.

ಕ್ಲೀನ್‌ಸ್ವೀಪ್ ಮಾಡಿದ ಟೆನಿಸ್ ಪಟುಗಳು

ಪುರುಷರ ವಿಭಾಗದಲ್ಲಿ ಅಮೆರಿಕದ ಡಾನ್ ಬಜ್ 1938ರಲ್ಲಿ ಎಲ್ಲ ಗ್ರ್ಯಾನ್‌ಸ್ಲಾಂ ಪ್ರಶಸ್ತಿಗಳನ್ನು ಗೆದ್ದುಕೊಂಡಿದ್ದರೆ ಆಸ್ಟ್ರೇಲಿಯಾದ ರಾಡ್ ಲೇವರ್ 1962ರಲ್ಲಿ ಕ್ಲೀನ್‌ಸ್ವೀಪ್ ಮಾಡಿದ್ದರು. ಮಹಿಳಾ ವಿಭಾಗದಲ್ಲಿ ಮೂವರು ಈ ಸಾಧನೆ ಮಾಡಿದ್ದಾರೆ. ಕೊನೆಯದಾಗಿ 1988ರಲ್ಲಿ ಸ್ಟೆಫಿ ಗ್ರಾಫ್ ಈ ಸಾಧನೆ ಮಾಡಿದ್ದರು.



ನೊವಾಕ್ ಜೊಕೊವಿಚ್ —ಎಎಫ್‌ಪಿ ಚಿತ್ರ

ಡ್ಯಾನಿಯಲ್ ಮೆಡ್ವೆಡೆವ್ —ಎಎಫ್‌ಪಿ ಚಿತ್ರ

ವಿಮಾನ ನಿಲ್ದಾಣದಲ್ಲಿ ತಂದೆ–ತಾಯಿ ಜೊತೆ ನೀರಜ್ ಚೋಪ್ರಾ –ಪಿಟಿಐ ಚಿತ್ರ

ನೀರಜ್ ಪಾಲಕರ ವಿಮಾನ ಪ್ರಯಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋ ಸ್ಪರ್ಧೆಯ ಚಾಂಪಿಯನ್ ಆಗುವ ಮೂಲಕ ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ ಗೆದ್ದುಕೊಟ್ಟ ನೀರಜ್ ಚೋಪ್ರಾ ಅವರ ತಂದೆ–ತಾಯಿಗೆ ಶನಿವಾರ ವಿಮಾನದಲ್ಲಿ ಪಯಣಿಸಿದ ಸಂಭ್ರಮ.

ಬಳ್ಳಾರಿಯಲ್ಲಿ ಜೆಎಸ್‌ಡಬ್ಲ್ಯು ನಡೆಸುತ್ತಿರುವ ಇನ್‌ಸ್ಪೈರ್ ಕ್ರೀಡಾ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನೀರಜ್ ಜೊತೆಯಲ್ಲಿ ತಂದೆ ಸತೀಶ್ ಕುಮಾರ್ ಮತ್ತು ತಾಯಿ ಸರೋಜ್ ದೇವಿ ಅವರನ್ನೂ ಕರೆದುಕೊಂಡು ಬಂದಿದ್ದರು. ದೆಹಲಿಯಿಂದ ಹೊರಡುವ ಮುನ್ನ ವಿಮಾನ ನಿಲ್ದಾಣ ಮತ್ತು ವಿಮಾನದ ಒಳಗೆ ಸೆಲ್ಫಿ ತೆಗೆದುಕೊಂಡ ನೀರಜ್ ಅವುಗಳನ್ನು ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

’ಇಂದು ನನ್ನ ಸಣ್ಣ ಕನಸೊಂದು ನನಸಾಯಿತು. ತಂದೆ–ತಾಯಿಯನ್ನು ವಿಮಾನದಲ್ಲಿ ಕೂರಿಸಬೇಕು ಎಂದು ಬಹಳ ವರ್ಷಗಳಿಂದ ಯೋಚಿಸುತ್ತಿದ್ದೆ. ಇಂದು ಅದು ಸಾಕಾರವಾಗಿದೆ’ ಎಂದು ನೀರಜ್ ಹೇಳಿದ್ದಾರೆ.

ಚೋಪ್ರಾ ಜೊತೆ ಕೋಚ್ ಮತ್ತು ಜರ್ಮನಿಯ ಬಯೊಮೆಕಾನಿಕ್ಸ್ ತಜ್ಞ ಕ್ಲಾಸ್ ಬಾರ್ತೊನೀಜ್ ಮತ್ತು ಒಲಿಂಪಿಯನ್ ಬಾಕ್ಸರ್ ಸತೀಶ್ ಕುಮಾರ್ ಅವರೂ ಇದ್ದರು. ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಕ್ರೀಡಾಪಟುಗಳಾದ ಶ್ರೀಜೇಶ್, ಬಜರಂಗ್ ಪೂನಿಯಾ ಮುಂತಾದವರನ್ನು ಜೆಎಸ್‌ಡಬ್ಲ್ಯು ಮತ್ತು ಇನ್‌ಸ್ಪೈರ್ ಕ್ರೀಡಾ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು ಎಂದು ಜೆಎಸ್‌ಡಬ್ಲ್ಯು ಮೂಲಗಳು ತಿಳಿಸಿವೆ.

ಹೆಚ್ಚಿನ ಮಾಹಿತಿ ನೀಡಲು ಸಂಸ್ಥೆ ನಿರಾಕರಿಸಿದೆ.

ಟಿಟಿ: ಯಶಸ್ವಿನಿಗೆ ಬೆಳ್ಳಿ

ಬೆಂಗಳೂರು: ರಾಜ್ಯದ ಯಶಸ್ವಿನಿ ಘೋರ್ಪಡೆ ಅವರು ಸ್ಲೊವೇನಿಯಾದಲ್ಲಿ ನಡೆದ ಡಬ್ಲ್ಯುಟಿಟಿ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ 17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ.

ಶುಕ್ರವಾರ ನಡೆದ ಫೈನಲ್‌ನಲ್ಲಿ ಯಶಸ್ವಿನಿ 11-8, 11-13, 7-11, 11-6, 3-11ರಲ್ಲಿ ರೊಮೇನಿಯಾದ ಎಲೆನಾ ಜಹಾರಿಯಾ ವಿರುದ್ಧ ಸೋತರು. ಸೆಮಿಫೈನಲ್‌ನಲ್ಲಿ ಅವರು ಉಕ್ರೇನ್‌ನ ವೆರೋನಿಕಾ ಮುಟಿಯುನಿಯಾ ಎದುರು 11-2, 11-7, 11-8ರಲ್ಲಿ ಜಯ ಗಳಿಸಿದರು.

ಎಂಟರ ಘಟ್ಟದಲ್ಲಿ ಜರ್ಮನಿಯ ಲೌರಾ ಕ್ರೈಮ್ ವಿರುದ್ಧ 11-7, 11-5, 11-4ರಲ್ಲಿ ಗೆಲುವು ಸಾಧಿಸಿದ ಯಶಸ್ವಿನಿ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ರುಮೇನಿಯಾದ ಇಯೋನಾ ಸಿಂಗೆರ್ಜನ್ ವಿರುದ್ಧ 11-3, 7-11, 11-7, 13-11ರಲ್ಲಿ ಮತ್ತು ಮೊದಲ ಸುತ್ತಿನಲ್ಲಿ ರಷ್ಯಾದ ಅನಸ್ತೇಸಿಯಾ ಬೆರೆಸ್ನೇವ ವಿರುದ್ಧ ಗೆದ್ದಿದ್ದರು.

ಯಶಸ್ವಿನಿ ಘೋರ್ಪಡೆ

ಹೈದರಾಬಾದ್ ರೇಸ್

ಜ್ಯೂಲಿಯೆಟ್ ಗೆಲ್ಲುವ ನಿರೀಕ್ಷೆ

ಗೋಲ್ಡನ್ ಜುಬಿಲಿ ಪ್ರೆಸಿಡೆಂಟ್ ಆಫ್ ಇಂಡಿಯಾ ಕಪ್ ಭಾನುವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜ್ಯೂಲಿಯೆಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಅಶ್ವಮಿಗ್‌ಸನ್ 1, ಇನ್‌ಸೈಡ್ ಸ್ಟೋರಿ 11, ಜಮಜೆಂಟ 7
2ನೇ ರೇಸ್: ಮಂಡಾಲ ಬೇ 3 ಏರಿಯಲ್ ಕಂಬಾಟ್ 11, ಡಿಫರೆಂಟ್ 2
3ನೇ ರೇಸ್: ನವೆಂಬರ್ ರೈನ್ 4, ಡ್ರೀಮ್ ಸ್ಟೇಷನ್ 2, ಕ್ವಾಲಿಟಿ ವಾರಿಯರ್ 5
4ನೇ ರೇಸ್: ಗುಡ್ ಕನೆಕ್ಷನ್ 9, ಹೌಸ್ ಆಫ್ ಡೈಮಂಡ್ಸ್ 2, ನ್ಯೂಲುಕ್ 3
5ನೇ ರೇಸ್: ಅಪೆಂಜೆಲ್ 2, ಲ್ಯಾಕ್ರೊಸ್ಸಿ 6, ಅಲ್ಲೂರೀಸ್ ಪ್ರೈಡ್ 7
6ನೇ ರೇಸ್: ಅಶ್ವ ಬ್ರಾವೋ 5, ಲಂಬಾರ್ಡಿ 11, ಅಶ್ವ ಯಶೋಬಾಲಿ 7
7ನೇ ರೇಸ್: ಜ್ಯೂಲಿಯೆಟ್ 1, ಅಲ್ಯೂರಿಂಗ್ ಸ್ಟಾರ್ 2, ಬಿಸ್ಟೇಟ್ 3
8ನೇ ರೇಸ್: ಪೈಂಟೆಡ್ ಅಪಾಚೆ 3, ಕಿಂಗ್ ರೋಜರ್ 4, ವಿನ್ ವಿಶನ್ (11)

ಉತ್ತಮ ಬೆಟ್: ಅಶ್ವ ಬ್ರಾವೋ

ಜಾಕ್‌ಪಾಟ್ 4,5,6,7,8	1ನೇ ಮಿನಿ ಜಾಕ್‌ಪಾಟ್ 2,3,4,5	2ನೇ ಜಾಕ್‌ಪಾಟ್ 5,6,7,8
1ನೇ ಟ್ರೆಬಲ್ 1,2,3	2ನೇ ಟ್ರೆಬಲ್ 3,4,5	3ನೇ ಟ್ರೆಬಲ್ 6,7,8

ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ವಿಜೇತ ಸುಹಾಸ್ ಅಭಿಮತ

ಪ್ಯಾರಿಸ್‌ನಲ್ಲಿ ಚಿನ್ನದ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಟೋಕಿಯೊದಲ್ಲಿ ಸ್ವಲ್ಪ ಅಂತರದಲ್ಲೇ ಅಗ್ರಸ್ಥಾನ ಕಳೆದುಕೊಂಡಿರುವೆ. ಚಿನ್ನದ ಪದಕ ಗೆಲ್ಲುವ ತುಡಿತ ಇಟ್ಟುಕೊಂಡೇ 2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ಗೆ ತೆರಳುವೆ’

ಟೋಕಿಯೊ ಪ್ಯಾರಾಲಿಂಪಿಕ್ಸ್ ಬ್ಯಾಡ್ಮಿಂಟನ್‌ನ ಎಸ್‌ಎಲ್4 ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದ ಕನ್ನಡಿಗ ಸುಹಾಸ್ ಎಲ್. ಯತಿರಾಜ್ ಅವರ ವಿಶ್ವಾಸದ ಮಾತುಗಳಿವು. ‘ಪ್ರಜಾವಾಣಿ’ ಸೆಲೆಬ್ರಿಟಿ ಲೈವ್ ಸಂವಾದದಲ್ಲಿ ಅವರು ಅಭಿಪ್ರಾಯ ಹಂಚಿಕೊಂಡರು.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ಲಾಳನಕೆರೆ ಗ್ರಾಮದಲ್ಲಿ ಜನಿಸಿದ ಸುಹಾಸ್ ಸದ್ಯ ಉತ್ತರ ಪ್ರದೇಶದ ನೊಯ್ಡಾದಲ್ಲಿ ಜಿಲ್ಲಾಧಿಕಾರಿಯಾಗಿದ್ದಾರೆ. ಸುರತ್ಕಲ್‌ನ ಎನ್‌ಐಟಿಕೆಯಲ್ಲಿ (ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ) ಕಂಪ್ಯೂಟರ್ ಎಂಜಿನಿಯರಿಂಗ್ ಪದವಿ ಪಡೆದವರು. ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಲೇ ಅವರು ಐಎಎಸ್ ಪರೀಕ್ಷೆ ಪಾಸಾಗಿದ್ದರು.

ಎಸ್‌ಎಲ್–4 ವಿಭಾಗದ ಫೈನಲ್‌ನಲ್ಲಿ ಫ್ರಾನ್ಸ್‌ನ ಅಗ್ರ ಶ್ರೇಯಾಂಕಿತ ಲೂಕಾಸ್ ಮಜುರ್ ಎದುರು ಸುಹಾಸ್ ಸೋತು ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡಿದ್ದರು.

ಪದಕ ಗೆದ್ದ ಬಳಿಕ ದೇಶದಲ್ಲಿ ಕಂಡ ಸಂಭ್ರಮದಿಂದ ಹೃದಯ ತುಂಬಿ ಬಂತು. ಜನರು ಸ್ವಾಗತಿಸಿದ ಮತ್ತು ಅಭಿನಂದಿಸಿದ ಪರಿ ವಿಶಿಷ್ಟವಾಗಿತ್ತು. ಅರ್ಹತಾ ಟೂರ್ನಿಗಳಲ್ಲಿ ಉತ್ತಮ ಸಾಮರ್ಥ್ಯ ತೋರಿ ವಿಶ್ವ ರ್‍ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದೊಂದಿಗೆ ಟೋಕಿಯೊ ಪ್ಯಾರಾಲಿಂಪಿಕ್ಸ್‌ಗೆ ಟಿಕೆಟ್ ಗಳಿಸಿದ್ದೆ. ಪದಕದ ನಿರೀಕ್ಷೆಗಿಂತ ಶ್ರೇಷ್ಠ ಸಾಮರ್ಥ್ಯ ತೋರುವತ್ತ ಗಮನಹರಿಸಿದ್ದೆ’ ಎಂದು ಅವರು ತಿಳಿಸಿದರು.

‘ಭಾರತದಲ್ಲಿ ಕ್ರೀಡಾಸಂಸ್ಕೃತಿ ಬೆಳೆಯುತ್ತಿದೆ. ಟಾಪ್ಸ್ ಮತ್ತಿತರ ಯೋಜನೆಗಳ ಮೂಲಕ ಅಥ್ಲೀಟ್‌ಗಳನ್ನು ಪ್ರೋತ್ಸಾಹಿಸಲಾಗುತ್ತಿದೆ. ನನ್ನ ಸಾಧನೆಯಲ್ಲಿ ಪೋಷಕರ ಪಾತ್ರ ಬಹಳಷ್ಟಿದೆ. ಜಿಲ್ಲಾಧಿಕಾರಿಯದ್ದು ಸಂವೇದನಾಶೀಲ ಮತ್ತು ಜವಾಬ್ದಾರಿಯುತ ಕೆಲಸ. ನನ್ನ ಕಾರಿನಲ್ಲಿ ಯಾವಾಗಲೂ ಬ್ಯಾಡ್ಮಿಂಟನ್ ರ್‍ಯಾಕೆಟ್ ಇಟ್ಟಿರುತ್ತೇನೆ. ಕೆಲಸದ ಅವಧಿಯ ಬಳಿಕ ರಾತ್ರಿ 10ರ ನಂತರ ಬ್ಯಾಡ್ಮಿಂಟನ್ ಆಡುತ್ತಿದ್ದೆ. ಬೆಳಗಿನ ಜಾವ ಫಿಟ್‌ನೆಸ್‌ಗೆ ಸಂಬಂಧಿಸಿದ ವ್ಯಾಯಾಮ ಮಾಡುತ್ತಿದ್ದೆ. ಎಷ್ಟು ಹೊತ್ತು ಅಭ್ಯಾಸ ಮಾಡುತ್ತೇವೆ ಎನ್ನುವುದಕ್ಕಿಂತ ಶಿಸ್ತಿನ ತಾಲೀಮು ಮುಖ್ಯ’ ಎಂದರು.

ಎಲೀಟ್ ಅಥ್ಲೀಟ್‌ಗಳಿಗೆ ಸರ್ಕಾರ ಹೆಚ್ಚಿನ ಸೌಲಭ್ಯ ನೀಡುತ್ತಿದೆ. ಜಿಲ್ಲಾ, ಗ್ರಾಮಮಟ್ಟದವರೆಗೆ ಈ ಸವಲತ್ತುಗಳು ಸಿಗಬೇಕು. ಅಥ್ಲೀಟ್‌ಗಳು ಸೋಲು, ನೋವಿನ ಲೆಕ್ಕ ಹಾಕದೆ ಪ್ರಯತ್ನ, ಛಲದೊಂದಿಗೆ ಮುನ್ನುಗ್ಗಿದರೆ ಯಶಸ್ಸು ಸಾಧ್ಯ ಎಂದರು.

ಸಂವಾದ ವೀಕ್ಷಿಸಲು https://www.youtube.com/watch?v=GfKsmXcw3YQ https://www.facebook.com/watch live/?v=1243643059422727&ref

ಪ್ರಜಾವಾಣಿ ಸಂವಾದ

ಸುಹಾಸ್ ಯತಿರಾಜ್– ಪಿಟಿಐ ಚಿತ್ರ

‘ಮಸಾಲೆ ಬೆಣ್ಣೆ ದೋಸೆ ಇಷ್ಟ’

ಟೋಕಿಯೊಗೆ ತೆರಳುವ ಮುನ್ನ ಕಟ್ಟುನಿಟ್ಟಿನ ಡಯಟ್ ಪಾಲಿಸಿದ್ದೆ. ಕರಿದ ಮತ್ತು ಸಿಹಿ ಪದಾರ್ಥಗಳನ್ನು ತ್ಯಜಿಸಿದ್ದೆ. ಆದರೆ ದೇಶಕ್ಕೆ ಪದಕದೊಂದಿಗೆ ಮರಳಿದ ಬಳಿಕ ಪ್ರತೀಕಾರದ ರೀತಿಯಲ್ಲಿ ಈ ಎಲ್ಲ ತಿಂಡಿಗಳನ್ನು ತಿನ್ನುತ್ತಿದ್ದೇನೆ. ಮಸಾಲೆ ಬೆಣ್ಣೆ ದೋಸೆ ನನ್ನಿಷ್ಟದ ತಿಂಡಿ. ಅದರಲ್ಲೂ ವಿಶೇಷವಾಗಿ ಬೆಂಗಳೂರು, ಶಿವಮೊಗ್ಗದಲ್ಲಿ ಸಿಗುವ ದೋಸೆ ಹೆಚ್ಚು ಇಷ್ಟ ಎಂದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಆತಿಥ್ಯ ಒಂದು ವಿಶೇಷ ಅನುಭವ. ಕಡಿಮೆ ಅಂತರದಲ್ಲಿ ಚಿನ್ನ ತಪ್ಪಿಸಿಕೊಂಡಿದ್ದರ ಕುರಿತು ಕೇಳಿದರು. ಪ್ರತಿಯೊಬ್ಬರನ್ನು ವೈಯಕ್ತಿಕವಾಗಿ ಮಾತನಾಡಿಸಿದರು ಎಂದು ಸುಹಾಸ್ ನುಡಿದರು.

ಪೆಲೆ ಆರೋಗ್ಯದಲ್ಲಿ ಚೇತರಿಕೆ

ಸಾವೊ ಪಾಲೊ (ಪಿಟಿಐ): ಶಸ್ತ್ರಚಿಕಿತ್ಸೆಗೆ ಒಳಗಾಗಿ ಚಿಕಿತ್ಸೆ ಪಡೆಯುತ್ತಿರುವ ಫುಟ್‌ಬಾಲ್ ದಿಗ್ಗಜ ಬ್ರೆಜಿಲ್‌ನ ಪೆಲೆ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ಕರುಳಿನಲ್ಲಿದ್ದ ಗಡ್ಡೆಯನ್ನು ಹೊರತೆಗೆಯಲು ಅವರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿತ್ತು.

‘80 ವರ್ಷದ ಪೆಲೆ ಅವರ ಚೇತರಿಕೆ ತೃಪ್ತಿಕರವಾಗಿದೆ. ಆದರೂ ಇನ್ನೂ ತೀವ್ರ ನಿಗಾ ಘಟಕದಲ್ಲಿದ್ದಾರೆ’ ಎಂದು ಅವರು ದಾಖಲಾಗಿರುವ ಅಲ್ಬರ್ಟ್ ಐನ್‌ಸ್ಟೈನ್ ಆಸ್ಪತ್ರೆಯ ಮೂಲಗಳು ತಿಳಿಸಿವೆ. ‘ಆರೋಗ್ಯದಲ್ಲಿ ಸುಧಾರಣೆ ಕಾಣುತ್ತಿದೆ’ ಎಂದು ಪೆಲೆ ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದಾರೆ. ಪೆಲೆ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ತೆರಳಿದ್ದರು. ಆಗ ಹೊಟ್ಟೆಯಲ್ಲಿ ಗಡ್ಡೆ ಬೆಳೆದಿರುವುದನ್ನು ವೈದ್ಯರು ಪತ್ತೆ ಹಚ್ಚಿದ್ದರು.

ಪೆಲೆ – ಎಎಫ್‌ಪಿ ಚಿತ್ರ

ಸಮರ್ಥನಂ ಕ್ರೀಡಾಪಟುಗಳು ಪ್ಯಾರಾ ಕ್ಲೈಂಬಿಂಗ್‌ಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಷ್ಯಾದ ಮಾಸ್ಕೊದಲ್ಲಿ ಇದೇ 14ರಿಂದ 17ರ ವರೆಗೆ ನಡೆಯಲಿರುವ ಪ್ಯಾರಾ ಕ್ಲೈಂಬಿಂಗ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಸಮರ್ಥನಂ ಸಂಸ್ಥೆಯ ಮೂವರು ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ.

ದೃಷ್ಟಿದೋಷವುಳ್ಳ ಮುರಳಿ, ಸುಜಾತ ಮತ್ತು ಸುನಿತಾ ಅವರು ಭಾರತವನ್ನು ಪ್ರತಿನಿಧಿಸಲಿದ್ದು ಸಮರ್ಥನಂ ಸಂಸ್ಥೆಯ ಕ್ರೀಡಾ ಸಂಯೋಜಕಿ ಶಿಖಾ ಅವರೊಂದಿಗೆ ಈ ಮೂವರು ತೆರಳುವರು. ರೋಪಕ್ ಕ್ಲೈಂಬಿಂಗ್‌ನಲ್ಲಿ ಇವರು ಸ್ಪರ್ಧಿಸಲಿದ್ದು ಬೆಂಗಳೂರಿನಲ್ಲಿ ಆಯ್ಕೆ ಪ್ರಕ್ರಿಯೆ ನಡೆದಿತ್ತು ಎಂದು ಪ್ರಕಟಣೆ ತಿಳಿಸಿದೆ.

‘ದೃಷ್ಟಿದೋಷವುಳ್ಳವರು ಇದೇ ಮೊದಲ ಬಾರಿ ಪ್ಯಾರಾ ಕ್ಲೈಂಬಿಂಗ್‌ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಿದ್ದಾರೆ’ ಎಂದು ಶಿಖಾ ತಿಳಿಸಿದ್ದಾರೆ.

ಸುನಿತಾ

ಸುಜಾತ

ಮುರಳಿ

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಕಾವ್ಯ ಲೋಕದ ಅಪೂರ್ವ ಚಿಂತಾಮಣಿ ಬಿ.ಆರ್.ಎಲ್ -75

ಬಿ.ಆರ್. ಲಕ್ಷ್ಮಣ ರಾವ್ ಕವಿ- ಕಾವ್ಯದ ಬಗ್ಗೆ ಮಾತು- ಕವಿತೆ-ಹಾಡು. ಕವಿತೆಗಳನ್ನು ಹಾಡಾಗಿಸುವವರು: ಗಾಯಕಿ ಎಂ.ಡಿ. ಪಲ್ಲವಿ, ವಾದ್ಯ ಸಹಕಾರ: ಕೃಷ್ಣ ಉಡುಪ, ಪ್ರದ್ಯುಮ್ನ, ವಾದಿ ಸಂಯೋಜನೆ: ಶ್ರೀನಿವಾಸ ಜಿ ಕಪ್ಪಣ್ಣ

ಬೆಳಿಗ್ಗೆ 12.30ಕ್ಕೆ



ಮಾತು-ಕತೆ ಮತ್ತು ಹಾಡು

ಕ್ಲಬ್ ಹೌಸ್

ಜಾನಪದ ಮತ್ತು ಮಹಿಳೆ

ಕಾಳೇಗೌಡ ನಾಗವಾರ, ಜಾನಪದ ವಿದ್ವಾಂಸ. ಪಿಚ್ಚಳ್ಳಿ ಶ್ರೀನಿವಾಸ್, ಜಾನಪದ ಗಾಯಕ, ಸಂಶೋಧಕ. ಶಿಲ್ಪಾ ಮುಡಬಿ, ಜಾನಪದ ಕಲಾವಿದೆ. ವಿಶ್ವೇಶ್ವರಿ ಬಸವಲಿಂಗಯ್ಯ ಹಿರೇಮಠ, ಜಾನಪದ ಕಲಾವಿದೆ ಮತ್ತು ನೀವು..

ಪ್ರಜಾವಾಣಿ ಆಲದಮರ

10.30 ರಿಂದ 12.30

ಡ್ರಗ್ಸ್ ಜಾಲ; ಯುವಸಮೂಹದ ರಕ್ಷಣೆ ಎಂಬ ವಿಷಯ ಕುರಿತ ಚರ್ಚೆಯಲ್ಲಿ ಎಸ್.ಟಿ. ರಮೇಶ್, ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ, ಪ್ರಶಾಂತ್ ಸಂಬರಗಿ, ಸಾಮಾಜಿಕ ಕಾರ್ಯಕರ್ತ. ನಿರೂಪಣೆ: ಸಂತೋಷ ಜಿಗಳಿಕೊಪ್ಪ

ಹರಟೆ ಕಟ್ಟೆ

ಮಧ್ಯಾಹ್ನ 3 ರಿಂದ

ಪ್ರಜಾವಾಣಿ ಕನ್ನಡ ಧ್ವನಿ

ಪಾಡ್‌ಕಾಸ್ಟ್: ಈದಿನದ ವಿಶೇಷ : ಸಂಜೆ 4 ವೈದ್ಯಮಿತ್ರ

ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್ ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30: ಕಥಾಸಾಗರ

ಅಮೆರಿಕದ 9/11 ಭಯೋತ್ಪಾದಕ ದಾಳಿಗೆ 20 ವರ್ಷ

ಭಯೋತ್ಪಾದನೆ ನಿಗ್ರಹ; ಒಗ್ಗಟ್ಟಿಗೆ ಶ್ಲಾಘನೆ

ವಿಶ್ವಸಂಸ್ಥೆ (ಪಿಟಿಐ): ಅಮೆರಿಕದ ಮೇಲೆ ಸೆ.11, 2001ರಂದು ಉಗ್ರರು ನಡೆಸಿದ ದಾಳಿಗೆ 20 ವರ್ಷಗಳು ತುಂಬಿದ್ದು,‘ಈ ಎರಡು ದಶಕಗಳ ಅವಧಿಯಲ್ಲಿ ಅಂತರರಾಷ್ಟ್ರೀಯ ಸಮುದಾಯಗಳು ಜಾಗತಿಕ ಮಟ್ಟದಲ್ಲಿ ಭಯೋತ್ಪಾದನೆ ನಿಗ್ರಹಕ್ಕಾಗಿ ಒಗ್ಗಟ್ಟು ಮತ್ತು ಏಕತೆ ಪ್ರದರ್ಶಿಸಿದ್ದನ್ನು ಸ್ಮರಿಸುತ್ತೇವೆ’ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಹೇಳಿದ್ದಾರೆ.

ಅಂದು ಇದೇ ದಿನ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ 90 ದೇಶಗಳ ಸುಮಾರು 3 ಸಾವಿರ ಜನರು ಮೃತಪಟ್ಟಿದ್ದರು. ಸಾವಿರಾರು ಮಂದಿ ಗಾಯಗೊಂಡಿದ್ದರು. ಲಕ್ಷಾಂತರ ಜನರ ಮನಸ್ಸಿನಲ್ಲಿ ನೋವಿನ ಕಾರ್ಮೋಡ ಕವಿದಿತ್ತು’ ಎಂದು ಗುಟೆರಸ್ ಅವರು ಶುಕ್ರವಾರದ ಸಂದೇಶದಲ್ಲಿ ನೆನಪಿಸಿಕೊಂಡಿದ್ದಾರೆ.

‘ಅಮೆರಿಕದ ಈ ದಾಳಿಯ ನಂತರ, ಜಾಗತಿಕವಾಗಿ ಭಯೋತ್ಪಾದನೆ ನಿಗ್ರಹಿಸಲು ಅಂತಾರಾಷ್ಟ್ರೀಯ ಸಮುದಾಯವು ತೋರುತ್ತಿರುವ ಒಗ್ಗಟ್ಟು, ಐಕ್ಯತೆ ಮತ್ತು ಸಂಕಲ್ಪವನ್ನು ನಾವು ಸ್ಮರಿಸುತ್ತೇವೆ’ ಎಂದು ಗುಟೆರಸ್ ಸಂದೇಶದಲ್ಲಿ ತಿಳಿಸಿದ್ದಾರೆ.‘ಭಯೋತ್ಪಾದನೆ ವಿರುದ್ಧದ ಹೋರಾಟಕ್ಕಾಗಿ ನಾವು ಅಮೆರಿಕದ ನ್ಯೂಯಾರ್ಕ್ ಹಾಗೂ ವಿಶ್ವದಾದ್ಯಂತ ಉಗ್ರ ಚಟುವಟಿಕೆಳಿಂದ ಸಂತ್ರಸ್ತರಾಗಿರುವ ಎಲ್ಲ ರಾಷ್ಟ್ರಗಳೊಂದಿಗೆ ಬೆಂಬಲವಾಗಿ ನಿಲ್ಲುತ್ತೇವೆ’ ಎಂದು ಭರವಸೆ ನೀಡಿದ್ದಾರೆ.

2001ರ ಸೆಪ್ಟೆಂಬರ್ 11ರಂದು ವಿಶ್ವ ವ್ಯಾಪಾರ ಕೇಂದ್ರದ ಅವಳಿ ಗೋಪುರಗಳಿಗೆ ಅಲ್‌ಖೈದಾ ಉಗ್ರರು ವಿಮಾನಗಳನ್ನು ನುಗ್ಗಿಸಿದ್ದರು. ಇದು ಅಮೆರಿಕದ ಇತಿಹಾಸದಲ್ಲೇ ಅತ್ಯಂತ ಭೀಕರ ಭಯೋತ್ಪಾದಕ ದಾಳಿ ಎನಿಸಿದೆ.



ಆಂಟೊನಿಯೊ ಗುಟೆರಸ್

ಭಾರತದ ಮಾನವೀಯ ಮೌಲ್ಯಗಳೇ ಪರಿಹಾರ: ಪ್ರಧಾನಿ ಮೋದಿ

ಅಹಮದಾಬಾದ್ (ಪಿಟಿಐ): ಭಾರತದ ಮಾನವೀಯ ಮೌಲ್ಯಗಳ ಮೂಲಕ ಭಯೋತ್ಪಾದಕ ದಾಳಿಯಂತಹ ದುರಂತಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು ಎಂಬುದನ್ನು ಜಗತ್ತು ಈಗ ಅರಿತುಕೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ತಿಳಿಸಿದರು.

ಅಮೆರಿಕದಲ್ಲಿ 2001ರ ಸೆಪ್ಟೆಂಬರ್ 11ರಂದು ವಿಶ್ವ ವ್ಯಾಪಾರ ಕೇಂದ್ರದ ಅವಳಿ ಗೋಪುರಗಳ ಮೇಲೆ ನಡೆದ ಭಯೋತ್ಪಾದಕ ದಾಳಿಯು ಮಾನವೀಯತೆಯ ಮೇಲಿನ ದಾಳಿಯಾಗಿದೆ. ಇದು ಜಗತ್ತಿಗೆ ಅನೇಕ ವಿಷಯಗಳನ್ನು ಕಲಿಸಿದೆ ಎಂದು ಅವರು ಹೇಳಿದರು.

ಅಹಮದಾಬಾದ್‌ನ ಸರ್ದಾರ್‌ಧಾಮ್ ಭವನ ಸಂಕೀರ್ಣವನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

1893ರ ಸೆಪ್ಟೆಂಬರ್ 11ರಂದು ಸ್ವಾಮಿ ವಿವೇಕಾನಂದ ಅವರು ಶಿಕಾಗೊದಲ್ಲಿ ನಡೆದ ವಿಶ್ವ ಧರ್ಮಗಳ ಸಂಸತ್ತಿನ ಸಭೆಯಲ್ಲಿ ನಿಂತು ಭಾರತದ ಮಾನವೀಯ ಮೌಲ್ಯಗಳನ್ನು ಜಗತ್ತಿಗೆ ಪರಿಚಯಿಸಿದರು ಎಂದು ಪ್ರಧಾನಿ ಸ್ಮರಿಸಿದರು.

ತಮಿಳು ಕವಿ ಸುಬ್ರಹ್ಮಣ್ಯ ಭಾರತಿ ಅವರ 100ನೇ ಪುಣ್ಯ ತಿಥಿ ದಿನವಾದ ಶನಿವಾರ, ತಮಿಳು ಅಧ್ಯಯನಕ್ಕಾಗಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕಲಾ ವಿಭಾಗದಲ್ಲಿ ಒಂದು ಅಧ್ಯಯನ ಪೀಠ ಸ್ಥಾಪಿಸುವುದಾಗಿ ಮೋದಿ ಘೋಷಿಸಿದರು.

ಪೋಷಕರಿಲ್ಲದೆ ಬೆಳೆದ ಮಕ್ಕಳು: ಬೈಡನ್ ಬೇಸರ

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು 9/11ರ ದಾಳಿ ನಡೆದ ತಾಣಗಳಿಗೆ ಭೇಟಿ ನೀಡಿ ಕಂಬನಿ ಮಿಡಿದರು.

‘20 ವರ್ಷಗಳಲ್ಲಿ ಅನೇಕ ಮಕ್ಕಳು ಪೋಷಕರು ಇಲ್ಲದೆ ಬೆಳೆದಿದ್ದಾರೆ ಮತ್ತು ಪೋಷಕರು ಮಕ್ಕಳಿಲ್ಲದೆ ತೊಂದರೆ ಅನುಭವಿಸಿದ್ದಾರೆ’ ಎಂದು ಬೈಡನ್ ಬೇಸರ ವ್ಯಕ್ತಪಡಿಸಿದ್ದಾರೆ.

ಡಿಸುವಲ್ಲಿ ವಿಫಲ: ಬ್ರಿಟನ್ ಪ್ರಧಾನಿ: ಅಮೆರಿಕದಲ್ಲಿ ನಡೆದಿದ್ದ 9/11ರ ದಾಳಿಯ ಹಿಂದಿರುವ ಭಯೋತ್ಪಾದಕರು, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಮೇಲಿನ ನಂಬಿಕೆಯನ್ನು ಅಲುಗಾಡಿಸುವಲ್ಲಿ ವಿಫಲರಾಗಿದ್ದಾರೆ ಎಂದು ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಹೇಳಿದ್ದಾರೆ.

ಭಯೋತ್ಪಾದನೆ ಬೆದರಿಕೆ ಹೋಗದೇ ಇದ್ದರೂ, ಜನರು ‘ಶಾಶ್ವತ ಭಯದಲ್ಲಿ’ ಬದುಕಲು ನಿರಾಕರಿಸಿದ್ದಾರೆ ಎಂದು ಅವರು ಟ್ವೀಟ್ ಮಾಡಿದ್ದಾರೆ.

ಪ್ರಜಾಪ್ರಭುತ್ವದ ನಂಬಿಕೆ ಅಲುಗಾ

ಪ್ರಜಾವಾಣಿ

ಪ್ರಶ್ನೆಯ ಗುಟ್ಟು ಮಾಡಿರಿ ರಟ್ಟು

ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು

ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!

ಪ್ರಶ್ನೆ 1 ‘ಸಂಪಂಗಪ್ಪನ ಮಗ ಮರಿ ಸಂಪಂಗಪ್ಪ’ದಲ್ಲಿ 2ಸ 2ಪ 2ಗ ಇದೆ. ಸ ಹಾಗೂ ಪ ಬಳಸದೆ ನೀವು "ಅದನ್ನು" ಉಚ್ಚರಿಸಬಹುದೇ?

ಪ್ರಶ್ನೆ 2 ಸೋಮವಾರ, ಬುಧವಾರ ಹಾಗೂ ಶುಕ್ರವಾರವನ್ನು ಬಳಸದೆ ಸತತ ಮೂರು ದಿನಗಳನ್ನು ಹೆಸರಿಸಿ?

ಬಂಪರ್ ಬಹುಮಾನ 1 ವಾಟರ್ ಪ್ಯೂರಿಫೈಯರ್

3D ಪಜ್ಲ್ 3 ಸ್ಪೆಶಲ್ ಬಹುಮಾನ

ಗಿಫ್ಟ್ ವೌಚರ್ ₹500 ಪ್ರತಿ ದಿನ 10 ಅದೃಷ್ಟಶಾಲಿಗಳಿಗೆ

*ಚಿತ್ರಗಳು ಸಾಂಕೇತಿಕ

ಹಿಂದಿನ ಪ್ರಶ್ನೆಗೆ ಉತ್ತರ: 1) ಗುಂಡ । 2) ಅಪ್ಪ – ಮಗ – ಮೊಮ್ಮಗ

ರಣಜಿ ಕ್ರಿಕೆಟ್: ಶೇ 50 ಪರಿಹಾರ?

ನವದೆಹಲಿ (ಪಿಟಿಐ): ಕೋವಿಡ್ ನಿಂದಾಗಿ ಕಳೆದ ಬಾರಿ ರಣಜಿ ಕ್ರಿಕೆಟ್ ಟೂರ್ನಿ ನಡೆಯದ ಕಾರಣ ತೊಂದರೆಗೆ ಒಳಗಾದ ಆಟಗಾರರಿಗೆ ಪಂದ್ಯ ಶುಲ್ಕದ ಕನಿಷ್ಠ ಶೇಕಡಾ 50ರಷ್ಟು ಮೊತ್ತ ಪರಿಹಾರ ರೂಪದಲ್ಲಿ ಸಿಗುವ ಸಾಧ್ಯತೆ ಇದೆ. ಈ ಕುರಿತ ಪ್ರಸ್ತಾವ ಬಿಸಿಸಿಐ ಅಪೆಕ್ಸ್ ಸಮಿತಿಯ ಮುಂದಿದ್ದು ಅನುಮತಿಗಾಗಿ ಕಾಯಲಾಗುತ್ತಿದೆ.

ಇದೇ 20ರಂದು ನಡೆಯಲಿರುವ ಅಪೆಕ್ಸ್ ಸಮಿತಿ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಯಲಿದೆ. ಅಧ್ಯಕ್ಷ ಸೌರವ್ ಗಂಗೂಲಿ ಮತ್ತು ಕಾರ್ಯದರ್ಶಿ ಜಯ್ ಶಾ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ.

ಮಣಿಕಾ ಆರೋಪ: ವಿಚಾರಣೆಗೆ ಸಮಿತಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ತಂಡದ ಕೋಚ್ ಸೌಮ್ಯದೀಪ್ ರಾಯ್ ವಿರುದ್ಧ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ ಮಾಡಿರುವ ಪಂದ್ಯ ಫಿಕ್ಸಿಂಗ್ ಆರೋಪದ ಕುರಿತು ವಿಚಾರಣೆಗೆ ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್ಐ) ಐದು ಜನರ ವಿಚಾರಣಾ ಸಮಿತಿ ರಚಿಸಿದೆ.

ಶನಿವಾರ ನಡೆದ ಟಿಟಿಎಫ್ಐನ ಕಾರ್ಯನಿರ್ವಾಹಕ ಸಮಿತಿ ವರ್ಚುವಲ್ ಸಭೆಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಟಿಟಿಎಫ್ಐ ಉಪಾಧ್ಯಕ್ಷ ಚಿರಂಜೀವ್ ಚೌಧರಿ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಸಮಿತಿಯು ಆರು ವಾರದಲ್ಲಿ ವರದಿ ಸಲ್ಲಿಸಲಿದೆ.

ರೋಹಿತ್ ಶರ್ಮಾ– ಪಿಟಿಐ ಚಿತ್ರ

ಐಪಿಎಲ್: ದುಬೈಗೆ ಭಾರತದ ಆಟಗಾರರು

ಮ್ಯಾಂಚೆಸ್ಟರ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಭಾರತದ ಆಟಗಾರರು ಕೋವಿಡ್‌ಗೆ ಸಂಬಂಧಿಸಿದ ಆರ್‌ಟಿ–ಪಿಸಿಆರ್ ಪರೀಕ್ಷೆಯ ಬಳಿಕ ಶನಿವಾರ ದುಬೈಗೆ ತೆರಳಿದರು.

ಆಯಾ ಫ್ರಾಂಚೈಸ್‌ಗಳು ತಮ್ಮ ಆಟಗಾರರಿಗೆ ಪ್ರಯಾಣದ ವ್ಯವಸ್ಥೆ ಮಾಡಿವೆ. ದುಬೈಗೆ ವಿಶೇಷ ಮತ್ತು ಖಾಸಗಿ ವಿಮಾನಗಳ ಮೂಲಕ ತೆರಳುವ ಮುನ್ನ ಆಟಗಾರರು ಪರೀಕ್ಷೆಗೆ ಒಳಗಾಗಿದ್ದು ಎಲ್ಲರ ವರದಿಗಳು 'ನೆಗೆಟಿವ್' ಬಂದಿದೆ.

ಭಾರತ ತಂಡದ ಶಿಬಿರದಲ್ಲಿ ಫಿಜಿಯೊ ಯೋಗೇಶ್ ಪರ್ಮಾರ್ ಸೇರಿದಂತೆ ಕೆಲವು ಸಿಬ್ಬಂದಿಗೆ ಕೋವಿಡ್ ದೃಢಪಟ್ಟ ಬಳಿಕ ಇಂಗ್ಲೆಂಡ್ ವಿರುದ್ಧ ಭಾರತದ ಐದನೇ ಟೆಸ್ಟ್‌ಅನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು.

'ಮುಂಬೈ ಇಂಡಿಯನ್ಸ್ ತಂಡದ ರೋಹಿತ್ ಶರ್ಮಾ, ಜಸ್‌ಪ್ರೀತ್ ಬೂಮ್ರಾ, ಸೂರ್ಯಕುಮಾರ್ ಯಾದವ್ ಖಾಸಗಿ ವಿಮಾನಗಳ ಮೂಲಕ ಅಬುಧಾಬಿಗೆ ತೆರಳಿದ್ದಾರೆ. ಕೋವಿಡ್ ಮಾರ್ಗಸೂಚಿಗಳ ಪ್ರಕಾರ ಮೂವರು ಆಟಗಾರರು ತಮ್ಮ ಕುಟುಂಬದವರೊಂದಿಗೆ ಆರು ದಿನಗಳ ಕಾಲ ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ' ಎಂದು ಫ್ರಾಂಚೈಸ್ ಪ್ರಕಟಣೆ ತಿಳಿಸಿದೆ.

'ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಅವರು ಮ್ಯಾಂಚೆಸ್ಟರ್‌ನಿಂದ ವಿಶೇಷ ವಿಮಾನದ ಮೂಲಕ ಯುಎಇಗೆ ತೆರಳಿದರು' ಎಂದು ಫ್ರಾಂಚೈಸ್ ತಿಳಿಸಿದೆ.

ಬೇಸ್ಟೊ, ಮಲಾನ್ ಅಲಭ್ಯ:ಸನ್‌ರೈಸರ್ಸ್ ಹೈದರಾಬಾದ್ ತಂಡದ ಆರಂಭಿಕ ಆಟಗಾರ ಜಾನಿ ಬೇಸ್ಟೊ, ಪಂಜಾಬ್ ಕಿಂಗ್ಸ್ ಬ್ಯಾಟ್ಸ್‌ಮನ್ ಡೇವಿಡ್ ಮಲಾನ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಲ್‌ರೌಂಡರ್ ಕ್ರಿಸ್ ವೋಕ್ಸ್ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಇಂಗ್ಲೆಂಡ್‌ನ ಈ ಮೂವರು ವೈಯಕ್ತಿಕ ಕಾರಣ ನೀಡಿ ಆಡುವುದಿಲ್ಲ ಎಂದಿದ್ದಾರೆ.

ಸ್ನೂಕರ್: ಲೀಗ್ ಹಂತಕ್ಕೆ ವೀರೇಶ್

ಬೆಂಗಳೂರು: ಅಂತಿಮ ಸುತ್ತಿನಲ್ಲಿ ಎಂ.ಎಸ್.ಅರುಣ್ ಎದುರು ಜಯ ಗಳಿಸಿದ ಎಚ್.ಡಿ.ವೀರೇಶ್ ಅವರು ರಾಜ್ಯ ಬಿಲಿಯರ್ಡ್ಸ್ ಸಂಸ್ಥೆ ಆಶ್ರಯದ ರಾಜ್ಯ ರ‍್ಯಾಂಕಿಂಗ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಿಯ ಲೀಗ್ ಹಂತಕ್ಕೆ ಲಗ್ಗೆ ಇರಿಸಿದರು.

ಶುಕ್ರವಾರ ನಡೆದ ನಾಕೌಟ್ ಹಣಾಹಣಿಯಲ್ಲಿ ವೀರೇಶ್ 63-07, 70-48, 68-43ರಲ್ಲಿ ಅರುಣ್ ವಿರುದ್ಧ ಜಯ ಗಳಿಸಿದರು. ಮೈಕೆಲ್ ರೆಬೆಲ್ಲೊ 71-54, 70-05, 42-48, 58-34ರಲ್ಲಿ ಪ್ರದೀಪ್ ಗುರಜಾಲ ವಿರುದ್ಧ ಮತ್ತು ಅಕ್ಮಲ್ ಹುಸೇನ್ 63-25, 76-46, 82-35ರಲ್ಲಿ ಜುಲ್ಫಿಕರ್ ಅಹಮ್ಮದ್ ವಿರುದ್ಧ ಗೆಲುವು ಸಾಧಿಸಿದರು. ಸಶಾ ಸಂಬಿ 70-56, 62-17, 62-43ರಲ್ಲಿ ಎಂ.ಮೂರ್ತಿ ಅವರನ್ನು, ಸೀನ್ ಡೇವಿಸ್ 55-12, 72-40, 69-20ರಲ್ಲಿ ಮೊಹಮ್ಮದ್ ಅಡ್ನಾನ್ ಅವರನ್ನು, ಮೊಹಮ್ಮದ್ ಶಹನಾಜ್ 69-25, 58-61, 52-39, 79-37ರಲ್ಲಿ ಮಹೇಶ್ ಅವರನ್ನು ಮಣಿಸಿದರು.

ಭಾರತ–ಇಂಗ್ಲೆಂಡ್ ಐದನೇ ಟೆಸ್ಟ್; ನಿಯಮ ಸಡಿಲಿಕೆ ಮುಳುವಾದ ಆರೋಪ

ಮುಂದೂಡಿದ ಪಂದ್ಯ; ಮುಂದೇನು?

ಮ್ಯಾಂಚೆಸ್ಟರ್ (ಎಎಫ್‌ಪಿ): ಭಾರತ ಮತ್ತು ಇಂಗ್ಲೆಂಡ್ ನಡುವೆ ಶುಕ್ರವಾರ ಆರಂಭವಾಗಬೇಕಾಗಿದ್ದ ಐದನೇ ಮತ್ತು ಕೊನೆಯ ಟೆಸ್ಟ್ ಪಂದ್ಯವನ್ನು ಕೋವಿಡ್ ಆತಂಕದಿಂದಾಗಿ ರದ್ದು ಮಾಡಲಾಗಿತ್ತು. ನಂತರ ಅನಿರ್ದಿಷ್ಟ ಅವಧಿಗೆ ಮುಂದೂಡಲಾಗಿದೆ. ಆದರೆ ಮುಂದೇನು ಎಂಬ ಪ್ರಶ್ನೆ ಕ್ರಿಕೆಟ್ ಪ್ರಿಯರನ್ನು ಕಾಡತೊಡಗಿದೆ.

ಕೋಚ್ ರವಿಶಾಸ್ತ್ರಿ ಅವರಿಗೆ ಕೋವಿಡ್ ಸೋಂಕು ತಗುಲಿರುವುದು ವಾರದ ಆರಂಭದಲ್ಲಿ ಖಚಿತವಾಗಿತ್ತು. ನಂತರ ಬೌಲಿಂಗ್ ಕೋಚ್ ಭರತ್ ಅರುಣ್ ಹಾಗೂ ಫೀಲ್ಡಿಂಗ್ ಕೋಚ್ ರಾಮಕೃಷ್ಣನ್ ಶ್ರೀಧರ್ ಅವರಲ್ಲೂ ಸೋಂಕು ಪತ್ತೆಯಾಗಿತ್ತು. ಹೀಗಾಗಿ ಅವರು ಮೂವರನ್ನು ಮ್ಯಾಂಚೆಸ್ಟರ್‌ಗೆ ಕಳುಹಿಸದೇ ಇರಲು ನಿರ್ಧರಿಸಲಾಗಿತ್ತು. ಅವರ ಸಂಪರ್ಕದಲ್ಲಿದ್ದ ಫಿಸಿಯೊ ನಿತಿನ್ ಪಟೇಲ್ ಅವರನ್ನು ಪ್ರತ್ಯೇಕವಾಸದಲ್ಲಿರಿಸಲಾಗಿತ್ತು.

ಸಹಾಯಕ ಫಿಸಿಯೊಗೆ ಕೋವಿಡ್ ಇರುವುದು ಖಚಿತವಾದ ಹಿನ್ನೆಲೆಯಲ್ಲಿ ಪಂದ್ಯ ನಡೆಯುವುದು ಸಂದೇಹ ಎಂಬ ವದಂತಿ ಗುರುವಾರ ಹಬ್ಬಿತ್ತು. ಆದರೆ ಆಟಗಾರರ ಆರ್‌ಟಿ–ಪಿಸಿಆರ್ ವರದಿ ನೆಗೆಟಿವ್ ಬಂದ ಹಿನ್ನೆಲೆಯಲ್ಲಿ ಪಂದ್ಯ ನಡೆಸಲು ನಿರ್ಧರಿಸಲಾಗಿತ್ತು. ಶುಕ್ರವಾರ ಟೆಸ್ಟ್ ಆರಂಭವಾಗಲು ಎರಡು ತಾಸುಗಳಿದ್ದಾಗ ದಿಢೀರ್ ಆಗಿ ಮುಂದೂಡಲು ತೀರ್ಮಾನಿಸಲಾಗಿತ್ತು.

ನಿಯಮ ಸಡಿಲಿಕೆಯಿಂದ ಮೈಮರೆತರೆ?:ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಇಂಗ್ಲೆಂಡ್‌ನಲ್ಲಿ ಕೋವಿಡ್ ನಿಯಮಗಳಲ್ಲಿ ಸಡಿಲಿಕೆ ಮಾಡಿ ಪಂದ್ಯಗಳನ್ನು ಆಯೋಜಿಸಲಾಗುತ್ತಿದೆ. ಕಟ್ಟುನಿಟ್ಟಿನ ಕ್ವಾರಂಟೈನ್‌ನಿಂದ ಆಟಗಾರರ ಮನೋಸ್ಥೈರ್ಯ ಕುಗ್ಗುತ್ತದೆ ಎಂಬ ಮಾತು ಕೇಳಿಬಂದ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ಆದರೆ ಈ ಅವಕಾಶವನ್ನು ಆಟಗಾರರು ಮತ್ತು ತಂಡದ ಆಡಳಿತದವರು ಮೈಮರೆತು ಬಳಸಿಕೊಂಡರೇ ಎಂಬ ಪ್ರಶ್ನೆ ಈಗ ಎದ್ದಿದೆ.

ಓವಲ್ ಟೆಸ್ಟ್‌ಗೆ ಎರಡು ದಿನಗಳು ಇದ್ದಾಗ ರವಿಶಾಸ್ತ್ರಿ ಅವರು ತಮ್ಮ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಆ ಕಾರ್ಯಕ್ರಮದಲ್ಲಿ ಬಹಳಷ್ಟು ಮಂದಿ ಪಾಲ್ಗೊಂಡಿದ್ದರು. ಅಲ್ಲಿ ಕೋವಿಡ್ ನಿಯಮಾವಳಿಗಳ ಉಲ್ಲಂಘನೆ ಆಗಿದೆ ಎಂಬ ಆರೋಪ ಕೇಳಿ ಬಂದಿದೆ.

ಶುಕ್ರವಾರ ಪಂದ್ಯ ಮುಂದೂಡಿದ ನಂತರ ಓಲ್ಡ್ ಟ್ರಾಫರ್ಡ್ ಕ್ರೀಡಾಂಗಣದ ನೋಟ –ರಾಯಿಟರ್ಸ್ ಚಿತ್ರ

ಪಂದ್ಯ ಮುಂದೂಡಿದ ಕಾರಣ ಸರಣಿಯ ಫಲಿತಾಂಶಕ್ಕೂ ತಡೆಯಾಗಿದೆ. ನಾಲ್ಕು ಪಂದ್ಯಗಳಲ್ಲಿ ಭಾರತ ಎರಡನ್ನು ಗೆದ್ದುಕೊಂಡಿದ್ದು ಒಂದರಲ್ಲಿ ಆತಿಥೇಯರು ಜಯ ಸಾಧಿಸಿದ್ದಾರೆ. ಮೊದಲ ಪಂದ್ಯ ಡ್ರಾ ಆಗಿತ್ತು. ಕೊನೆಯ ಪಂದ್ಯದಲ್ಲಿ ಡ್ರಾ ಸಾಧಿಸಿದರೂ ಸರಣಿಯ ಪ್ರಶಸ್ತಿ ಭಾರತದ ಪಾಲಾಗಲಿದೆ.

ಬಿಸಿಸಿಐ ನಿರ್ಧಾರಕ್ಕೆ ಗಾವಸ್ಕರ್ ಸಂತಸ: ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ನಿಗದಿಯಾಗಿದ್ದ ಪಂದ್ಯವನ್ನು ಮುಂದೂಡಲು ಒಪ್ಪಿಕೊಂಡಿದ್ದಕ್ಕೆ ಮಾಜಿ ಕ್ರಿಕೆಟಿಗ ಸುನಿಲ್ ಗಾವಸ್ಕರ್ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯನ್ನು (ಬಿಸಿಸಿಐ) ಅಭಿನಂದಿಸಿದ್ದಾರೆ. 2008ರಲ್ಲಿ ಮುಂಬೈ ಮೇಲೆ ಭಯೋತ್ಪಾದಕರ ದಾಳಿ ನಡೆದಾಗ ಇಸಿಬಿ ಕೂಡ ಇದೇ ರೀತಿಯಲ್ಲಿ ದೊಡ್ಡ ಮನಸ್ಸು ಮಾಡಿಕೊಂಡಿತ್ತು ಎಂದು ಅವರು ನೆನಪಿಸಿಕೊಂಡಿದ್ದಾರೆ.

'2008ರಲ್ಲಿ ದಾಳಿ ನಡೆದಾಗ ಇಂಗ್ಲೆಂಡ್ ತಂಡ ಭಾರತ ಪ್ರವಾಸದಲ್ಲಿತ್ತು. ತವರಿಗೆ ತೆರಳಿದ್ದ ಇಂಗ್ಲೆಂಡ್ ಆಟಗಾರರು ನಂತರ ವಾಪಸ್ ಬಂದು ಸರಣಿಯನ್ನು ಪೂರ್ತಿಗೊಳಿಸಿದ್ದರು. ನಮಗಿಲ್ಲಿ ಆತಂಕ ಕಾಡುತ್ತಿದೆ, ಆದ್ದರಿಂದ ವಾಪಸ್ ಬರುವುದಿಲ್ಲ' ಎಂದು ಅವರು ಅಂದು ಹೇಳಬಹುದಿತ್ತು. ಆದರೆ ಹಾಗೆ ಮಾಡದೆ ದಿಟ್ಟತನದಿಂದ ಪರಿಸ್ಥಿತಿ ಎದುರಿಸಿದ್ದರು. ಅದರಲ್ಲಿ ಅಂದಿನ ನಾಯಕ ಕೆವಿನ್ ಪೀಟರ್ಸನ್ ಪಾಲು ದೊಡ್ಡದು' ಎಂದು ಗಾವಸ್ಕರ್ ಸೋನಿ ಸ್ಪೋರ್ಟ್ಸ್ ವಾಹಿನಿಗೆ ತಿಳಿಸಿದ್ದಾರೆ.

ಐಸಿಸಿಗೆ ಇಸಿಬಿ ಪತ್ರ?

ಮ್ಯಾಂಚೆಸ್ಟರ್ (ಪಿಟಿಐ): ಪಂದ್ಯಕ್ಕೆ ಸಂಬಂಧಿಸಿ ಸೂಕ್ತ ನಿರ್ಧಾರ ಕೈಗೊಳ್ಳುವಂತೆ ಕೋರಿ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ ವಿವಾದ ಪರಿಹಾರ ಸಮಿತಿಗೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಪತ್ರ ಬರೆದಿದೆ ಎನ್ನಲಾಗಿದೆ.

ಪತ್ರದ ಬಗ್ಗೆ ಐಸಿಸಿ ಬಳಿ ಯಾವುದೇ ಮಾಹಿತಿ ಇಲ್ಲ. ಆದರೆ ಕ್ರಿಕೆಟ್ ವೆಬ್‌ಸೈಟ್ ಕ್ರಿಕ್‌ಬಜ್ ಪ್ರಕಾರ ಇಸಿಬಿ ಈಗಾಗಲೇ ಪತ್ರ ಬರೆದಾಗಿದೆ. ಪಂದ್ಯ ನಡೆಯದೇ ಇದ್ದ ಕಾರಣ ಆಗಿರುವ ನಷ್ಟದ ಪ್ರಮಾಣ ದೊಡ್ಡದಾಗಿದೆ.

21ರಿಂದ ರೋಟರಿ ಅಮೆಚೂರ್ ಗಾಲ್ಫ್ ಟೂರ್ನಿ

ಬೆಂಗಳೂರು: ರೋಟರಿ ಅಮೆಚೂರ್ ದಕ್ಷಿಣ ಭಾರತ ಗಾಲ್ಫ್ ಚಾಂಪಿಯನ್‌ಷಿಪ್ ಇದೇ 21ರಿಂದ ಬಿಡದಿಯ ಈಗಲ್‌ಟನ್ ಗಾಲ್ಫ್ ರೆಸಾರ್ಟ್‌ನಲ್ಲಿ ನಡೆಯಲಿದೆ. ದೇಶದ ಪ್ರಮುಖ ಪುರುಷರ ಮತ್ತು ಮಹಿಳಾ ಗಾಲ್ಫರ್‌ಗಳು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ. ಕೋವಿಡ್ ಆತಂಕದಿಂದಾಗಿ ಕಳೆದ ವರ್ಷ ಚಾಂಪಿಯನ್‌ಷಿಪ್ ನಡೆದಿರಲಿಲ್ಲ.

21ರಿಂದ ನಾಲ್ಕು ದಿನ ಪುರುಷರ ಸ್ಪರ್ಧೆಗಳು ನಡೆಯಲಿದ್ದು 22ರಿಂದ ಮಹಿಳೆಯರ ಸ್ಪರ್ಧೆಗಳು ಇರುತ್ತವೆ. ಅಖಿಲ ಭಾರತ ಅಮೆಚೂರ್ ಗಾಲ್ಫ್ ಚಾಂಪಿಯನ್ ಕರ್ನಾಟಕದ ಆರ್ಯನ್ ರೂಪಾ ಆನಂದ್, ಮಹಾರಾಷ್ಟ್ರದ ರೋಹನ್ ಪಾಟೀಲ್, ರಾಜಸ್ತಾನದ ಪ್ರಖರ್, ಪಶ್ಚಿಮ ಬಂಗಾಳದ ಸ್ನೇಹಾ ಸಿಂಗ್ ಮುಂತಾದವರು ಕಣದಲ್ಲಿರುವ ಪ್ರಮುಖರು.

ಸ್ಥಳೀಯ ಗಾಲ್ಫರ್‌ಗಳಾದ ಅವನಿ ಪ್ರಶಾಂತ್, ರಿಷಿಕಾ ಮುರಳೀಧರ್, ಜಿ.ಎನ್.ಬಸವರಾಜು, ಗಗನ್ ವಿನೋದ್ ಮತ್ತು ಮೈಸೂರಿನ ವಿಧಾತ್ರಿ ಅರಸ್ ಪ್ರಶಸ್ತಿ ಮೇಲೆ ಕಣ್ಣಿಟ್ಟು ಕಣಕ್ಕೆ ಇಳಿಯಲಿದ್ದಾರೆ.

ಪಯೋನಿಯರ್ ಎಫ್‌ಸಿ ಜಯಭೇರಿ

ಬೆಂಗಳೂರು: ಉತ್ತಮ ಸಾಮರ್ಥ್ಯ ತೋರಿದ ಪಯೋನಿಯರ್ ಎಫ್‌ಸಿ ತಂಡದವರು ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿ ಮಹಿಳೆಯರ 'ಎ' ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಶನಿವಾರ ಇಲ್ಲಿ ನಡೆದ ಪಂದ್ಯದಲ್ಲಿ 1–0ಯಿಂದ ಬೆಂಗಳೂರು ಬ್ಲೂಸ್ ತಂಡವನ್ನು ಸೋಲಿಸಿದರು.ವಿಜೇತ ತಂಡದ ಪರ ಪ್ರಿಯದರ್ಶಿನಿ ಅವರು 40ನೇ ನಿಮಿಷದಲ್ಲಿ ಗೋಲು ಗಳಿಸುವಲ್ಲಿ ಯಶಸ್ವಿಯಾದರು.

ಭಾನುವಾರ ನಡೆಯುವ ಪಂದ್ಯಗಳಲ್ಲಿ ಯುನೈಟೆಡ್ ಎಫ್‌ಸಿ ಕೊಡಗು– ಯಂಗ್‌ಸ್ಟಾರ್, ರೂಟ್ಸ್ ಎಫ್‌ಸಿ– ಜಿಆರ್‌ಕೆ ತಂಡಗಳು ಮುಖಾಮುಖಿಯಾಗಲಿವೆ.

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 12 ಸೆಪ್ಟೆಂಬರ್ 2021

ರಾಧೆ ಹೇಳಿಕೊಟ್ಟ ಕಲೆ ಸಾಂಝಿ
2

ವ್ಯಕ್ತಿ ಸ್ನೇಹಿ, ವಿಚಾರ ನಿಷ್ಠುರಿ
3

ಇದು ಕ್ಯಾಪಿಬೆರಾ!
4



ನಿಸರ್ಗದ ನಿಗೂಢ ಕುರಿಂಜಿಲೋಕ

ನಾಗೇಶ ಹೆಗಡೆ

ನೀಲಿ ಕುರಿಂಜಿಯ ಮಧುಪಾತ್ರೆಯಲ್ಲಿ ಲ್ಯಾಂಡ್ ಆಗಲು ಬರುತ್ತಿರುವ ಜೇನ್ನೊಣ ಹಾಗೂ ಊಟ ಮುಗಿಸಿ ಕುಳಿತ ಪುಟ್ಟ ಪಕ್ಷಿ ಚಿತ್ರ: ಸಂದೀಪ್ ದಾಸ್

ಮೇಲೆ ನೀಲಾಕಾಶ. ಕೆಳಗೆ ಕುರಿಂಜಿ ಹೂಗಳ ನಿಬಿಡ ಹಾಸು. ಕೊಡಗಿನ ಕೋಟೆಬೆಟ್ಟ ಅಥವಾ ಮಾಂದಲ್‌ಪಟ್ಟಿಯ ಗಿರಿಕಂದರಗಳಲ್ಲಿ ಈ ದಿನಗಳಲ್ಲಿ ವರ್ಣರಂಜಿತ ರತ್ನಗಂಬಳಿ ಹಾಸಿದಂತೆ ಎಲ್ಲೆಲ್ಲೂ ಕಾರ್ವಿ (ಗುರಗಿ) ಹೂಗಳ ಅಪ್ಸರ ಲೋಕ. ಸಂಜೆ, ಮುಂಜಾವುಗಳಲ್ಲಂತೂ ಕಾಮನಬಿಲ್ಲಿನ ಎಲ್ಲ ಬಣ್ಣಗಳ ಚೆಲುವಿನ ಚಾದರ. ನಾವಿಲ್ಲಿ ನಗರವಾಸಿಗಳು ಗಣೇಶ ಹಬ್ಬದ ಸಂಭ್ರಮದಲ್ಲಿ ಮುಳುಗಿದ್ದರೆ ಅಲ್ಲಿ ನಿಸರ್ಗವೇ ನೀಲಕುರಿಂಜಿ ಹೂಹಾಸಿಗೆ ಹಾಸಿ ಮಧುಮಹೋತ್ಸವವನ್ನು ಆಚರಿಸುತ್ತಿದೆ. ದುಂಬಿ, ಚಿಟ್ಟೆ, ಜೇನ್ನೊಣಗಳೇ ಮುಂತಾದ ಕೋಟಿಕೀಟಗಳಿಗೆ ಮಕರಂದದ ಧಾರೆಯನ್ನು ಹರಿಸಿ, ಪರಾಗದ ಅರಿಶಿಣ ಕುಂಕುಮ ಹಚ್ಚಿ ಹರಸುತ್ತಿದೆ.

ಇದು ಪಶ್ಚಿಮ ಘಟ್ಟಗಳ ಆಗಸ್ಟ್-ಸೆಪ್ಟೆಂಬರ್‌ನ ವಿಶೇಷ ವಿಸ್ಮಯ. ಆಗಸ್ಟ್‌ನಿಂದ ಸೆಪ್ಟೆಂಬರ್ ಕೊನೆಯವರೆಗಿನ ಶ್ರಾವಣ-ಭಾದ್ರಪದದಲ್ಲಿ ಕುರಿಂಜಿಯ ಒಂದಲ್ಲ ಒಂದು ಪ್ರಭೇದದ ಹೂಹಬ್ಬ ನಡೆಯುತ್ತದೆ. ಈ ವರ್ಷ ಸೆಸ್ಸಿಲಿಸ್ ಪ್ರಭೇದದ ಪಾಳಿ. ಏಳು ವರ್ಷಗಳಿಗೊಮ್ಮೆ ಹೂ ಅರಳಿಸಿ ಗುಡ್ಡ-ಬೆಟ್ಟಗಳಲ್ಲಿ ಬಣ್ಣದೋಕುಳಿ ಸೃಷ್ಟಿಸುವ ಈ ವೈಚಿತ್ರ್ಯವನ್ನು ನೋಡಲೆಂದು ಈ ಬಾರಿ ಕೊಡಗಿನಲ್ಲಿ ಜನಜಾತ್ರೆ. ಜೇನ್ನೊಣ, ದುಂಬಿ, ಜೀರುಂಡೆಗಳ ಗುನುಗುನಾದವನ್ನೂ ಮೀರಿಸಿ ಡ್ರೋನ್‌ಗಳ ಝೇಂಕಾರ. ಚಳಿ-ಮಳೆ, ಕೆಸರು ರಸ್ತೆಯನ್ನೂ ಲೆಕ್ಕಿಸದೆ ಜೀಪು, ಕಾರು, ಬೈಕುಗಳನ್ನೇರಿ ಗುಡ್ಡಬೆಟ್ಟಗಳತ್ತ ಧಾವಿಸುತ್ತಿದೆ ಜನಸಮೂಹ. ಕ್ಯಾಮೆರಾ, ಬೈನಾಕ್ಯುಲರ್, ಡ್ರೋನ್ ಹೊತ್ತ ಪ್ರಕೃತಿ ಪ್ರೇಮಿಗಳ ಹರ್ಷೋದ್ಗಾರಗಳು ಅಲ್ಲಿನ ಕಣಿವೆಗಳಲ್ಲಿ ಪ್ರತಿಧ್ವನಿಸಿ, ಯೂಟ್ಯೂಬ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್, ಟ್ವಿಟರ್‌ಗಳೇ ಮುಂತಾದ ಸಾಮಾಜಿಕ ಮಾಧ್ಯಮಗಳಲ್ಲಿ ಅಲೆಅಲೆಯಾಗಿ ಪಸರಿಸುತ್ತಿವೆ.

> ಏಳು ವರ್ಷಗಳಿಗೊಮ್ಮೆ ಹೂ ಅರಳಿಸಿ ಗುಡ್ಡ-ಬೆಟ್ಟಗಳಲ್ಲಿ ಬಣ್ಣದೋಕುಳಿ ಸೃಷ್ಟಿಸುವ ಕುರಿಂಜಿಗಳ ಈ ವೈಚಿತ್ರ್ಯವನ್ನು ನೋಡಲೆಂದು ಈಗ ಕೊಡಗಿನಲ್ಲಿ ಜನಜಾತ್ರೆ. ಜೇನ್ನೊಣ, ದುಂಬಿ, ಜೀರುಂಡೆಗಳ ಗುನುಗುನಾದವನ್ನೂ ಮೀರಿಸಿ ಡ್ರೋನ್‌ಗಳ ಝೇಂಕಾರ...

ಪಶ್ಚಿಮ ಘಟ್ಟಗಳ ಪ್ರಕೃತಿಯಲ್ಲಿ ನಾನಾ ಬಗೆಯ ನಿಗೂಢಗಳು ಲೆಕ್ಕವಿಲ್ಲದಷ್ಟಿವೆ. ಅವುಗಳಲ್ಲಿ ಎಲ್ಲಕ್ಕಿಂತ ಮುಖ್ಯವಾಗಿದ್ದೇ ಇಷ್ಟು ವರ್ಷ ಎಲ್ಲರ ಕಡೆಗಣನೆಗೆ ಒಳಗಾಗಿತ್ತು. ಅದು ಕುರಿಂಜಿ ಸಸ್ಯದ ಕಥೆ. ಸಸ್ಯವಿಜ್ಞಾನದಲ್ಲಿ ಅದಕ್ಕೆ ಸ್ಟ್ರೋಬಿಲಾಂಥಿಸ್ ಎನ್ನುತ್ತಾರೆ. ಕನ್ನಡದಲ್ಲಿ ಅದಕ್ಕೆ ಒಂದು ಸರ್ವಮಾನ್ಯ ಹೆಸರೂ ಇಲ್ಲ. ಕೊಡಗಿನಲ್ಲಿ ಕಾರ್ವಿ, ಚಿಕ್ಕಮಗಳೂರಿನ ಕೆಲವೆಡೆ ಹಾರ್ಲೆ, ಇನ್ನು ಕೆಲವೆಡೆ ಗುರಿಕಿ; ಶಿವಮೊಗ್ಗದಲ್ಲಿ ಗುರ್ಗಿ, ಸಾಗರ-ಶಿರಸಿಗಳಲ್ಲಿ ಗುರಿಗೆ. ಒಂದೊಂದು ಊರಲ್ಲಿ ಒಂದೊಂದು ಹೆಸರು. ಅವುಗಳಲ್ಲೇ ಕೆಲವು ಪ್ರಭೇದಗಳನ್ನು ಸಾಗರ-ಸಿದ್ದಾಪುರ-ಶಿರಸಿಗಳಲ್ಲಿ ಕಾಡುಗುರಿಗೆ, ಎಮ್ಮೆಗುರಿಗೆ, ಆನೆಗುರಿಗೆ ಎಂದು ಹಳ್ಳಿಯವರು ಗುರುತಿಸುತ್ತಾರೆ. ಆದರೆ ನಮ್ಮ ಅಕ್ಷರಲೋಕದ ಬಹುತೇಕ ಎಲ್ಲರೂ ಕಡೆಗಣಿಸಿದ ಕಾಡು ಹೂವು ಅದು. ಅದಕ್ಕೆ 'ಕುರಿಂಜಿ' ಎಂಬ ತಮಿಳು/ಮಲೆಯಾಳಿ ಹೆಸರೇ ಪ್ರಸಿದ್ಧಿ ಬರಲಿಕ್ಕೂ ಒಂದು ಕಾರಣವಿದೆ. ಪ್ರತೀ 12 ವರ್ಷಗಳಿಗೊಮ್ಮೆ ಹೂ ಬಿಡುವ 'ನೀಲ ಕುರಿಂಜಿ' (ಸ್ಟ್ರೋಬಿಲಾಂಥಿಸ್ ಕುಂತಿಯಾನಸ್ Strobilanthes kunthianus) ಹೂವಿನ ಬಗ್ಗೆ ಆ ರಾಜ್ಯಗಳ ನಿಸರ್ಗ ಪ್ರೇಮಿಗಳು ಅಪಾರ ಆಸಕ್ತಿ ವಹಿಸಿ ಕುರಿಂಜಿಯ ಜಾನಪದ, ಇತಿಹಾಸ, ಭೂಗೋಲ, ವಿಜ್ಞಾನ ಎಲ್ಲವನ್ನೂ ತೆರೆದಿಟ್ಟಿದ್ದಾರೆ.

ನಮ್ಮಲ್ಲಿ ಏಳು ವರ್ಷಗಳ ಬಳಿಕ ಈಗ ಅರಳಿ ನಿಂತಿದ್ದು ಸೆಸ್ಸಿಲಿಸ್ (Strobilanthes Sessilis) ಪ್ರಭೇದದ ಗುರಗಿ ಹೂವು. ಮೊಣಕಾಲೆತ್ತರ ಬೆಳೆಯುವ ಇದು ಕೊಡಗು ಬಿಟ್ಟರೆ ಕೊಂಕಣ ಪಟ್ಟಿಯುದ್ದಕ್ಕೂ ಮಹಾರಾಷ್ಟ್ರದ ಸಾತಾರಾ ಪಟ್ಟಣದವರೆಗೂ ಅಲ್ಲಲ್ಲಿ ಸಾವಿರ ಮೀಟರ್‌ವರೆಗಿನ ಇಳಿಜಾರಿನಲ್ಲಿ ಹಾಗೂ ಸಮತಟ್ಟಾದ ತಪ್ಪಲಿನಲ್ಲಿ ಹೂ ಅರಳಿಸುತ್ತದೆ.

ಕುರಿಂಜಿ ಅಥವಾ ಗುರಿಗೆ ಸಸ್ಯಗಳಲ್ಲಿ ಸುಮಾರು 70 ಪ್ರಭೇದಗಳನ್ನು ಇದುವರೆಗೆ ಗುರುತಿಸಲಾಗಿದೆ. ಕೆಲವು ಪ್ರಭೇದಗಳು ಎರಡು ಅಥವಾ ಮೂರು ನಾಲ್ಕು ವರ್ಷಗಳಿಗೊಮ್ಮೆ, ಮತ್ತೆ ಕೆಲವು ಆರೇಳು ವರ್ಷಗಳಿಗೊಮ್ಮೆ ಹೂ ಅರಳಿಸಿ ಸಾಯುತ್ತವೆ. ಕೆಲವಂತೂ 12 ಅಥವಾ 18 ವರ್ಷಗಳಿಗೊಮ್ಮೆ ಹೂಬಿಡುತ್ತವೆ. ಕೆಲವು ಗುರಗಿಗಳು ದಟ್ಟಕಾಡಿನ ನಡುವೆ ಮೂರಾಳೆತ್ತರಕ್ಕೆ ಬೆಳೆದರೆ ಇನ್ನು ಕೆಲವು ಪ್ರಭೇದಗಳು ಶೋಲಾ ಕಾಡಂಚಿನಲ್ಲಿ ಆಳೆತ್ತರ, ಬೋಳುಗುಡ್ಡದ ಇಳಿಜಾರಿನಲ್ಲಿ ಮೊಣಕಾಲೆತ್ತರ ಬೆಳೆದು ನಿಲ್ಲುತ್ತವೆ. ತುಸುಮಟ್ಟಿಗೆ ಕನಕಾಂಬರ (ಅಬ್ಬಲಿಗೆ) ಹೂವಿನಂತೇ ತೆನೆಗಳಲ್ಲಿ ಹಂತಹಂತವಾಗಿ ತಿಂಗಳುಗಟ್ಟಲೇ ಹೂಬಿಡುವ ಈ ಸಸ್ಯಗಳು ಅನೇಕ ಗುಡ್ಡಬೆಟ್ಟಗಳ ಕಾನನದಲ್ಲಿ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಹೂಗಳನ್ನು ಪ್ರತಿವರ್ಷವೂ ಅರಳಿಸುತ್ತಿರುತ್ತವೆ. ಆದರೆ ನಿಶ್ಚಿತ ಅವಧಿಯಲ್ಲಿ ವ್ಯಾಪಕವಾಗಿ ಏಕಕಾಲಕ್ಕೆ ಹೂಬಿಡುವ ಪ್ರಭೇದಗಳು ಮಾತ್ರ ನಮ್ಮ ಗಮನ ಸೆಳೆಯುತ್ತವೆ.

ಕುರಿಂಜಿ ಏಳು ವರ್ಷದ್ದಾಗಿರಲಿ, ಹನ್ನೆರಡು ವರ್ಷದ್ದಾಗಿರಲಿ ಅದರ ಕೋಟಿಗಟ್ಟಲೆ ಸಸ್ಯಗಳು ಏಕತ್ರವಾಗಿ ಬಿಗ್ ಬ್ಯಾಂಗ್ ಎಂಬಂತೆ ಪುಷ್ಪಸ್ಫೋಟ ಮಾಡುವುದನ್ನು ನೋಡುವುದೇ ಚಂದ. ಏಳು ವರ್ಷಗಳ ಹಿಂದೆ ನೆಲಕ್ಕೆ ಸೇರಿ ಗುಡ್ಡ ಕಣಿವೆಗಳ ಇಳುಕಲಿನ ಮಣ್ಣಿನ ಪದರದಲ್ಲಿ ಅವಿತಿದ್ದ ಬೀಜಗಳು ತಮ್ಮ ಅಗೋಚರ ಗಡಿಯಾರದಲ್ಲಿ ಅದೆಂಥದೋ ಸದ್ದಿಲ್ಲದ ಅಲಾರ್ಮ್ ಮೊಳಗಿದ ಹಾಗೆ ಮುಂಗಾರಿನ ಮೊದಲ ಗುಡುಗಿಗೆ ಮೊಳಕೆಯೊಡೆಯುತ್ತವೆ. ಶ್ರಾವಣ ಬಂದಾಗ ಹೂ ಅರಳಿಸತೊಡಗುತ್ತವೆ.

ಹಾಗೆ ಹೂ ಅರಳಿಸುವ ಮುನ್ನ ಅದೇನು ಸಿಗ್ನಲ್ ಕೊಡುತ್ತವೊ, ಅಂತೂ ಇಡೀ ಜೀವಮಂಡಲಕ್ಕೆ ಸಂದೇಶ ಹೋಗುತ್ತದೆ. 'ಇನ್ನೆರಡು ತಿಂಗಳಲ್ಲಿ ಮಧುಪಾತ್ರೆಯಲ್ಲಿ ಮೃಷ್ಟಾನ್ನ ಭೋಜನ ಸಿಗಲಿದೆ, ಎಲ್ಲರೂ ಬರಬೇಕು' ಅನ್ನುವಂಥ ಆಮಂತ್ರಣ ದಶದಿಕ್ಕುಗಳಲ್ಲಿ ಹರಡುತ್ತದೆ. ರಾಣಿಜೇನು ತನ್ನ ಗೂಡಿನಲ್ಲಿ ಲಕ್ಷಾಂತರ ಮರಿಗಳನ್ನು ಸಜ್ಜುಗೊಳಿಸಬೇಕು. ಜೇನ್ನೊಣಗಳಷ್ಟೇ ಅಲ್ಲ, ಜೀವಲೋಕದಲ್ಲಿ ಸಾವಿರಾರು ಪ್ರಭೇದಗಳ ಮಧುಭಕ್ಷಕ ಜೀವಿಗಳಿವೆ. ದುಂಬಿಗಳು, ಚಿಟ್ಟೆ-ಪತಂಗಗಳು, ಜೋಡಿರೆಕ್ಕೆಯ ಡಿಪ್ಟೆರಾಗಳು, ಕುಂಬಾರ ನೊಣಗಳು, ಹೇನುಗಳು, ನೊಣಗಳು, ಇರುವೆಗಳು... ಮಧುವನ್ನು ಹೀರುವ ನಾನಾ ತೆರನಾದ ಪಕ್ಷಿಗಳಿವೆ; ಬಾವಲಿಗಳಿವೆ. ಹೂಗಳಿಗೆ ಬರುವ ಕೀಟಗಳನ್ನು ಭಕ್ಷಿಸಲೆಂದೇ ಹೊಂಚು ಹಾಕಿ ಕೂರುವ ಜೇಡಗಳು, ಜೇಡಗಳನ್ನು ಭಕ್ಷಿಸಲೆಂದು ಬರುವ ಪಕ್ಷಿಗಳು, ಪಕ್ಷಿಗಳನ್ನು ಹಿಡಿಯಲೆಂದು ಬರುವ ಬೇಟೆಗಾರ ಪಕ್ಷಿಗಳು... ಎಲ್ಲವೂ ಕುರಿಂಜಿ ಮಧು ಮಹೋತ್ಸವಕ್ಕೆ ಲಗ್ಗೆ ಹಾಕುತ್ತವೆ. ಎಲ್ಲ ಎಲ್ಲಿ ಅವಿತಿದ್ದವೊ, ಯಾವಮ್ಮನ ಗರ್ಭದಲ್ಲಿ ಮೊಟ್ಟೆಯ ರೂಪದಲ್ಲಿದ್ದವೊ? ಕುರಿಂಜಿಗೆ ಸಂವಾದಿಯಾಗಿ ಅವೂ ಏಳು ವರ್ಷಗಳಿಗೊಮ್ಮೆ ಸಂತಾನಸ್ಫೋಟ ಮಾಡಿಕೊಳ್ಳುತ್ತವೊ? ಎಲ್ಲ ನಿಗೂಢ.

ಆಗಸ್ಟ್ ತಿಂಗಳಲ್ಲಿ ಏಕಕಾಲಕ್ಕೆ ತಮಿಳುನಾಡಿನ ನೀಲಗಿರಿ, ದೊಡ್ಡ ಬೆಟ್ಟ, ಅಣ್ಣಾಮಲೈ ಬೆಟ್ಟ, ನೆಲ್ಲಿಯಂಪಥಿ ಬೆಟ್ಟ, ಕಾರ್ಡಮಮ್ ಹಿಲ್ಸ್, ಕೇರಳದ ಮನ್ನಾರ್ ಬಳಿಯ ಕುರಿಂಜಿಮಲೆ, ಅಗಸ್ತ್ಯಮಲೈ, ಪೊನ್ಮುಡಿ ಬೆಟ್ಟ, ಪಾಲಕ್ಕಾಡ್ ಬೆಟ್ಟಶ್ರೇಣಿ, ಕರ್ನಾಟಕದಲ್ಲಿ ಕೊಡಗಿನ ಮಂದಲ್‌ಪಟ್ಟಿ, ಬ್ರಹ್ಮಗಿರಿ, ಪುಷ್ಪಗಿರಿ, ಕುಮಾರಪರ್ವತ, ಕುದುರೆಮುಖ, ತಡಿಯಂಡಮೋಳ್, ಆಗುಂಬೆ, ಬಾಬಾಬುಡನ್‌ಗಿರಿ, ಮುಳ್ಳಯ್ಯನಗಿರಿ, ಕೊಡಚಾದ್ರಿಯ ಶೋಲಾಗಳಲ್ಲಿ, ಜೋಗ, ಬೇಡ್ತಿ-ಅಘನಾಶಿನಿ ಕೊಳ್ಳ, ಕ್ಯಾಸ್ಲ್ ರಾಕ್ಸ್, ಗೋವಾ, ಮಹಾರಾಷ್ಟ್ರ... ಎಲ್ಲಿಂದ ಎಲ್ಲಿಯವರೆಗೆ ಹೂಗಳನ್ನು ಏಕಕಾಲಕ್ಕೆ ಅರಳಿಸುವ ಈ ವಿಸ್ಮಯಕ್ಕೆ 'ಗ್ರಿಗೇರಿಯಸ್ ಫ್ಲವರಿಂಗ್' ಎನ್ನುತ್ತಾರೆ. ಅಂದರೆ ಸಾಮೂಹಿಕ ಹೂಮೇಳ.

ಬಿದಿರುಮೆಳೆಗಳಲ್ಲಿ ನಾವು ಈ ವೈಚಿತ್ರ್ಯವನ್ನು ಕಾಣುತ್ತೇವೆ. ಒಂದು ಪ್ರಭೇದಕ್ಕೆ ಸೇರಿದ ಬಿದಿರು ಏಕಕಾಲಕ್ಕೆ ಅನೇಕ ಜಿಲ್ಲೆಗಳಲ್ಲಿ ಹೂ ಅರಳಿಸಿ, ಬೀಜ ಉದುರಿಸಿ ಸಾಯುತ್ತದೆ. ಕೆಲವು 45 ವರ್ಷಗಳಿಗೆ ಹೂಬಿಟ್ಟರೆ, ಇನ್ನು ಕೆಲವು 60 ವರ್ಷಗಳಿಗೆ ಒಂದು ಬಾರಿ. ಕೆಲವು ತಾಳೆ ಮರಗಳು 60 ವರ್ಷಗಳಿಗೆ ಹೂ ಅರಳಿಸಿ ಒಣಗುತ್ತವೆ. ಕತ್ತಾಳೆಯ ಕೆಲವು ಪ್ರಭೇದಗಳು ನೂರು ವರ್ಷಗಳಿಗೊಮ್ಮೆ ಹೂ ಅರಳಿಸಿ ಸಾಯುತ್ತವೆ ಎಂಬ ಪ್ರತೀತಿ ಇದ್ದರೂ ಸ್ಪಷ್ಟ ದಾಖಲೆಗಳಿಲ್ಲ. ಮನುಷ್ಯ ತನ್ನ ಇಡೀ ಜೀವಮಾನದಲ್ಲಿ ಎರಡನೇ ಬಾರಿ ಕಾಣಲಾಗದ ಈ ವಿದ್ಯಮಾನವನ್ನು ದಾಖಲಿಸಿಡುವುದೂ ಹಿಂದಿನ ದಿನಗಳಲ್ಲಿ ಸುಲಭವಾಗಿರಲಿಲ್ಲ.

ಬೆಟ್ಟದಲ್ಲಿ ಅರಳಿ, ಬೆಟ್ಟದಲ್ಲೇ ಮಣ್ಣಾಗುವ ಕುರಿಂಜಿ ಕುರಿತು ನಾವು, ಕನ್ನಡಿಗರು ಮಾಡಬೇಕಾದ ಕೆಲಸವೂ ಬೆಟ್ಟದಷ್ಟಿದೆ! ಈ 2021ರ ಪುಷ್ಪಸಂಭ್ರಮವನ್ನು ನೋಡಲೆಂದು ಹೋದವರಲ್ಲಿ ಬಹುತೇಕ ಮಂದಿ ಇದನ್ನು '12 ವರ್ಷಗಳಿಗೊಮ್ಮೆ ಅರಳುವ ನೀಲ ಕುರಿಂಜಿ'ಎಂದು ತಪ್ಪಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಫೋಟೊ, ವಿಡಿಯೊಗಳ ಸಮೇತ ಹುಯಿಲೆಬ್ಬಿಸಿದ್ದಾರೆ. ಇತರರು ಹಾಗಿರಲಿ, ಅರಣ್ಯ ಇಲಾಖೆಯ ತಜ್ಞರೂ ಹಾಗೇ ಹೇಳಿ ತಮ್ಮ ಜಾಲತಾಣದಲ್ಲೂ 'ಹನ್ನೆರಡು ವರ್ಷಕ್ಕೊಮ್ಮೆ ಹೂಬಿಡುವ ಕುಂತಿಯಾನಸ್ ಪ್ರಭೇದ' ಎಂದು ತಪ್ಪಾಗಿ ಪ್ರಕಟಿಸಿದ್ದಾರೆ. ಇದು ನೀಲ ಕುರಿಂಜಿ ಕುಂತಿಯಾನಸ್ ಅಲ್ಲ, ಏಳು ವರ್ಷಗಳಿಗೊಮ್ಮೆ ಹೂ ಅರಳಿಸುವ ನೇರಳೆ ಬಣ್ಣದ ಸೆಸ್ಸಿಲಿಸ್ ಪ್ರಭೇದ. ಅದರರ್ಥ ಈಗಾಗಿದ್ದು ಪುಷ್ಪಸ್ಫೋಟದ ಜೊತೆಗೆ ಅಜ್ಞಾನಸ್ಫೋಟ! ಇದನ್ನು ಮೊದಲು ನಾವು ಸರಿಪಡಿಸಬೇಕು.

ಈ ತಪ್ಪನ್ನು ಸರಿಪಡಿಸಲೆಂದೇ ಆಗಸ್ಟ್‌ನ ಕೊನೇವಾರದಲ್ಲಿ ಐದು ಮಂದಿ ತಜ್ಞರ ತಂಡವೊಂದು ಕೊಡಗಿನ ಕೋಟೆಬೆಟ್ಟ ಮತ್ತು ಮಂದಲ್‌ಪಟ್ಟಿಗೆ ತ್ವರಿತ ಸಮೀಕ್ಷೆಗೆಂದು ಹೋಗಿತ್ತು. ಸಸ್ಯವಿಜ್ಞಾನಿ ಡಾ. ಜೋಮಿ ಆಗಸ್ಟಿನ್, ಕಾಸರಗೋಡಿನ ಬಿಜು, ಕೇರಳದ ಉನ್ನಿಕೃಷ್ಣನ್, ಮಂಗಳೂರಿನ ಚೇತನಾ ಬಡೇಕರ್ ಮತ್ತು ಬೆಂಗಳೂರಿನ 'ಪರಿಸರ' ಸಂಸ್ಥೆಯ ಈಶ್ವರ ಪ್ರಸಾದ್ ಅಲ್ಲೆಲ್ಲ ಓಡಾಡಿದರು. ಆ ಹೂಹಾಸಿಗೆಯಲ್ಲಿ ಕುಂತಿಯಾನಸ್ ಪ್ರಭೇದದ ಒಂದು ಸಸ್ಯವೂ ಇಲ್ಲವೆಂಬುದನ್ನು ಖಾತ್ರಿಪಡಿಸಿದರು. ಉದ್ದ ತೊಟ್ಟಿನ ಎಲೆಗಳುಳ್ಳ, ನೇರಳೆ ಬಣ್ಣದ ಹೂಗಳು ಸೆಸ್ಸಿಲಿಸ್ ಪ್ರಭೇದದ್ದೇ ಹೌದೆಂದು ಘೋಷಿಸಿದರು.

ಆದರೆ, ಪ್ರಕೃತಿ ವಿಜ್ಞಾನಿಗಳು ಬರೀ ಹೂವನ್ನಷ್ಟೇ ನೋಡಿ ಬಂದರೆ ಆದೀತೆ? ಸಾಲದು. ಹೂಗಳಿದ್ದಲ್ಲಿ ಧಾವಿಸಿ ಬರುವ ಇತರ ಜೀವಿಗಳ ಪಟ್ಟಿ ತಯಾರಿಸಬೇಕು. ಬಂದ ಅತಿಥಿಗಳಿಗೆಲ್ಲ ಮಕರಂದವನ್ನು ಉಣಬಡಿಸುವ ಈ ಹೂವು, ಆ ಅತಿಥಿಗಳ ಬೆನ್ನಮೇಲೆ ಸಹಜವಾಗಿ ಪರಾಗದ ಮೂಟೆ ಹೊರಿಸಿ ಕಳಿಸುತ್ತದೆ.

ಒಂಥರಾ 'ಉಂಡೂ ಹೋದ, ಕೊಂಡೂ ಹೋದ' ಕತೆ ಇದು! ಹೂಕುಟಿಗ ಹಕ್ಕಿಯೊಂದು ಪುಷ್ಪಪಾತ್ರೆಗೆ ಮೂತಿ ಒತ್ತಿ ಮಧು ಹೀರಿ ಹೊರಟಾಗ ಅದರ ಕೊಕ್ಕು ಅದು ಹೇಗೆ ಬಂಗಾರ ಬಣ್ಣದ್ದಾಗುತ್ತದೆ ಎಂದು ತೇಜಸ್ವಿಯವರು ಹಿಂದೊಮ್ಮೆ ವರ್ಣಿಸಿದ್ದರು. ವಿಜ್ಞಾನಿಗಳು ಅದೇ ಎಳೆ ಹಿಡಿದು ಇನ್ನಷ್ಟು ರೋಚಕ ಸಂಗತಿಗಳನ್ನು ಬಿಚ್ಚಿಡಬೇಕು. ಈ ಬಿಗ್‌ಬ್ಯಾಂಗ್ ಅವಧಿಯಲ್ಲಿ ಇಡೀ ಜೀವಮಂಡಲದಲ್ಲಿ ಏನೇನು ಬದಲಾವಣೆ ಆಗಿವೆ, ಆಗುತ್ತಿವೆ ಎಂಬುದನ್ನು ಸೂಕ್ಷ್ಮವಾಗಿ ವಾರವಾರವೂ ಗಮನಿಸಬೇಕು. ಈ ವರ್ಷ ಹೆಜ್ಜೇನು, ತುಡುವಿಗಳ ಸಂಖ್ಯೆ ಅದೆಷ್ಟು ಹೆಚ್ಚಾಗಿದೆ; ಬುಡಕಟ್ಟು ಜನರ ಆದಾಯ ಅದೆಷ್ಟು ಹೆಚ್ಚಾಗಿದೆ ನೋಡಬೇಕು.

ಇಷ್ಟಕ್ಕೇ ಮುಗಿಯುವುದಿಲ್ಲ; ಇನ್ನು ಆರೆಂಟು ತಿಂಗಳಿನ ನಂತರ ಈ ಸೆಸ್ಸಿಲಿಸ್ ಗಿಡಗಳು ಒಣಗಿ, ಬೀಜ ಉದುರಿಸಿ ನೆಲಕ್ಕೆ ಸೇರಿದ ನಂತರ ಆ ನೆಲಕ್ಕೆ ಭೂತಗನ್ನಡಿ ಹಿಡಿಯಬೇಕು. ಮುಂದಿನ ಆರು ವರ್ಷಗಳ ಕಾಲ ಆಗಾಗ ಎರಗುವ ಗಾಳಿ, ಬೆಂಕಿ, ಬರ, ಜಡಿಮಳೆಗಳನ್ನು, ಮೇವು ಭಕ್ಷಕ ಪ್ರಾಣಿಗಳ ದಾಳಿಯನ್ನು ಹೇಗೆ ಎದುರಿಸಿ ಇದು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತದೆ ಎಂಬುದನ್ನು ದಾಖಲಿಸುತ್ತ ಹೋಗಬೇಕು. ಮುಂದಿನ ಬಾರಿ ಅದು ಹೂ ಅರಳಿಸುವ ಸಮಯ ಬಂದಾಗ, (2021 + 7 = ಪ್ರಾಯಶಃ 2028ರಲ್ಲಿ) ಮಳೆಗಾಲಕ್ಕೆ ಮುಂಚೆಯೇ ತಿಳಿಸಿದರೆ- ಆಗ ಕರ್ನಾಟಕದಲ್ಲೂ ಚಾರಣಿಗರ, ಸಂಶೋಧಕರ, ಪ್ರವಾಸಿಗರ ಸಂಖ್ಯಾಸ್ಫೋಟ ಸುನಿಶ್ಚಿತ.

ಹೌದು, ಈ ಸುಂದರ ಕುರಿಂಜಿ ಉಳಿಯಬೇಕು. ಕಾಡಿನ ಬೆಂಕಿಯಿಂದಷ್ಟೇ ಅಲ್ಲ; ಬೆಂಕಿಗಿಂತಲೂ ಭಯಂಕರ ಕೆನ್ನಾಲಿಗೆಯುಳ್ಳ ಮನುಷ್ಯರಿಂದ ಕುರಿಂಜಿಯನ್ನು ಉಳಿಸಬೇಕು. ಮನುಷ್ಯರಿಂದಲೇ ಅದು ಉಳಿಯಬೇಕು.

(ಪೂರ್ಣಚಂದ್ರ ತೇಜಸ್ವಿಯವರ 83ನೇ ಹುಟ್ಟುಹಬ್ಬದ (ಸೆಪ್ಟೆಂಬರ್ 8) ಸಂದರ್ಭಕ್ಕೆಂದು ಬರೆದ ಕಿರುಹೊತ್ತಿಗೆಯ ಸಂಕ್ಷಿಪ್ತ ರೂಪ)

ನಟನೆಯ ಥೆರಪಿ

ಡಾ.ಕೆ.ಎಸ್. ಪವಿತ್ರ

ಮಕ್ಕಳು ಆಟವಾಡುವಾಗ ನಟನೆ ಮಾಡುವುದನ್ನು ನೋಡಿದ್ದೀರಾ? ಟೀಚರ್ ಆಟ, ಅಪ್ಪ-ಅಮ್ಮ ಆಟ, ಡಾಕ್ಟರ್ ಆಟ, ಇವೆಲ್ಲದರಲ್ಲಿ ಮಕ್ಕಳು ದೊಡ್ಡವರಂತೆ ಅನುಕರಿಸುವುದನ್ನೂ ನಾವು ನೋಡಿಯೇ ಇರುತ್ತೇವೆ. ಮಕ್ಕಳಾಗಿದ್ದಾಗ ಬಾಲ್ಯದಲ್ಲಿ ಈ ರೀತಿಯ ನಾಟಕಗಳನ್ನು ನಾವು ಆಟಕ್ಕಾಗಿ ಆಡಿಯೂ ಇರಬಹುದು. ಆದರೆ ದೊಡ್ಡವರಾದ ಮೇಲೆ ನಿಜಜೀವನದಲ್ಲಿ 'ಜೀವನವೇ ಒಂದು ನಾಟಕ ಶಾಲೆ' ಎಂಬುದನ್ನು ನಂಬಿದವರಂತೆ ವಿವಿಧ ನಟನೆಗಳನ್ನು ಜವಾಬ್ದಾರಿ-ಜಗಳಗಳನ್ನು ತಪ್ಪಿಸಲು ಆಡಲಾರಂಭಿಸುತ್ತೇವೆ!

ಬಾಲ್ಯದಲ್ಲಿ ಸಂತೋಷಕ್ಕಾಗಿಯಷ್ಟೇ ನಾಟಕ ನೋಡಲು ನಮ್ಮನ್ನು ಅಪ್ಪ-ಅಮ್ಮ ಕರೆದುಕೊಂಡು ಹೋಗುತ್ತಿದ್ದರಷ್ಟೆ! ಅಂದರೆ ಆಗ ನಾನೇನೂ ಮಕ್ಕಳ/ದೊಡ್ಡವರ ಮನಸ್ಸಿನ ಬಗ್ಗೆ ತಲೆ ಕೆಡಿಸಿಕೊಳ್ಳುವಷ್ಟು ದೊಡ್ಡವಳಾಗಿರಲಿಲ್ಲ. ಆಗ ನನಗೆ ನೆನಪಿರುವ ಆಗಿನ ನಾಟಕಗಳು ಹಲವು. ಅದರಲ್ಲಿ ಬರ್ನಾರ್ಡ್ ಷಾನ 'ಪಿಗ್ಮೇಲಿಯನ್' ಎಂಬ ನಾಟಕವನ್ನು ಆಧರಿಸಿ 'ನೀನಾಸಂ'ನವರು ಆಡಿದ 'ಹೂ ಹುಡುಗಿ' ಎಂಬ ನಾಟಕದಲ್ಲಿ ಮಾಡಿದ ನಟ ನಟಿಯರು, ಅವರು ಹೇಳಿದ್ದ ಡೈಲಾಗ್‌ಗಳು ಎಷ್ಟು ನೆನಪಲ್ಲುಳಿದಿವೆ ಎಂದರೆ ಈಗಲೂ ಮಕ್ಕಳಿಗೆ ಭಾಷೆ ಕಲಿಸುವಾಗ 'ಹಕ್ಕಿಯು ಅಕ್ಕಿಯನ್ನು ಹೆಕ್ಕಿ ಹೆಕ್ಕಿ ತಿನ್ನುತ್ತದೆ' ಎಂಬ ಆ ನಾಟಕದ ವಾಕ್ಯ, ಮಹಾಪ್ರಾಣ ಕಲಿಸುವಾಗ ಹೇಗೆ ಮೇಣದಬತ್ತಿ ದೀಪ ನಂದಿ ಹೋಗುವಂತೆ ಉಚ್ಚರಿಸಬೇಕು ಎಂಬ ತಂತ್ರ ಎಲ್ಲಾ ನೆನಪಾಗುತ್ತವೆ! ಬಾಲ್ಯದಲ್ಲಿ 'ನೀನಾಸಂ'ಗೆ ಹೋಗುವ, ನಾಟಕ ನೋಡುವ ಅನುಭವ ಸಿಕ್ಕಿದ್ದು, ಈಗಲೂ ಬಾಲ್ಯದ ಸುಂದರ ನೆನಪುಗಳಲ್ಲಿ ಒಂದಾಗಿ ಉಳಿದಿದೆ. ಶಿವಮೊಗ್ಗೆಯಲ್ಲಿ ನಾಟಕಗಳು ಚೆನ್ನಾಗಿ ಪ್ರದರ್ಶಿತವಾಗುತ್ತಿದ್ದವು. ಬಿ.ವಿ.ಕಾರಂತರ ನಿರ್ದೇಶನದಲ್ಲಿ 'ಕಿಂದರಿಜೋಗಿ'ಯನ್ನು ನೋಡಿ, ಅಂಗವಿಕಲನಾದ ಹುಡುಗನೊಬ್ಬ ಕೊನೆಯಲ್ಲಿ ತಾನು ಆಚೆಯ ಸುಂದರ ಲೋಕಕ್ಕೆ ಹೋಗಲಾಗದೆ ಹಳ್ಳಿಯಲ್ಲಿಯೇ ಉಳಿದು ಹೋಗಿದ್ದಕ್ಕೆ ಅತ್ತಿದ್ದು ನೋಡಿ ಆಗ ಮಕ್ಕಳಾಗಿದ್ದ ನಮಗೂ ಅಳು ಬಂದ ಹಾಗಾಗಿತ್ತು!

4ನೇ ಪುಟಕ್ಕೆ...

ಜಾಹೀರಾತು

ನೋವುರಹಿತ, ಕನಿಷ್ಠ ಭೇದನ ಪ್ರಕ್ರಿಯೆಯ ಮೂಲಕ ವೆರಿಕೋಸ್ ವೇನ್ಸ್ ಸಮಸ್ಯೆಯನ್ನು ಶಾಶ್ವತವಾಗಿ ನಿವಾರಿಸಬಹುದು

ಎಂದೂ ಕಂಡಿರದಂತಹ ಊತ, ನೀಲಿ–ಹಸಿರು ಬಣ್ಣಕ್ಕೆ ತಿರುಗಿದಂತೆ ನಿಮ್ಮ ಕಾಲುಗಳ ತ್ವಚೆಯ ಅಡಿಯಲ್ಲಿ ಗೋಚರಿಸಿದೆಯೆ? ನಮ್ಮ ದೇಶದಲ್ಲಿ ಸುಮಾರು 70% ಯುವಜನತೆಯಲ್ಲಿ ವೆರಿಕೋಸ್ ವೇನ್ಸ್ ಸಮಸ್ಯೆ ಎದುರಾಗಿರುವುದು ಕಂಡುಬಂದಿದೆ ಮತ್ತು ಇದೊಂದು ಕಾಸ್ಮೆಟಿಕ್ ಸಮಸ್ಯೆ ಎಂದು ಬಹುತೇಕರು ನಿರ್ಲಕ್ಷಿಸುತ್ತಿದ್ದಾರೆ. ಇದಕ್ಕೆ ಸೂಕ್ತ ಚಿಕಿತ್ಸೆ ನೀಡದೆ ಇದ್ದಲ್ಲಿ ಶಸ್ತ್ರಚಿಕಿತ್ಸೆ ಅನಿವಾರ್ಯವಾಗುತ್ತದೆ. ದೇಹದ ರಕ್ತನಾಳಗಳಲ್ಲಿ ರಕ್ತವು ಸರಾಗವಾಗಿ ಸಂಚರಿಸದೆ ಇದ್ದಾಗ, ರಕ್ತವು ನಾಳಗಳಲ್ಲಿಯೇ ಮಡುಗಟ್ಟಿ ಸ್ಥಗಿತಗೊಳ್ಳುತ್ತದೆ. ಇದರಿಂದಾಗಿ ಗಮನಾರ್ಹ ರೂಪದಲ್ಲಿ ಕಂಡುಬರುವ ರಕ್ತನಾಳಗಳಿಗೆ ವೆರಿಕೋಸ್ ವೇನ್ಸ್ ಎನ್ನಲಾಗುತ್ತದೆ. ಇವು ಸಾಮಾನ್ಯವಾಗಿ ಕಾಲುಗಳಲ್ಲಿ ಮತ್ತು ತೊಡೆ ಭಾಗಗಳಲ್ಲಿ ಗೋಚರಿಸುತ್ತವೆ, ಅದಾಗ್ಯೂ ದೇಹದ ಯಾವುದೇ ಭಾಗದಲ್ಲಿ ಉಲ್ಬಣಗೊಳ್ಳಬಹುದಾಗಿರುತ್ತದೆ. ಇವು ನೀಲಿ/ನೇರಳೆ ಬಣ್ಣದ್ದಾಗಿರುತ್ತವೆ ಮತ್ತು ತುಂಬಾ ನೋವು, ಕಾಲು ಸೆಳೆತ, ಸುಸ್ತು ಸಮಸ್ಯೆಯನ್ನು ಉಂಟು ಮಾಡುತ್ತವೆ. ಗಂಭೀರ ಪರಿಸ್ಥಿತಿ ಎದುರಾದಾಗ ನರಗಳು ಒಡೆದಂತಾಗಿ, ತ್ವಚೆ ಅಡಿಯಲ್ಲಿಯೆ ವೆರಿಕೋಸ್ ಅಲ್ಸರ್‌ಗೆ ಕೂಡ ಕಾರಣವಾಗಬಹುದಾಗಿರುತ್ತದೆ.

ಇದು ಅನುವಂಶಿಕ ಬಳುವಳಿಯಾಗಿ ಕೂಡ ಬಂದಿರುತ್ತದೆ, ಅದಾಗ್ಯೂ ಇದು ಮಹಿಳೆಯರಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಇದು 50 ವರ್ಷ ಮೇಲ್ಪಟ್ಟವರಲ್ಲಿ ಶೇ. 50ರಷ್ಟು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಆದರೆ 5–25% ವರ್ಷದವರಲ್ಲಿ ಕಡಿಮೆಯಾಗಿರುತ್ತದೆ. ನಿಶ್ಚಲ ಜೀವನಶೈಲಿ, ದೀರ್ಘ ಕಾಲ ನಿಂತಿರುವುದು, ಸ್ಥೂಲಕಾಯ, ಗರ್ಭಾವಸ್ಥೆ, ವೃದ್ಧಾಪ್ಯದಂತಹ ಕಾರಣಗಳಿಂದಾಗಿ ಇದು ಎದುರಾಗುವುದು ಸಾಮಾನ್ಯವಾಗಿದೆ.

ಸುಮಾರು 20+ ವರ್ಷಗಳ ಅನುಭವ ಹೊಂದಿರುವ ಮತ್ತು 1000ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಿರ್ವಹಿಸಿರುವ, ಬೆಂಗಳೂರಿನ ಎವಿಸ್ ವಾಸ್ಕ್ಯುಲಾರ್ ಸೆಂಟರ್‌ನ ಪ್ರತಿಷ್ಠಿತ ಇಂಟರ್‌ವೆನ್ಷನಲ್ ರೇಡಿಯಾಲಜಿಸ್ಟ್ ಮತ್ತು ವಾಸ್ಕ್ಯುಲಾರ್ ಸರ್ಜನ್ ಆಗಿರುವ ಡಾ. ವಿನಯ್ ನ್ಯಾಪತಿ (ಎಂ.ಡಿ) ಇವರು – ಈ ಸ್ಥಿತಿಯನ್ನು ಅತ್ಯಾಧುನಿಕ ಕನಿಷ್ಠ ಭೇದನದ ಲೇಸರ್ ಥೆರಪಿ ಮುಖಾಂತರ ನಿವಾರಿಸುವ ನಿಪುಣರಾಗಿದ್ದಾರೆ ಮತ್ತು ಇದನ್ನು 100% ಉಪಶಮನಗೊಳಿಸಬಹುದು ಎನ್ನುತ್ತಾರೆ.

ರೇಡಿಯಾಲಜಿಸ್ಟರು ನರಗಳನ್ನು ತಪಾಸಣೆ ಮಾಡಿದ ಬಳಿಕ ಲೇಸರ್ ಅಬ್ಲೇಶನ್ ಎಂದು ಕೂಡ ಕರೆಯಲಾಗುವ ಲೇಸರ್ ಥೆರಪಿಯನ್ನು ಶಿಫಾರಸ್ಸು ಮಾಡಲಾಗುತ್ತದೆ. ಈ ಕನಿಷ್ಠ ಭೇದನವುಳ್ಳ 30 ನಿಮಿಷಗಳ ಪ್ರಕ್ರಿಯೆಯನ್ನು ಜನರಲ್ ಅನೆಸ್ಥೇಶಿಯಾ ಅಡಿಯಲ್ಲಿ ಕೈಗೊಳ್ಳಲಾಗುತ್ತದೆ ಹಾಗೂ ರೋಗಿಯು ಒಂದೇ ದಿನದಲ್ಲಿ ತನ್ನ ಸಾಮಾನ್ಯ ಚಟುವಟಿಕೆಗಳಿಗೆ ಹೊಂದಿಕೊಳ್ಳಬಹುದಾಗಿರುತ್ತದೆ. ಸ್ಪೈಡರ್ ವೇನ್ಸ್ ಎನ್ನಲಾಗುವ ಚಿಕ್ಕ ನರಗಳನ್ನು, ನಾಳಗಳಲ್ಲಿನ ಸ್ಥಗಿತತೆಯನ್ನು ನಿವಾರಿಸಿ, ರಕ್ತ ಪರಿಚಲನೆ ಸರಾಗಗೊಳಿಸುವ ಬೆಳಕಿನ ಉಂಡೆಗಳನ್ನು ಒಡೆಯುವ ಮೂಲಕ ಮೂಲಕ ಈ ಚಿಕಿತ್ಸೆಯನ್ನು ನೀಡಲಾಗುತ್ತದೆ. ಈ ಚಿಕಿತ್ಸೆಯು ನೋವುರಹಿತವಾಗಿರುತ್ತದೆ ಮತ್ತು ಶಾಶ್ವತ ಚಿಕಿತ್ಸೆಯಾಗಿರುತ್ತದೆ.





ಆದ್ದರಿಂದ, ವೆರಿಕೋಸ್ ವೇನ್ಸ್ ಸಮಸ್ಯೆಗೆ ಸಂಪೂರ್ಣ ಚಿಕಿತ್ಸೆ ನೀಡಬಹುದಾಗಿದೆ ಮತ್ತು ಸಕಾಲದಲ್ಲಿ ಸೂಕ್ತ ವೈದ್ಯಕೀಯ ಸಲಹೆಗಳ ಮುಖಾಂತರ ಇದನ್ನು ಶಾಶ್ವತವಾಗಿ ಗುಣಪಡಿಸಬಹುದಾಗಿರುತ್ತದೆ. ಎಸಿಪಿ ಇವರಿಂದ ಅನುಮೋದಿತ ಭಾರತದ ಮೊದಲ ವ್ಯಾಸ್ಕ್ಯೂಲಾರ್ ಸೆಂಟರ್ ಆಗಿರುವ ಅವಿಸ್ ವ್ಯಾಸ್ಕ್ಯೂಲಾರ್ ಸೆಂಟರ್ ಭಾರತದ ಅತಿದೊಡ್ಡ ವೆರಿಕೋಸ್ ವೇನ್ಸ್ ಮತ್ತು ನರಗಳಿಗೆ ಸಂಬಂಧಿತ ಅಲ್ಸರ್‌ಗಳಿಗೆ ಚಿಕಿತ್ಸೆ ನೀಡುವ ಕೇಂದ್ರವಾಗಿದೆ. ಅವಿಸ್–ಇದು ಡಾ. ರಾಜಾ ವಿ ಕೊಪ್ಪಾಲ ರವರ ನೇತೃತ್ವದಲ್ಲಿ ಸಾಗುತ್ತಿದೆ ಮತ್ತು ಇವರು ಅಮೇರಿಕನ್ ಕಾಲೇಜ್ ಆಫ್ ಫ್ಲೆಬಾಲಜಿಯ (ಎಸಿಪಿ) ಸದಸ್ಯರಾಗಿದ್ದು, ಸದರಿ ಕಾಲೇಜು ನರಗಳ ಚಿಕಿತ್ಸೆಗೆ ಸಂಬಂಧಿತ ನಡಾವಳಿಗಳನ್ನು ಸೃಷ್ಟಿಸುವ ಹಾಗೂ ಅನುಮೋದಿಸುವ ಒಂದು ವಿಶ್ವದ ಪ್ರತಿಷ್ಠಿತ ಸಂಸ್ಥೆಯಾಗಿದೆ.

ಡಾ. ವಿನಯ್ ನ್ಯಾಪತಿ
ಅಪೊಲೊ ಸ್ಪೆಕ್ಟ್ರಾ ಹಾಸ್ಪಿಟಲ್
ಅಲ್ಲದೆ ಕಾರ್ಯನಿರ್ವಹಿಸುವ ಆಸ್ಪತ್ರೆ
ಕೋರಮಂಗಲ ಮತ್ತು ಸಹಸ್ರ ಹಾಸ್ಪಿಟಲ್
ಜಯನಗರ, ಬೆಂಗಳೂರು.
ಇವರು ಭೇಟಿ ನೀಡುವ **ಆಸ್ಪತ್ರೆ ರಾಮಕೃಷ್ಣ ಹಾಸ್ಪಿಟಲ್,**
ವಿದ್ಯಾರಣ್ಯಪುರ, ಮೈಸೂರು ಮತ್ತು ದಾವಣಗೆರೆ
ಯಾವುದೇ ಸ್ಥಳದಲ್ಲಿ ಸಮಯನಿಗದಿಗಾಗಿ ದಯವಿಟ್ಟು
ಸಂಪರ್ಕಿಸಿ: **080–88837000**

ರಾಧೆ ಹೇಳಿಕೊಟ್ಟ ಕಲೆ ಸಾಂಝಿ!

ಯಮುನಾ ತೀರದ ಸುತ್ತಲಿನ ಪ್ರದೇಶಗಳಲ್ಲಿ ಮಾತ್ರ ಕಾಣಸಿಗುತ್ತಿದ್ದ ಸಾಂಝಿ ಕಲೆ ಈಗ ದೇಶ ಸಂಚಾರ ಹೊರಟಿದೆ. ಕೃಷ್ಣ–ರಾಧೆಯರ ಕಾಲದಷ್ಟು ಹಿಂದಿನ ಸುದೀರ್ಘ ಚರಿತ್ರೆ ನಮ್ಮ ಕಲೆಗಿದೆ ಎನ್ನುತ್ತಾರೆ ಸಾಂಝಿ ಕಲಾವಿದರು. ದಸ್ತಕರ್ ಸಂಸ್ಥೆಯ ವತಿಯಿಂದ ಈಚೆಗೆ ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಮೇಳಕ್ಕೆ ಬಂದಿದ್ದ ಕಲಾವಿದ ಆಶುತೋಷ್ ವರ್ಮಾ ತೆರೆದಿಟ್ಟ ಸಾಂಝಿ ಜಗತ್ತು ಎಷ್ಟೊಂದು ಅದ್ಭುತ!

ಸಾಂಝಿ ಕಲೆಯ 'ಲೈವ್' ಪ್ರದರ್ಶನ ನೀಡುತ್ತಿರುವ ಕಲಾವಿದ ಆಶುತೋಷ್ ವರ್ಮಾ – ಚಿತ್ರ: ರಂಜು ಪಿ.

ದಸ್ತಕಾರ್–ಕುಶಲಕರ್ಮಿಗಳ ಶಕ್ತಿ

ಗ್ರಾಮಭಾರತದ ಕರಕುಶಲ ಕರ್ಮಿಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು 38 ವರ್ಷಗಳ ಹಿಂದೆ ಜನ್ಮತಾಳಿದ ಸಂಸ್ಥೆಯೇ ದಸ್ತಕಾರ್. ದೇಶದ ಗ್ರಾಮೀಣ ಭಾಗದ ಕಲಾವಿದರಿಗೆ, ಅದರಲ್ಲೂ ಮಹಿಳಾ ಕುಶಲಕರ್ಮಿಗಳಿಗೆ ಉತ್ತೇಜನ ನೀಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶ. ಲಾಭದ ಉದ್ದೇಶವಿಲ್ಲದ ಈ ಸಂಸ್ಥೆ ದೇಶದ ವಿವಿಧ ಭಾಗಗಳಲ್ಲಿ ಕರಕುಶಲ ಮೇಳಗಳನ್ನು ನಡೆಸಿ ಕಲಾವಿದರಿಗೂ ಗ್ರಾಹಕರಿಗೂ ಸಂಪರ್ಕ ಸೇತುವಾಗುವ ಕೆಲಸ ಮಾಡುತ್ತಿದೆ. ವರ್ಷಪೂರ್ತಿ ಒಂದಿಲ್ಲೊಂದು ನಗರದಲ್ಲಿ ದಸ್ತಕಾರ್ ವತಿಯಿಂದ ನಡೆಯುವ ಮೇಳಗಳಿಂದ ಕರಕುಶಲ ಕರ್ಮಿಗಳು ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಅವರಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಒದಗಿಸುವ ಕೆಲಸವನ್ನೂ ಈ ಸಂಸ್ಥೆ ಮಾಡುತ್ತಿದೆ. ಸಂಪರ್ಕ: 99108 02970

ಪ್ರವೀಣ ಕುಲಕರ್ಣಿ

ಯಮುನಾ ತೀರ ಎಂದರೆ ಸಾಕು, ಮನದಂಗಳದಲ್ಲಿ ಥಟ್ಟನೆ ಮೆರವಣಿಗೆ ಹೊರಡುವುದು ಕೃಷ್ಣ–ರಾಧೆಯರ ಪ್ರೇಮ ಸಲ್ಲಾಪದ ಕಥಾನಕಗಳಲ್ಲವೇ? ಈ ಅಮರ ಪ್ರೇಮಿಗಳ ನೆಲೆಗಳೆನಿಸಿದ ಮಥುರಾ ಹಾಗೂ ವೃಂದಾವನ ಪಟ್ಟಣಗಳನ್ನೊಳಗೊಂಡ ಪ್ರದೇಶವೇ ಬ್ರಿಜ್‌ಭೂಮಿ (ಅಥವಾ ವ್ರಜಭೂಮಿ). ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಹೊಂದಿದ ಈ ಭೂಮಿಯಲ್ಲಿ ಅರಳಿ ನಿಂತ ಅನನ್ಯವಾದ ಒಂದು ಕಲೆ ಸಾಂಝಿ. ಹಲವು ಸಂಸ್ಕೃತಿಗಳ ತೊಟ್ಟಿಲು ಎನಿಸಿರುವ ಯಮುನೆ ಈ ಕಲೆಗೂ ಹದವಾಗಿ ನೀರೆರೆದು ಪೋಷಿಸಿದ್ದಾಳೆ.

ಕೃಷ್ಣ–ರಾಧೆಯರ ಪ್ರೇಮ ಸಲ್ಲಾಪಕ್ಕೂ ಸಾಂಝಿ ಕಲೆಗೂ ನೇರ ಸಂಬಂಧವಿದೆ ಎನ್ನುವುದು ಕಲಾವಿದ ಆಶುತೋಷ್ ವರ್ಮಾ ಅವರ ಗಟ್ಟಿ ನಂಬಿಕೆ. ಮಥುರಾದ ವರ್ಮಾ ಕುಟುಂಬದಲ್ಲಿ ನಾಲ್ಕನೇ ತಲೆಮಾರಿನ ಕಲಾವಿದರಂತೆ ಅವರು. 'ಸಾಂಝ್' ಎಂದರೆ ಸಂಧ್ಯಾಕಾಲ; ಗೋಧೂಳಿ ಸಮಯ. ಗೋವುಗಳನ್ನು ಕೃಷ್ಣ ಮನೆಗೆ ವಾಪಸ್ ಕರೆತರುವ ಹೊತ್ತಿನಲ್ಲಿ ರಾಧೆಯು, ಗೋಪಿಕೆಯರೊಡನೆ ಹೂವು, ಎಲೆಗಳ ರಂಗೋಲಿ ಬಿಡಿಸುವ ಮೂಲಕ ಅಂಗಳವನ್ನು ಅಲಂಕರಿಸುತ್ತಿದ್ದಳು. ಆ ಕಲೆಯೇ ಕಾಲದ ಕುಲುಮೆಯಲ್ಲಿ ಹಾದು ಈಗ ಸಾಂಝಿ ರೂಪದಲ್ಲಿ ಬೆಳೆದು ನಿಂತಿದೆ ನೋಡಿ' ಎಂದು ಹೇಳುವಾಗ, ತಮ್ಮ ಕಲೆಗೆ ದ್ವಾಪರ ಯುಗದಷ್ಟು ಹಿಂದಿನ ಇತಿಹಾಸವಿದೆ ಎನ್ನುವ ಹೆಮ್ಮೆ ಅವರಿಗೆ.

ದಶಕಗಳ ಹಿಂದಿನವರೆಗೆ ಮಥುರಾ–ವೃಂದಾವನ ಪಟ್ಟಣಗಳಿಗೆ ಮಾತ್ರ ಸೀಮಿತವಾಗಿದ್ದ ಸಾಂಝಿ ಕಲೆ ಈಗ ದೇಶದಾದ್ಯಂತ ದಿಗ್ವಿಜಯ ಹೊರಟಿದೆ. ಸಾಂಝಿ ಕಲಾವಿದರು ಎಲ್ಲೆಡೆ ತೆರಳಿ, ಈ ಕಲೆಯನ್ನು ಜನರಿಗೆ ಪರಿಚಯಿಸುವ ಕೆಲಸವನ್ನೂ ಮಾಡುತ್ತಿದ್ದಾರೆ. ಹಾಗೆ ಬೆಂಗಳೂರಿಗೆ ಬಂದಿದ್ದ ಆಶುತೋಷ್ ಮಾತಿಗೆ ಸಿಕ್ಕಿದ್ದಲ್ಲದೆ, ಸಾಂಝಿ ಕಲೆಯ ಕುರಿತು ಹಲವು ರಸವತ್ತಾದ ವಿವರಗಳನ್ನು ಕೊಡುತ್ತಾ ಹೋದರು.

ಕೃಷ್ಣ–ರಾಧೆಯರು, ನವಿಲುಗಳು, ಗೋವುಗಳು, ಮಂಗಗಳು, ಕದಂಬ ಮರಗಳು, ಹೂವುಗಳು –ಇವು ಸಾಂಝಿ ಕಲೆಯ ಹೆಗ್ಗುರುತುಗಳು. ಗೋಡೆಯನ್ನು, ಮನೆಯ ಅಂಗಳವನ್ನು ಸಿಂಗರಿಸುವುದೇ ಈ ಕಲೆಯ ಮೂಲ ಉದ್ದೇಶ. ಹಿಂದೆ ರಾಧೆ ಮಾಡಿದ್ದು ಕೂಡ ಅದನ್ನೇ ತಾನೆ? ಸಾಂಝಿ ಕಲೆಯಲ್ಲಿ ಎರಡು ವಿಧ. ಒಂದು ಜನಪದ ಸಂಪ್ರದಾಯವಾದರೆ, ಮತ್ತೊಂದು ದೇವಾಲಯ ಸಂಪ್ರದಾಯ. ದಶಕಗಳ ಹಿಂದೆ, ಮದುವೆಯಾಗದ ಯುವತಿಯರೇ ಜನಪದ ಸಂಪ್ರದಾಯದ ಕಲಾವಿದೆಯರು. 'ಒಳ್ಳೆಯ ಗಂಡ ಸಿಗಬೇಕು ಹಾಗೂ ಅಷ್ಟಪುತ್ರ ಸೌಭಾಗ್ಯವತಿ ಆಗಬೇಕು' ಎಂಬ ಹಾರೈಕೆಯಿಂದ ಯುವತಿಯರು ಇಂತಹ ಚಿತ್ತಾರಗಳನ್ನು ಬಿಡಿಸುತ್ತಿದ್ದರಂತೆ!

ಅದೇ ದೇವಾಲಯ ಸಂಪ್ರದಾಯದಲ್ಲಿ ಸಾಂಝಿ ಅರಳುವುದು ಪಿತೃಪಕ್ಷ ಕಾಲದಲ್ಲಿ. ಅದೂ ವೃಂದಾವನದ ದೇವಾಲಯಗಳಲ್ಲಿಯೇ ಹೆಚ್ಚಾಗಿ ಸಾಂಝಿ ಸೊಬಗನ್ನು ಕಣ್ತುಂಬಿಕೊಳ್ಳಬಹುದಂತೆ. ಮಣ್ಣು ಮತ್ತು ಸಗಣಿಯಿಂದ ಮಾಡಿದ 'ವೇದಿ'ಯ (ವೇದಿಕೆ?) ಮೇಲೆ ಕೃಷ್ಣ–ರಾಧೆಯರ ಲೀಲಾಪ್ರಸಂಗಗಳು ಜೀವ ತಾಳುವುದು ಇಲ್ಲಿನ ವಿಶೇಷ. ಕಲಾವಿದರ ನೆರವಿನಿಂದ ಪುರೋಹಿತರು ಕೊರೆಯಚ್ಚುಗಳ (stencils) ಮೂಲಕ 'ವೇದಿ'ಗಳ ಮೇಲೆ ಲೀಲಾ ಪ್ರಸಂಗಗಳ ದೃಶ್ಯಾವಳಿಗಳನ್ನು ಒಡಮೂಡಿಸುವುದು ಪರಂಪರಾಗತ ರೂಢಿ. ಈಗ ದೇಶದಾದ್ಯಂತ ದಿಗ್ವಿಜಯ ಹೊರಟಿದ್ದು ಮಾತ್ರ ಜನಪದ ಸಂಪ್ರದಾಯದ ಕಲೆಯೇ. ಕೊರೆಯಚ್ಚುಗಳ ಅಸ್ತ್ರವನ್ನೇ ಅದು ಹಿಡಿದು ಹೊರಟಿದೆ.


ಕತ್ತರಿ ಆಡಿಸುತ್ತಾ ಹೋದಂತೆ ಅಂದದ ಅಂಬಾರಿ ಹೀಗೆ ಮೂಡುತ್ತದೆ ನೋಡಿ

ಅಂಗಳದಲ್ಲಿ ಚಿತ್ತಾರದ ರಂಗೋಲಿ ಮೂಡಿಸಲು ಮಾರುಕಟ್ಟೆಗಳಲ್ಲಿ ರಂಗೋಲಿಯ ವಿನ್ಯಾಸಕ್ಕೆ ತಕ್ಕ ಕತ್ತರಿಸಿದ ಕಾಗದಗಳು ಸಿಗುತ್ತವಲ್ಲ? ಸಾಂಝಿ ಕೊರೆಯಚ್ಚುಗಳೂ ಹಾಗೇ. ದೊಡ್ಡ ಗೋಡೆಯಷ್ಟು ಉದ್ದ–ಅಗಲದ ಕಾಗದದಲ್ಲಿ ಲೀಲಾ ಪ್ರಸಂಗಗಳ ದೃಶ್ಯಗಳನ್ನು ಕೊರೆಯಲಾಗುತ್ತದೆ. ಕೊರೆಯಚ್ಚುಗಳ ಸಹಾಯದಿಂದ ಗೋಡೆಗಳ ಮೇಲೆ ಅದೇ ದೃಶ್ಯಗಳನ್ನು ಬಣ್ಣದಿಂದ ಮೂಡಿಸಬಹುದು. ಅಥವಾ ಅವುಗಳನ್ನೇ ತೂಗುಹಾಕಿ, ಬಣ್ಣದ ಬೆಳಕು ಹರಿಸಿ, ಚಿತ್ತಾರ ಒಡಮೂಡಿಸಬಹುದು. ಇಲ್ಲದಿದ್ದರೆ ಕೊರೆಯಚ್ಚುಗಳ ಹಿಂದೆ ಬಣ್ಣದ ಕಾಗದ/ಬಟ್ಟೆ ಅಂಟಿಸಿಯೂ ತೂಗು ಹಾಕಬಹುದು.

ನೋಡಲು ತುಂಬಾ ಸರಳವಾಗಿದ್ದರೂ ಕೊರೆಯಚ್ಚುಗಳನ್ನು ಸಿದ್ಧಪಡಿಸುವುದು ಅಷ್ಟು ಸುಲಭವಲ್ಲ. ಮೊದಲು ವಿನ್ಯಾಸದ ಅಳತೆಗೆ ತಕ್ಕಂತೆ ಕಾಗದವನ್ನು ಜೋಡಿಸಿಕೊಳ್ಳಬೇಕು. ಗಾತ್ರ ದೊಡ್ಡದಾಗಿದ್ದರೆ ಒಂದಕ್ಕೊಂದು ಕಾಗದವನ್ನು ಅಂಟಿಸಿಕೊಳ್ಳಬೇಕು. 8X12 ಅಡಿಗಳಷ್ಟು ದೊಡ್ಡ ಆಕಾರದ ಕಾಗದದಲ್ಲೂ ಕಲಾಕೃತಿಗಳನ್ನು ಅರಳಿಸುವುದುಂಟು. ಬೇಕಾದ ವಿನ್ಯಾಸಕ್ಕೆ ತಕ್ಕಂತೆ ಕಾಗದದ ಮೇಲೆ ರೇಖಾಚಿತ್ರವನ್ನು ಹಾಕಿಕೊಳ್ಳಬೇಕು. ಕೊನೆಗೆ ಆ ವಿನ್ಯಾಸಕ್ಕೆ ಅನುಗುಣವಾಗಿ ವಿಶೇಷ ಕತ್ತರಿಗಳಿಂದ ಕತ್ತರಿಸುತ್ತಾ (ದೃಶ್ಯಗಳನ್ನು ಕೊರೆಯುತ್ತಾ!) ಹೋಗಬೇಕು. ಕಾಗದದಲ್ಲಿ ಮೂಡಿದ ವಿನ್ಯಾಸ ಕಿತ್ತು ಬರದಂತೆ ಮಧ್ಯೆ ಮಧ್ಯೆ 'ಸೇತುವೆ'ಗಳನ್ನು ಉಳಿಸುತ್ತಲೂ ಹೋಗಬೇಕು... ಹೀಗೆ ತಮ್ಮ ಕಲೆಯ ಕಥೆ ಹೇಳುತ್ತಾ ಆಶುತೋಷ್, ಕಾಗದವನ್ನು ಆಚೀಚೆ ಹೊರಳಿಸುತ್ತಾ, ಅದನ್ನು ಕತ್ತರಿಸುತ್ತಾ ಹೊರಟಿದ್ದ ರೀತಿ ಸೋಜಿಗವನ್ನು ಉಂಟು ಮಾಡುತ್ತಿತ್ತು.

ಕಾಗದದಲ್ಲಿ ಚಿತ್ರಗಳನ್ನು ಕೊರೆಯುವ ಕೆಲಸಕ್ಕೆ ಅಪಾರವಾದ ಅಭ್ಯಾಸ ಬೇಕು. ಧ್ಯಾನಸ್ಥ ಸ್ಥಿತಿಯಂತಹ ಏಕಾಗ್ರತೆ ಬೇಕು. ಅಷ್ಟೇ ಪ್ರಮಾಣದ ತಾಳ್ಮೆಯೂ ಇರಬೇಕು. ಸಾಂಝಿ ಕಲೆಯ 'ಲೈವ್' ಪ್ರದರ್ಶನ ನೀಡುತ್ತಿದ್ದ ಆಶುತೋಷ್ ಅವರ ಶ್ರಮವನ್ನು ನೋಡಿದಾಗ ಅವರ ವಿವರಣೆಯಲ್ಲಿ ಒಂದಿನಿತೂ ಉತ್ಪ್ರೇಕ್ಷೆ ಇಲ್ಲ ಎನ್ನುವಭಾವ ಗಟ್ಟಿಯಾಗುತ್ತಿತ್ತು. ದಿನಗಟ್ಟಲೆ ಕಣ್ಣಲ್ಲಿ ಕಣ್ಣಿಟ್ಟು ಅಂದದ ಕಲೆ ಅರಳಿಸಿದರೂ ನಿರೀಕ್ಷಿತ ಆದಾಯ ಸಿಗದೆ ಎಷ್ಟೋ ಕಲಾವಿದರು ಬೇರೆ ವೃತ್ತಿ ಅರಸಿ ಹೋಗಿದ್ದಾರೆ ಎಂದ ಆಶುತೋಷ್ ಅವರು, ಮುಂದೆ ಬೇರೇನೂ ಹೇಳುವ ಗೋಜಿಗೆ ಹೋಗಲಿಲ್ಲ.

ಮಥುರಾದಿಂದ ಈ ಕಲಾವಿದ ಹೊತ್ತು ತಂದಿದ್ದ ಕಲಾಕೃತಿಗಳು ಮಾತ್ರ ಸುಮ್ಮನೆ ಕೂತಿರಲಿಲ್ಲ. ಪೌರಾಣಿಕ ಕಥೆಗಳನ್ನೂ ಕಲಾವಿದರ ಶ್ರಮವನ್ನೂ ಬ್ರಿಜ್‌ಭೂಮಿಯ ಕಲಾ ಸಿರಿವಂತಿಕೆಯ ಮಹತ್ವವನ್ನೂ ಅವು ಒಟ್ಟೊಟ್ಟಿಗೆ ಉಲಿಯುತ್ತಿದ್ದವು.

ಸಂಪರ್ಕ: 9557558067

ಶೇಡ್‌ಲ್ಯಾಂಪ್‌ನಲ್ಲಿ ತೊಗಲು ಬೊಂಬೆ!

ಶೇಡ್‌ಲ್ಯಾಂಪ್‌ನಲ್ಲಿ ಸೀತಾರಾಮ ಕಲ್ಯಾಣ

ಅಭಿಲಾಷ್ ಪಿ.ಎಸ್.

'ಅಯ್ಯೋ... ಈ ಸಿನಿಮಾ, ಮೊಬೈಲ್ ಬಂದ ಮೇಲೆ ತೊಗಲು ಬೊಂಬೆಯಾಟವನ್ನು ಯಾರು ನೋಡುತ್ತಾರೆ. ನಾವು ತಯಾರಿಸಿದ ತೊಗಲು ಬೊಂಬೆಗಳು ಕಲಾ ಪ್ರದರ್ಶನದಲ್ಲಿ ಕೇವಲ ಶೋಪೀಸ್‌ಗಳಾಗಿರುತ್ತವೆಯೇ ಹೊರತು ಮಾರಾಟವಾಗುವುದಿಲ್ಲ. ಈಗಿನ ಮಕ್ಕಳಿಗೆ ಇವು ಕೇವಲ ಚಿತ್ರಗಳಷ್ಟೆ. ಪಾಲಕರಿಗಂತೂ ಇದನ್ನು ವಿವರಿಸುವ ಸಮಯವೂ ಇಲ್ಲ, ಮಾಹಿತಿಯೂ ಇಲ್ಲ. ಇನ್ನು ತೊಗಲು ಬೊಂಬೆಯಾಟವಾಡಿಸುವವರು ಈ ವೃತ್ತಿ ತೊರೆದು ನಗರಗಳತ್ತ ಹೆಜ್ಜೆ ಹಾಕಿದ್ದಾರೆ. ಹೀಗಾಗಿ ನಾವೂ ಕಾಲಕ್ಕೆ ತಕ್ಕಂತೆ ತೊಗಲು ಬೊಂಬೆಯ ಸ್ವರೂಪವನ್ನು ಕೊಂಚ ಬದಲಾಯಿಸಿ ಶೇಡ್‌ಲ್ಯಾಂಪ್, ಡೋರ್ ಹ್ಯಾಂಗಿಂಗ್ಸ್ ಮತ್ತು ವರ್ಣಚಿತ್ರದತ್ತ ಹೊರಳಿದ್ದೇವೆ..'

ಕೆ ಶ್ರೀನಿವಾಸಲು

ಹೀಗೆ ಒಂದೇ ಉಸಿರಿನಲ್ಲಿ ತೊಗಲು ಬೊಂಬೆಯಾಟದ ಭವಿಷ್ಯ, ತಮ್ಮ ಸಂಕಷ್ಟವನ್ನು ಕೊಂಚ ಗದ್ಗದಿತ ದನಿಯಲ್ಲಿ ಹೇಳಿದವರು ಅನಂತಪುರ ಜಿಲ್ಲೆಯ ಧರ್ಮಾವರಂನ ಕೆ.ಶ್ರೀನಿವಾಸಲು.

ಭಾರತದ ಜಾನಪದ ಸಂಪ್ರದಾಯದ ಭಾಗವಾಗಿರುವ ತೊಗಲು ಬೊಂಬೆಯಾಟಕ್ಕೆ ಸುಮಾರು 15 ಶತಮಾನಗಳ ಇತಿಹಾಸವಿದೆ. ಟಿ.ವಿ, ಮೊಬೈಲ್ ಇಲ್ಲದ ಕಾಲದಲ್ಲಿ ಮನರಂಜನೆಯ, ಮಕ್ಕಳಿಗೆ ಪುರಾಣ ಕಥೆಗಳನ್ನು ಹೇಳುವ ಮಾಧ್ಯಮವಾಗಿ ಈ ಬೊಂಬೆಯಾಟ ಈ ಭೂಮಿಯಲ್ಲಿ ಬೇರೂರಿತ್ತು. ಆದರೆ ಕಾಲ ಬದಲಾದಂತೆ ಇತರೆ ಕಲೆಗಳಂತೆ ತೊಗಲು ಬೊಂಬೆಯಾಟವೂ ಕ್ರಮೇಣವಾಗಿ ತೆರೆಯ ಹಿಂದೆ ಸರಿಯುತ್ತಿದೆ. ನೆರಳು–ಬೆಳಕಿನಾಟ ಪೂರ್ಣ ಕತ್ತಲೆಯತ್ತ ಹೆಜ್ಜೆ ಇಟ್ಟಿದೆ. ಇದನ್ನು ಬಹಳ ಹತ್ತಿರದಿಂದ ಕಂಡವರು ಶ್ರೀನಿವಾಸಲು. ಏಕೆಂದರೆ, ತೊಗಲು ಬೊಂಬೆ ತಯಾರಿಸುವ ವೃತ್ತಿಯಲ್ಲಿ ಇವರಿಗೆ 33 ವರ್ಷಗಳ ಸುದೀರ್ಘ ಅನುಭವ. ಮುತ್ತಾತನ ಕಾಲದಿಂದಲೂ ಇವರ ಕುಟುಂಬಕ್ಕೆ ಇದೇ ಆಧಾರ. ಬೊಂಬೆಗಳ ತಯಾರಿಕೆಯಷ್ಟೇ ಅಲ್ಲದೆ ಅವುಗಳನ್ನು ಆಟವಾಡಿಸುತ್ತಲೂ ಇದ್ದ ಹಲವು ಕುಟುಂಬಗಳಿರುವ ಪ್ರದೇಶದಿಂದಲೇ ಬಂದಿರುವವರು ಶ್ರೀನಿವಾಸಲು.

ಜನ ಬದಲಾಗಿದ್ದಾರೆ, ನಮ್ಮ ವೃತ್ತಿಯೂ ಬದಲಾಗಿದೆ

'ಇದು ಮೊಬೈಲ್ ಕಾಲ. ಕಲೆಯೂ ಫ್ಯಾಷನ್ ಆಗಿದೆ. ತೊಗಲು ಬೊಂಬೆಗಳೆಂದರೆ ಹೆಚ್ಚಿನ ಮಕ್ಕಳಿಗೆ ಮಾಹಿತಿಯೇ ಇಲ್ಲ. ಇನ್ನು ಶ್ರೀಮಂತರ ಮಕ್ಕಳ ಜನ್ಮದಿನದ ಕಾರ್ಯಕ್ರಮ, ಮದುವೆ ಆರತಕ್ಷತೆಗಳಲ್ಲಿ ವಿಶೇಷ ಕಾರ್ಯಕ್ರಮಕ್ಕೆ ಈ ಆಟ ಸೀಮಿತವಾಗುತ್ತಿದೆ. ತೊಗಲು ಬೊಂಬೆ ಮಾರಾಟವಾದರಷ್ಟೇ ನಮ್ಮ ಹೊಟ್ಟೆ ತುಂಬುತ್ತದೆ. ಹೀಗಾಗಿ ಕೂಲಿ ಕೆಲಸಕ್ಕೆ ಹೋಗುವ ಸ್ಥಿತಿ ಬಂದಿದೆ. ಶೇ 10ರಷ್ಟು ಜನರಷ್ಟೇ ಇನ್ನೂ ಈ ವೃತ್ತಿಯಲ್ಲಿದ್ದಾರೆ. ಈ ಕಾರಣದಿಂದ ನಾವೂ ತೊಗಲು ಬೊಂಬೆಯ ಸ್ವರೂಪವನ್ನು ಕೊಂಚ ಬದಲಾಯಿಸಬೇಕಾದ ಅನಿವಾರ್ಯ ಎದುರಾಗಿದೆ' ಎಂದು ಈ ಕಲಾವಿದ ಹೇಳುತ್ತಾರೆ.

'ಚರ್ಮದಲ್ಲೇ ತಯಾರಿಸಲಾದ ವಾಲ್ ಹ್ಯಾಂಗಿಂಗ್ಸ್, ಡೋರ್ ಹ್ಯಾಂಗಿಂಗ್ಸ್ ಹಾಗೂ ಶೇಡ್‌ಲ್ಯಾಂಪ್ಸ್ ಈಗ ನಮ್ಮ ಹೊಟ್ಟೆ ತುಂಬಿಸುತ್ತಿವೆ. ಜನ ಇವುಗಳತ್ತ ಆಕರ್ಷಿತರಾಗುತ್ತಾರೆ. ಒಂದು ಶೇಡ್‌ಲ್ಯಾಂಪ್ ಮಾರಾಟದಿಂದ ₹800–₹2000ದವರೆಗೆ ಹಣ ಬರುತ್ತದೆ. ಅಷ್ಟೊಂದು ದುಬಾರಿಯೇ ಎನ್ನುವ ಜನರಿಗೆ ಇದರ ಹಿಂದಿರುವ ಕಷ್ಟ ತಿಳಿದಿಲ್ಲ. ಈ ಹೊಸ ಸ್ವರೂಪದ ತೊಗಲು ಬೊಂಬೆಗಳಲ್ಲೇ ನಾವು ಸೀತಾರಾಮ ಪಟ್ಟಾಭಿಷೇಕ, ದಶಾವತಾರ, ರಾಧಾಕೃಷ್ಣ, ರಾಮಾಯಣ ಹಾಗೂ ಮಹಾಭಾರತದ ಕಥೆ ಹೇಳುತ್ತಿದ್ದೇವೆ' ಎನ್ನುತ್ತಾರೆ.

ತೊಗಲು ಬೊಂಬೆಗಳಲ್ಲೂ ಹಲವು ವೈವಿಧ್ಯವಿದ್ದು, ಕೇರಳದಲ್ಲಿ ಬಳಕೆಯಾಗುವ ಬೊಂಬೆಗಳು ಕೇವಲ ನೆರಳು–ಬೆಳಕಿನಾಟಕ್ಕಷ್ಟೇ ಸೀಮಿತ. ಇವುಗಳಲ್ಲಿ ಯಾವುದೇ ವರ್ಣಗಳ ಬಳಕೆಯಿಲ್ಲ. ಕರ್ನಾಟಕದಲ್ಲಿ ತೊಗಲು ಬೊಂಬೆಯಾಟವನ್ನು ಕುಳಿತು ಆಡಿಸುತ್ತಾರೆ. ಅದೇ ಆಂಧ್ರದಲ್ಲಿ 7–8 ಅಡಿ ಎತ್ತರದ ತೊಗಲು ಬೊಂಬೆಗಳ ಬಳಕೆಯಾಗುತ್ತದೆ. ಇವುಗಳ ತಯಾರಿಗೆ ವಾರಗಳೇ ಹಿಡಿಯುತ್ತವೆ. ₹12 ಸಾವಿರದವರೆಗೆ ಖರ್ಚು ಬರುತ್ತದೆ... ಶ್ರೀನಿವಾಸಲು ಹಾಗೆಯೇ ವಿವರ ಕೊಡುತ್ತಾ ಹೋದರು.

ಹೊಸ ಸ್ವರೂಪ ಪಡೆದಿರುವ ತೊಗಲು ಬೊಂಬೆಗಳು ಸಾಂಪ್ರದಾಯಿಕ ಮಾದರಿಯವಲ್ಲದೇ ಇದ್ದರೂ ಈ ಕಲೆಯನ್ನು ಉಳಿಸುವ ನಿಟ್ಟಿನಲ್ಲಿ ವಿಭಿನ್ನ ಪ್ರಯತ್ನವೇ ಆಗಿದೆ. ಈ ಮೂಲಕವಾದರೂ ಈ ವೃತ್ತಿ, ಕಲೆ ಇನ್ನೊಂದಿಷ್ಟು ಕಾಲ ಉಸಿರಾಡಲಿದೆ ಎನ್ನುವ ಆಶಾಭಾವ ಈ ಕಲಾವಿದರದ್ದು.

ಸಂಪರ್ಕ: 8897291616

ತಯಾರಿ ಹೇಗೆ?

ಮಾರುಕಟ್ಟೆಯಿಂದ ಮೇಕೆಯ ಚರ್ಮ ತಂದು ಅದನ್ನು ಸ್ವಚ್ಛಗೊಳಿಸಿ ದಬ್ಬಣಗಳ ಸಹಾಯದಿಂದ ಅದನ್ನು ಬಟ್ಟೆಯಂತೆ ಹರಡಿ ಮೊದಲು ಚಿತ್ರದ ಔಟ್‌ಲೈನ್ ಮಾಡಲಾಗುತ್ತದೆ. ಈ ಚಿತ್ರಕಲೆಯ ನಂತರ ಅದಕ್ಕೆ ಬಣ್ಣ ತುಂಬಿಸಲಾಗುತ್ತದೆ. ಬಳಕೆಯಾಗುವ ಎಲ್ಲ ಬಣ್ಣವೂ ನೈಸರ್ಗಿಕವೇ. ಮರದ ಅಂಟಿಗೆ ಸೀಮೆಎಣ್ಣೆ ಮಿಶ್ರಣ ಮಾಡಿ ಕಪ್ಪು ಬಣ್ಣ ತಯಾರಿಸಲಾಗುತ್ತದೆ. ಅದೇ ರೀತಿ ಪೇರಳೆಯ ಬೀಜಗಳಿಂದ ಕೆಂಪು ಬಣ್ಣ, ಕಲ್ಲಿದ್ದಲು ಹಾಗೂ ತುಂಬೆ ಗಿಡದ ರಸದಿಂದ ನೀಲಿ ಬಣ್ಣ ಹೀಗೆ. ಹೀಗಾಗಿಯೇ ನೂರಿನ್ನೂರು ವರ್ಷಗಳವರೆಗೆ ಈ ಬಣ್ಣ ಮಾಸುವುದಿಲ್ಲ.

ತೊಗಲು ಬೊಂಬೆ

ತೊಗಲಿನ ಕ್ಯಾನ್ವಾಸ್‌ನಲ್ಲಿ ದಶಾವತಾರದ ವರ್ಣನೆ

ಮುನ್ನೋಟ 12-09-2021 ರಿಂದ 18-09-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮಗೆ ಬರಬೇಕಾಗಿದ್ದ ಬಾಕಿ ಹಣ ಈಗ ಬರುವ ಸಾಧ್ಯತೆ ಇದೆ. ನಿಮ್ಮ ಉಳಿತಾಯದ ಹಣ ಈಗ ಉಪಯೋಗಕ್ಕೆ ಬರುತ್ತದೆ. ಸಂತಾನಕ್ಕಾಗಿ ಕಾಯುತ್ತಿರುವವರಿಗೆ ಶುಭ ಸಮಾಚಾರ ದೊರೆಯಬಹುದು. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಂದರೆ ಬಂದರೂ ಎಲ್ಲವೂ ಸರಿಯಾಗುತ್ತವೆ. ನಿಮ್ಮ ಬೆಳವಣಿಗೆ ಕಂಡು ನಿಮ್ಮ ಸಂಗಾತಿಯ ಕಡೆಯವರು ತಗಾದೆ ತೆಗೆಯಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಬೇರೆಯವರನ್ನು ಅಪಹಾಸ್ಯ ಮಾಡಲು ಹೋಗಿ ನೀವೇ ಅಪಹಾಸ್ಯಕ್ಕೊಳಗಾಗುವ ಸಾಧ್ಯತೆಗಳಿವೆ. ಈ ಬಗ್ಗೆ ಎಚ್ಚರವಹಿಸಿರಿ. ಹಿತಮಿತವಾದ ಮಾತುಗಳಿಂದ ಜನರನ್ನು ಗೆಲ್ಲಲು ಯತ್ನಿಸಿರಿ. ಶೃಂಗಾರ ಸಾಮಗ್ರಿಗಳನ್ನು ಮಾರುವವರ ವ್ಯವಹಾರ ವೃದ್ಧಿಸುತ್ತದೆ. ನೌಕರಿಯಲ್ಲಿ ಬಡ್ತಿ ಸಿಗುವ ಸಾಧ್ಯತೆಗಳಿವೆ. ವ್ಯವಹಾರದಲ್ಲಿ ಹೊಸ ರೀತಿಯ ಪ್ರಯೋಗವನ್ನು ಮಾಡಲು ಚಿಂತಿಸದಿರಿ. ವಿದ್ಯಾರ್ಥಿಗಳಿಗೆ ಸಾಧನೆಗೆ ತಕ್ಕ ಫಲವಿರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನೌಕರರು ತಮ್ಮ ವೃತ್ತಿಯಲ್ಲಿ ಯಾವುದೇ ರೀತಿ ತಪ್ಪಾಗದಂತೆ ನಡೆದುಕೊಳ್ಳುವುದು ಒಳ್ಳೆಯದು. ಇಲ್ಲವಾದಲ್ಲಿ ಕಠಿಣ ಶಿಕ್ಷೆ ಒದಗಬಹುದು. ಉದ್ಯೋಗದಲ್ಲಿ ಸ್ಥಾನಪಲ್ಲಟ ಆಗುವ ಸಾಧ್ಯತೆಗಳಿವೆ. ನಿಮ್ಮ ಬಹುದಿನದ ಬಯಕೆಯೊಂದನ್ನು ವಿಶ್ವಾಸಿಗರಲ್ಲಿ ಸಮಾಲೋಚನೆ ಮಾಡಿ ಕಾರ್ಯರೂಪಕ್ಕೆ ತರುವಿರಿ ಹಾಗೂ ಇದರಲ್ಲಿ ಯಶಸ್ಸನ್ನು ಕಾಣುವಿರಿ. ಗಣಿಗಾರಿಕೆ ಮಾಡುವವರಿಗೆ ವ್ಯವಹಾರ ವೃದ್ಧಿಸುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆರ್ಥಿಕ ಅನುಕೂಲ ನಿಮಗೆ ಒದಗಿ ಬರುತ್ತದೆ. ಸ್ನೇಹಿತರಲ್ಲಿ ಕೆಲವರ ಸ್ನೇಹ ಅವರ ನಡವಳಿಕೆಯಿಂದ ದೂರವಾಗುತ್ತದೆ. ಕೆಲವು ಹಳೆಯ ಯೋಜನೆಗಳನ್ನು ನವೀಕರಣ ಮಾಡಿಕೊಂಡು ಮುಂದುವರಿಸಬಹುದು. ನವೀನ ರೀತಿಯ ಬಟ್ಟೆಗಳ ವ್ಯಾಪಾರ ಮಾಡುವವರಿಗೆ ವ್ಯವಹಾರದಲ್ಲಿ ಲಾಭದ ಜೊತೆಗೆ ವ್ಯವಹಾರ ವಿಸ್ತರಿಸುತ್ತದೆ. ಉದ್ಯೋಗದಲ್ಲಿ ನಿರೀಕ್ಷಿತ ರೀತಿಯ ಅನುಕೂಲ ದೊರೆಯುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಅತಿಯಾದ ವಾದ-ವಿವಾದಗಳಿಂದ ವೈರತ್ವ ಬರುವ ಸಾಧ್ಯತೆಗಳಿವೆ. ನಿಮ್ಮ ವಶದಲ್ಲಿರುವ ಅಮೂಲ್ಯ ವಸ್ತುಗಳನ್ನು ಕಳೆದುಕೊಳ್ಳಬಹುದು. ಇದರಿಂದ ಉದ್ಯೋಗದಲ್ಲಿ ಏರುಪೇರಾಗುವ ಸಾಧ್ಯತೆ ಇದೆ. ಈ ಬಗ್ಗೆ ಎಚ್ಚರವಾಗಿರಿ. ಪ್ರಭಾವಿಗಳೊಂದಿಗೆ ಸ್ನೇಹ ಬೆಳೆಸಿ ನಿಮ್ಮ ಕೆಲಸವನ್ನು ಸಾಧಿಸಿಕೊಳ್ಳುವಿರಿ. ನಿವೇಶನಕ್ಕಾಗಿ ಬಂಡವಾಳ ಹೂಡುವ ಸಾಧ್ಯತೆ ಇದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕೆಲಸ ಕಾರ್ಯಗಳು ಮಂದಗತಿಯಲ್ಲಿ ಪ್ರಗತಿಯನ್ನು ಕಾಣುತ್ತವೆ. ಉದರ ಸಂಬಂಧಿ ದೋಷಗಳು ಕಂಡುಬರಬಹುದು. ಕೆಲವರ ಜಾಣತನಕ್ಕೆ ಮತ್ತು ಪ್ರತಿಭೆಗೆ ಪುರಸ್ಕಾರಗಳು ದೊರೆಯಬಹುದು. ಹೊಸ ಆದಾಯದ ಮೂಲಗಳತ್ತ ಗಮನ ಹರಿಸುವಿರಿ. ಸಂಗೀತಗಾರರಿಗೆ ಉತ್ತಮ ದಿನಗಳಾಗಿದ್ದು ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ದೊರೆಯುತ್ತದೆ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಕೆಲವು ಸಂಕಷ್ಟಗಳು ಕಡಿಮೆಯಾಗಿ ಕೆಲಸಕಾರ್ಯಗಳು ಸುಗಮ ಚಾಲನೆಯನ್ನು ಪಡೆಯುವವು. ಸಿಟ್ಟು ಸೆಡವುಗಳು ಬಂಧುಗಳ ನಡುವೆ ಭಿನ್ನಾಭಿಪ್ರಾಯವನ್ನು ಹುಟ್ಟುಹಾಕುತ್ತವೆ. ಉದ್ಯೋಗಕ್ಕೆ ಸಂಬಂಧಿಸಿದ ತೊಂದರೆಗಳಿಗೆ ಆತ್ಮೀಯರೊಂದಿಗೆ ಸಮಾಲೋಚನೆ ನಡೆಸುವುದು ಒಳಿತು. ಹಣದ ಒಳಹರಿವು ಕಡಿಮೆಯಿದ್ದು ಖರ್ಚಿಗೆ ಕಡಿವಾಣವನ್ನು ಹಾಕುವುದು ಬಹಳ ಮುಖ್ಯ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಆರ್ಥಿಕ ಸ್ಥಿತಿಯಲ್ಲಿ ಕೊಂಚ ಸುಧಾರಣೆಯನ್ನು ಕಾಣಬಹುದು. ಶತ್ರುಗಳನ್ನು ಅವರದೇ ರೀತಿಯ ತಂತ್ರ ಬಳಸಿ ಮಟ್ಟ ಹಾಕುವಿರಿ. ಕೆಲವರಿಗೆ ಬಹಳ ದಿನಗಳಿಂದ ಇದ್ದ ಆರೋಗ್ಯ ಸಮಸ್ಯೆಗೆ ಪರಿಹಾರ ದೊರೆತು ನೆಮ್ಮದಿ ಮೂಡುವುದು. ಲೆಕ್ಕಪರಿಶೋಧಕರಿಗೆ ಉತ್ತಮ ಕೆಲಸದ ಜೊತೆಗೆ ಉತ್ತಮ ಆದಾಯವೂ ಇರಲಿದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ನಿಮ್ಮನ್ನು ಅವಲಂಬಿಸಿರುವವರಿಗೆ ಭರವಸೆಯನ್ನು ಮೂಡಿಸುವಿರಿ. ಹಣದ ಒಳಹರಿವು ನಿರೀಕ್ಷೆಯಷ್ಟು ಇರುತ್ತದೆ. ತಕ್ಕಮಟ್ಟಿಗೆ ಖರ್ಚನ್ನು ಕಡಿಮೆ ಮಾಡುವಿರಿ. ಪಾಲುದಾರಿಕೆ ವ್ಯವಹಾರಗಳಲ್ಲಿ ನಿಮ್ಮ ನಿರ್ಣಯಗಳು ಹೆಚ್ಚು ಫಲ ಕೊಡುತ್ತವೆ. ಉದ್ಯೋಗ ಕ್ಷೇತ್ರದಲ್ಲಿ ಗೌರವಾದರಗಳು ದೊರೆತು ಕುಟುಂಬದ ಜೊತೆ ಹಂಚಿಕೊಳ್ಳುವಿರಿ. ಹಿರಿಯರ ಆರೋಗ್ಯದ ಕಡೆ ಹೆಚ್ಚಿನ ಗಮನವಿರಲಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕೈಬಿಟ್ಟ ಕಾರ್ಯಗಳಲ್ಲಿ ಅನಿರೀಕ್ಷಿತವಾಗಿ ಯಶಸ್ಸು ದೊರೆಯುತ್ತದೆ. ಪ್ರಕಾಶನ ಹಾಗೂ ಹಣಕಾಸಿನ ವಿಚಾರದಲ್ಲಿ ಸ್ವಲ್ಪ ಅಭಿವೃದ್ಧಿಯನ್ನು ಕಾಣಬಹುದು. ಹಿರಿಯರೊಂದಿಗೆ ವಿಧೇಯತೆಯಿಂದ ನಡೆದುಕೊಳ್ಳುವುದು ನಿಮಗೆ ಉತ್ತಮ. ಸಾಮಾಜಿಕ ಕಾರ್ಯ ಮಾಡುವವರಿಗೆ ವಿನಾಕಾರಣ ವೈಮನಸ್ಯ ಬರಬಹುದು. ಸ್ವತಂತ್ರ ಉದ್ಯೋಗ ಮಾಡುವವರಿಗೆ ಯಶಸ್ಸು ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ವಿದ್ಯಾರ್ಥಿಗಳಿಗೆ ಅಧ್ಯಯನ ಮಾಡಲು ಬೇಕಾದ ಎಲ್ಲಾ ಸೌಲಭ್ಯಗಳು ದೊರೆಯುತ್ತವೆ. ಉದ್ದಿಮೆದಾರರ ಯೋಜಿತ ಕಾರ್ಯಗಳಲ್ಲಿನ ಆತಂಕಗಳು ದೂರವಾಗಿ ಕೆಲಸಗಳು ನಡೆಯುತ್ತವೆ. ಆದಾಯ ಅಗತ್ಯಕ್ಕೆ ತಕ್ಕಷ್ಟು ಇದ್ದರೂ ಖರ್ಚಿನ ಮೇಲೆ ಕಡಿವಾಣ ಹಾಕುವುದು ಉತ್ತಮ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕೆಲವೊಂದು ವಿಷಯಗಳ ಬಗ್ಗೆ ಯೋಚಿಸಿ ಸರಿಯಾದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಉತ್ತಮ. ನಿಮ್ಮ ಯೋಜನೆಗಳ ಅಭಿವೃದ್ಧಿಗಾಗಿ ತಜ್ಞರ ಜೊತೆ ಚರ್ಚಿಸುವುದು ಒಳ್ಳೆಯದು. ಆಹಾರ ವ್ಯತ್ಯಯದಿಂದಾಗಿ ಅನಾರೋಗ್ಯ ಕಾಡಬಹುದು. ಹೆಚ್ಚಿನ ಸಂಪಾದನೆಗಾಗಿ ಹೊಸ ಮಾರ್ಗಗಳನ್ನು ಹುಡುಕುವಿರಿ.

ಪದಬಂಧ 2704



ಮೇಲಿನಿಂದ ಕೆಳಕ್ಕೆ

1. ಆಂಗ್ಲದ ಚಿತ್ರ ಬಿಡುಗಡೆ 3
2. ಪೂರ್ವೋದಯದಿಂದ ಪಶ್ಚಿಮಾಸ್ತಮಾನದವರೆಗೆ ಸೂರ್ಯನಿಗೆ ಒದಗಿರುವ ಸ್ಥಿತಿ 4
3. ಹೆಸರಿನ ಮುದ್ರೆಗಿರುವ ಶಕ್ತಿ 4
4. ವಿಷ್ಣುವಿನಿಂದ ಹರಿದ ಬಣ್ಣ 3
7. ಒಂದರ ಮೇಲೊಂದು ಗೃಹ 5
10. ಲೈಲಾಳ ಪ್ರಿಯಕರ 3
11. ಕಲ್ಪನೆಯ ಪದ್ಯ 3
12. ಕಳೆದು ಹೋದ ಸಿರಿಸಂಪದಗಳ ಉಜ್ವಲತೆ 5
13. ಮಧುರವಾದ ಹೆಣ್ಣು 3
15. ಇದೀಗ ಬೀಸಣಿಕೆಗೆ ಬರುವ ಸುವಾಸಿತ ಬೇರು 3
19. ಮೋಸ ಹೋದಾಗ ಮುಖಕ್ಕೆ ಬೀಳುವ ಮುದ್ರೆ 4
20. ಮರವನ್ನು ಆಶ್ರಯಿಸಿದ ಬಳ್ಳಿ 4
21. ಆಯುರ್ವೇದ ಸಂಹಿತೆಯ ಕರ್ತೃ 3
23. ವಿರಮಿಸು ಎಂದಾಗ ಮುದ್ದಾಡು 3

ಎಡದಿಂದ ಬಲಕ್ಕೆ

1. ಶತ್ರುವಿನ ಬಿಲವನ್ನು ಕೊನೆಗೊಳಿಸಿ ಮುಗಿಸುವುದು 5
2. ಕೇಸರಿಯ ತಲೆ ಕಸಿಯಾದ ಮಾನವದೇವ 4
5. ಜಗತ್ತನ್ನೇ ತನ್ನದಾಗಿಸಿಕೊಳ್ಳುವ ಪ್ರೀತಿ 4
6. ಸುಲಭವಾಗಿ ಹರಿದುಬಂದ ಆಲಾಪನೆ 5
8. ಜಗನ್ನಾಥಪುರಿಯಲ್ಲಿರುವ ಕೃಷ್ಣನ ಸೋದರ ಸೋದರಿ 4
9. ಶ್ರೇಷ್ಠವಾದ ಒಡೆಯನ ಬೆಟ್ಟ 4
11. ಹಲಸು ಜೇನು ತಿನ್ನುವ ರೋಮ ಮೃಗ 3
12. ಅಷ್ಟಸಿದ್ಧಿಗಳಲ್ಲಿ ಗರಿಗೆದರಿದ್ದು 3
14. ಹೆಣ್ಣುಮಕ್ಕಳ ಶಿಕ್ಷಣಕ್ಕೆ ದನಿ ಎತ್ತಿದ ಪಾಕಿಸ್ತಾನದ ಬಾಲಕಿ 3
16. ಅನುಭವದಿಂದ ಚೆನ್ನಾಗಿ ಪಳಗಿದವ 3
17. ಇಲ್ಲಿರುವುದು ಸುಮ್ಮನಾದರೂ ಅಲ್ಲಿರುವುದು ನಮ್ಮ ಸ್ವಗೃಹ 3
18. ವೈರಿಯಲ್ಲಿ ಒಂದು ರೀತಿ ವೈಶಿಷ್ಟ್ಯ 3
19. ಅಂಡ ಪಿಂಡ ಬ್ರಹ್ಮಾಂಡಗಳಲ್ಲಿ ಅಡಗಿರುವ ಐದು ತತ್ವ 4
21. ಚೌಕಗಳಲ್ಲಿ ಚತುರ್ಬಲಗಳ ಚಾತುರ್ಯದಾಟ 4
22. ಮಹಾಶಿವನ ಕೋಪ ಸ್ವರೂಪ 5
24. ಡೊಂಕಾಗಿಯೇ ಉಳಿಯುವ ಶ್ವಾನ ಲಾಂಗೂಲ 4
25. ವಿಪರೀತವಾದ ಕೆಟ್ಟ ಬಯಕೆ 4
26. ಕಾಳಿನ ಗೊಂಚಲುಗಳನ್ನು ಒಟ್ಟು ಸೇರಿಸು 5

ಪದಬಂಧ ಉತ್ತರ -2703

ಮೇಲಿಂದ ಕೆಳಕ್ಕೆ

1. ಪೂಜನೀಯ 2.ಚಂಪಕಧಾಮ 3.ಬಾಲ 4.ಬಕರ 5.ಮಾನಸ 7.ಅಂತ್ಯಜ 9.ತ್ಯಾಗರಾಜ 10.ಸಕಾಲ 11.ಕಸರಾಶಿ 13.ನರಾಂಧ 16.ಕಸರು 18.ಸಂಕಟಹರ 20.ವಚನ 21.ಹಳ್ಳಕೊಳ್ಳ 22.ಕೊಡಗು 24.ನಿಧಿ

ಎಡದಿಂದ ಬಲಕ್ಕೆ

1.ಪೂರ್ಣಚಂದ್ರ 3.ಬಾಳೆಕಂಬ 5.ಮಾತುಲ 6.ಕನ್ಯಾದಾನ 7.ಅಂಬರ 8.ಸತ್ಯಾಸತ್ಯ 10.ಸಮರ್ಪಕ 12.ಜನಕ 14.ಸಹಾರಾ 15.ತಿಲಕ 17.ಜರಾಸಂಧ 19.ಸದಾಶಿವ 22.ಕೊನರು 23.ಚಹಾಕೂಟ 24.ನಿಧಾನ 25.ಗುಣಸಂಧಿ 26. ಸರಗಳ್ಳ

ವ್ಯಕ್ತಿ ಸ್ನೇಹಿ, ವಿಚಾರ ನಿಷ್ಠುರಿ

ಎಸ್.ಆರ್. ವಿಜಯಶಂಕರ

ಪ್ರಖರ ವೈಚಾರಿಕ ಚಿಂತನೆ ಹಾಗೂ ಅಷ್ಟೇ ತೀಕ್ಷ್ಣ ಸಾಹಿತ್ಯ ವಿಮರ್ಶೆಗೆ ಹೆಸರಾದ ಜಿ.ರಾಜಶೇಖರ ಅವರನ್ನು ಎರಡೇ ಪದಗಳಲ್ಲಿ ಪರಿಚಯಿಸುವುದಾದರೆ ಲೋಕ ನಿಷ್ಠುರಿ ಎನ್ನಬಹುದೇನೋ. ನಾಡಿನ ನೈತಿಕ ಪ್ರಶ್ನೆಗಳನ್ನು ವೈಯಕ್ತಿಕ ತುರ್ತಿನಂತೆ ಪರಿಭಾವಿಸುತ್ತಾ, ಮನಸ್ಸುಗಳನ್ನು ಜಾಗೃತಗೊಳಿಸುತ್ತಾ ಹೊರಟ ಈ ಸಾಧಕನಿಗೀಗ 75ರ ಹರೆಯ. ಆ ನೆಪದಲ್ಲಿ ಅವರ ಬದುಕಿನ ಯಾನದ ಮೇಲೆ ಒಂದು ಹಿನ್ನೋಟ...

ವಿಚಾರವಾದ, ಸಂಸ್ಕೃತಿ ಚಿಂತನೆ, ಸಾಹಿತ್ಯ ವಿಮರ್ಶೆ - ಈ ಮೂರೂ ಗೆಳೆಯ ಜಿ.ರಾಜಶೇಖರ ಅವರ ಬರಹ, ಮಾತುಗಳ ಮುಖ್ಯ ಲಕ್ಷಣಗಳು. ಅವರ ರಾಜಕೀಯ ಚಿಂತನೆ ವಿಚಾರವಾದದಲ್ಲಿ ಸೇರಿರುವಂತೆ, ವೈಚಾರಿಕತೆಯು ಸಂಸ್ಕೃತಿ ಚಿಂತನೆಯ ಭಾಗವಾಗಿದೆ. ಅವರ ಸಾಹಿತ್ಯ ವಿಮರ್ಶೆ ಇವೆರಡನ್ನೂ ಪಠ್ಯಕ್ಕೆ ಪೂರಕವಾಗಿ ದುಡಿಸಿಕೊಳ್ಳುತ್ತದೆ. ಇದಕ್ಕೆ ಉದಾಹರಣೆಗಳಾಗಿ ಅವರ ಹಲವು ಲೇಖನಗಳಿದ್ದರೂ 'ಅಡಿಗರ ರಾಮ' ಎಂಬ 'ಶ್ರೀರಾಮನವಮಿಯ ದಿವಸ' ಕವನದ ಬಗ್ಗೆ ಬರೆದ ವಿಮರ್ಶಾ ಬರಹವೊಂದನ್ನು ಸಾಂದರ್ಭಿಕವಾಗಿ ಗಮನಿಸಬಹುದು. ಆ ಲೇಖನ ಕವಿ ಗೋಪಾಲಕೃಷ್ಣ ಅಡಿಗರ ಬಗೆಗಿನ 'ಪ್ರತಿಮಾ ಲೋಕ' ಎಂಬ ಲೇಖನಗಳ ಸಂಗ್ರಹದಲ್ಲಿದೆ. ರಾಮ ಏಕಕಾಲಕ್ಕೆ ದೇವರು ಮತ್ತು ಭಕ್ತರ ಮನಸ್ಸಿನ ಸೃಷ್ಟಿ ಹಾಗೂ ಸಾಹಿತ್ಯದ ಪಾತ್ರ ಆಗಿರುತ್ತಾನೆ ಎಂಬುದನ್ನವರು ಕವನದ ಒಡಲಿನಿಂದಲೇ ಕಾಣಿಸುತ್ತಾರೆ.

ರಾಮ ಹಾಗೂ ಕೃಷ್ಣರ ಬಗ್ಗೆ ನಮ್ಮ ನಡುವಿರುವ ಹಲವು ಕಥಾ ವೈವಿಧ್ಯಗಳಲ್ಲಿ, ಸ್ಥಳಪುರಾಣಗಳಲ್ಲಿ, ಭಕ್ತರ ಮನಸ್ಸಿನ ಸೃಷ್ಟಿಯೇ ದೇವರು ಎಂಬುದು ಹಲವು ದೃಷ್ಟಾಂತಗಳಲ್ಲಿ ಸಾಬೀತಾಗುತ್ತಿರುವುದು ನಮ್ಮ ನಿತ್ಯಜೀವನದ ಸಹಜ ವಿಚಾರ. ಅದು ತಾನು ನಂಬಿರುವ ದೈವ ಈ ಲೋಕದ ಎಲ್ಲವನ್ನೂ ಮೀರಿದ್ದು, ಅನನ್ಯವಾದದ್ದು ಮತ್ತು ಇರುವುದು ಅದೊಂದೇ ಎಂಬ ಏಕದೇವೋಪಾಸನೆಯ ಉಗ್ರತೆಗೆ ತದ್ವಿರುದ್ಧವಾಗಿರುವಂತಹುದು ಎಂಬುದನ್ನು ರಾಜಶೇಖರ -ಹಿಂದುತ್ವದ ಏಕಮುಖಿ ಚಿಂತನೆಯ ವಿರುದ್ಧ ಎತ್ತಿ ತೋರುತ್ತಾರೆ. ಅಡಿಗರ 'ಶ್ರೀರಾಮನವಮಿಯ ದಿವಸ' ಕವನದಲ್ಲಿ ಭಾರತದ ಈ ಪರಂಪರಾಗತ ಅರಿವು ಸ್ಪಷ್ಟವಾಗಿದೆ. ಹಾಗಾಗಿ 'ಇಂದಿನ ರಾಜಕೀಯ ರಾಮನ ಎದುರು ಕವಿ ಅಡಿಗರ ರಾಮ ನಿಲ್ಲುತ್ತಾನೆ. ಅಡಿಗರ ಕವನದ ರಾಮ ದೇವರೂ ಹೌದು. ಹಾಗಾಗಿ ಅದು ಅವನ ಬರಿಗೆ ಕುರಿಯ ಭಕ್ತಿಯಲ್ಲಿ ಕಾದು ಕುಳಿತಿದೆ. ಅದರ ಜೊತೆಗೆ ಅವನು ಕವನದಲ್ಲಿ ಮನುಷ್ಯ ಮಾತ್ರನೂ ಮನುಷ್ಯರಲ್ಲಿ ಉತ್ತಮನೂ ಆಗಿದ್ದಾನೆ.

ರಾಮನು ಹುಟ್ಟಿದ್ದಲ್ಲಿ ಎಂಬುದನ್ನು ಕವನ ಚಾರಿತ್ರಿಕ ಅಯೋಧ್ಯೆಯ ಮಣ್ಣಿನಲ್ಲಿ ಹುಡುಕದೆ, ಪುರುಷೋತ್ತಮನ ಆ ಅಂಥ ರೂಪರೇಖೆಯನ್ನು ಹುಟ್ಟಿಸಬಲ್ಲ ಚಿತ್ತದಲ್ಲಿ ಹುಡುಕುತ್ತದೆ. ಅಂದರೆ ಹುತ್ತವಾಗಿ ಬೆಳೆದ ವಾಲ್ಮೀಕಿಯ ಮೈಯ ಮಣ್ಣಿನ ಅರ್ಥಗರ್ಭದಲ್ಲಿ ಹುಡುಕುತ್ತದೆ. ಅದ್ದರಿಂದ ಅಡಿಗರ ಕವನದಲ್ಲಿ ಮತ್ತೆ ಮತ್ತೆ ಮರುಕಳಿಸುವ ಮಣ್ಣಿನ ಪ್ರತಿಮೆಗಳು - ಮಣ್ಣುಬಿತ್ತ (ಬೀಜ), ರಾಕೆಟ್ಟು ಮರಳುವ ಮಣ್ಣು, ಮಣ್ಣಿನಿಂದ (ಸೀತೆ) ಮತ್ತು ಹುತ್ತ (ದ ಮಣ್ಣು) - ರಾಮನನ್ನು ಅರಸಬೇಕಾದ ಮಣ್ಣಿನ ಸೂಚನೆ ನೀಡುತ್ತವೆ ಎಂದು ರಾಜಶೇಖರ ಸೂಚಿಸುತ್ತಾರೆ. ರಾಮನು ಹುಟ್ಟುವ ಮಣ್ಣು ಅವನ ಜನ್ಮಭೂಮಿಗೆ ಸಮಾನ ಎಂಬುದನ್ನು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಈ ಕಾರಣಗಳಿಂದ ಅಡಿಗರ ಕವನದಲ್ಲಿ ರಾಮ ಈಗಾಗಲೇ ಸಿದ್ಧಗೊಂಡ ದೇವತಾ ಪ್ರತಿಮೆಯಲ್ಲ. ಅದು ಸಂಕಲ್ಪಬಲದಿಂದ ಚಿತ್ತ ಹುತ್ತಗಟ್ಟಿ ಇನ್ನೂ ಆಗಬೇಕಾದ ಪ್ರತಿಮೆ. ಹೀಗೆ ವಿಚಾರವಾದ, ಸಂಸ್ಕೃತಿ ಚಿಂತನೆಗಳು ರಾಜಶೇಖರ ಅವರ ಸಾಹಿತ್ಯ ವಿಮರ್ಶೆಯಲ್ಲಿ ಮಿಳಿತವಾಗುವುದರಿಂದಲೇ

ಅವರಿಗೆ ಇಂದು ಸಾಹಿತ್ಯ ವಿಮರ್ಶೆಗಳಲ್ಲಿ ಚರ್ಚಿಸುವಂತೆ 'ಆಶಯ' ಮತ್ತು 'ಆಕೃತಿ'ಗಳು ಪ್ರತ್ಯೇಕವಾಗಿ ಚರ್ಚಿಸಬೇಕಾದ ವಿಚಾರಗಳಲ್ಲ. ಅವರ ಮೀಮಾಂಸೆಯಲ್ಲಿ ವಿಚಾರ, ವಿವೇಕಗಳು ಮಾನವತ್ವದ ಮೂಲಭಾವದಲ್ಲಿ ಸೇರಿದ ಜೀವಧಾತುವಾಗುತ್ತವೆ.

ರಾಜಶೇಖರ ಎಡಪಂಥೀಯ ಚಿಂತಕರಾದರೂ ಆ ತತ್ವದ ಒಡಲಲ್ಲೇ ಇರುವ ಸಮಸ್ಯೆಗಳ ಬಗ್ಗೆ ಸದಾ ಎಚ್ಚರದಿಂದಿರುವವರು. ಮಾರ್ಕ್ಸ್ ಅಥವಾ ಎಂಗೆಲ್ಸ್ ಹೇಳಿದರೆಂಬ ಕಾರಣದಿಂದ ವಿಚಾರಗಳನ್ನು ಕುರುಡಾಗಿ ಒಪ್ಪಿಕೊಳ್ಳುವವರಲ್ಲ. ರೇಮಂಡ್ ವಿಲಿಯಮ್ಸ್ ಅವರ 'ಇಕಾಲಜಿ ಆ್ಯಂಡ್ ಸೋಶಿಯಲಿಸಂ' ಲೇಖನದ ಬಗ್ಗೆ 40 ವರುಷಗಳ ಹಿಂದೆ ನನ್ನ ಗಮನವನ್ನು ಮೊದಲಿಗೆ ಸೆಳೆದವರು ರಾಜಶೇಖರ್. ಆ ಬಳಿಕ ಅವರು ಅದನ್ನು 'ಪರಿಸರ ರಕ್ಷಣೆ ಮತ್ತು ಸಮಾಜವಾದ' ಎಂದು ಕನ್ನಡಕ್ಕೆ ಅನುವಾದಿಸಿದರು (1985). ಆಗ ಅವರು 'ಪ್ರಕೃತಿಯ ಮೇಲೆ ಜಯ ಸಾಧಿಸುವುದು' ಎಂಬ ರೂಪಕ ಎಷ್ಟು ಅಸಂಬದ್ಧ ಎಂಬುದನ್ನು ರೇಮಂಡ್ ವಿಲಿಯಮ್ಸ್ ವಿವರಿಸಿದ್ದರ ಕಡೆಗೆ ನನ್ನ ಗಮನ ಸೆಳೆದಿದ್ದರು.

75ರ ಮೆಲುಕು

ಉಡುಪಿಯಲ್ಲಿ 1980ರಿಂದ 1988ರವರೆಗೆ ನಾನು ವಾಸವಿದ್ದೆ. ಕಲ್ಯಾಣಪುರದ ಮಿಲಾಗ್ರಸ್ ಕಾಲೇಜಿನಲ್ಲಿ ಇಂಗ್ಲಿಷ್ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದೆ. ಆ ವರುಷಗಳಲ್ಲಿ ಪ್ರತಿದಿನ ಸಂಜೆ ಬಡಗುಪೇಟೆಯಲ್ಲಿ ಗೆಳೆಯ ಜಯವಂತ ಅವರನ್ನು ಕಂಡು ರಥಬೀದಿಯಲ್ಲಿ ಇನ್ನಷ್ಟು ಸ್ನೇಹಿತರೊಡನೆ ಸಾಹಿತ್ಯದ ಬಗ್ಗೆ ಹರಟುತ್ತಾ ರಾಜಶೇಖರ ಅವರ ಬರುವಿಗಾಗಿ ಕಾಯುವುದು ನಿತ್ಯದ ಕೆಲಸವಾಗಿತ್ತು. ತೀರಾ ಕೃತಿನಿಷ್ಠ ವಿಮರ್ಶೆಯಲ್ಲಿ ತೊಡಗಿದ್ದ ನಾನು, ಸಾಂಸ್ಕೃತಿಕ ಚಿಂತನೆಗಳ ಸೂಕ್ಷ್ಮಗಳನ್ನು ಅವರ ಒಡನಾಟದಲ್ಲಿ ಸ್ಪಷ್ಟಪಡಿಸಿಕೊಳ್ಳುತ್ತಾ ಹೋದೆ. ಅಡಿಗ ಹಾಗೂ ಶಿವರಾಮ ಕಾರಂತರ ರಾಜಕೀಯ ಚಿಂತನೆಗಳನ್ನು ಸಂಪೂರ್ಣವಾಗಿ ನೇರಮಾತುಗಳಲ್ಲಿ ಆಗ ರಾಜಶೇಖರ ವಿರೋಧಿಸುತ್ತಿದ್ದರು. ಆದರೆ ಅವರ ಕೃತಿಗಳನ್ನು ಅತ್ಯಂತ ಆಸ್ಥೆಯಿಂದ ವಿವರಿಸುತ್ತಿದ್ದರು ಮತ್ತು ಅವರಿಬ್ಬರೂ ಯಾಕೆ ಮಹತ್ವದ ಲೇಖಕರೆಂದೂ ಹೇಳುತ್ತಿದ್ದರು.

'ಕನ್ನಡದಲ್ಲಿ ದಲಿತ ಸಾಹಿತ್ಯ' ಎಂಬ ನನ್ನ ಲೇಖನದಲ್ಲಿ ಕಾರಂತರ 'ಚೋಮನ ದುಡಿ' ಹಾಗೂ ದೇವನೂರ ಮಹಾದೇವರ 'ಅಮಾಸ' ಎರಡನ್ನೂ ಹೋಲಿಸಿ, ಕಾರಂತರದ್ದು 'ಹೊರಗಿನ ಅನುಭವ', ಅಮಾಸದಲ್ಲಿರುವುದು 'ಒಳಗಿನ ಅನುಭವ' ಎಂಬ ಪರಿಕಲ್ಪನೆಯಲ್ಲಿ ಬರೆದಿದ್ದೆ. ಆ ತಾತ್ವಿಕತೆಯನ್ನೇ ಸಂಪೂರ್ಣ ವಿರೋಧಿಸಿ ರಾಜಶೇಖರ 'ಸಂಕ್ರಮಣ' ಪತ್ರಿಕೆಯಲ್ಲಿ ಲೇಖನ ಬರೆದರು. ಅವರ ಪ್ರಕಾರ, ಸಾಹಿತ್ಯದ ಅನುಭವವನ್ನು 'ಒಳಗಿನ' ಹಾಗೂ 'ಹೊರಗಿನ' ಎಂದು ವಿಂಗಡಣೆ ಮಾಡುವುದು ತಪ್ಪು. ಯಾಕೆಂದರೆ ಸಾಹಿತ್ಯಾನುಭವದಲ್ಲಿ ಅಂತಹ ವಿಂಗಡಣೆ ಇಲ್ಲ. 1980ರ ದಶಕದ ಆ ಚರ್ಚೆ ದಲಿತ-ಬಂಡಾಯ ತಾತ್ವಿಕತೆಯ ಸ್ಪಷ್ಟತೆಗೆ ಸಹಾಯ ಮಾಡಿತ್ತು.

ಬರಹದ ಮೂಲಕ ನಮ್ಮ ನಡುವೆ ನಡೆದ ಭಿನ್ನಾಭಿಪ್ರಾಯಗಳ ಅಂತಹ ಚರ್ಚೆ, ನಮ್ಮ ನಡುವಿನ ಸ್ನೇಹಕ್ಕೆ ಏನೂ ತೊಂದರೆ ಮಾಡಲಿಲ್ಲ. ನನ್ನ 'ನಿಧಾನಶ್ರುತಿ ಮತ್ತು ಇತರ ಲೇಖನಗಳು' ಎಂಬ ಸಂಗ್ರಹವನ್ನು ರಾಜಶೇಖರ ಅವರಿಗೆ ಅರ್ಪಿಸಿದ್ದೇನೆ. ಆ ನನ್ನ ಕೃತಿಯ ಮೊದಲ ಮಾತುಗಳಲ್ಲಿ ಸಂಕ್ರಮಣದ ಮೇಲಿನ ಚರ್ಚೆಯನ್ನು ಪ್ರಸ್ತಾಪಿಸಿ ಪುಸ್ತಕ ಅರ್ಪಣೆಯ ಹಿಂದಿನ ನನ್ನ ಗೌರವವನ್ನು ಹೇಳುತ್ತಾ ನಾನು ಬರೆದ ಮಾತುಗಳು ನೆನಪಾಗುತ್ತಿವೆ: 'ರಾಜಶೇಖರ ಆಪ್ತರಲ್ಲೂ ಅನಿಸಿದ್ದನ್ನು ಸ್ಪಷ್ಟವಾಗಿ ಹೇಳಿ ಚರ್ಚಿಸಬಲ್ಲರು. ಅವರು ವಿಚಾರ ನಿಷ್ಠುರಿ. ವ್ಯಕ್ತಿ ಸ್ನೇಹಿ. ಅವರ ಮಾನವ ಪ್ರೀತಿ ದೊಡ್ಡದು.'

ಅವರ ಮಾತು ಯಾವಾಗಲೂ ನೇರ. ಅದರೊಳಗೆ ಕೃತ್ರಿಮ ಇಲ್ಲ. ವಿಚಾರ, ತರ್ಕ ತೀಕ್ಷ್ಣತೆಯಲ್ಲಿ ಅವರು ಮಾನವ ಪ್ರೀತಿಯ ಸ್ನೇಹ, ಮುಗ್ಧಭಾವವನ್ನು ಕಳಕೊಂಡವರಲ್ಲ. ಅವರ ಮಗ ವಿಷ್ಣುವಿನ ಮದುವೆಗೆ ಬರಬೇಕೆಂದು ಆಹ್ವಾನಿಸಿ ಅವರ ಹೆಂಡತಿ ಫೋನು ಮಾಡಿದರು. ಆಗ 'ನಾನು ಮಾತನಾಡುತ್ತೇನೆ' ಎಂದು ಕೊನೆಯಲ್ಲಿ ರಾಜಶೇಖರ ಹೇಳಿದ್ದು: 'ನೀನು ತೀರಾ ಕಷ್ಟಪಟ್ಟುಕೊಂಡು ಬೆಂಗಳೂರಿನಿಂದ ಉಡುಪಿಗೆ ಮದುವೆಗೋಸ್ಕರ ಬರಲೇಬೇಕೆಂದು ಒತ್ತಾಯವಿಲ್ಲ. ಅವಳು ಬರಲೇಬೇಕೆಂದು ಒತ್ತಾಯಿಸಿ ಹೇಳಿದಳೆಂದು ಸಂಕೋಚ ಬೇಡ. ನಿನ್ನ ಮಗಳ ಮದುವೆಗೆ ಬಂದಿದ್ದೇನೆಂಬ ದಾಕ್ಷಿಣ್ಯಕ್ಕಾಗಿ ಬರಬೇಕಾಗಿಯೂ ಇಲ್ಲ.' ಇದು ರಾಜಶೇಖರ.

ನಾಡಿನ ಸಮಸ್ಯೆಗಳನ್ನು ನೈತಿಕ ಪ್ರಶ್ನೆಯೆಂಬಂತೆ ಅವರು ವೈಯಕ್ತಿಕ ತುರ್ತಿನಿಂದ ಪರಿಭಾವಿಸುತ್ತಾರೆ ಎಂಬುದೂ ಅಷ್ಟೇ ನಿಜ. ಅದಕ್ಕಾಗಿ, 1980ರಲ್ಲಿ ಪ್ರಕಟವಾದ ಅವರ 'ಕಾಗೋಡು ಸತ್ಯಾಗ್ರಹ' ಕೃತಿಯಿಂದ 2005ರಲ್ಲಿ ಪ್ರಕಟವಾದ 'ಕೋಮುವಾದದ ಕರಾಳ ಮುಖಗಳು' ಕೃತಿಯವರೆಗೆ ಮತ್ತು ನಂತರವೂ ಹಲವಾರು ಉದಾಹರಣೆಗಳನ್ನು ನೀಡಬಹುದು. ಕಾಗೋಡು ಸತ್ಯಾಗ್ರಹದಲ್ಲಿ ಕ್ಷೇತ್ರಕಾರ್ಯ ಮತ್ತು ಸಂಶೋಧನಾ ನೆಲೆಗಳ ಕಾಳಜಿ ನಾಡಿನ ಇಂದಿನ ಸಮಸ್ಯೆಗೆ ಉತ್ತರ ಹುಡುಕಲೇಬೇಕಾದ ಆಕರಗಳಲ್ಲಿ ಒಂದು. ಕೋಮುವಾದದ ಕರಾಳ ಮುಖಗಳಲ್ಲಿ ಅವರು ಎಸ್.ಆರ್.ಭಟ್ ಅವರು ಮಾಡಿದ ಹಿಂದೂ-ಮುಸ್ಲಿಂ ಘರ್ಷಣೆಗಳ ಸಮಸ್ಯೆಯ ವಿಶ್ಲೇಷಣೆಗಳಿಗೆ ಪೂರಕವಾಗಿ ಫಣಿರಾಜ್ ಅವರೊಡಗೂಡಿ ಕೋಮುವಾದದ ಭಾರತೀಯ ವಿವಿಧ ಮುಖಗಳನ್ನು ಕಾಣಿಸುತ್ತಾರೆ. ಧಾರ್ಮಿಕ ಹಿಂಸೆಯ ಕರಾಳ ಮುಖದೊಡನೆ ಅದನ್ನು ಎದುರಿಸಲು ಪ್ರಯತ್ನಿಸುವ ಸಾತ್ವಿಕ ಶಕ್ತಿಯ ಹೋರಾಟದ ಸ್ವರೂಪವನ್ನು ವಿವರಿಸುತ್ತಾರೆ.

'ಹಿಂದುತ್ವದ ಪೌರುಷ ಪ್ರದರ್ಶನ' ಎಂಬುದು ಅವರ ವರದಿ ರೂಪದ ಲೇಖನ. ಆದಿ ಉಡುಪಿಯಲ್ಲಿ ಹಾಜಬ್ಬ ಎಂಬ 60 ವರುಷ ಪ್ರಾಯದ ಗೃಹಸ್ಥರನ್ನೂ, ಅವರ 28 ವರುಷ ಪ್ರಾಯದ ಹಸನಬ್ಬ ಎಂಬ ಮಗನನ್ನೂ ಹಿಂದೂ ಯುವ ಸೇನೆಯ ಕೆಲವರು ಪೂರ್ತಿ ಬೆತ್ತಲು ಮಾಡಿ, ಮೂರು ಗಂಟೆಗಳ ಕಾಲ ನೂರಾರು ಜನರ ಎದುರು ಹೊಡೆದು ಬಡಿದು ಮಾಡಿದ ಘಟನೆಯ ಬಗೆಗಿನ ಬರಹ. ಅವರು ದನ ಕದ್ದು ಮಾರುವ ಕೆಲಸದಲ್ಲಿ ತೊಡಗಿದ್ದಾರೆಂಬ ಆರೋಪವನ್ನು ಹಿಂದೂ ಯುವಸೇನೆ ಮಾಡಿ, ಶಿಕ್ಷಿಸಲು ತೊಡಗಿದಾಗ ಪೊಲೀಸರು ಮೂಕ ಪ್ರೇಕ್ಷಕರಾಗಿದ್ದರು.

ಆ ಘಟನೆ ಬಳಿಕ ಗಾಯಾಳುಗಳನ್ನು ನೋಡಲು ರಾಜಶೇಖರ ಆಸ್ಪತ್ರೆಗೆ ಹೋದಾಗ ಹಸನಬ್ಬ ಅವರ ತಾಯಿ, ಅಂದರೆ ಹಾಜಬ್ಬನವರ ಪತ್ನಿ, ಬಂಧು-ಬಳಗ ಎಲ್ಲಾ ಇದ್ದರು. ಯಾರನ್ನು ಕಂಡರೂ ಅಳುವೇ ಅವರಿಗೆ ಒತ್ತರಿಸಿ ಬರುತ್ತಿತ್ತು. ನಾಡಿನ ಸಮಸ್ಯೆ ನೈತಿಕ ಪ್ರಶ್ನೆಯಾಗಿ ವೈಯಕ್ತಿಕ ತುರ್ತಿನಿಂದ ಆ ಸಂದರ್ಭದಲ್ಲಿ ಕುದಿಯುವ ಭಾವನೆಗಳನ್ನು ತಣ್ಣನೆಯ ವೈಚಾರಿಕ ಸತ್ಯವಾಗಿ ಅವರು ಹೇಳುವ ಮಾತುಗಳು: 'ಹೌದು, ಈ ವಿಷಯವನ್ನು ಹೇಳಲೇಬೇಕು. ಮುಸಲ್ಮಾನರಿಗೂ ತಾಯಿ-ತಂದೆ, ಅಕ್ಕ-ತಂಗಿ, ಬಂಧು-ಬಳಗ ಎಲ್ಲಾ ಇರುತ್ತಾರೆ. ಅವರು ಇಲ್ಲಿಯೇ ಹುಟ್ಟಿ ಬೆಳೆದವರು. ನಮ್ಮ ಹಾಗೆಯೇ ಈ ದೇಶದ ಪ್ರಜೆಗಳು ಮತ್ತು ಸಂಸಾರವಂದಿಗರು. ಇವು ಬಹಳ ಸರಳವಾದ ಸತ್ಯಗಳು. ಆದರೆ ಉಡುಪಿಯಲ್ಲಂತೂ ಇದನ್ನು ಮತ್ತೆ ಮತ್ತೆ ಹೇಳಲೇಬೇಕಾದ ಅವಶ್ಯಕತೆ ಇದೆ.'

ಸತ್ಯವನ್ನು ಹೀಗೆ, ಮುಟ್ಟಿದರೆ ಕೈ ಕೊರೆಯುವ ತಣ್ಣನೆಯ ಮಂಜುಗಡ್ಡೆಯಂತೆ ಹೇಳಿದ ಇನ್ನೊಬ್ಬ ಲೇಖಕ ಸಾದತ್ ಹಸನ್ ಮಂಟೊ ಕೂಡ ರಾಜಶೇಖರ್ ಅವರಿಗೆ ಪ್ರಿಯವಾದ ಲೇಖಕರಲ್ಲೊಬ್ಬರು.

(ರಾಜಶೇಖರ ಅವರಿಗೆ 75 ತುಂಬಿದ ನೆನಪಿಗಾಗಿ ಪಟ್ಟಾಭಿರಾಮ ಸೋಮಯಾಜಿ ಅವರ ಸಂಪಾದಕತ್ವದಲ್ಲಿ ಅಭಿನಂದನಾ ಗ್ರಂಥವನ್ನು ಹೊರತರಲಾಗುತ್ತಿದೆ)

ಪತ್ರಗಳಲ್ಲಿ ಪ್ರಾಚೀನ ವೃತ್ತಾಂತ

ಭಾರತದಲ್ಲಿ ಇಂದು ಅತ್ಯಂತ ಚರ್ಚೆಯಲ್ಲಿರುವ ವ್ಯಕ್ತಿಯೆಂದರೆ, ಮೊದಲ ಪ್ರಧಾನಿಯಾಗಿದ್ದ ಜವಾಹರಲಾಲ್ ನೆಹರೂ. ಈ ಮಾತಿಗೆ ತಾಜಾ ಉದಾಹರಣೆ – ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ತು (ಐಸಿಎಚ್‌ಆರ್) ಇತ್ತೀಚೆಗೆ ಪ್ರಕಟಿಸಿದ ಸ್ವಾತಂತ್ರ್ಯ ಹೋರಾಟಗಾರರ ಪೋಸ್ಟರ್‌ನಲ್ಲಿ ನೆಹರೂ ಅವರ ಚಿತ್ರವನ್ನು ಕೈಬಿಟ್ಟಿದ್ದು ಮತ್ತು ಈ ವಿದ್ಯಮಾನ ಕೂಡ ಬಿರುಸಿನ ಚರ್ಚೆಗೆ ಕಾರಣವಾಗಿದ್ದು. ನೆಹರೂ ಅವರನ್ನು 'ಇಲ್ಲವಾಗಿಸುವ' ಪ್ರಯತ್ನಗಳು ನಡೆದಿರುವಂತೆಯೇ ಅವರ ಘನತೆಯನ್ನು ಎತ್ತಿಹಿಡಿಯುವ ಕೆಲಸಗಳೂ ಆಗುತ್ತಿವೆ. ಗತಿಸಿಹೋಗಿ ದಶಕಗಳೇ ಸಂದರೂ ಇಷ್ಟೊಂದು ಚರ್ಚೆಗಳು ನಡೆಯುತ್ತಿರುವುದು ನೆಹರೂ ಅವರ ಪ್ರಸ್ತುತತೆಗೆ ದ್ಯೋತಕ.

ಸೆಕ್ಯುಲರ್, ವೈಜ್ಞಾನಿಕ ಹಾಗೂ ಪ್ರಗತಿಪರ ಚಿಂತನೆಯ ನೆಹರೂ ಅವರು ಮಗಳು ಇಂದಿರಾಗೆ ಬರೆದ ಪತ್ರಗಳೇ ಈ ಕೃತಿಯ ಲೇಖನಗಳಾಗಿವೆ. ಇತರರು ಬರೆಯುವಂತೆ ಈ ಪತ್ರಗಳು ಮಾಮೂಲಿಯಾಗಿರದೆ ಮಗಳ ಜ್ಞಾನದಾಹವನ್ನು ತಣಿಸುವ ಪುಟ್ಟ ಪುಟ್ಟ ಲೇಖನಗಳಾಗಿವೆ. ಜಗತ್ತಿನ ಪ್ರಾಚೀನ ಕಾಲದ ಸಂಕ್ಷಿಪ್ತ ವೃತ್ತಾಂತವನ್ನು ಈ ಪತ್ರಗಳು ಕಟ್ಟಿಕೊಡುತ್ತವೆ. 1941ರಷ್ಟು ಹಿಂದೆಯೇ ಈ ಕೃತಿಯನ್ನು ಮೊದಲು ಕನ್ನಡಕ್ಕೆ ತಂದಿದ್ದು ಕಪಟರಾಳ ಕೃಷ್ಣರಾಯರು. ಋತುಮಾನದಿಂದ ಈಗ ಮರುಮುದ್ರಣಗೊಂಡಿದೆ.

ವಿಶಾಲ ಕರ್ನಾಟಕದ ಆಡುನುಡಿಗಳನ್ನು ಹೆಕ್ಕಿ ತೆಗೆದು ಪ್ರಯೋಗಿಸಿರುವ ಅನುವಾದಕರು, ಪತ್ರಗಳಿಗೆ ಅಗತ್ಯವಾದ ಆಪ್ತತೆಯನ್ನು ತುಂಬಿದ್ದಾರೆ. ಕುಸೀದಕ (ಬ್ಯಾಂಕು), ದಾವತಿ (ಆಯಾಸ), ಚಾಂಗುಭಲಾ (ಜಯವಾಗಲಿ) ಇಂತಹ ಪದಗಳು ಇಲ್ಲಿ ಕಿಕ್ಕಿರಿದಿವೆ. ಏಳು ದಶಕಗಳ ಬಳಿಕ ಈ ಕೃತಿಯನ್ನು ಪ್ರಕಟಿಸಲು ಪ್ರಕಾಶಕರಿಗೆ ಬಲವಾದ ಕಾರಣವಿದೆ. 'ನೆಹರೂವಿನ ಸುತ್ತ ದ್ವೇಷದ ಗೋಡೆ ಕಟ್ಟಿ ಅವರ ವ್ಯಕ್ತಿತ್ವ ದಮನಿಸುವ ಪ್ರಯತ್ನದ ವಿಷಕಾರಿ ಬೆಳವಣಿಗೆಗಳು ಈ ಕೃತಿಯನ್ನು ಪ್ರಕಟಿಸುವಂತೆ ಪ್ರೇರೇಪಿಸಿವೆ' ಎನ್ನುವುದು ಅವರ ಅಭಿಮತವಾಗಿದೆ. ಭೂಮಿಯ ರಚನೆಯಿಂದ ಹಿಡಿದು ರಾಮಾಯಣ, ಮಹಾಭಾರತದವರೆಗೆ ಅಮೋಘ ವೃತ್ತಾಂತವನ್ನು ಕಥೆಗಳಂತೆ ಹೇಳುವ ಈ ಹೊತ್ತಗೆಯನ್ನು ಯಾವುದೇ ಮಗು, ತನ್ನ ತಂದೆ ತನಗೇ ಬರೆದ ಪತ್ರಗಳೆಂದು ಓದಿಕೊಳ್ಳಬಹುದು. ಲೋಕಜ್ಞಾನವನ್ನು ಪಡೆದುಕೊಳ್ಳಬಹುದು.



ಪು: 132 ₹140

ಮಗಳಿಗೆ ಅಪ್ಪ ಬರೆದ ಪತ್ರಗಳು
ಲೇ: ಜವಾಹರಲಾಲ್ ನೆಹರೂ
ಅನುವಾದ: ಕಪಟರಾಳ ಕೃಷ್ಣರಾಯರು
ಪ್ರ: ಋತುಮಾನ
ಸಂ: 9480035877, 9480009997

ಮೊದಲ ಓದು

'ಫ್ಲೈಯಿಂಗ್ ಸಿಖ್' ಜೀವನ ಕಥನ

ವೃತ್ತಿಯಲ್ಲಿ ಶಿಕ್ಷಕರಾಗಿರುವ ಆರ್.ಬಿ.ಗುರುಬಸವರಾಜ ಅವರ 'ಮಿಲ್ಖಾ ಸಿಂಗ್– ಕಾಲದ ಓಟದೊಂದಿಗೆ ಮುಖಾಮುಖಿ' ಕೃತಿಯು ಲೇಖಕರೇ ಹೇಳುವಂತೆ ದಿಢೀರ್ ಮಾಡಿದ ಪಾಕ. 'ದಿ ರೇಸ್ ಆಫ್ ಮೈ ಲೈಫ್' ಕೃತಿಯಿಂದ ಮೂಲ ಮಾಹಿತಿಯನ್ನು ಪಡೆದು ಮಿಲ್ಖಾ ಸಿಂಗ್ ಕ್ರೀಡಾಜೀವನದ ಕಥನಗಳನ್ನು ಅವರು ಕಟ್ಟಿಕೊಟ್ಟಿದ್ದಾರೆ. ದೇಶ ವಿಭಜನೆಯ ವೇಳೆ ಮಿಲ್ಖಾ ಅನುಭವಿಸಿದ ಯಾತನೆಯ ಜತೆ ಜತೆಗೆ 'ಫ್ಲೈಯಿಂಗ್ ಸಿಖ್' ರೂಪುಗೊಂಡ ಕಥೆಯೂ ಇಲ್ಲಿ ಹರಡಿಕೊಂಡಿದೆ. ಮಿಲ್ಖಾ ಅವರು ತೀರಿಹೋದ ದಿನದಿಂದ ಕೇವಲ ಹತ್ತು ದಿನಗಳಲ್ಲಿ ಈ ಕೃತಿಯ ಬರಹವನ್ನು ಪೂರ್ಣಗೊಳಿಸಿದ ಲೇಖಕರು ಮಾಡಿದ್ದು ದಿಢೀರ್ ಪಾಕವಾದರೂ ಕ್ರೀಡಾ ಸಾಧಕನ ಬದುಕಿನ ಕೊಂಚ ರುಚಿಯನ್ನು ಕಟ್ಟಿಕೊಡುತ್ತದೆ. ಮಿಲ್ಖಾ ಅವರ ಬಗ್ಗೆ ಕನ್ನಡದಲ್ಲಿ ಬಂದ ಮೊತ್ತಮೊದಲ ಕೃತಿಯೂ ಇದಾಗಿದೆ. ಈ ಮಹಾನ್ ಕ್ರೀಡಾ ತಾರೆಯ ಬದುಕಿನ ಪ್ರೇರಣೆಯಿಂದ ಕ್ರೀಡಾಲೋಕಕ್ಕೆ ಒಂದಷ್ಟು ಕಿವಿಮಾತು, ಮಕ್ಕಳ ಭವಿಷ್ಯಕ್ಕೊಂದಿಷ್ಟು ಮಾರ್ಗದರ್ಶನದ ಮಾತುಗಳನ್ನೂ ಲೇಖಕರು ಈ ಕೃತಿಯ ಕೊನೆಯಲ್ಲಿ ಪೋಣಿಸಿದ್ದಾರೆ.



ಪು: 152 ₹150

ಮಿಲ್ಖಾ ಸಿಂಗ್
ಲೇ: ಆರ್.ಬಿ.ಗುರುಬಸವರಾಜ
ಪ್ರ:ಸಾಹಿತ್ಯಲೋಕ ಪಬ್ಲಿಕೇಷನ್ಸ್
ಸಂ: 9945939436

ಸಾಧನೆಗೆ 'ಮನಸ್ಸಿದ್ದರೆ ಮಾರ್ಗ'

ವಿಭಿನ್ನ ಕ್ಷೇತ್ರಗಳಲ್ಲಿ ಸಾಧನೆಗೈದ ವ್ಯಕ್ತಿಗಳ ಅನುಭವ ಕಥನವೇ 'ಮನಸ್ಸಿದ್ದರೆ ಮಾರ್ಗ'. ಎದುರಾದ ಸಂಕಷ್ಟದ ಸಂದರ್ಭ, ಬೇರೆಯವರ ಕಷ್ಟ, ಅನುಭವಿಸಿದ ಯಾತನೆಯ ಕಾರಣದಿಂದಾಗಿ ಹುಟ್ಟಿಕೊಂಡ ಹೊಸ ಯೋಚನೆ, ಯೋಜನೆಗಳ ಕಥೆ ಇಲ್ಲಿದೆ. ಲೇಖಕಿ ಶ್ರೀಲತಾ ಎ. ಅವರು ತಾವು ಡಾಕ್ಟರೇಟ್ ಪದವಿಯಲ್ಲಿ ಮಂಡಿಸಿದ 'ಎಕಾನಮಿಕ್ ಡೆವಲಪ್‌ಮೆಂಟ್ ಆಫ್ ಸ್ಲಮ್ಸ್ ಇನ್ ಇಂಡಿಯಾ' ಆಂಗ್ಲ ಭಾಷೆಯ ಮಹಾಪ್ರಬಂಧದ ತುಣುಕುಗಳನ್ನು ಕನ್ನಡಕ್ಕೆ ಅನುವಾದಿಸಿ ಲೇಖನದ ರೂಪ ನೀಡಿದ್ದಾರೆ. ಕೃತಿಯಲ್ಲಿನ 'ಕನ್ನಡಿಯೊಳಗಣ ಬಾಲಕಿ' ಲೇಖನವು ಯುವಜನತೆಗೆ ಸ್ಫೂರ್ತಿಯ ಕಿಡಿ ಹೊತ್ತಿಸುತ್ತದೆ. ಲೇಖನಗಳು ಕೇವಲ ಪರಿಚಯಾತ್ಮಕ ಬರಹಗಳಾಗಿರದೆ ಕಾರ್ಯಸ್ವರೂಪದ ವಿಶ್ಲೇಷಣೆಯನ್ನೂ, ಮಾರ್ಗದರ್ಶನದ ಪ್ರೇರಣೆಯನ್ನೂ ಒಳಗೊಂಡಿವೆ. ಸಾಧನೆಗೈದ ವ್ಯಕ್ತಿಗಳ ಮಾತಿನ ಮುಖಾಂತರವೇ ಪ್ರತೀ ಲೇಖನದ ಆರಂಭವು ನಿರೂಪಣೆಯನ್ನು ಮತ್ತಷ್ಟು ಆಪ್ತವಾಗಿಸಿದೆ.

ಪು: 124 ₹120

ಮನಸ್ಸಿದ್ದರೆ ಮಾರ್ಗ
ಲೇ: ಶ್ರೀಲತಾ ಎ
ಪ್ರ: ಧೃತಿ ಪ್ರಕಾಶನ

'ಕಾಳುಮೆಣಸಿನ ರಾಣಿ'ಯ ಅನನ್ಯ ಕಥನ

ಅರುಣ್

ಐತಿಹಾಸಿಕ ಕಾದಂಬರಿಗಳೆಂದರೆ ಹಿಂದೆಂದೋ ನಡೆದ ಬದುಕನ್ನು, ಘಟನೆಗಳನ್ನು ಸಾಧ್ಯವಿರುವ ಎಲ್ಲ ಆಕರಗಳಿಂದ ಹೊರತೆಗೆದು ಕೃತಿಕಾರ ತನ್ನ ಕಲ್ಪನೆಯ ಮೂಲಕ ರಂಜನೀಯವಾಗಿ ಪುನಃ ಸೃಷ್ಟಿಸುತ್ತ ಹೋಗುವ ಅದ್ಭುತ ಪ್ರಕ್ರಿಯೆ. ವಾಸ್ತವ ಮತ್ತು ಕಲ್ಪನೆಗಳ ಮಿಶ್ರಣ ಸಮತೋಲಿತವಾಗಿದ್ದರೆ ಓದುಗನನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಕೃತಿಯೊಂದು ಯಶಸ್ವಿಯಾಗುತ್ತದೆ. ಗಜಾನನ ಶರ್ಮರ ಇತ್ತೀಚಿನ ಕಾದಂಬರಿ 'ಚೆನ್ನಭೈರಾದೇವಿ' ಅಂಥದೊಂದು ಮಹತ್ವದ ಪರಿಪೂರ್ಣ ಕೃತಿ ಎಂದು ನನಗನಿಸಲು ಹಲವಾರು ಕಾರಣಗಳಿವೆ. ವಸ್ತುವಿನ ಆಯ್ಕೆ, ಕಥಾಹಂದರ, ಪಾತ್ರ ಸೃಷ್ಟಿ, ಭಾಷೆ, ನಿರೂಪಣಾ ಶೈಲಿ ಮುಂತಾದ ಕಾದಂಬರಿಯೊಂದರ ಎಲ್ಲ ಲಕ್ಷಣಗಳನ್ನೂ ಗರಿಷ್ಠ ಮಟ್ಟದಲ್ಲಿ ದುಡಿಸಿಕೊಳ್ಳುವಲ್ಲಿ ಚೆನ್ನಭೈರಾದೇವಿ ಯಶಸ್ವಿಯಾಗಿದೆ.

ಬೇರೆಲ್ಲ ರಾಣಿಯರ ಬಗ್ಗೆ ಇತಿಹಾಸದ ಪುಟಗಳಲ್ಲಿ ಸಾಕಷ್ಟು ವಿವರಗಳಿದ್ದರೂ ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನ ಅನೇಕ ಭಾಗಗಳನ್ನು ಸಮರ್ಥವಾಗಿ ಮತ್ತು ಜನಾನುರಾಗಿಯಾಗಿ 54 ವರ್ಷಗಳವರೆಗೆ (ಕ್ರಿ.ಶ. 1552ರಿಂದ 1606) ಆಳಿದ ಅವಳ ಮೇಲೆ ಪದೇಪದೇ ಯುದ್ಧ ಮಾಡಿ ಸೋತ ಪೋರ್ಚುಗೀಸರಿಂದಲೇ 'ಕಾಳುಮೆಣಸಿನ ರಾಣಿ' ಎಂಬ ಹೆಗ್ಗಳಿಕೆಯನ್ನು ಪಡೆದ ಚೆನ್ನಭೈರಾದೇವಿಯ ಬದುಕಿನ ಬಗ್ಗೆ ವಿಸ್ತೃತವಾದ ಅಧ್ಯಯನ ನಡೆದಿಲ್ಲ. ಅವಳು ಬಾಳಿದ, ಆಳಿದ ನಾಡಿನಿಂದ ಬಂದ ಗಜಾನನ ಶರ್ಮರು ಚೆನ್ನಭೈರಾದೇವಿಯ ಬಗ್ಗೆ ಸಂಶೋಧನೆ, ಕ್ಷೇತ್ರಕಾರ್ಯ ನಡೆಸಿ ಅಪರೂಪದ ಸಾಹಿತ್ಯ ಕೃತಿ ನೀಡಿದ್ದಾರೆ.

ಈ ಕಾದಂಬರಿಯಲ್ಲಿ ನನಗೆ ಮಹತ್ವವೆನಿಸಿದ ಹಲವಾರು ಅಂಶಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಪ್ರಸ್ತಾಪಿಸುತ್ತೇನೆ. ಕತೆಯ ಹಂದರಕ್ಕೂ ಪಾತ್ರಗಳ ಆಯ್ಕೆಗೂ ನಡುವೆ ಅವಿನಾಭಾವ ಸಂಬಂಧವಿದೆ. ಅದರಲ್ಲೂ ಐತಿಹಾಸಿಕ ಕಾದಂಬರಿಗಳನ್ನು ಬರೆಯುವಾಗ ಸೂಕ್ತ ಪಾತ್ರಗಳನ್ನು ಸೃಷ್ಟಿಸಿಕೊಂಡರೆ ಮಾತ್ರ ಕತೆಯ ಹಂದರ ಹೆಚ್ಚು ಸದೃಢವಾಗಿ ಆಕರ್ಷಕವಾಗಿ ಬೆಳೆಯುತ್ತದೆ. ಆಯ್ದುಕೊಂಡ ಪಾತ್ರಗಳು ತಮ್ಮ ಮಿತಿಯಲ್ಲೇ ಬೆಳೆಯುತ್ತ, ಇಡೀ ಹಂದರವನ್ನು ಕಟ್ಟುವಲ್ಲಿ ಕೈಜೋಡಿಸುತ್ತ, ತಮ್ಮ ಕೆಲಸ ಮುಗಿದಾಗ ಹಿನ್ನೆಲೆಗೆ ಸರಿದರೆ ಕೃತಿ ಹೆಚ್ಚು ಅರ್ಥಪೂರ್ಣವಾಗುತ್ತದೆ. ಇತಿಹಾಸದಲ್ಲಿ ಬದುಕಿದ್ದವರಲ್ಲದೆ ಚೆನ್ನಭೈರಾದೇವಿಯ ಬದುಕಿನ ಚಿತ್ರಣಕ್ಕೆ ಪೂರಕವಾಗಿ ಜಿನದತ್ತ, ಪರಮಯ್ಯ ಸಭಾಹಿತ, ಶಬಲೆ ಮುಂತಾದ ನೂರಾರು ಪಾತ್ರಗಳನ್ನು ಶರ್ಮರು ಸೃಷ್ಟಿಸಿಕೊಂಡಿದ್ದಾರೆ.

ಚೆನ್ನಭೈರಾದೇವಿಯ ವ್ಯಕ್ತಿತ್ವವನ್ನು ರಾಣಿಯ ಹದಕ್ಕೆ ತಿದ್ದುವ ಜಿನದತ್ತ, ಪರಮಯ್ಯ ಸಭಾಹಿತರು, ಅವಳದೇ ಪ್ರತಿರೂಪದಂತಿರುವ ಶಬಲೆ ಪಾತ್ರಗಳು ಕಾದಂಬರಿಯನ್ನು ಸದೃಢಗೊಳಿಸಿವೆ. ಅವಳ ಗೆಳೆಯ, ಹಿತೈಷಿ ಜಿನದತ್ತ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಪೋರ್ಚುಗಲ್ಲಿಗೆ ಹೋಗುವಂತೆ ಮಾಡುವ ಶರ್ಮರು ಆ ದೇಶದಲ್ಲಿನ ಬೆಳವಣಿಗೆಗಳನ್ನು ಅವನು ರಾಣಿಗೆ ತಲುಪಿಸಿ ಅವಳ ಆರ್ಥಿಕ ಆಡಳಿತಕ್ಕೆ ಆಸರೆಯಾಗಿ ನಿಲ್ಲುವಂತೆ ಮಾಡುತ್ತಾರೆ. ಅಂದು ಬದುಕಿದ್ದ ಅಥವಾ ಕಾದಂಬರಿಗಾಗಿ ಲೇಖಕರು ಸೃಷ್ಟಿಸಿಕೊಂಡ ಪ್ರತೀ ಪಾತ್ರದ ಮಾತು, ನಡವಳಿಕೆ, ಆಲೋಚನೆಗಳು, ಇನ್ನೊಂದು ಪಾತ್ರದೊಡನೆ ಒಡನಾಟ, ಕ್ರಿಯೆಗಳು ಎಲ್ಲಿಯೂ ಅಸಹಜ ಎಂದಾಗಲೀ ಅನವಶ್ಯಕ ಎಂದಾಗಲೀ ಓದುಗನಿಗೆ ಅನಿಸುವುದಿಲ್ಲ. ಪ್ರತೀ ಪಾತ್ರವೂ ತನ್ನಷ್ಟಕ್ಕೇ ಪರಿಪೂರ್ಣವೂ ಸಹಜವೂ ಆಗಿದೆ. ಶರ್ಮರು ಪಾತ್ರಗಳನ್ನು ಈ ರೀತಿ ಔಚಿತ್ಯಪೂರ್ಣವಾಗಿ ಬಳಸುವ, ಬೆಳೆಸುವ ಮತ್ತು ನಿರ್ವಹಿಸುವ ಪ್ರಕ್ರಿಯೆಯಿಂದಾಗಿ ಕಾದಂಬರಿ ಓದುಗನಿಗೆ ಖುಷಿ ಕೊಡುತ್ತದೆ.

ಇನ್ನೊಂದು ಪ್ರಮುಖ ಅಂಶ ಪ್ರಾದೇಶಿಕತೆ. ಈಗಿನ ಉತ್ತರಕನ್ನಡ, ಉಡುಪಿ-ದಕ್ಷಿಣಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು ಸೇರುವಲ್ಲಿನ ಪ್ರದೇಶದ ಜನಜೀವನದ, ಜೀವವೈವಿಧ್ಯದ ಪ್ರತೀ ವಿವರವನ್ನೂ ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಇತರ ಸಾಹಿತ್ಯ ಪ್ರಕಾರಗಳಿಗೆ ಸಾಧ್ಯವಿಲ್ಲದ, ಕಾದಂಬರಿಗೆ ಮಾತ್ರ ಸಾಧ್ಯವಿರುವ ಪ್ರಾದೇಶಿಕತೆ ಈ ಕೃತಿಯಲ್ಲಿ ಅಂತರಂಗದ ಅಂಶವಾಗಿದೆ. ಉದಾಹರಣೆಗೆ, ಚೆನ್ನಭೈರಾದೇವಿ ರಾಣಿಯಾಗುವ ಮುನ್ನ ಜಿನದತ್ತನೊಡನೆ ಕಾಡಿನಲ್ಲಿ ಅಲೆದಾಡುವಾಗ ಕಾಡುಕೋಣವೊಂದು ಅವಳ ತೊಡೆಯನ್ನು ತನ್ನ ಕೋಡಿನಿಂದ ಸೀಳಿಬಿಡುತ್ತದೆ. ಅದಕ್ಕೆ ಪ್ರಥಮ ಚಿಕಿತ್ಸೆ ನೀಡುವ ಮಾದ, ಬಗಿನೆ ಮರದ ಹೆಡೆಯನ್ನು ಕಡಿದು ತಂದು ಸುಲಿದು ಅದರೊಳಗಿನಿಂದ ಬಿಳಿ ಬಟ್ಟೆಯಂಥ ನಾರನ್ನು ಹೊರತೆಗೆದು ಔಷಧ ಸೇರಿಸಿ ತೊಡೆಗೆ ಕಟ್ಟುವ ವಿವರವಿದೆ. ಈ ಘಟನೆಯಾಗಲೀ ವಿವರವಾಗಲೀ ಉದ್ದೇಶಪೂರ್ವಕವಾಗಿ ತುರುಕಿದಂತೆ ಅನಿಸುವುದೇ ಇಲ್ಲ. ಪ್ರಾದೇಶಿಕತೆ ಎಂಬುದು ಕಾದಂಬರಿಯ ವಸ್ತುವಿನಲ್ಲಿ ಅವಿನಾಭಾವವಾಗಿ ಹರಿದುಬಂದಿದೆ.

ಒಳನೋಟ

ರಾಜ ಅಥವಾ ರಾಣಿಯ ಕುರಿತ ಐತಿಹಾಸಿಕ ಕಾದಂಬರಿಯೆಂದಾಕ್ಷಣ ಕೃತಿಯು ಅವರ ಬದುಕಿನ ಏರಿಳಿತಗಳ ಚೌಕಟ್ಟಿನೊಳಗೇ ಉಳಿದುಬಿಡುವ ಸಾಧ್ಯತೆಗಳಿವೆ. ಆದರೆ ಚೆನ್ನಭೈರಾದೇವಿ ಅಂಥ ಸಾಮಾನ್ಯ ಚೌಕಟ್ಟನ್ನು ಮೀರಿ ಯುದ್ಧತಂತ್ರ, ಸಾಮಾನ್ಯರ ಬದುಕು, ಅಂದಿನ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ವ್ಯವಹಾರ, ರಾಜಕೀಯ ತಂತ್ರಗಾರಿಕೆ ಸೇರಿದಂತೆ ಅಂದಿನ ಬದುಕಿನ ಸಮಗ್ರ ಚಿತ್ರಣವನ್ನೂ ಓದುಗನ ಮುಂದಿಡುತ್ತದೆ.

ಇವೆಲ್ಲಕ್ಕೂ ಮಿಗಿಲಾಗಿ ಅವರ ಸರಳ ಮತ್ತು ನೇರ ನಿರೂಪಣಾ ಶೈಲಿ ಕೃತಿಯನ್ನು ಹೆಚ್ಚು ಆಕರ್ಷಕವಾಗಿಸಿದೆ, ಆಪ್ತವಾಗಿಸಿದೆ. ಕಾದಂಬರಿಯ ಹೊರಗೇ ನಿಂತು ಕತೆಯನ್ನು ನಿರೂಪಿಸುವಾಗ ತಾವು ಸಂಶೋಧಿಸಿದ ವಾಸ್ತವಿಕ ಸಂಗತಿಗಳಿಗೆ ರಕ್ತ ಮಾಂಸ ತುಂಬಿ ಜೀವಂತಗೊಳಿಸಲು ಅಗತ್ಯವಿರುವ ಕಲ್ಪನೆಗಳನ್ನು ಹದವಾಗಿ ಸಂಮಿಳಿತಗೊಳಿಸುತ್ತ ಎಲ್ಲಿಯೂ ಓದುಗನಿಗೆ ವಾಸ್ತವ ಮತ್ತು ಕಲ್ಪನೆಗಳ ನಡುವೆ ಗೊಂದಲ, ಓದಿನ ಹರಿವಿಗೆ ತಡೆ ಆಗದಂತೆ ಸರಳವಾಗಿ, ಆಪ್ತವಾಗಿ ನಿರೂಪಿಸುತ್ತಾರೆ.

ಇಡೀ ಕೃತಿಯಲ್ಲಿ ಯಾವುದಾದರೂ ಅಂಶ ಅಥವಾ ಪಾತ್ರ ಇಲ್ಲದೇ ಹೋಗಿದ್ದರೆ ನಷ್ಟವೇನೂ ಆಗುತ್ತಿರಲಿಲ್ಲ ಎಂಬುದನ್ನು ತೋರಿಸಲು ಸಾಧ್ಯವೇ ಇಲ್ಲದಂಥ ಬಿಗುವಾದ ನಿರೂಪಣೆ ಇದೆ. ಪ್ರತೀ ವಿವರವನ್ನೂ ಓದುಗನೊಡನೆ ಹಂಚಿಕೊಳ್ಳುವ ಅವರ ಉತ್ಸಾಹ ಗಮನಾರ್ಹ. ಪಟ್ಟಾಭಿಷೇಕದ ಸಿದ್ಧತೆ, ಜೈನ ಪೂಜಾ ವಿಧಿವಿಧಾನ, ಸಲ್ಲೇಖನ ವ್ರತ ಸ್ವೀಕಾರ, ಶವಸಂಸ್ಕಾರ ವಿಧಿ ಮುಂತಾದವು ಅಸಹಜ ಎಂದಾಗಲೀ ಅಥವಾ ಅವುಗಳನ್ನು ನಿರ್ಲಕ್ಷಿಸಿ ಮುಂದೆ ಓದಬೇಕೆಂದಾಗಲೀ ಅನಿಸುವುದೇ ಇಲ್ಲ. ಬದಲಿಗೆ ಶರ್ಮರು ಉತ್ಸಾಹದಿಂದ ವಿವರಿಸುವಾಗ ಓದುಗ ತನ್ಮಯನಾಗಿ ಕೇಳುತ್ತಾನೆ. ಯಾವುದೇ ವಿಚಾರವನ್ನು ಉತ್ಸಾಹದಿಂದ ವಿವರವಾಗಿ ಆತ್ಮೀಯವಾಗಿ ನಿರೂಪಿಸುವ ಅವರ ಶೈಲಿ ಅನನ್ಯ.

ನಾಡು ಹೆಮ್ಮೆ ಪಡಬೇಕಾದ ರಾಣಿಯೊಬ್ಬಳ ಬದುಕಿನ ಬಗ್ಗೆ ಸಾಹಿತ್ಯಿಕವಾಗಿ ಸಂಪದ್ಭರಿತವಾದ, ಪರಿಪೂರ್ಣವಾದ ಕೃತಿಯನ್ನು ಶರ್ಮರು ನೀಡಿದ್ದಾರೆ.

ಪು: 432 ₹395

ಚೆನ್ನಭೈರಾದೇವಿ
ಲೇ: ಗಜಾನನ ಶರ್ಮ
ಪ್ರ: ಅಂಕಿತ ಪುಸ್ತಕ
ಸಂ:080–2661 7100/ 2661 7755

ಇತಿಹಾಸದ ಕುತೂಹಲಕರ ವಿವರ; ತೆಳ್ಳಗಿನ ಗ್ರಹಿಕೆ

ಬಿ.ಎಂ.ಹನೀಫ್

ಮುಸ್ಲಿಮರ ಇತಿಹಾಸ, ಬದುಕು, ನಿಟ್ಟುಸಿರು, ಹೆಗ್ಗಳಿಕೆ, ವರ್ತಮಾನಗಳನ್ನು ಕೇಂದ್ರವಾಗಿಟ್ಟುಕೊಂಡು ಬರೆದ 35 ಲೇಖನಗಳ ಸಂಕಲನವಿದು. ಈ ಪುಸ್ತಕದ ಲೇಖನಗಳು ಬಿಡಿಯೂ ಹೌದು, ಕೊಲಾಜ್‌ನಂತಹ ಇಡಿಯೂ ಹೌದು. ಮೊತ್ತಮೊದಲು ಭಾರತಕ್ಕೆ ದಂಡೆತ್ತಿ ಬಂದ ಮೊಹಮ್ಮದ್ ಬಿನ್ ಕಾಸಿಂನಿಂದ ಹಿಡಿದು, ವಿಭಜನೆಯ ಸಂದರ್ಭದಲ್ಲಿ ಹೊಸ ದೇಶವೊಂದನ್ನು ಬಗಲಲ್ಲಿ ಇಟ್ಟುಕೊಂಡು ವಲಸೆ ಹೋದ ಮೊಹಮ್ಮದ್ ಅಲಿ ಜಿನ್ನಾವರೆಗೆ- ಮುಸ್ಲಿಮರಿಗೆ ಸಂಬಂಧಿಸಿದ ಇತಿಹಾಸದ ಎಲ್ಲ ಘಟನೆಗಳ ಬಗ್ಗೆ ಇಲ್ಲಿ ಉಲ್ಲೇಖಗಳಿವೆ. ಉಲ್ಲೇಖ ಮಾತ್ರವಲ್ಲ, ಆ ಘಟನೆಗಳನ್ನು ಕಟ್ಟಿಕೊಡುವ ಒಂದು ಭಾಷಾ ಚೌಕಟ್ಟು ಮತ್ತು ವಿಶ್ಲೇಷಿಸುವ ವಿಶಿಷ್ಟ ದಿಕ್ಸೂಚಿ ಸಹ ಇದೆ.

ಮೊದಲ ಓದಿಗೆ ಇದೊಂದು ಮಾಹಿತಿಗಳ ಆಗರದಂತೆ ಕಾಣಿಸುತ್ತದೆ. ಆದರೆ ಇದು ಇತಿಹಾಸದ ಕ್ರಮಬದ್ಧ ಓದು ಅಲ್ಲ. ಅಬ್ರಹಾಂ ಇರಾಲೆ, ಡಾ.ರಫೀಕ್ ಜಕಾರಿಯಾ, ಎಸ್.ಇರ್ಫಾನ್ ಹಬೀಬ್, ಅಬ್ದುಲ್ ರೆಹಮಾನ್, ಮೊಹಮ್ಮದ್ ಮಮ್ದಾನಿ ಮತ್ತು ಡಾ. ಅಸ್ಗರ್ ಅಲಿ ಇಂಜಿನಿಯರ್ ಅವರು ಬರೆದ ಹಲವು ಪುಸ್ತಕಗಳ ಸಾರವನ್ನು ಹೀರಿ ಮೋಹನ್‌ರಾಂ ಅವರು ಬರೆದಿರುವ ಪ್ರಬಂಧ ಮಾದರಿಯ ಇತಿಹಾಸದ ಸಂಕಥನವಿದು. ಇದರ ಮುಖ್ಯ ಉದ್ದೇಶ ಇತಿಹಾಸದ ಹೆಸರಿನಲ್ಲಿ ಹಿಂದೂ ಮುಸ್ಲಿಮರ ಮಧ್ಯೆ ವಿಷಬೀಜ ಬಿತ್ತುತ್ತಿರುವ ರಾಜಕೀಯಾಸಕ್ತರ ವಾದಕ್ಕೆ ಪ್ರತಿವಾದಗಳನ್ನು ಇತಿಹಾಸದ ಆಕರದಿಂದಲೇ ಎತ್ತಿಕೊಡುವುದು ಮತ್ತು ಈ ನಿಟ್ಟಿನಲ್ಲಿ ಮುಸ್ಲಿಂ ಸಮುದಾಯದ ಜವಾಬ್ದಾರಿ ಏನು ಎನ್ನುವುದನ್ನು ನೆನಪಿಸುವುದು.

'ಬಂದದ್ದು ಇಲ್ಲಿ ನೆಲೆಸಲೆಂದೇ, ಕೊಳ್ಳೆಗಾಗಿ ಅಲ್ಲ' ಎನ್ನುವ ಮೊದಲ ಅಧ್ಯಾಯದಿಂದ ಹಿಡಿದು 'ಉದ್ದುದ್ದ ಒಡೆದ ರುಬ್ಬುಕಲ್ಲು ದೇಶ ವಿಭಜನೆಯ ರೂಪಕವಾಗಿತ್ತೇ?' ಎನ್ನುವ ಕೊನೆಯ ಅಧ್ಯಾಯದವರೆಗೆ ಕುತೂಹಲದಿಂದ ಓದಿಸಿಕೊಂಡು ಹೋಗುವ ಗುಣ ಈ ಕೃತಿಗಿದೆ. 'ಮುಸ್ಲಿಮರ ಭಾರತ ಪ್ರವೇಶ ಜಿಹಾದ್ ಆಗಿರಲಿಲ್ಲ', 'ಬಾಬರ್ ಬರದಿದ್ದರೆ ನಾದಿರ್‌ನೋ ಮತ್ತೊಬ್ಬನೋ ಬರುತ್ತಿದ್ದ', 'ಇಲ್ಲುಳಿದವರು ಹಸಿದವರು ಮತ್ತು ಬಡವರು', 'ಅಲ್ಪಸಂಖ್ಯಾತರೆಂಬ ರಾಜಕೀಯ ಗಿಮಿಕ್', 'ಬೇಕಾಗಿದೆ ಸಮಾನ ನಾಗರಿಕ ಸಂಹಿತೆ' ಮುಂತಾಗಿ ಇಲ್ಲಿರುವ ಲೇಖನಗಳ ತಲೆಬರಹಗಳೇ ಎಲ್ಲವನ್ನೂ ಹೇಳುತ್ತವೆ.

ಮೊಘಲ್ ದೊರೆಗಳು ದೇಶ ಎನ್ನುವ ಕಲ್ಪನೆಯನ್ನು ಸಾಕಾರಗೊಳಿಸಿ, ಅಭಿವೃದ್ಧಿಗೆ ನಾಂದಿ ಹಾಡಿದ್ದು, ದೇಶವೊಂದನ್ನು ಖಾಸಗೀಕರಣಗೊಳಿಸಿದ ವಿಶ್ವದ ಮೊದಲ ಬಹುರಾಷ್ಟ್ರೀಯ ಕಂಪನಿಯ ದೌರ್ಜನ್ಯ, ಈಸ್ಟ್ ಇಂಡಿಯಾ ಕಂಪನಿಯ ಸೈನ್ಯದಲ್ಲಿ ಬ್ರಾಹ್ಮಣರ ರೆಜಿಮೆಂಟ್ ಸೃಷ್ಟಿಯಾದದ್ದರ ಹಿನ್ನೆಲೆ- ಹೀಗೆ ಇತಿಹಾಸದ ಹಲವು ಕುತೂಹಲಕರ ವಿವರಗಳನ್ನು ಲೇಖಕರು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ವಿಮರ್ಶೆ

ಅಲ್ಲಲ್ಲಿ ಕಂಡುಬರುವ ಬೀಸುಹೇಳಿಕೆಗಳು ಈ ಕೃತಿಯ ಮಹತ್ವವನ್ನು ಕುಂದಿಸಿವೆ. ಎರಡು ಉದಾಹರಣೆಗಳನ್ನು ಇಲ್ಲಿ ಗಮನಿಸಬಹುದು: 1. '1982ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮುಖ್ಯಮಂತ್ರಿ ಗುಂಡೂರಾಯರು, 'ನಮಗೆ ಬೇರೆ ಯಾರ ವೋಟೂ ಬೇಡ. ಮುಸ್ಲಿಂ ಮತ್ತು ದಲಿತರದ್ದು ಸಾಕು' ಎಂದು ಘೋಷಿಸಿದ್ದೇ ರಾಜ್ಯದಲ್ಲಿ ಕಾಂಗ್ರೆಸ್ ಸೋಲಿಗೆ ಆಲಾಪನೆಯಾಯಿತು. ಮುಸ್ಲಿಮರು ಎಚ್ಚೆತ್ತುಕೊಳ್ಳುವುದರೊಳಗೆ 2014, 2019ರ ಚುನಾವಣೆಗಳು ನಡೆದು ಅವರ ದುಃಸ್ವಪ್ನದ ದಿನಗಳು ಆರಂಭವಾದವು.' ಗುಂಡೂರಾಯರ ನೇತೃತ್ವದ ಸರ್ಕಾರದ ವಿರುದ್ಧ ಜನಾಭಿಪ್ರಾಯ ಮೂಡಲು ರೈತರ ಮೇಲೆ ನಡೆದ ಗೋಲಿಬಾರ್ ಕಾರಣ ಎನ್ನುವುದು ಸರ್ವವಿಧಿತ. 2. ಡೆಕ್ಕನ್ ಹೆರಾಲ್ಡ್‌ನ ಭಾನುವಾರದ ಪುರವಣಿಯಲ್ಲಿ ಪ್ರಕಟವಾದ ಕಥೆಯ ಮತ್ತು ಬಳಿಕ ನಡೆದ ದಾಂಧಲೆ, ಗೋಲಿಬಾರ್‌ನ ಪ್ರಸ್ತಾಪ. 'ಕಥೆಯನ್ನು ಪ್ರಕಟಿಸಿದ ಸಾಪ್ತಾಹಿಕದ ಮುಖ್ಯಸ್ಥ ಮತ್ತು ಸಂಪಾದಕರನ್ನು ಆಡಳಿತ ಮಂಡಳಿ ಕೆಲಸದಿಂದ ಕಿತ್ತುಹಾಕಿತು' ಎನ್ನುವ ಊಹಾಪೋಹದ ಮಾತನ್ನು ಸತ್ಯವೆಂದೇ ಲೇಖಕರು ಇಲ್ಲಿ ದಾಖಲಿಸಿದ್ದಾರೆ. ಅವರಿಬ್ಬರೂ ಘಟನೆ ನಡೆದ ಬಳಿಕ ಹಲವು ವರ್ಷಗಳ ಕಾಲ ಪತ್ರಿಕೆಯಲ್ಲಿ ಸೇವೆಯಲ್ಲಿದ್ದರು. ಇದಲ್ಲದೆ, ಹೇರಳ ಮುದ್ರಣ ತಪ್ಪುಗಳೂ ಈ ಕೃತಿಯಲ್ಲಿವೆ.

ಕೃತಿಯ ಆಶಯಗಳನ್ನು ಮೆಚ್ಚಬಹುದಾದರೂ, ತಲೆಬರಹಕ್ಕೆ ಸೂಕ್ತವಾಗಿ ಕೃತಿ ಮೂಡಿಬಂದಿಲ್ಲ. ಭಾರತೀಯ ಮುಸ್ಲಿಮರು ಒಟ್ಟಾರೆಯಾಗಿ ಅನಾಥಪ್ರಜ್ಞೆ ಅನುಭವಿಸುತ್ತಿದ್ದಾರೆ ಎನ್ನುವ ಗ್ರಹಿಕೆಯೇ ತೆಳ್ಳಗಿನದ್ದು ಮತ್ತು ರಾಜಕೀಯ ಧೋರಣೆಯದ್ದು. ಬಲಪಂಥೀಯ ಹಿಂದೂ ದಾರ್ಷ್ಟ್ಯದಿಂದ ಉಂಟಾಗುತ್ತಿರುವ ಕಾನೂನುಬಾಹಿರ ಚಟುವಟಿಕೆಗಳಿಂದ ಪ್ರೇರಿತವಾದದ್ದು. ಇಂತಹ ಕಾನೂನುಬಾಹಿರ ಚಟುವಟಿಕೆಗಳನ್ನು ನಿಗ್ರಹಿಸಲು ಸರ್ಕಾರವೊಂದು ರಾಜಕೀಯ ಇಚ್ಛಾಶಕ್ತಿ ತೋರಿಸಿದರೆ ಸಮಸ್ಯೆ ಇಲ್ಲವಾಗುತ್ತದೆ. ವೋಟ್‌ಬ್ಯಾಂಕ್ ಧ್ರುವೀಕರಣದ ಈ ರಾಜಕೀಯ ಕಸರತ್ತು ತಂದೊಡ್ಡಿರುವ ಸಂಕಷ್ಟಗಳು ಭಾರತೀಯ ಮುಸ್ಲಿಮರಲ್ಲಿ ಸಿಟ್ಟು ಮತ್ತು ತಳಮಳವನ್ನು ಹುಟ್ಟುಹಾಕಿವೆ ಎನ್ನುವುದೂ ಸುಳ್ಳಲ್ಲ. ಆದರೆ ಅದು ಒಟ್ಟಾರೆಯಾಗಿ ಅನಾಥಪ್ರಜ್ಞೆಯನ್ನು ಉಂಟು ಮಾಡಿದೆ ಎನ್ನುವುದು ಅರ್ಧಸತ್ಯ. ಅದೇನೇ ಇದ್ದರೂ, ಇತಿಹಾಸದ ಕುತೂಹಲಕರ ಹಾಗೂ ವಿಪರ್ಯಾಸಮಯ ಘಟನೆ ಮತ್ತು ವಿವರಗಳನ್ನು ತಿಳಿದುಕೊಳ್ಳುವ ಆಸಕ್ತಿ ಇದ್ದವರು ಓದಲೇಬೇಕಾದ ಪುಸ್ತಕವಿದು.

ಪು: 280 ₹250

21ನೇ ಶತಮಾನದ ಭಾರತೀಯ ಮುಸ್ಲಿಮರ ಅನಾಥಪ್ರಜ್ಞೆ
ಲೇ: ಎನ್.ಕೆ.ಮೋಹನ್‌ರಾಂ
ಪ್ರ: ಚಾರುಮತಿ ಪ್ರಕಾಶನ, ಬೆಂಗಳೂರು
ಸಂ: 9448235553

ಕಥೆ
ಫಾತಿಮಾ ರಲಿಯಾ ಬರೆದ
ಆರು ಪುಟ್ಟ ಪುಟ್ಟ ಕಥೆಗಳು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ
ಬಿದಲೋಟಿ ರಂಗನಾಥ್
ಬರೆದ ಕವಿತೆ
ಬೆಚ್ಚಿ ಬೆವರಿ ನಿಂತ ನಡಿಗೆ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಏರು-ಪೇರು ಇಲ್ಲ, ಸದಾ ಆರು

ಯಾವುದೇ ಮೂರು ಅನುಕ್ರಮ ಸಂಖ್ಯೆಗಳಲ್ಲಿ ದೊಡ್ಡ ಸಂಖ್ಯೆಯು (ಅಂದರೆ ಮೂರನೇ ಸಂಖ್ಯೆ) ಮೂರು ಅಪವರ್ತ್ಯವಾಗಿರುವಂತೆ (ಅಂದರೆ ಅದು ಮೂರರಿಂದ ಹೋಗುತ್ತಿರಬೇಕು) ಆಯ್ದುಕೊಂಡು ಅವುಗಳ ಮೊತ್ತವನ್ನು ಏಕಾಂಕ ಬರುವವರೆಗೆ ಕೂಡುತ್ತಾ ಹೋದರೆ ಕೊನೆಯ ಮೊತ್ತವು ಯಾವಾಗಲೂ ಆರೇ ಆಗಿರುತ್ತದೆ.

ಉದಾ: 1) 16, 17, 18
= 16+17+18=51
= 5+1=6

2) 28, 29, 30
= 28+29+30=87
= 8+7=15
= 1+5=6

3) 118, 119, 120
= 118+119+120=357
= 3+5+7=15
= 1+5=6

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಅಕ್ಕ 2. ಕಣ 3. ಕವಿ 4. ತರಿ
5. ಗತ್ತು 6. ಸರಿ 7. ನಲಿ 8. ಮನೆ

1.		ವಾ		5.		ದ್ದಾ	
2.		ಬ್ಬ		6.		ಮ್ಮ	
3.		ಕ		7.		ಯಾ	
4.		ಲ್ಯಾ		8.		ಣ	

ಕಂದನ ಕಾವ್ಯ

ಸ್ವರಾಕ್ಷರಗಳಲ್ಲಿ ಗಣಪ

ಅದೋ ನೋಡು ಗಣಪ
ಆನೆ ಮುಖದ ರೂಪ
ಇಲಿಯು ವಾಹನ
ಈಶ್ವರ ಇವನ ತಂದೆ
ಉಮೆಯು ತಾಯಿಯು
ಊಟಕೆ ಬೇಕು ಮೋದಕ
ಋಷಿಗಳಿಗೂ ಈತ ಬೇಕು
ಎಲ್ಲರೂ ಪೂಜಿಸುವರು
ಏಳ್ಗೆಯ ಬಯಸುತ
ಐಕ್ಯಗಾನವ ಹಾಡುತ
ಒಕ್ಕೊರಲಿನಿಂದ ಭಜಿಸುವೆ
ಓ ವಿಘ್ನವಿನಾಶಕನೆ
ಔತಣ ಕೂಟಕೆ ಕರೆಯುವೆನು
ಅಂಜದೆ ಅಳುಕದೆ ನೀ ಬಾರೋ
ಅಃ ಎನ್ನುತ ನಗೆ ತೋರೊ

ಟ್ವೆಂಟಿ – 20 ಮ್ಯಾಚ್

ಅ ವಿಭಾಗ : ಈ ಫಲಗಳಿಗೂ ಪ್ರಸಿದ್ಧಿಯಾದ ಊರುಗಳಿಗೂ ಹೊಂದಿಸಿ

1. ಚಕ್ಕೋತ	A. ತಿಪಟೂರು
2. ದಾಳಿಂಬೆ	B. ನಂಜನಗೂಡು
3. ರಸಬಾಳೆ	C. ಕೊಡಗು
4. ಕಿತ್ತಳೆ	D. ಮಧುಗಿರಿ
5. ತೆಂಗು	E. ದೇವನಹಳ್ಳಿ

ಬ ವಿಭಾಗ : ಕರ್ನಾಟಕದ ಬೆಟ್ಟಗಳಿಗೂ ಅವು ಇರುವ ಜಿಲ್ಲೆಗಳಿಗೂ ಹೊಂದಿಸಿ

1. ನಂದಿ ಬೆಟ್ಟ	A. ಚಾಮರಾಜನಗರ ಜಿಲ್ಲೆ
2. ಬಾಬಾಬುಡನ್ ಗಿರಿ	B. ಮೈಸೂರು ಜಿಲ್ಲೆ
3. ಬಿಳಿಗಿರಿರಂಗನಬೆಟ್ಟ	C. ಶಿವಮೊಗ್ಗ ಜಿಲ್ಲೆ
4. ಚಾಮುಂಡಿಬೆಟ್ಟ	D. ಚಿಕ್ಕಮಗಳೂರು ಜಿಲ್ಲೆ
5. ಕೊಡಚಾದ್ರಿ ಬೆಟ್ಟ	E. ಚಿಕ್ಕಬಳ್ಳಾಪುರ ಜಿಲ್ಲೆ

ಕ ವಿಭಾಗ : ಕವಿಗಳಿಗೂ ಕಾವ್ಯನಾಮಕ್ಕೂ ಹೊಂದಿಸಿ

1. ಸಿದ್ದಯ್ಯ ಪುರಾಣಿಕ	A. ಆನಂದಕಂದ
2. ಮಾಸ್ತಿ ವೆಂಕಟೇಶ ಅಯ್ಯಂಗಾರ್	B. ಕವಿ ಶಿಷ್ಯ
3. ಪಂಜೆ ಮಂಗೇಶರಾಯ	C. ಮುದ್ದಣ
4. ನಂದಳಿಕೆ ನಾರಾಯಣಪ್ಪ	D. ಶ್ರೀನಿವಾಸ
5. ಬೆಟಗೇರಿ ಕೃಷ್ಣಶರ್ಮ	E. ಕಾವ್ಯಾನಂದ

ಡ ವಿಭಾಗ : ಸಾಹಿತಿಗಳಿಗೂ ಬಿರುದುಗಳಿಗೂ ಹೊಂದಿಸಿ

1. ದಾನ ಚಿಂತಾಮಣಿ	A. ಬಿ.ಎಲ್. ರೈಸ್
2. ನಾಟಕರತ್ನ	B. ನಾಗಚಂದ್ರ
3. ಅಭಿನವ ಪಂಪ	C. ಗುಬ್ಬಿ ವೀರಣ್ಣ
4. ಕಾದಂಬರಿ ಪಿತಾಮಹ	D. ಅತ್ತಿಮಬ್ಬೆ
5. ಶಾಸನ ಪಿತಾಮಹ	E. ಗಳಗನಾಥ

ಡಣ್ಣ ಚಕ್ಕು ಕೀಶ್ರಪ್ಪ ಕಥೆಯ

ವಾಚಾಳಿ ಆಮೆ

• ಕಲೆ-ಪರಿಕಲ್ಪನೆ: ಸುರೇಶ್ ಆರ್. ಅರ್ಕಸಾಲಿ

ಕಾಡಿನಲ್ಲೊಂದು ಸುಂದರವಾದ ಕೊಳವಿತ್ತು. ಅದರಲ್ಲಿ ಒಂದು ಆಮೆ ವಾಸವಾಗಿತ್ತು. ಯಥೇಚ್ಛವಾಗಿ ಆಹಾರ ಸಿಗುತ್ತಿದ್ದರಿಂದ ಅದು ಖುಷಿಯಿಂದ ಜೀವನ ನಡೆಸಿತ್ತು

ಅದೇ ಕೊಳದಲ್ಲಿ ಎರಡು ಹಂಸಗಳೂ ನೆಲೆ ಕಂಡುಕೊಂಡಿದ್ದವು. ಅವುಗಳು ಸ್ವಚ್ಛಂದವಾಗಿ ವಿಹಾರ ನಡೆಸುತ್ತಾ, ಆಮೆಯ ಗೆಳೆತನ ಹೊಂದಿ ಸುಖವಾಗಿ ಬಾಳುತ್ತಿದ್ದವು



ಕೊಳದಲ್ಲಿ ಮೀನುಗಳೂ ದೊಡ್ಡ ಸಂಖ್ಯೆಯಲ್ಲಿ ಇದ್ದವು. ಎಲ್ಲ ರೀತಿಯ ಸಮೃದ್ಧಿ ಇದ್ದುದರಿಂದ ಆಮೆ-ಹಂಸಗಳು ಯಾವ ಚಿಂತೆಯೂ ಇಲ್ಲದೆ ಮೋಜಿನಿಂದ ಕಾಲ ಕಳೆಯುತ್ತಿದ್ದವು

ಒಮ್ಮೆ ಮಳೆಯೇ ಇಲ್ಲದೆ ಕೊಳವೆಲ್ಲ ಬತ್ತಿ ಹೋಯಿತು. ಮುಂದೇನು ಮಾಡಬೇಕು ಎನ್ನುವ ಚಿಂತೆ ಎಲ್ಲರನ್ನೂ ಕಾಡತೊಡಗಿತು. ಆಮೆ-ಹಂಸಗಳು ಸಭೆ ನಡೆಸಿದವು

ಮರದ ತುಂಡೊಂದನ್ನು ತಂದ ಹಂಸಗಳು ಆಮೆಗೆ ಬಾಯಲ್ಲಿ ಕಚ್ಚಲು ಹೇಳಿದವು. ಅದರ ತುದಿಗಳನ್ನು ಎರಡೂ ಹಂಸಗಳು ಕಚ್ಚಿ ಹಾರಿದವು. ಜನ ನೋಡಿ ಬೆರಗಾದರು



ಜನರನ್ನು ನೋಡಿ ಉತ್ತೇಜನಗೊಂಡ ವಾಚಾಳಿ ಆಮೆ, ನನಗೆ ಹಾರಲು ಬರಲ್ಲ, ಇವರೇ ಹೊತ್ತೊಯ್ಯುತ್ತಿದ್ದಾರೆ ಎಂದು ಹೇಳಲು ಬಾಯಿ ತೆರೆಯಿತು. ಕೆಳಗೆ ಬಿದ್ದು ಪ್ರಾಣ ಕಳೆದುಕೊಂಡಿತು

ಶಬ್ದಗಳೊಡನೆ ಸರಸ

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದಗಳ ಎಲ್ಲಾ ಅಕ್ಷರ ಕೂಡಿಸಿಕೊಂಡು ಒಂದೇ ಪದ ಮಾಡಿ.

1. ಕವನ + ಲಾಭ = ______
2. ನಕುಲ + ಮಾವ = ______
3. ಲಲನೆ + ಮಂಗ = ______
4. ಕೆಳದಿ + ಬನ = ______
5. ಸಮಾನ + ನರಿ = ______

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ರಾಜನಗರಮ ಚಾ = ______
2. ನಲಿವ ಮನ = ______
3. ತಮ್ಮನ ಭಾರ = ______
4. ಸದಾ ಪದರ = ______

ಕಳೆದ ಸಂಚಿಕೆಯ ಸರಿ ಉತ್ತರಗಳು

ಶಬ್ದಗಳೊಡನೆ ಸರಸ

1. BC	2. AK	3. AD	4. ET	5. KD
6. KK	7. PP	8. BD	9. EK	10. IK

ಟ್ವೆಂಟಿ 20 ಮ್ಯಾಚ್

ಅ. ವಿಭಾಗ: 1-D	2-C	3-E	4-B	5-A
ಬ. ವಿಭಾಗ: 1-C	2-B	3-D	4-E	5-A
ಕ. ವಿಭಾಗ: 1-E	2-C	3-D	4-B	5-A

ಮಜ ಮಜ ಮಜಕೂರದ ಸೆಪ್ಟೆಂಬರ್ 5ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಜೀವನ್ ಕೆ.ಎಸ್.
ಮೈಸೂರು

ಲಹರಿ ವಿ. ವಿಶ್ವಕರ್ಮ
ಬೆಂಗಳೂರು

ಪ್ರತೀಕ್ಷಾ ಜೋಯ್ಸ್
ಆನಂದಪುರ (ಶಿವಮೊಗ್ಗ)

ಇದು ಕ್ಯಾಪಿಬೆರಾ!

ಜೀವ ಜಗತ್ತು

ನೋಡೋದಕ್ಕೆ ಕಾಲುಗಳನ್ನು ಹೊಂದಿದ ಈ ಜೀವಿ ದೊಡ್ಡ ಬ್ಯಾರೆಲ್‌ನಂತೆ ಗೋಚರಿಸುತ್ತದೆ. ಅಥವಾ ಕಂದುಬಣ್ಣದ ಕೂದಲನ್ನು ಮೈಮೇಲೆ ಹೊಂದಿದ ದೊಡ್ಡ ಹಂದಿಯೊಂದು ನಡೆದು ಹೋಗುತ್ತಿರುವಂತೆ ಭಾಸವಾಗುತ್ತದೆ. ಇದು ಬಾಲವಿಲ್ಲದ ನೀರುನಾಯಿಯಂತೆ ಕಂಡರೂ ಅಚ್ಚರಿ ಇಲ್ಲ. ಆದರೆ, ಇದೊಂದು ಕ್ಯಾಪಿಬೆರಾ ಎಂಬ ದಂಶಕ. ದಂಶಕ ಪ್ರಭೇದದಲ್ಲಿ ಜಗತ್ತಿನಲ್ಲಿಯೇ ಕ್ಯಾಪಿಬೆರಾ ಅತ್ಯಂತ ದೊಡ್ಡದು. ಇದು, ಎರಡು ಅಡಿಗಳಷ್ಟು ಎತ್ತರವಾಗಿರುತ್ತದೆ. ಇಲಿ ಕುಟುಂಬಕ್ಕೆ ಸೇರಿದ ಪ್ರಾಣಿ ಇದಾದರೂ ಗಿನಿ ಹಂದಿ ಪ್ರಭೇದಕ್ಕೆ ಹತ್ತಿರವಾಗಿದೆ.

ಅಮೆರಿಕ ಹಾಗೂ ಆಫ್ರಿಕಾದಲ್ಲಿ ಕಂಡು ಬರುವ ಕ್ಯಾಪಿಬರಾಗಳನ್ನು ನೀರು ಹಂದಿಗಳೆಂದೂ ಕರೆಯಲಾಗುತ್ತದೆ. ನುರಿತ ಈಜುಪಟುಗಳಾದ ಇವು ಕೆಸರಿನಲ್ಲೂ ಬಿದ್ದು ಹೊರಳಾಡುತ್ತವೆ.

ಕ್ಯಾಪಿಬೆರಾಗಳು ಉದ್ದನೆಯ ಹಾಗೂ ಚೂಪಾದ ಹಲ್ಲುಗಳನ್ನು ಹೊಂದಿರುತ್ತವೆ. ಆ ಹಲ್ಲುಗಳು ನಿರಂತರವಾಗಿ ಬೆಳೆಯುವುದರಿಂದ ಅವುಗಳನ್ನು ಸವೆಸಲು ಏನಾದರೂ ಬಾಯಿ ಆಡಿಸುತ್ತಿರುತ್ತವೆ. ಒಂದೊಂದು ಕ್ಯಾಪಿಬೆರಾಕ್ಕೆ ನಿತ್ಯ ಸರಾಸರಿ 3 ಕೆ.ಜಿಯಷ್ಟು ಹುಲ್ಲು ಬೇಕು. ಅವುಗಳು ಬೊಗಳುತ್ತವೆ, ಸೀಟಿ ಹೊಡೆಯುತ್ತವೆ, ಕಿಚಿಪಿಚಿ ಸದ್ದು ಹೊರಡಿಸುತ್ತವೆ.

ನಟನೆಯ ಥೆರಪಿ

ಮೊದಲನೇ ಪುಟದಿಂದ...

ಸಮಯಪ್ರಜ್ಞೆ, ಸಂದರ್ಭೋಚಿತ ನಡವಳಿಕೆ ಇವು ನಾಟಕದ ಶಿಸ್ತಿನಿಂದಲೇ ಯಾವುದೇ ಕ್ಷೇತ್ರದ ಕಲಾವಿದರಿಗೂ ಸಹಾಯಕ ಆಗಬಲ್ಲವು. ಬಾಲ್ಯದಲ್ಲಿ ಶಾಲೆಗಳ ವಾರ್ಷಿಕೋತ್ಸವದ ಮಕ್ಕಳ ನಾಟಕ ಸ್ಪರ್ಧೆಗಳಲ್ಲಿ ನಾನು ನಾಟಕದಲ್ಲಿ ಭಾಗಿಯಾಗುತ್ತಿದ್ದೆ. ಅವುಗಳಲ್ಲಿ ಎರಡು ನಾಟಕಗಳು ನನಗೆ ಇವತ್ತಿಗೂ ಸ್ಮೃತಿಯಲ್ಲಿ ಭದ್ರವಾಗಿ ಕುಳಿತಿವೆ. ಮೊದಲನೆಯದು, ಸುಮಾರು 4-5ನೇ ತರಗತಿಯಲ್ಲಿದ್ದಾಗ ನಾನು ಮಾಡಿದ್ದ 'ವನ್ಯಾಪಹರಣ' ಎಂಬ ನಾಟಕ. ಇದು ಸುಮಾರು 30 ಮಕ್ಕಳು ಪಾಲ್ಗೊಂಡಿದ್ದ ನಾಟಕ. ನನಗಿದ್ದದ್ದು ಈ ನಾಟಕದಲ್ಲಿ ಎರಡು ಪಾತ್ರಗಳು. ಮೊದಲನೆಯದು 'ಮರ', ನಂತರದ್ದು ಮರವನ್ನು ಕಡಿಯಲು ಬರುವ ಕೆಟ್ಟ ಜನ, ನಂತರ ಒಳ್ಳೆಯವರಾಗಿ ಪರಿವರ್ತಿತರಾಗುವುದು. ನಮಗೆ ಎರಡೆರಡು 'ಡ್ರೆಸ್' ಬದಲಿಸುವ ಸಂಭ್ರಮ.

ನಾಟಕ ಚೆನ್ನಾಗಿಯೇ ಬಂತು ಎಂದು ನಾವಂದುಕೊಂಡರೂ, ನಮಗೆ ಬಹುಮಾನ ಬರಲಿಲ್ಲ. 'ಅಭಿನಯ' ಎಂಬ ರಂಗಸಂಸ್ಥೆಯ ರಂಗಕರ್ಮಿಗಳು ಶಿವಮೊಗ್ಗದಲ್ಲಿ ಉತ್ಸಾಹದಿಂದ ರಂಗಚಟುವಟಿಕೆಗಳನ್ನು ನಡೆಸುತ್ತಿದ್ದರು. ಶೈಲಜಾ ಕುಮಾರಸ್ವಾಮಿ, ವಿಜಯಾ ಕಾಂತೇಶ್, ಹಾಲೇಶ್ ಮೊದಲಾದವರು ನಮ್ಮಂತಹ ಮಕ್ಕಳಿಗೆ ನಾಟಕಗಳನ್ನು ಹೇಳಿಕೊಡುತ್ತಿದ್ದರು. ಹಾಗೆ ಹೇಳಿಕೊಟ್ಟ ಇನ್ನೊಂದು ನಾಟಕ 'ಗದಾಯುದ್ಧ', ಆರನೇ ಕ್ಲಾಸಿನಲ್ಲಿದ್ದ ನನ್ನನ್ನು 'ದುರ್ಯೋಧನ'ನನ್ನಾಗಿ ಆರಿಸಿಬಿಟ್ಟಿದ್ದರು!

ಹಿರಿಯ ಮೇಕಪ್ ಪಟು ಎಚ್.ಎಂ.ಪಿ. ಸರ್ ನನ್ನನ್ನು ತಮ್ಮ ಮೇಕಪ್ ಕೌಶಲದಿಂದ 'ಸುಂದರ ದುರ್ಯೋಧನ'ನ್ನಾಗಿ ಬದಲಿಸಿದರು. ಗಟ್ಟಿಯಾಗಿ ಡೈಲಾಗ್ ಬೇರೆ ಕಲಿತಿದ್ದೆ. ಗದೆ ಮಾತ್ರ ಬಾಡಿಗೆಗೆ ದೊರೆತಿರಲಿಲ್ಲ. ಹಾಗಾಗಿ ನನ್ನ ಅಮ್ಮ ಹೇಗೋ ರೂಲರ್ ಉಪಾಯ ಮಾಡಿ ಒಂದು ಪ್ಲಾಸ್ಟಿಕ್ ತಂಬಿಗೆಗೆ ಬಣ್ಣದ ಪೇಪರ್ ಸುತ್ತಿ, ದೊಣ್ಣೆಯೊಂದಕ್ಕೆ ಸಿಕ್ಕಿಸಿ ಸಿದ್ಧ ಮಾಡಿದ್ದರು. ನಾಟಕವನ್ನೇನೋ ಚೆನ್ನಾಗಿಯೇ ಆಡಿದ್ದೆವು. ಆದರೆ ಅರ್ಜುನನೊಂದಿಗೆ ಕಾದುವಾಗ, ನನ್ನ ಗದೆ ಎರಡು ತುಂಡಾಗಿ ದೊಣ್ಣೆ-ತಂಬಿಗೆ ಬೇರೆಯಾಗಿ ಬಿದ್ದವು. ವೇದಿಕೆಯ ಮೇಲೆ ಹೇಗೋ ಸಾವರಿಸಿಕೊಂಡು ನಾಟಕ ಮುಗಿಸಿದೆ. ಹೊರಬಂದು 'ಹೋ' ಎಂದು ಅತ್ತೆ. ಬಹುಮಾನ ಬರದಿದ್ದಕ್ಕಿಂತ ಗದೆ ಮುರಿದದ್ದೇ ನನಗೆ ಅಪಮಾನವಾಗಿ ಹೋಗಿತ್ತು. ಆಮೇಲೆ ಆ ನಾಟಕದ ಬಗ್ಗೆ ಯಾರೊಡನೆ ಮಾತನಾಡುತ್ತಲೂ ಇರಲಿಲ್ಲ!

ನಂತರ ನಾಟಕಗಳನ್ನು ಮಾಡುವ ಅಭ್ಯಾಸವೂ ತಪ್ಪಿತ್ತು. ಆದರೆ ನಾಟಕ ನೋಡುವುದು ಮಾತ್ರ ನನಗೆ ಎಂದಿಗೂ ಪ್ರಿಯವೇ ಆಗಿತ್ತು. ಬೆಂಗಳೂರಿನಲ್ಲಿ ಇರುವಾಗಲಂತೂ ನಾನೂ, ಪತಿ ನಾಗರಾಜ್ ನಿಮ್ಹಾನ್ಸ್‌ನಲ್ಲಿ ಓದುವಾಗ ರವೀಂದ್ರ ಕಲಾಕ್ಷೇತ್ರಕ್ಕೆ ಸಮಯವಿದ್ದಾಗ ಓಡುತ್ತಿದ್ದೆವು. ಹಿರಣ್ಣಯ್ಯನವರ ನಾಟಕ ನೋಡಿ ಬಿದ್ದೂ ಬಿದ್ದೂ ನಗುತ್ತಿದ್ದೆವು. ಬಯಲು ರಂಗಮಂದಿರದಲ್ಲಿ ನಡೆಯುತ್ತಿದ್ದ ಹಲವು ರೀತಿಯ ನಾಟಕಗಳನ್ನು ನೋಡುತ್ತಿದ್ದೆವು. ಅಲಯನ್ಸ್ ಫ್ರಾಂಚೈಸ್‌ನಲ್ಲಿ ನಡೆಯುತ್ತಿದ್ದ ಇಂಗ್ಲಿಷ್ ನಾಟಕಗಳನ್ನು ನೋಡಿ ಅಚ್ಚರಿ ಪಡುತ್ತಿದ್ದೆವು. ವೃತ್ತಿಯ ಒತ್ತಡ ತಡೆಯಲು ನಮಗೆ ಆಗ ಸಹಾಯ ಮಾಡಿದ್ದು ಈ ನಾಟಕಗಳೇ!

ಇಷ್ಟೆಲ್ಲಾ ನಾಟಕಗಳನ್ನು ನೋಡಿದ್ದರೂ, ಮಹಿಳೆಯರ ಮಾನಸಿಕ ಆರೋಗ್ಯದ ಬಗ್ಗೆ ನಾಟಕಗಳ ಪ್ರಯೋಜನದ ಅರಿವಾಗಿದ್ದು ನನಗೆ ಪ್ರೊ.ಲಕ್ಷ್ಮಿ ಚಂದ್ರಶೇಖರ್ ಅವರ 'ಹೆಣ್ಣಲ್ಲವೆ?' ಎಂಬ ಏಕವ್ಯಕ್ತಿ ನಾಟಕವನ್ನು ನೋಡಿದಾಗಲೇ. ಒಂದು ನಾಟಕ ಪರಿಣಾಮಕಾರಿಯಾಗಿ ಪ್ರೇಕ್ಷಕರನ್ನು ರಂಜಿಸುವುದಷ್ಟೇ ಅಲ್ಲ, ಮನಸ್ಸುಗಳನ್ನೂ ತನ್ನದೇ ಆದ ರೀತಿಯಲ್ಲಿ ಬದಲಿಸಬಹುದು ಎಂಬುದು ನನಗೆ ಅರ್ಥವಾದದ್ದು ಈ ನಾಟಕವನ್ನು ನೋಡಿಯೇ. ಮನೋವೈದ್ಯೆಯಾದ ಮೇಲೆ ನಾನು ಮಾಡಿದ ಒಂದು ನಾಟಕ 'ಭೀಷ್ಮಪ್ರಜ್ಞೆ', ಶೈಲಜಾ ಕುಮಾರಸ್ವಾಮಿಯವರದು. ಹುಡುಗಿಯೊಬ್ಬಳ ವರದಕ್ಷಿಣೆಯ ಸಾವಿಗೆ ಸಮಾಜದ ಇತರ ಮಹಿಳೆಯರು, ಪೊಲೀಸ್ -ಪತ್ರಕರ್ತ- ಕೊನೆಗೆ ವೈದ್ಯ ಇವರೆಲ್ಲ ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ಈ ನಾಟಕದ ವಸ್ತು. ಮಹಿಳೆಯರ ಸಮಸ್ಯೆಗಳ ಬಗ್ಗೆ ಗಮನ ಸೆಳೆಯಲು ಇಂತಹ ನಾಟಕಗಳ ಮೂಲಕ ಸಾಧ್ಯವಿದೆ ಎಂದು ನನಗೆ ಅನ್ನಿಸಿದ ಕಾರಣವೂ ಹೌದು.

ಮನೋವೈಜ್ಞಾನಿಕ ಕ್ಷೇತ್ರದ ಚರಿತ್ರೆಯನ್ನು ನೋಡಿದರೆ ನಾಟಕಗಳನ್ನು ಚಿಕಿತ್ಸೆಗಾಗಿಯೇ ಉಪಯೋಗಿಸಿದ್ದು ಮೂವತ್ತರ ದಶಕದಲ್ಲಿ. ವೇದಿಕೆಯ ಮೇಲೆ ನಾಟಕಗಳನ್ನು ಆಡುವುದಕ್ಕೂ, ನಟನೆಯ ಚಿಕಿತ್ಸೆ-ಡ್ರಾಮಾ ಥೆರಪಿಗೂ ಕೆಲವು ಸೂಕ್ಷ್ಮ-ಮುಖ್ಯ ವ್ಯತ್ಯಾಸಗಳಿವೆ. ನಟನೆಯ ಮೂಲಕ ಚಿಕಿತ್ಸೆಯಲ್ಲಿ ವೇದಿಕೆಯ ಮೇಲೆ ನಡೆಯುವುದಕ್ಕೆ ವಿರುದ್ಧವಾಗಿ ಇಲ್ಲಿ ವಾಸ್ತವವೂ ನಟನೆಯೂ ಒಂದೇ ಆಗಿರುತ್ತದೆ. ಜೀವನದ ಸಮಸ್ಯೆಗಳಿಗೆ ಅಭಿನಯದ ಮೂಲಕ, ನಟನೆಯ ಮುಖಾಂತರ ಪರಿಹಾರ ಕಂಡುಕೊಳ್ಳುವ ಪ್ರಯತ್ನ. ಮಹಿಳೆಯರ ಮತ್ತು ಮಕ್ಕಳ ಮಾನಸಿಕ ಸಮಸ್ಯೆಗಳಲ್ಲಿ, ಮದ್ಯವ್ಯಸನದಲ್ಲಿ ನಟನೆಯ ಚಿಕಿತ್ಸೆ ವಿಶೇಷವಾಗಿ ಗಮನಾರ್ಹ ಬದಲಾವಣೆಗೆ ಕಾರಣವಾಗಲು ಸಾಧ್ಯವಿದೆ.

ನಿಮ್ಹಾನ್ಸ್‌ನಲ್ಲಿ ಮನೋವೈದ್ಯಕೀಯ ತರಬೇತಿ ಪಡೆಯುವಾಗ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮನೋಚಿಕಿತ್ಸೆಯ ಬಗೆಗೆ, ವೈದ್ಯರು ರೋಗಿಯನ್ನು ಅರ್ಥ ಮಾಡಿಕೊಳ್ಳುವ ಬಗೆಗೆ ತರಬೇತಿ ನೀಡಲಾಗುತ್ತದೆ. ಇದರ ಅಂಗವಾಗಿರುವ ಒಂದು ಚಟುವಟಿಕೆಯೆಂದರೆ ಪಾತ್ರಾಭಿನಯ ('ರೋಲ್ ಪ್ಲೇ'). ರೋಗಿಯಾಗಿ ಒಬ್ಬ ವಿದ್ಯಾರ್ಥಿ ನಟನೆ ಮಾಡಿದರೆ, ಇನ್ನೊಬ್ಬ ವೈದ್ಯನಾಗಿ ಆತನನ್ನು ಸಂದರ್ಶಿಸಬೇಕು. ಉಳಿದವರು ಪ್ರೇಕ್ಷಕರಾಗಿ ವೈದ್ಯ, ರೋಗಿ ಹೇಳಿದ್ದನ್ನು ಕೇಳಿಸಿಕೊಂಡ ರೀತಿ, ತಾನು ಪ್ರತಿಕ್ರಿಯಿಸಿದ ರೀತಿ, ಮಧ್ಯೆ ಹೊತ್ತಾಯಿತೆಂದು ಬಾಯಿಯಲ್ಲಿ ಹೇಳದೆ ತನ್ನ ದೇಹ ಭಾಷೆ- 'ಬಾಡಿ ಲ್ಯಾಂಗ್ವೇಜ್' ಮೂಲಕ ತನಗೇ ಗೊತ್ತಿಲ್ಲದೆ ಸಂವಹಿಸಿದ್ದು ಎಲ್ಲವನ್ನೂ ಗಮನಿಸಿ ವಿಮರ್ಶಿಸಬೇಕು. ಆಗ ನನಗೆ ನಟನೆಯಿಂದ ವೈದ್ಯರು ಕಲಿಯಬೇಕಾದ ಹಲವು ಕೌಶಲಗಳ ಬಗ್ಗೆ ಅರಿವು ಮೂಡಿತು.

ಮಹಿಳೆಯರಲ್ಲಿ ಕೌಟುಂಬಿಕ ದೌರ್ಜನ್ಯದಂತಹ ಸಂದರ್ಭಗಳಲ್ಲಿ ಡ್ರಾಮಾ ಥೆರಪಿ ಪಾಶ್ಚಾತ್ಯ ದೇಶಗಳಲ್ಲಿ ಬಲವಾಗಿಯೇ ನಡೆದಿದೆ. 'ವಾಯ್ಸಸ್ ಆಫ್ ಪ್ರೈಡ್' ಎಂಬ ಯೋಜನೆಯೊಂದರಲ್ಲಿ ತಮ್ಮ ಅಳಲನ್ನು ಹೇಳಿಕೊಳ್ಳಲು, ಹೊಸ ಸಂಬಂಧಗಳನ್ನು ಬೆಳೆಸಿಕೊಳ್ಳಲು, ಇತರ ಮಹಿಳೆಯರನ್ನು ಅರ್ಥ ಮಾಡಿಕೊಳ್ಳಲು, ಹೊಸ ದಾರಿಗಳನ್ನು ಹುಡುಕಲು ನಾಟಕವನ್ನು ಒಂದು ಸಾಧನವಾಗಿ ಬಳಸಲಾಯಿತು. ಬೈಯುವ -ಕುಡಿಯುವ ಪತಿಯಿಂದ ನಟನೆಯಲ್ಲಿ ದೂರವಾಗುವ ತಂತ್ರ. ಈ ಮಹಿಳೆಯರಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿತು. ಬೇರೆಯವರು ತಮ್ಮ ಕಥೆ ಕೇಳಿದರೆ ತಮ್ಮನ್ನು 'ಜಡ್ಜ್' ಮಾಡಿಬಿಡಬಹುದೆಂಬ ಸಂಕೋಚ-ಹಿಂಜರಿಕೆಗಳನ್ನು ಕ್ರಮೇಣ ಬದಿಗೊತ್ತಿ, 'step into the centre it ...' ಎಂಬ ವಾಕ್ಯಕ್ಕೆ ವೈಯಕ್ತಿಕ ಅನುಭವಗಳನ್ನು ಅವರು ತೆರೆದಿಡತೊಡಗಿದರು.

ತಮ್ಮ ಅನುಭವದ ಸಾರ್ವತ್ರಿಕತೆ, ತಮ್ಮಂತಹ ಇನ್ನೊಬ್ಬರೂ ಇದ್ದಾರೆ ಎಂಬ ಅರಿವೇ ಒಂದು ರೀತಿಯ ನಿರಾಳತೆಯನ್ನು ನೀಡುವ ಸಾಧ್ಯತೆ ಇಲ್ಲಿತ್ತು. ಕಲ್ಪಿತ ಫೋನ್ ಕರೆಗಳಿಗೆ ಪ್ರತಿಕ್ರಿಯಿಸುವುದು, ತಮ್ಮನ್ನು ದೌರ್ಜನ್ಯಕ್ಕೆ ಒಳಪಡಿಸಿದ್ದ ವ್ಯಕ್ತಿಗೆ ಹೇಳಬೇಕೆಂದಿದ್ದ ಹೇಳಲಾಗದ ಮಾತುಗಳನ್ನು ಹೇಳುವ ಅವಕಾಶ, ವರುಷಗಳವರೆಗೆ ಒಳಗೇ ಉಳಿದಿದ್ದ ಮಾತುಗಳನ್ನು ಹೊರಹಾಕುವ ದಾರಿ ಇವು ತಂದದ್ದು ಆಕ್ರೋಶ, ಹತಾಶೆ, ಒತ್ತಡಗಳನ್ನು ರೋಲ್ ರಿವರ್ಸಲ್ - ಪಾತ್ರವನ್ನು ತಿರುಗಿಸುವುದರ ಮೂಲಕ ಸ್ವದೂಷಣೆಯನ್ನು ನಿಲ್ಲಿಸುವುದೂ ಇಲ್ಲಿ ಸಾಧ್ಯವಾದದ್ದು ವಿಶೇಷ. ಈ ನಟನೆಯ ಚಿಕಿತ್ಸೆಯಲ್ಲಿ ಪಾಲ್ಗೊಂಡ ಮಹಿಳೆಯೊಬ್ಬಳು ಹೇಳಿದ ಮಾತುಗಳಿವು - 'ಏನನ್ನಾದರೂ ಹೇಗೆ ಬೇಕಾದರೂ ವ್ಯಕ್ತಪಡಿಸಲು ಇಲ್ಲಿ ಸಾಧ್ಯ. ಇಲ್ಲಿ ನನ್ನನ್ನು ಯಾರೂ 'ಜಡ್ಜ್' ಮಾಡುವವರಿಲ್ಲ. ಇದೇ ಅಚ್ಚರಿ - ನಮ್ಮ ನಟನೆಯೇ, ನಮ್ಮ ಚಿಕಿತ್ಸೆ!'

ಬಾಲ್ಯದಲ್ಲಿ ನಾಟಕ ನೋಡುವ-ಆಡುವ ಮಜಾ, ಈಗ ಮನೋವೈದ್ಯೆಯಾಗಿ ಮಕ್ಕಳ-ಮಹಿಳೆಯರ ಮಾನಸಿಕ ಆರೋಗ್ಯಕ್ಕಾಗಿ ನಾಟಕ ಮಾಡಿಸುವ, ಹುಡುಕುವ, ಅದನ್ನು ಆರೋಗ್ಯಕ್ಕಾಗಿ ವಿಶ್ಲೇಷಿಸುವ ಕಾಯಕವಾಗಿ ಬದಲಾಗಿದೆ! ಕಲೆಗೂ-ವಿಜ್ಞಾನಕ್ಕೂ ಇರುವ ಸಂಬಂಧವನ್ನು ಹುಡುಕುತ್ತಲೇ ನಾಟಕ ನೋಡುವುದು, ಆಡುವುದು, ಮಾಡಿಸುವುದು ನನಗೆ 'ನನ್ನ ನಟನೆ -ನನ್ನ ಚಿಕಿತ್ಸೆ' ಎಂಬ ಅರಿವನ್ನೂ ಮೂಡಿಸಿರಬಹುದೇನೋ?!

ಇಂಧನ ಬೆಲೆಗಳಲ್ಲಿ ಹೆಚ್ಚಳವೇ?
ಚಿಂತಿಸದಿರಿ...
ತ್ವರೆ ಮಾಡಿ, ಸಿಎನ್‌ಜಿ ಪಡೆಯಿರಿ!
ಪಡೆಯಿರಿ ರೂ. 25,000/-* ವರೆಗಿನ ಸಿಎನ್‌ಜಿ ಉಚಿತ

40%-60% ಮಿತವ್ಯಯಕಾರಿ
ಹೊಸ ಸಿಎನ್‌ಜಿ ವಾಹನ ಖರೀದಿಸಿ ಅಥವಾ ನಿಮ್ಮ ಪ್ರಸ್ತುತ ವಾಹನವನ್ನು ಸಿಎನ್‌ಜಿ ವಾಹನವನ್ನಾಗಿ ಮಾರ್ಪಾಡು ಮಾಡಿ
ಹೆಚ್ಚಿನ ಮಾಹಿತಿಗಾಗಿ: 1800-102-9282 (ಟೋಲ್ ಫ್ರೀ)
ಅಥವಾ ಸಂಪರ್ಕಿಸಿ ಅಧಿಕೃತ ಮಾರಾಟಗಾರರು/ರೆಟ್ರೋಫಿಟ್ಟರ್ಸ್.
ವಿವರಗಳು ನಮ್ಮ ವೆಬ್‌ಸೈಟ್‌ನಲ್ಲಿ ಲಭ್ಯ: www.gailgas.com
ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಅನ್ವಯ (10ನೇ ಸೆಪ್ಟೆಂಬರ್, 2021 ರಿಂದ)

ಹೊಸ ಸಿಎನ್‌ಜಿ ವಾಹನ ಖರೀದಿ ಮೇಲೆ	ನಿಮ್ಮ ವಾಹನವನ್ನು ಸಿಎನ್‌ಜಿಗೆ ಪರಿವರ್ತಿಸುವುದರ ಮೇಲೆ
₹ 14,000/- ಆಟೋ, ₹ 25,000/- ಪ್ರೈವೇಟ್ ಕಾರ್/ಟ್ಯಾಕ್ಸಿ, ₹ 25,000/- ವಾಣಿಜ್ಯ ವಾಹನ	₹ 23,000/- ಆಟೋ/ವಾಣಿಜ್ಯ ಕಾರ್/ಟ್ಯಾಕ್ಸಿ, ₹ 25,000/- ಪ್ರೈವೇಟ್ ಕಾರ್ಸ್

ಪರಿಹಾರಾತ್ಮಕ ಉಚಿತ ಇಂಧನ
• ಪ್ರಸ್ತುತ ವಾಹನದ ಪರಿವರ್ತನೆಯಲ್ಲಿನ ರೆಟ್ರೋಫಿಟ್ಮೆಂಟ್ ಶುಲ್ಕ
• ಹೊಸ ಸಿಎನ್‌ಜಿ ವಾಹನದ ಹೆಚ್ಚುವರಿ ಶುಲ್ಕ
ಬೆಂಗಳೂರು ಕಚೇರಿ: 3ನೇ ಮಹಡಿ, ಎಂ ಎಸ್ ಕಾಂಪ್ಲೆಕ್ಸ್, ಎಸ್-44, ನ್ಯೂ ಬಿಇಎಲ್ ರಸ್ತೆ, ಆರ್‌ಎಂವಿ 2ನೇ ಹಂತ, ಬೆಂಗಳೂರು-560054, ಕರ್ನಾಟಕ ಫೋನ್: 080-23611216/17
GAIL gas
ಗೇಲ್ ಗ್ಯಾಸ್ ಲಿಮಿಟೆಡ್
[ಗೇಲ್ (ಇಂಡಿಯಾ) ಲಿಮಿಟೆಡ್‌ನ ಸಂಪೂರ್ಣ ಒಡೆತನದಲ್ಲಿರುವ ಅಂಗಸಂಸ್ಥೆ -ಮಹಾರತ್ನ ಪಿಎಸ್‌ಯು]
CIN No : U40200DL2008GOI178614